# ಪ್ರಸಾದ

ಮಾಸಿಕ

ಸಂಪುಟ 38 ಸಂಚಿಕೆ 1 ಜನವರಿ 2023




ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



ಬೆಂಗಳೂರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಶಾಲಾ ಕಾಲೇಜುಗಳಲ್ಲಿ ಮೌಲ್ಯ ಶಿಕ್ಷಣ ಅಳವಡಿಕೆ ಕುರಿತು ಆಯೋಜಿಸಿದ್ದ ದುಂಡುಮೇಜಿನ ಸಮಾಲೋಚನಾ ಸಭೆಯನ್ನು ಉದ್ಘಾಟಿಸುತ್ತಿರುವುದು. ಶ್ರೀ ಸ್ವಾಮಿ ಮುಕ್ತಿದಾನಂದಜೀ, ಸಿರಿಗೆರೆ, ಆದಿಚುಂಚನಗಿರಿ, ಪರಮಪೂಜ್ಯ ಜಗದ್ಗುರುಗಳು, ಸಚಿವರಾದ ಶ್ರೀ ಬಿ.ಸಿ. ನಾಗೇಶ್ ಹಾಗೂ ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರುಗಳಿದ್ದಾರೆ (9 ಜನವರಿ 2023)



ಬೆಂಗಳೂರು ವಿಧಾನಸೌಧದ ಮುಂಭಾಗದಲ್ಲಿ ಶ್ರೀ ಬಸವೇಶ್ವರರು ಮತ್ತು ಶ್ರೀ ಕೆಂಪೇಗೌಡರವರುಗಳ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲು ಭೂಮಿಪೂಜೆ ನೇರವೇರಿತು. ಶ್ರೀ ಡಿ.ವಿ. ಸದಾನಂದಗೌಡ, ಪೇಜಾವರ ಶ್ರೀಗಳು, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಆದಿಚುಂಚನಗರಿ ಹಾಗೂ ಪರಮಪೂಜ್ಯ ಜಗದ್ಗುರುಗಳು, ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮಿಗಳು, ನಂಜಾವಧೂತ ಶ್ರೀಗಳು, ಶ್ರೀ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಆರ್. ಅಶೋಕ ಮೊದಲಾದವರುಗಳಿದ್ದಾರೆ (13 ಜನವರಿ 2023)

# ಪ್ರಸಾದ

**ಸಂಪುಟ 38 : ಸಂಚಿಕೆ 1** **ಜನವರಿ 2023**

**ಪ್ರೊ. ಮಲೆಯೂರು ಗುರುಸ್ವಾಮಿ**
ಗೌರವ ಸಂಪಾದಕರು

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಪ್ರೊ. ಮಲೆಯೂರು ಗುರುಸ್ವಾಮಿ (ಗೌರವ ಸಂಪಾದಕರು)
ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಮೈಸೂರು ಶ್ರೀ ಸುತ್ತೂರು ಮಠದಲ್ಲಿ 20.6.2022ರಂದು ನಡೆದ ಕೆಎಸ್ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಮತ್ತು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು


**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 9

ಸಿದ್ಧೇಶ್ವರ ಶ್ರೀಗಳಂಥ ಹತ್ತಾರು ಚಿಂತಕರು ಹುಟ್ಟಲಿ 13
**ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆ**

ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು 16
**ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು**

ವಿದೇಶದಲ್ಲಿ ನಾನು ಕಂಡ ಸಿದ್ಧೇಶ್ವರ ಶ್ರೀಗಳು 20
**ಡಾ. ಶ್ರೀ ರುದ್ರಮುನಿ ದೇವರು**

ಶತಮಾನದ ಸಂತನ ಮಾಸದ ಚಿರ ನೆನಪು 23
**ಕೆ.ಸಿ. ಶಿವಪ್ಪ**

ಇದ್ದರಲ್ಲ... ಇಲ್ಲದಂತೆ! ಶತಮಾನದ ಸಂತ ಶ್ರೀ ಸಿದ್ಧೇಶ್ವರ ಸ್ವಾಮೀಜಿ 33
**ಪ್ರೊ. ಮಲೆಯೂರು ಗುರುಸ್ವಾಮಿ**

ಮಾನವಚೈತನ್ಯದ ಅನಂತ ಸಾಧ್ಯತೆಗಳ ಅಸಾಧಾರಣ ಪ್ರತಿಮಾರೂಪ 37
**ಶಂಕರ್ ದೇವನೂರು**

ಮಹತ್ವಪೂರ್ಣ ಕೃತಿಗಳ ನೀಡಿ ನಿರ್ಗಮಿಸಿದ ನಿರ್ಮೋಹಿ 39
**ಪ್ರೊ. ಸಿದ್ದು ಯಾಪಲಪರವಿ**

ಅಮನಸ್ಕ ಸಂತ 42
**ಡಾ. ಎಂ.ಎನ್. ನಂದೀಶ್ ಹಂಚೆ**

ಬೆರಳಿನ ಬರವಣಿಗೆಗೆ ಬದುಕೇ ಸಾಕ್ಷಿಯಾದಾಗ... 45
**ಎನ್. ನಾಗಶ್ರೀ ತ್ಯಾಗರಾಜ್**

ದಿವ್ಯ ಚೇತನ, ಜ್ಞಾನಯೋಗಿ ಸಿದ್ಧೇಶ್ವರ ಶ್ರೀಗಳು 48
**ಸಂಗಮೇಶ ಎನ್. ಜವಾದಿ**

ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ : ನೂತನ ಯುಗ–ಪುರಾತನ ಪಥ 52
**ಪ್ರಕಾಶ ಗಿರಿಮಲ್ಲನವರ**

ಅಷ್ಟು ಅವಸರವೇನಿತ್ತು ಬುದ್ದಿ?! 60
**ಟಿ. ದೇವಿದಾಸ್**

ಜ್ಞಾನದಾಸೋಹಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು 64
**ನಗರ್ಲೆ ಶಿವಕುಮಾರ**

ಎಲ್ಲವನ್ನೂ ನೋಡಿ, ಆನಂದಿಸಿ, ಆದರೆ 'ಬೇಕು' ಎನ್ನದಿರಿ 69
**ಡಾ. ವಿ.ಬಿ. ಆರತೀ**

ಅಲ್ಲಮನ ಮಾರ್ದವರೂಪ ಈ ಸಿದ್ಧೇಶ್ವರ ಶ್ರೀಗಳು 71
**ಡಾ. ವೀಣಾ ಬನ್ನಂಜೆ**

ಮತ್ತೊಬ್ಬ ಬಯಲಯೋಗಿ 84
**ಸುಬ್ಬರಾವ್**

ವಿಜಯಪುರ ಜ್ಞಾನಯೋಗಾಶ್ರಮದ 89
ಆಧ್ಯಾತ್ಮಿಕ ಜ್ಞಾನಜ್ಯೋತಿ ಶಿವನಲ್ಲಿ ಲೀನ
**ಎಚ್.ಎಸ್. ಸಿದ್ಧಗಂಗಪ್ಪ**

ಶತಮಾನದ ಸಂತ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು 99
**ಸಿ.ಪಿ. ರಾಮಶೇಷ**

ಸಂತನೆಂದರೆ ಯಾರು? 105
**ಕೆ.ಸಿ. ಶಿವಪ್ಪ**

ಸಿದ್ಧೇಶ್ವರ ಶ್ರೀ ಸದಾಶಯ 106
**ಪ್ರೊ. ಮೊರಬದ ಮಲ್ಲಿಕಾರ್ಜುನ**

ಆಧುನಿಕ ಅಲ್ಲಮ 108
**ಎಸ್.ಎನ್. ಸಿಂಪಿಗೇರ**

ಸಂತಶಿರೋಮಣಿ 109
**ಡಾ. ಚಂದ್ರಶೇಖರಮೂರ್ತಿ (ಚೆನ್ನವೀರ)**

ವಾರ್ತಾವಿಹಾರ 110
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 114

# ಗುರುವಾಣಿ

ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ?
ಪರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ?
ಕೂಡಲಚೆನ್ನಸಂಗನ ಶರಣರು
ಕಾಯವ ನೆವದಿಂದಲರ್ಪಿಸುವ ಬೆಡಗ ನಾನೇನೆಂಬೆನಯ್ಯಾ?

ವಚನಕಾರರ ಪ್ರತಿಯೊಂದು ವಚನವೂ ಹಲವು ಬಾರಿ ಸಮಾಜದಲ್ಲಿ ಸುತ್ತಮುತ್ತಲೂ ನಡೆಯುವ ಘಟನೆಗಳಿಗೆ ಪ್ರತಿಮಾತ್ಮಕವಾಗಿ ಕನ್ನಡಿ ಹಿಡಿದಂತೆ ಕಾಣಿಸುತ್ತದೆ. ಪ್ರಸ್ತುತ ಸಂದರ್ಭಕ್ಕೆಂದೇ ಅವರು ಇದನ್ನು ಬರೆದರೇನೋ ಎನ್ನುವಂತೆ ಭಾಸವಾಗುತ್ತದೆ. ಚನ್ನಬಸವಣ್ಣನವರ ಈ ವಚನದ ಸಾಲುಗಳು ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಘನತರ ಚಿತ್ರಕ್ಕೆ ರೂಹು ಬರೆದಂತೆ ಇವೆ. ಚನ್ನಬಸವಣ್ಣನವರು ಈ ವಚನದಲ್ಲಿ 'ಬೆಡಗು' ಎನ್ನುವ ಶಬ್ದವನ್ನು ಬಳಸಿದ್ದರೂ ಇಲ್ಲೊಂದು ಸೋಜಿಗವಿದೆ. ನಿಸ್ಸಂಗಿಯ ಸಂಗ, ಗಮಿಸುವ ಗಮನ, ಕಾಯದ ನೆವ ಎಂಬ ಮೂರು ಪದಗುಚ್ಛಗಳು ವಿಶೇಷವಾಗಿ ಗಮನಿಸಬೇಕಾದವು. ಸಂಗಕ್ಕೆ ವಿರುದ್ಧ ಪದವಾಗಿ ನಿಸ್ಸಂಗ. ಪರಮಾರ್ಥದಿಂದ ಗಮಿಸುವುದನ್ನು ಗಮನಿಸಲಾಗುವುದಿಲ್ಲ. ಹಾಗೆಯೇ ಕಣ್ಣಿಗೆ ಕಾಣುವ ಕಾಯವೆಂಬುದು ಅಲ್ಲಿ ಕೇವಲ ಕಾರಣ.

ವರ್ಣಿಸಲು ಅಸದಳವಾದ, ನಿರ್ವಚಿಸಲಾಗದ ಕಾಯದ ವಿವರಗಳನ್ನು ಚನ್ನಬಸವಣ್ಣನವರು ಈ ವಚನದಲ್ಲಿ ಹೇಳುತ್ತಿದ್ದಾರೆ. ಲಿಂಗಗಂಭೀರನಾದವನು ಎಂದರೆ, ಪರಮಾತ್ಮನಲ್ಲಿ ಆತ್ಮವನ್ನು ವಿಲೀನಗೊಳಿಸಿದವನು, ನಿಸ್ಸಂಗಿ. ಆತನಿಗೆ ಲೋಕದ ಬೇರಾರ ಸಂಗವೂ ಬೇಕಿಲ್ಲ. ಅಂಥವನ ಸಂಗವನ್ನು ಸಂಸರ್ಗವನ್ನು ವಿವರಿಸಲಾಗುವುದಿಲ್ಲ. ಹಾಗೆಯೇ ಪರಮಾರ್ಥದತ್ತ ಗಮಿಸುವ. ಅಂದರೆ ನಡೆಯುವ ಕ್ರಿಯೆಯನ್ನು, ಅದರ ನೆನಪನ್ನು ತಿಳಿಸಲಾಗುವುದಿಲ್ಲ. ಕಾರಣ, ಶರಣರು ಕಾಯವನ್ನು ಧರಿಸಿದ್ದರೂ ಅದು ಕೇವಲ ಕರಣವಾಗಿ, ಉಪಕರಣವಾಗಿ ಮಾತ್ರ. ಲೋಕದಲ್ಲಿ ಆತ್ಮ ತಾನು ಮಾಡಬೇಕಾದ ಕಾರ್ಯಗಳಿಗಾಗಿ ಶರೀರವನ್ನೇ ಆಶ್ರಯಿಸಬೇಕು. ಶರೀರ ನಾಶವಾಗುತ್ತದೆ; ಆದರೆ ಆತ್ಮ ಅವಿನಾಶಿ. ಶರೀರ ಮಾಡುವ ಕಾರ್ಯಗಳಿಗೆಲ್ಲ ಆತ್ಮ ಪ್ರತ್ಯಾಹಾರವಾಗಬಾರದು

ಅಥವಾ ಶರೀರದ ಮೋಹಕ್ಕೆ ಬಲಿಯಾಗಿ ಆತ್ಮವನ್ನು ನಾಶ ಮಾಡಿಕೊಳ್ಳಬಾರದು. ಕಾಯ ಹೇಗೆ ಒಂದು ಕಾರಣವೋ ಹಾಗೆ ಕಾಯವನ್ನು ಒಂದು ನೆವದಿಂದ ಶಿವಾರ್ಪಿತವ ಮಾಡುವುದೇ ಇಲ್ಲಿನ ಬೆಡಗು. ಈ ಸೋಜಿಗವನ್ನು ಅರಿಯುವುದೇ ಮಹಾಮಾರ್ಗ. ಹೀಗೆ ಅವರು ನುಡಿದು ಸೂತಕಿಗಳಲ್ಲ. ಅವರು ಸಂಗದಲ್ಲಿದ್ದೂ ನಿಸ್ಸಂಗಿಗಳು. ಲೋಕದೊಳಗಿದ್ದೂ ಅಲೌಕಿಕರು.

ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಬದುಕನ್ನು ಹತ್ತಿರದಿಂದ ಬಲ್ಲ ಪ್ರತಿಯೊಬ್ಬರಿಗೂ ಮೇಲಿನ ಮಾತುಗಳು ಸ್ವಯಂವೇದ್ಯ. ಅವರು ಯಾವ ಲೌಕಿಕ ವಿಶೇಷಣಗಳಿಗೂ ನಿಲುಕಿದ್ದವರಲ್ಲ. ಅವರನ್ನು ಜನ 'ನಡೆದಾಡುವ ದೇವರು' ಎಂದು ಪ್ರೀತ್ಯಾದರಗಳಿಂದ ಕರೆಯುತ್ತಿದ್ದರು. ದೇವರು ಸ್ತುತಿ ನಿಂದೆಗಳಿಗೆ ಅತೀತ ಮಾತ್ರವಲ್ಲ; ಉಪನಿಷತ್ತುಗಳು ಹೇಳುವಂತೆ, ಅವನು ವರ್ಣನಾತೀತ, ಅಗಮ್ಯ ಅಗೋಚರ. ನಿಜವಾದ ಅರ್ಥದಲ್ಲಿ ಸಿದ್ಧೇಶ್ವರರು ಒಬ್ಬ ಅವಧೂತರು. ವೇದಾಂತಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರಿಂದ ಅಧ್ಯಾತ್ಮದೀಕ್ಷೆಯನ್ನು ಪಡೆದು, ಸಕಲಶಾಸ್ತ್ರವಿಶಾರದರಾಗಿ ಅರಳಿದ ಋಷಿಸದೃಶ ವ್ಯಕ್ತಿತ್ವದವರು. ಜ್ಞಾನದ ನಿಧಿಗಳು.

ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಇಹದ ಮಹಾಮಣಿಹವನ್ನು ಪೂರೈಸಿ ನಿರ್ಗಮಿಸಿರುವುದು ಅನುಭಾವಲೋಕದಲ್ಲೊಂದು ಶೂನ್ಯತೆ ಆವರಿಸಿದಂತೆ, ಸೂರ್ಯ ಅಸ್ತಮಿಸಿದಂತೆ. ಸೂರ್ಯ ತನ್ನ ಬೆಳಕಿನಿಂದ ಲೋಕದ ಕತ್ತಲೆಯನ್ನು ಕಳೆಯಲು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುವಂತೆ ಶ್ರೀಗಳು ಅವರ ಅನುಭಾವದ ಅಮೃತವನ್ನು ಲೋಕದ ಜನತೆಗೆ ಧಾರೆಯೆರೆದರು.

ಸುತ್ತೂರು ಶ್ರೀಮಠಕ್ಕೂ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೂ ಅವಿನಾಭಾವ ಸಂಬಂಧ. ಕ್ರಿಯಾಶಕ್ತಿ ಹಾಗೂ ಜ್ಞಾನಶಕ್ತಿಗಳ ಸಮ್ಮಿಲನದಂತೆ ಶ್ರೀಮಠ ಹಾಗೂ ಅವರ ಒಡನಾಟ. ಪ್ರತಿ ವರ್ಷವೂ ನಿಗದಿತ ಸಮಯದಲ್ಲಿ ಆಗಮಿಸಿ, ತಿಂಗಳುಗಟ್ಟಲೆ ವಾಸ್ತವ್ಯ ಹೂಡಿ ಜ್ಯೋತಿರ್ಲಿಂಗಸ್ವರೂಪದ ಅವರ ಅನುಭಾವದ ನುಡಿಗಳಿಂದ ಮಠಾಧಿಪತಿಗಳಿಂದ ತೊಡಗಿ ಶ್ರೀಸಾಮಾನ್ಯರವರೆಗೆ ಎಲ್ಲರ ಮನದ ಭಾವನೆಗಳನ್ನು ವಿಶಾಲಗೊಳಿಸುತ್ತಿದ್ದರು. 'ಅಲ್ಲಮಪ್ರಭುದೇವರ ವಚನ ನಿರ್ವಚನ' ಹಾಗೂ ಮಹಾವಿದ್ಯಾಪೀಠದ ಕೆಲವು ಮಹತ್ವಪೂರ್ಣ ಗ್ರಂಥಗಳ ಪ್ರಕಟಣೆಯಲ್ಲಿ ಅವರ ಪಾತ್ರ ಹಿರಿದು. 'ಶಿವಪದ ರತ್ನಕೋಶ' ರಚನೆಗೆ ಕಾರಣೀಭೂತರು; ಅದರ ವಿನ್ಯಾಸ, ವ್ಯಾಪ್ತಿ ಇವುಗಳನ್ನು ಬಹುತೇಕ ನಿರ್ವಹಿಸಿದವರು. ಜ್ಞಾನದ ಬೆಳಕಿನಿಂದ ಮಾತ್ರ ಎಲ್ಲ ಅಜ್ಞಾನಗಳನ್ನೂ ತೊಳೆಯಬಹುದು ಎಂದು ನಂಬಿ ನಡೆದವರು ಅವರು.

ಬಸವಣ್ಣನವರ ಒಂದು ವಚನದಂತೆ–

ಭಕ್ತಿಯ ಸುಭಾಷೆಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ.
ಮೇಲೆ ತೂಗುವ ತ್ರಾಸು ಕಟ್ಟಲೆ ನಿಮ್ಮ ಕೈಯಲ್ಲಿ.
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ.

ನಡೆಯಲ್ಲಿ ನುಡಿಯನ್ನು, ನುಡಿಯಲ್ಲಿ ನಡೆಯನ್ನು ಸಂಲಗ್ನಗೊಳಿಸಿದವರು ಶ್ರೀ ಸಿದ್ಧೇಶ್ವರ ಸ್ವಾಮಿಗಳವರು. ಶಿವಪಥದಲ್ಲಿ ಸುದೀರ್ಘವಾಗಿ ಸಮೆದ ಅವರ ಬದುಕು ಪರಂಜ್ಯೋತಿಸ್ವರೂಪದ್ದು.

ಉತ್ತರ ಕರ್ನಾಟಕದ ನೆರೆಹಾವಳಿಗೆ ಸಹಾಯಹಸ್ತ ನೀಡಲು ತೆರಳಿದ್ದ, ಮೈಸೂರು ಭಾಗದ ಜನತೆಗೆ ಸಿದ್ಧೇಶ್ವರರು ಆಡಿದ ಕೃತಜ್ಞತೆಯ ಮಾತುಗಳು ಅಲ್ಲಿ ನೆರೆದಿದ್ದವರ ಹೃದಯವನ್ನು ಆವರಿಸಿ ಕಂಬನಿ ತುಂಬಿಕೊಂಡ ಚಿತ್ರ ಈಗಲೂ ಸ್ಮೃತಿಪಟಲದಲ್ಲಿ ಹಸಿರಾಗಿದೆ. ಗುಮ್ಮಟನಗರಿ ವಿಜಯಪುರದ ಕೊನೆಯ ಗುಮ್ಮಟ ಈಗ ಕಣ್ಮರೆಯಾಗಿದೆ. ಆದಿಲ್‌ಶಾಹಿ ಕಟ್ಟಿಸಿದ ಆ ಭೌತಿಕ ಗುಮ್ಮಟ ಇನ್ನೂ ಇದೆ. ಆದರೆ ಆಧುನಿಕ ಜಗತ್ತಿಗೆ ವಚನಗಳನ್ನು ಸಂಗ್ರಹಿಸಿಕೊಟ್ಟ ವಚನಪಿತಾಮಹ ಫ.ಗು. ಹಳಕಟ್ಟಿಯವರು ಮೊದಲನೆಯ ಗುಮ್ಮಟವಾದರೆ, ಆ ವಚನಗಳನ್ನು ಅವರ ನಡೆನುಡಿಯಲ್ಲಿ ಆಚರಿಸಿ, ಅವರ ಅನುಚರರೂ ಆಚರಿಸುವಂತೆ ಪ್ರಭಾವಿಸಿ, ಈಗ ಕಣ್ಮರೆಯಾಗಿರುವ ಶ್ರೀ ಸಿದ್ಧೇಶ್ವರರು ಮತ್ತೊಂದು ಗುಮ್ಮಟ. ಇಂಥ ಘನವಾದ ಗುಮ್ಮಟಗಳನ್ನೆಲ್ಲ ಕಳೆದುಕೊಂಡ ವಿಜಯಪುರ ಮಾತ್ರವಲ್ಲ, ಇಡೀ ನಾಡೇ ಕತ್ತಲೆಯಲ್ಲಿ ಮುಳುಗಿದೆ.

ಅನಾರೋಗ್ಯದಿಂದ ಅಲ್ಪ ಕಾಲ ವಿಶ್ರಾಂತಿಗೆ ಜಾರಿದ್ದ ಶ್ರೀಗಳು ಇಷ್ಟು ಬೇಗ ಚಿರವಿಶ್ರಾಂತಿಗೆ ತೆರಳುತ್ತಾರೆ ಎಂದು ಯಾರೂ ಭಾವಿಸಿರಲಿಲ್ಲ. ಭಾರತೀಯ ಪರಂಪರೆಗೆ ಅನುಗುಣವಾಗಿ ಅವರು ಉತ್ತರಾಯಣ ಪುಣ್ಯಕಾಲದ ವೈಕುಂಠ ಏಕಾದಶಿಯ ಪರ್ವದಿನದಂದು ದೇಹತ್ಯಾಗ ಮಾಡಿದ್ದು ಒಂದರ್ಥದಲ್ಲಿ ಅನಿರೀಕ್ಷಿತವಾದರೂ, ಅದು ಹರಿ–ಹರ ಸಮನ್ವಯತೆಯ ಒಂದು ಸುಂದರ ಉದಾಹರಣೆ. ಅವರ ಇಚ್ಛಾಮರಣವಂತೂ ಶರಣತತ್ವವನ್ನು ಮತ್ತೆ ಮತ್ತೆ ನೆನಪಿಸುವಂಥದು.

ನಾಳೆ ಬಪ್ಪುದು ನಮಗಿಂದೆ ಬರಲಿ
ಇಂದು ಬಪ್ಪುದು ನಮಗೀಗಲೆ ಬರಲಿ
ಇದಕಾರಂಜುವರು, ಇದಕಾರಳುಕುವರು?
'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ

ನಮ್ಮ ಕೂಡಲಸಂಗಮದೇವರು
ಬರೆದ ಬರೆಹವ ತಪ್ಪಿಸುವಡೆ
ಹರಿಬ್ರಹ್ಮಾದಿಗಳಿಗಳವಲ್ಲ.

ಹಿಂದೆ ರಮಣ ಮಹರ್ಷಿಗಳು, ರಾಮಕೃಷ್ಣ ಪರಮಹಂಸರು, ಪಂಚಾಕ್ಷರ ಗವಾಯಿಗಳು ಮುಂತಾದ ಮಹನೀಯರುಗಳ ಬಗ್ಗೆ ಅಗಲುವಿಕೆಯ ಬಗ್ಗೆ ಕೇಳಿದ್ದವರಿಗೆ ಅದೇ ಋಷಿಸದೃಶ ಕೈವಲ್ಯವನ್ನು ಪಡೆದ ಪೂಜ್ಯರ ಮಹಾನಿರ್ವಾಣ ಕಾಣಲು ಸಿಕ್ಕಿದ್ದು ನಿಜಕ್ಕೂ ಸುಕೃತವೇ! ದೇಹದ ಬಗೆಗಿನ ಅವರ ನಿರ್ಮಮಕಾರ ಎಲ್ಲರಿಗೂ ಸಾಧ್ಯವಲ್ಲದಿದ್ದರೂ, ಆ ದಾರಿ ಕ್ರಮಿಸಲು ಯೋಗ್ಯವಾದದ್ದು ಎಂಬುದಂತೂ ನಿಸ್ಸಂಶಯ. ಯಾರೂ ಕ್ರಮಿಸದ ಬೆಳಕಿನ ಹಾದಿಯಲ್ಲಿ ನಡೆಯುವವರು ತಾನೆ ಸಂತರು!

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

## ಸಿದ್ಧೇಶ್ವರ ಉವಾಚ

ಒಂದು ಸಣ್ಣ ಸೂತ್ರದೊಳಗ ಜಗತ್ತನ್ನೇ ಹಿಡಿದು ಇಡಬಲ್ಲೆವು. E=mc^2 ಎಷ್ಟು ಸಣ್ಣ ಸೂತ್ರ. ಐನ್‌ಸ್ಟೀನ್ ಈ ಸೂತ್ರ ಕೊಟ್ಟ. ಎಂಥ ವಿಚಾರ ತುಂಬಿತ್ತು ಅದರೊಳಗ! ಈ ಒಂದು ಸೂತ್ರ ಹಿಡಿಕೊಂಡು ಒಂದು ಹೀರೋಸಿಮಾ ನಗರ ಹಾಳಾತು. ಈ ಸಣ್ಣ ಸೂತ್ರ ಹಿಡಿಕೊಂಡು ನಾಗಾಸಾಕಿ ನಗರ ನಷ್ಟ ಆಯಿತು. 80,000 ಜನ ನಾಶ ಆಗಿದ್ರು. ಒಂದು ಕ್ಷಣದಲ್ಲಿ. ಅದೇ ಸೂತ್ರದಿಂದ ಸೂರ್ಯ ಬೆಳಕ ಕೊಡತಾನ ಜಗತ್ತಿನ್ಯಾಗ ಅದೇ ಸೂತ್ರದಿಂದ ಎಲ್ಲಾ ಬೆಳ್ಳಂಬೆಳಕು ಆಗೇದ.

ಬುದ್ಧಿವಂತನಾದ ಮನುಷ್ಯ ಇದೇ ಸೂತ್ರವನ್ನ ಬಳಸಿಕೊಂಡು ಎಷ್ಟೆಲ್ಲ ಕೆಲಸ ಮಾಡತಾ ಇದ್ದಾನೆ ಇಂದು. ಶಕ್ತಿ ಎಲ್ಲಿಂದ ಬರ್ತದ ಅಂತ ಒಂದು ಸಣ್ಣ ಸೂತ್ರ ಅದು. ಇದನ್ನ ತಲಿ ಹಿಡೀತು. ಯಾವ ಪ್ರಾಣೀನೂ ಇಂಥ ಸೂತ್ರ ಕಟ್ಟಾಕ ಸಾಧ್ಯ ಆಗೋದಿಲ್ಲ. ಎಷ್ಟೇ ಸಮರ್ಥವಾಗಿ ಆಕಾಶದಲ್ಲಿ ಹಾರಾಡುವಂಥ ಪಕ್ಷಿ ಇರಬಹುದು. ಆದರ ಮನುಷ್ಯ ಕೆಳಗ ಕೂತು ನೋಡಿದಷ್ಟು ನೋಡಲಿಕ್ಕೆ ಅದಕ್ಕ ಆಗಿಲ್ಲ ಯಾಕೆ? ಮನುಷ್ಯನ ಕೈಯೊಳಗ ಭಾಷೆ ಏನೋ ಮಾಡೇದ. ಅದಕ್ಕ ಅಂಥ ಇಂಥ ದೇವತೆಗಳನ್ನು ಪೂಜಿಸುವಕ್ಕಿಂತ ಈ ಶಬ್ದ ದೇವತೆಯನ್ನ ಪೂಜಿಸಬೇಕು ಮನುಷ್ಯ. ಅದರ ಮ್ಯಾಲ ಮನುಷ್ಯನ ಬದುಕೆ ನಿಂತದ. ಅಂಥಾ ಸುಂದರ ಶಬ್ದಗಳು.

# ಸಂಪಾದಕೀಯ

**ಜೋ**ಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ.
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ.
ಕೇಳು, ಕೂಡಲಸಂಗಮದೇವಾ
ಮರಣವೆ ಮಹಾನವಮಿ

ಶಿವಶರಣರು ಮರಣವನ್ನೂ, ಕಾಲವನ್ನೂ ಪರಿಭಾವಿಸಿದ ಬಗೆಯೇ ವಿಭಿನ್ನ. ಕಾಲವನ್ನು, ಅರಿತು ನಡೆಯಬೇಕು, ಕಾಲ ತೀರಿದ ಮೇಲೆ ವಿರಮಿಸಬೇಕು. ಈ ಅರಿಯುವ, ವಿರಮಿಸುವ ಮಧ್ಯದಲ್ಲಿ, ದೇಹದ ಪೋಷಣೆಗಾಗಿ, ಅನ್ನಕ್ಕಾಗಿ ಹಾತೊರೆಯುವ ಕ್ಷುದ್ರಜೀವಿಯಾಗುವುದರಲ್ಲಿ ಏನೂ ಔಚಿತ್ಯವಿಲ್ಲ. ಆದುದರಿಂದಲೇ ಶಿವಶರಣರು ತಮ್ಮ ಕಾರ್ಯ ಮುಗಿದ ಮೇಲೆ ತಮ್ಮ ಐಕ್ಯವನ್ನು ತಾವೇ ಕಂಡುಕೊಂಡರು. ಈ ಶರೀರದಿಂದ ಆಗಬೇಕಾದ ಕಾರ್ಯವೆಲ್ಲ ಆದ ಮೇಲೆ ಅದನ್ನು ವಿಸರ್ಜಿಸುವುದು ಕೂಡ ಒಂದು ಅಗತ್ಯ ಕಾರ್ಯವೇ. ಬಸವಣ್ಣನವರ ಈ ವಚನವು ಶರಣರ ಆತ್ಯಂತಿಕ ಆಶಯವನ್ನು ವಿವರಿಸುತ್ತಿದೆ. ಜೋಳವಾಳಿ ಎನ್ನುವ ಪದ ಪಂಪನ 'ವಿಕ್ರಮಾರ್ಜುನವಿಜಯ'ದಲ್ಲಿ ಮತ್ತೆ ಮತ್ತೆ ಪ್ರಯೋಗವಾಗಿದೆ. ಕರ್ಣನ ಜೀವನವನ್ನು ಆಮೂಲಾಗ್ರವಾಗಿ ನಿಯಂತ್ರಿಸಿದ್ದು ಕೇವಲ ಜೋಳವಾಳಿತನ ಮಾತ್ರ. ಅನ್ನದ ಋಣ ಮಾತ್ರ ಆತನಿಗೆ ಧರ್ಮ. ಸಾಮಾನ್ಯಾರ್ಥದ ಧರ್ಮ, ಅಧರ್ಮ, ನ್ಯಾಯಾನ್ಯಾಯಕ್ಕಿಂತಲೂ ಅನ್ನದ ಋಣ ಆತನಿಗೆ ಮುಖ್ಯವಾಯಿತು. ಆತ ಮಹಾದಾನಿ, ಮಹಾಶೂರ; ಆದರೂ ದುಷ್ಟಚತುಷ್ಟಯರಲ್ಲಿ ಒಬ್ಬನೆಂದು ಅವನನ್ನು ಕರೆಯಲಾಯಿತು. ಆತ ವೇಳೆವಾಳಿಯಲ್ಲ, ನಿಜ. ವೇಳೆವಾಳಿ ಎಂದರೆ ಬದಲಾದ ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾಗುವವನು. ಆದರೆ ಈ ವಚನದಲ್ಲಿ 'ವೇಳೆವಾಳಿ' ಎಂದರೆ ಕಾಲವನ್ನು ಮೀರದವನು, ಅದನ್ನು ಅರಿತವನು ಎಂದು ಅರ್ಥ. ಹಳಗನ್ನಡದ ಕಾವ್ಯಗಳಲ್ಲಿ 'ವೇಳೆವಾಳಿ' ಎನ್ನುವುದಕ್ಕೆ ರಾಜನಿಗೆ ಆಪತ್ತು ಒದಗಿದಾಗ ಆತನ ಸಮಯಕ್ಕೆ ಒದಗುವವನು ಎಂಬ ಅರ್ಥವಿದೆ.

ಶರಣರು ಎಂದೂ ಮರಣಕ್ಕೆ ಬೆನ್ನುತೋರಿದವರಲ್ಲ. ಅವರು ಅದನ್ನು ಮುಕ್ತವಾಗಿಯೇ ಸ್ವಾಗತಿಸಿದವರು. ಒಮ್ಮೆ ಬುದ್ಧನನ್ನು ಕುರಿತು ಆತನ ಶಿಷ್ಯ "ಗುರುವೇ, ಸಾವು ಎಷ್ಟು ಅಂತರದಲ್ಲಿದೆ?" ಎಂದು ಕೇಳಿದಾಗ, ಬುದ್ಧದೇವ "ನೀನು ಕಣ್ಣುರೆಪ್ಪೆ

ಮಿಟುಕಿಸುವ ಅಂತರದಲ್ಲಿ" ಎನ್ನುತ್ತಾನೆ. ಏಕೆಂದರೆ ಹುಟ್ಟು ಎಲ್ಲರಿಗೂ ಗೊತ್ತಿರುತ್ತದೆ, ಸಾವು ಯಾರಿಗೂ ಗೊತ್ತಿರದ ಸಂಗತಿ. ಈ ಹಿನ್ನೆಲೆಯಲ್ಲಿ ಶರಣರು ಮರಣವನ್ನು ಮಹಾನವಮಿಯನ್ನಾಗಿ ಕಂಡ ಧೀರರು. ಮರಣ ಎನ್ನುವುದು ಕೇವಲ ದೇಹಕ್ಕೆ ಮಾತ್ರ, ಆತ್ಮಕ್ಕಲ್ಲ ಎನ್ನುವುದು ಭಾರತೀಯ ತಾತ್ತ್ವಿಕ ಚಿಂತನೆ. ದೇಹದ ಕಾರಣದಿಂದ ಮಾತ್ರ ಅಸ್ತಿತ್ವವನ್ನು ಕಾಣುವ ಮನುಜರಿಗೆ ಉದರಪೋಷಣೆ ಮತ್ತು ಶರೀರದ ಕುರಿತಾದ ಮಮಕಾರವೇ ಮುಖ್ಯ. ಹಾಗಾಗಿ ನಮ್ಮಲ್ಲಿ ಬಹಳಷ್ಟು ಜನರು ಕೇವಲ ಅನ್ನಸಂಪಾದನೆಗಾಗಿ ಯಾವ ಮಾರ್ಗವನ್ನು ಬೇಕಾದರೂ ಅನುಸರಿಸುತ್ತಾರೆ. ಆದರೆ ಈ ದೇಹ ಕೂಡ ಸಮಯ ಸಂದಂತೆ ನೇಪಥ್ಯಕ್ಕೆ ಸರಿದುಹೋಗುತ್ತದೆ. ದೇಹವೆಂಬುದು ಸಮಯದ ಚೌಕಟ್ಟಿನಲ್ಲಿಯೇ ನಿರ್ಮಾಣವಾಗಿರುವುದರಿಂದ ಆ ಸಮಯವೇ ಅದರ ನಾಶಕ್ಕೂ ಕಾರಣವಾಗುತ್ತದೆ. ಇಂಥ ಸಮಯದ ಕಾರ್ಯವೈಖರಿಯನ್ನು ಅರಿತು ನಡೆಯುವುದು ಧರ್ಮ. ನಶಿಸಿಹೋಗುವ ಈ ದೇಹದ ಬಯಕೆಗಳಿಗೆ ಆಳಾಗಿಬಿಡುವುದು ಭವಿಗಳ ಲಕ್ಷಣ. ಅರಿಷಡ್ವರ್ಗಗಳನ್ನು ಆಳಾಗಿ ಮಾಡಿಕೊಳ್ಳುವುದು ಶರಣನ ಗುಣ. ಆದುದರಿಂದ ಆತನಿಗೆ ಮರಣವೆಂದರೆ ಭಯವಿಲ್ಲ, ಬದಲಿಗೆ ಅದು ಆತನ ಪಾಲಿಗೆ ಮಹಾನವಮಿ.

ಶರಣರ ಬಗ್ಗೆ ಪುಸ್ತಕದ ಮೂಲಕ ತಿಳಿದುಕೊಂಡಿದ್ದ ನಮಗೆ ಶರಣ ಬದುಕನ್ನು ಆಧುನಿಕ ಕಾಲದಲ್ಲಿ ಸಾಕ್ಷಾತ್ತಾಗಿ ತೋರಿಸಿಕೊಟ್ಟವರು ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳವರು. ತಮ್ಮ ಆರೋಗ್ಯ ಸಹಜ ರೀತಿಯಲ್ಲಿ ಸುಧಾರಿಸಲಾರದು ಎಂದು ಅರಿವಿಗೆ ಬಂದ ತಕ್ಷಣವೇ ಸಾವಿಗೆ ಸ್ವಲ್ಪವೂ ಹೆದರದೆ, ಸಂಭ್ರಮಿಸಿದ ಹಾಗೆ, ಅವರ ನಡೆ ಕಾಣುತ್ತದೆ. ಸಾವು ಶತಸ್ಸಿದ್ಧವೆಂಬ ಅರಿವಿದ್ದರೂ, ಅದಕ್ಕೆ ಹೆದರುವ ನಮಗೂ, ಸಾವನ್ನು ಮೀರುವ ಪೂಜ್ಯರ ನಿಲುವಿಗೂ ಎಷ್ಟು ಅಂತರ! ದೇಹದ ಪೋಷಣೆಗೆ ಅಗತ್ಯವಾದ ಅನ್ನ ಆಹಾರಾದಿಗಳನ್ನೂ ತ್ಯಜಿಸಿ, ಸಾವಿಗೇ ಅವರು ಪ್ರತಿಸವಾಲು ಹಾಕಿದ್ದು ನಿಜ ಶರಣರ ನಿಲುವು.

ಪೂಜ್ಯರ ಆಲೋಚನಾವೈಖರಿಗೆ ನನ್ನದೇ ಒಂದು ಸ್ವಂತ ಉದಾಹರಣೆ ನೀಡಿದರೆ ತಪ್ಪಾಗಲಾರದು. ನಾನು ಪುಸ್ತಕ ಪ್ರಾಧಿಕಾರದ ಅಧ್ಯಕ್ಷನಾದ ಸಂದರ್ಭದಲ್ಲಿ ಆಗ ಸುತ್ತೂರು ಶ್ರೀಮಠದಲ್ಲಿದ್ದ ಪೂಜ್ಯರ ಆಶೀರ್ವಾದ ಪಡೆಯಲು ಹೋದೆ. ಅವರು ನನ್ನನ್ನು ಆಶೀರ್ವದಿಸಿ "ಇದು ಅಧಿಕಾರವಲ್ಲ, ಅವಕಾಶ ಎಂಬುದನ್ನು ಸದಾ ನೆನಪಿನಲ್ಲಿಡಿ" ಎಂದರು. ಅವರು ಪ್ರತಿಯೊಂದು ಸಂಗತಿಯನ್ನೂ ಪರಿಭಾವಿಸುತ್ತಿದ್ದ ಕ್ರಮವದು. ಒಮ್ಮೆ ಯೋಗಾಭ್ಯಾಸದಿಂದಲೇ ಪ್ರಸಿದ್ಧರಾದ ಸ್ವಾಮಿಗಳೊಬ್ಬರು, ಪೂಜ್ಯರನ್ನು ಕುರಿತು 'ನಿದ್ರಿಸುವಾಗ ಹೇಗೆ ಮಲಗಬೇಕು? ದೇಹವನ್ನು ಹೇಗೆ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು?' ಎಂದೆಲ್ಲ ಭಾಷಣ ಬಿಗಿಯುತ್ತಿದ್ದರು. ನಾವೆಲ್ಲರೂ ತದೇಕಚಿತ್ತದಿಂದ

ಅವರ ಮಾತುಗಳಿಗೆ ಮಂತ್ರಮುಗ್ಧರಾಗಿ ತಲೆದೂಗುತ್ತಿದ್ದೆವು. ಆ ಮಾತುಗಳೆಲ್ಲ ಮುಗಿದ ಮೇಲೆ ಪೂಜ್ಯರು ನಿರುಮ್ಮಳವಾಗಿ "ನಿದ್ರಾವಸ್ಥೆಯಲ್ಲಿ ದೇಹ ತನಗೆ ಹೇಗೆ ಬೇಕೋ ಹಾಗೆ ತನ್ನ ಭಂಗಿಯನ್ನು ರೂಪಿಸಿಕೊಳ್ಳುತ್ತದೆ. ಅಲ್ಲ?" ಎಂದರು. ಇದಿರಿನವರ ಬಾಯಿ ಕಟ್ಟಿತು; ನಾವೂ 'ಹೌದಲ್ಲವೇ' ಎಂದು ನಿಬ್ಬೆರಗಾದೆವು.

ನಿಜವಾದ ಅರ್ಥದಲ್ಲಿ ಸಂತರು, ಯೋಗಿಗಳು ಆಗಿದ್ದ ಪೂಜ್ಯರನ್ನು ಹತ್ತಿರದಿಂದ ಕಾಣುವ, ಒಡನಾಟ ಹೊಂದುವ ಭಾಗ್ಯ ಮೈಸೂರಿನ ಜನರಿಗೆ ಲಭಿಸಿದ್ದು, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಂದ. ಶ್ರೀಮಠವು ಏರ್ಪಡಿಸುವ ಶಿಬಿರಗಳಿಗೆ ವಿಷಯವನ್ನು ಆಯ್ಕೆ ಮಾಡುವಾಗ, ರಾಜೇಂದ್ರ ಶ್ರೀಗಳವರ ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟಿಸಬೇಕಾದ ಗ್ರಂಥಗಳ ರೂಪುರೇಷೆಗಳನ್ನು ಅಂತಿಮಗೊಳಿಸುವಾಗ, 'ಶಿವಪದ ರತ್ನಕೋಶ' ರಚನೆಯಾಗುವಾಗ – ಹೀಗೆ ಅನೇಕ ಬಾರಿ ಅವರೊಡನೆ ಹತ್ತಿರದಿಂದ ವ್ಯವಹರಿಸಲು ಸಾಧ್ಯವಾದುದು ನನ್ನ ಪೂರ್ವಜನ್ಮದ ಸುಕೃತ. ಅವರು ಭೌತಿಕವಾಗಿ ಇಂದು ನಮ್ಮ ನಡುವೆ ಇಲ್ಲವಾದರೂ ಅವರು ಹಾಕಿಕೊಟ್ಟ ಮಾರ್ಗ, ಹೇಳಿಕೊಟ್ಟ ಚಿಂತನೆ ಸದಾ ಸ್ಮರಣೀಯವಾಗಿರುತ್ತದೆ.

"ಪ್ರಸಾದ" ಸಂಚಿಕೆ ಈ ತಿಂಗಳಿನಿಂದ ಮಾಸಿಕವಾಗಿ ಪ್ರಕಟವಾಗುತ್ತಿದೆ. ಮೊದಲನೆಯ ಸಂಚಿಕೆ ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳವರನ್ನು ಕುರಿತು ರೂಪುಗೊಳ್ಳುತ್ತಿರುವುದು ಸಂತಸದಂತೆ ಸಂಕಟದ ವಿಚಾರವೂ ಹೌದು. ಈ ಸಂಚಿಕೆಯನ್ನು ತ್ವರಿತವಾಗಿ ರೂಪಿಸಬೇಕಾದುದರಿಂದ, ಪೂಜ್ಯರನ್ನು ಕುರಿತು ದಿನಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು, ಲೇಖಕರ ಅನುಮತಿ ಪಡೆಯಲು ಸಾಧ್ಯವಾಗದೆ, ಅವರ ಆಕ್ಷೇಪಣೆ ಇರಲಾರದೆಂದು ಭಾವಿಸಿ, ಬಳಸಿಕೊಳ್ಳಲಾಗಿದೆ. ಈ ಪತ್ರಿಕೆ ಮಾಸಿಕವಾಗಬೇಕೆಂಬುದು ಪರಮಪೂಜ್ಯರ ಬಹುಕಾಲದ ಆಶಯವಾಗಿತ್ತು. ಅದು ಈಗ ಸಾಧ್ಯವಾಗುತ್ತಿದೆ. ವೈಯಕ್ತಿಕವಾಗಿ ಸಂತಸದ ಸಂಗತಿ ಎಂದರೆ ಈ ಯೋಜನೆಯ ಮೊದಲನೆಯ ಸಂಚಿಕೆಯನ್ನು ಹೊರತರುವ ಹೊಣೆಗಾರಿಕೆ ನನ್ನ ಪಾಲಿಗೆ ಬಂದಿದೆ. ನನ್ನಂಥ ಕಿರಿಯನನ್ನು ಅವರು ಸಲಹುತ್ತಿರುವ ರೀತಿ, ಕೈಹಿಡಿದು ಮುನ್ನಡೆಸುತ್ತಿರುವ ಪರಿ ಮಾತಿಗೆ ಮೀರಿದ್ದು, ಅವರ ಭೂಮಚೈತನ್ಯವನ್ನು ಹತ್ತಿರದಿಂದ ಕಾಣುತ್ತಿರುವ ನಮಗೆ ಅವರೊಂದು ಸದಾ ಬೆರಗು.

ಇದುವರೆಗೂ ನನ್ನ ಪ್ರೀತಿಯ ಗುರುಗಳಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ಈ ಪತ್ರಿಕೆಯನ್ನು ಕಳೆದ ಇಪ್ಪತ್ತು ವರ್ಷಗಳಿಂದ ಮುನ್ನಡೆಸಿದ್ದಾರೆ. ಅವರ ವೈಚಾರಿಕ ನಿಲುವಿನ ಸ್ಪಷ್ಟತೆ, ಬದ್ಧತೆ ಎಲ್ಲರಿಗೂ ಅನುಕರಣೀಯ. ಸಂಚಿಕೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ನನಗೆ ನೀಡಿ ಬೆನ್ನುತಟ್ಟಿ ಹರಸಿದ್ದಾರೆ. ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಗೌರವ ಸಂಪಾದಕರಾದ

ಶ್ರೀ ಆರ್.ಎಸ್. ಪೂರ್ಣಾನಂದ ಅವರು ಮೊದಲ್ಗೊಂಡು ವಿಭಾಗದ ಎಲ್ಲ ಮಿತ್ರರೂ ನನ್ನ ಬೆನ್ನಿಗೆ ನಿಲ್ಲುವ ಭರವಸೆ ನೀಡಿದ್ದಾರೆ. ಹೀಗೆ 'ಪ್ರಸಾದ' ಮಾಸಿಕವಾಗಿ ರೂಪುಗೊಂಡು ಹೊರಹೊಮ್ಮುತ್ತಿದೆ.

ಈ ಹಿಂದೆ ಇದ್ದ "ಸಂಚಿಕೆಯ" ಸ್ವರೂಪದಲ್ಲಿ ಕೆಲವು ಬದಲಾವಣೆಯನ್ನು ಹೊಸ ಆವೃತ್ತಿಯಲ್ಲಿ ಅಳವಡಿಸಲಾಗಿದೆ. ಇದುವರೆಗೂ ಪ್ರಕಟವಾಗಿರದ ವೀರಶೈವ–ಲಿಂಗಾಯತ ಕೃತಿಗಳನ್ನು ಧಾರಾವಾಹಿಯಾಗಿ ಪ್ರಕಟಿಸಿ, ಅನಂತರ ಅವುಗಳನ್ನು ಗ್ರಂಥಮಾಲೆಯಿಂದ ಪುಸ್ತಕರೂಪದಲ್ಲಿ ಪ್ರಕಟಿಸುವುದು. ಷಡಕ್ಷರದೇವನ 'ಶಬರ ಶಂಕರ ವಿಳಾಸ', 'ವೃಷಭೇಂದ್ರ ವಿಜಯ' ಮುಂತಾದ ಕೃತಿಗಳ ಟೀಕುಸಾಹಿತ್ಯವನ್ನು ಸರಣಿರೂಪದಲ್ಲಿ ಹೊರತರುವುದು – ಮುಂತಾದ ಯೋಜನೆಗಳಿವೆ. ಅಂತೆಯೇ, ಪೂಜ್ಯ ರಾಜೇಂದ್ರ ಶ್ರೀಗಳ ಬದುಕಿನ ವಿಶಿಷ್ಟ ಕಥಾನಕಗಳನ್ನು, ಪೂಜ್ಯ ಸಿದ್ಧೇಶ್ವರ ಸ್ವಾಮಿಗಳವರ ಉಪನ್ಯಾಸದ ಕಥೆಗಳನ್ನು ನೀಡಲಾಗುವುದು.

ವಚನಸಾಹಿತ್ಯವೂ ಸೇರಿದಂತೆ ಭಾರತೀಯ ತಾತ್ತ್ವಿಕ, ಸಾಂಸ್ಕೃತಿಕ, ಧಾರ್ಮಿಕ ವಿಷಯಗಳನ್ನು ಕುರಿತ ಲೇಖನಗಳಿಗಾಗಿ ಮೂವತ್ತು ಪುಟಗಳನ್ನು ಮೀಸಲಿಡಲಾಗುತ್ತದೆ. ಈ ಸಂಚಿಕೆಯನ್ನು ಯಶೋಪಥದಲ್ಲಿ ಮುನ್ನಡೆಸುವ ಶಕ್ತಿಯನ್ನು ಭಗವಂತನು ನನಗೆ ದಯಪಾಲಿಸಲಿ, ಓದುಗರಾದ ನಿಮ್ಮೆಲ್ಲರ ಬೆಂಬಲ ಎಂದಿನಂತೆ ಇರಲಿ ಎಂದು ಪ್ರಾರ್ಥಿಸುತ್ತೇನೆ.

**ಡಾ. ಎಂ.ಎನ್. ನಂದೀಶ್ ಹಂಚೆ**
**ಸಂಪಾದಕರು**

## ಸಿದ್ಧೇಶ್ವರ ಉವಾಚ

ನಾವು ನಮ್ಮ ದೈನಂದಿನ ಕ್ರಿಯೆಗಳನ್ನು ಯಾವುವೂ ಬಿಡುವ ಹಾಗಿಲ್ಲ. ಆದರೆ ಆ ಕ್ರಿಯೆಗಳಲ್ಲಿಯೇ ನಾವು ಮುಳುಗಿ ಹೋಗಬಾರದು, ಸಿಕ್ಕಿ ಹಾಕಿಕೊಳ್ಳಬಾರದು. ನಮ್ಮ ಕ್ರಿಯೆಗಳು ಹಲಸಿನ ಹಣ್ಣಿನ ತೊಳೆಯನ್ನು ಬಿಡಿಸಿದಂತಿರಬೇಕು. ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣನ್ನು ಬಿಡಿಸಿದರೆ ಅದು ಕೈಗೆ ಅಂಟಿಕೊಳ್ಳುವುದಿಲ್ಲ. ಕೈಗೆ ಎಣ್ಣೆ ಹಚ್ಚಿಕೊಳ್ಳದೆ ಹಲಸಿನ ಹಣ್ಣನ್ನು ಹಾಗೇ ಬಿಡಿಸಲು ಹೋದರೆ ಅದರ ಕಷ್ಟ ಹೇಳಲಸದಳ. ಹಣ್ಣು ಮೈ–ಕೈಗೆಲ್ಲಾ ಅಂಟಿಕೊಂಡು ಬಿಡುತ್ತದೆ. ಈ ಜೀವನವೆಂಬ ಹಲಸಿನ ಹಣ್ಣನ್ನು ಸವಿಯಬೇಕಾದರೂ ನಾವು ಮನಸ್ಸಿಗೆ ನಿರ್ಲಿಪ್ತತೆಯ ಎಣ್ಣೆಯನ್ನು ಸವರಬೇಕು. ಇಲ್ಲದಿದ್ದರೆ ನಾವು ಪ್ರಾಪಂಚಿಕ ಕ್ರಿಯೆಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಒಂದು ಕ್ಷಣವೂ ವಿರಾಮ ಅಥವಾ ವಿಶ್ರಾಂತಿ ನಮಗೆ ದೊರೆಯುವುದಿಲ್ಲ. ಆಗ ನಾವು ಜೀವನದಲ್ಲಿ ನೆಮ್ಮದಿಯನ್ನು ಕಳೆದುಕೊಳ್ಳುತ್ತೇವೆ. ನೈಜ ಸುಖದಿಂದ ವಂಚಿತರಾಗುತ್ತೇವೆ.

# ಸಿದ್ಧೇಶ್ವರ ಶ್ರೀಗಳಂಥ ಹತ್ತಾರು ಚಿಂತಕರು ಹುಟ್ಟಲಿ

**ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆ**

'**ನ**ಡೆದಾಡುವ ವಿಶ್ವಕೋಶ' ಎಂದೇ ಖ್ಯಾತರಾಗಿರುವ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳು ಇಹಲೋಕ ತ್ಯಜಿಸಿದ್ದಾರೆ. ಒಬ್ಬ ಶ್ರೇಷ್ಠ ಮಹಾತ್ಮರನ್ನು, ಮಾರ್ಗದರ್ಶಕರನ್ನು ಕಳೆದುಕೊಂಡಿದ್ದೇವೆ.

ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಶತಮಾನದ ಸಂತ, ಆಧ್ಯಾತ್ಮಿಕ ಚಿಂತಕ, ಭಾಷಾಪ್ರವೀಣರೂ ಹೌದು. ಪ್ರವಚನಕಾರರಾಗಿ ವಿಶ್ವಪ್ರಸಿದ್ಧರು. ಸರಳತೆಯನ್ನು ಮೈಗೂಡಿಸಿಕೊಂಡಿದ್ದ ಅವರು ಸದಾ ಶ್ವೇತವಸ್ತ್ರಧಾರಿಯಾಗಿದ್ದರು. ಯಾರ ನೆರವನ್ನೂ ಬಯಸದ ಅವರ ಅಂಗಿಗೆ ಕಿಸೆಯೇ ಇರಲಿಲ್ಲ.

ಒಮ್ಮೆ ಧಾರವಾಡದಲ್ಲಿ ಶ್ರೀಗಳ ಪ್ರವಚನ ಕಾರ್ಯಕ್ರಮ ನಿಗದಿಯಾಗಿತ್ತು. ಆ ಪ್ರವಚನ ಕಾರ್ಯಕ್ರಮದಲ್ಲಿ ನಾನು ಕೂಡ ಭಾಗವಹಿಸಬೇಕೆಂದು ನನ್ನನ್ನು ಆಹ್ವಾನಿಸಿದ್ದರು. ಸಾಮಾನ್ಯವಾಗಿ ಉದ್ಘಾಟನೆ ರೀತಿಯ ಕಾರ್ಯಕ್ರಮ ಇರಬಹುದು ಎಂದು ಭಾವಿಸಿ, ಚುಟುಕಾದ ಭಾಷಣ ಮಾಡಲು ಮನಸ್ಸಿನಲ್ಲಿ ತಯಾರಿ ಮಾಡಿಕೊಂಡಿದ್ದೆ. ಜೊತೆಗೆ ಸಿದ್ಧೇಶ್ವರ ಶ್ರೀಗಳ ಪ್ರವಚನ ಕೇಳಲು ಉತ್ಸುಕನಾಗಿ ಹೋಗಿದ್ದೆ.

ಅಲ್ಲಿ ಜನಸ್ತೋಮವೇ ನೆರೆದಿತ್ತು. ಸಿದ್ಧೇಶ್ವರ ಸ್ವಾಮೀಜಿ ವೇದಿಕೆಯ ಎದುರುಗಡೆಯೇ ಕೂತಿದ್ದರು. ಆಯೋಜಕರು ನನ್ನನ್ನು ವೇದಿಕೆಗೆ ಬರಮಾಡಿಕೊಂಡರು. ಆಗ ನಾನು ಶ್ರೀಗಳು ವೇದಿಕೆಗೆ ಬರುವುದಿಲ್ಲವೇ ಎಂದು ಪ್ರಶ್ನಿಸಿದೆ. 'ಇಲ್ಲ' ಅವರು ಬರುವುದಿಲ್ಲವಂತೆ. 'ನೀವೇ ವೇದಿಕೆಯಲ್ಲಿ ಆಸೀನರಾಗಬೇಕಂತೆ' ಎಂದು ಹೇಳಿದರು. ಕಾರ್ಯಕ್ರಮ ಅರಂಭವಾಗಿ ಭಾಷಣ ಪ್ರಾರಂಭಿಸಿದೆ. ಹತ್ತು ನಿಮಿಷದ ಭಾಷಣಕ್ಕೆ ಮಾತ್ರ ತಯಾರಿ ಮಾಡಿಕೊಂಡು ಹೋಗಿದ್ದೆ. ಶ್ರೀಗಳವರ ಬಗ್ಗೆ ಮತ್ತು ಅಂದಿನ ಕಾರ್ಯಕ್ರಮದ ಬಗ್ಗೆ ವಿಚಾರವನ್ನು ಹೇಳಿ ಮಂಡಿಸಿ, ಇನ್ನು ಶ್ರೀಗಳು ಪ್ರವಚನ ಮಾಡುತ್ತಾರೆ ಎಂದು ನನ್ನ ಭಾಷಣವನ್ನು ಕೊನೆಗೊಳಿಸುವ ಹಂತದಲ್ಲಿದ್ದೆ. ಆಗ ಆಯೋಜಕರು 'ನೀವೇ ಭಾಷಣ ಮುಂದುವರಿಸಬೇಕು ಎಂದು ಶ್ರೀಗಳು ತಿಳಿಸಿದ್ದಾರೆ' ಎಂದು ಹೇಳಿದರು.

ಧಾರವಾಡಕ್ಕೆ ಹೋದಾಗ ನಮ್ಮ ಕ್ಷೇತ್ರದ ಸಂಸ್ಥೆಗಳ ಕೆಲಸಕಾರ್ಯಗಳ ವಿಚಾರಕ್ಕೆ ಸಂಬಂಧಿಸಿದಂತೆ ಒತ್ತು ನೀಡುತ್ತಿದ್ದೆ. ಹಾಗಾಗಿ ಹತ್ತು ನಿಮಿಷದ ಭಾಷಣಕ್ಕೆ ತಯಾರಿ

ಮಾಡಿಕೊಂಡು ನಿರಾಳವಾಗಿದ್ದೆ. ಜೊತೆಗೆ ಶ್ರೀಗಳು ಪ್ರವಚನ ನೀಡುತ್ತಾರೆ, ಅದನ್ನು ಕೇಳಬೇಕು ಎಂಬ ಕುತೂಹಲವನ್ನೂ ಹೊಂದಿದ್ದೆ. ಆದರೆ ಅಲ್ಲಿ ಆದದ್ದು ತಿರುವು–ಮುರುವು. ಹೀಗಾಗಿ ಮುಂದಿನ ಮೂವತ್ತು ನಿಮಿಷಗಳ ಕಾಲ ನನ್ನ ಪರಿಸ್ಥಿತಿ ಹೇಗಾಗಿರಬಹುದೆಂದು ನೀವೇ ಊಹಿಸಿ. ಕೊನೆಗೆ ವಿವಿಧ ವಿಚಾರಗಳ ಕುರಿತು ಸಾಧ್ಯವಾದಷ್ಟು ನೆನಪಿಸಿಕೊಂಡು 30 ನಿಮಿಷ ಭಾಷಣ ಮಾಡಿದೆ. ಶ್ರೀಗಳು ನನ್ನ ಭಾಷಣ ಆಲಿಸಿ ಸಂತೋಷಪಟ್ಟರು. 'ಒಳ್ಳೆಯ ಮಾತುಗಳನ್ನು ಆಡಿದ್ದೀರಿ' ಎಂದು ಪ್ರಶಂಸನೀಯ ಮಾತುಗಳನ್ನು ಹೇಳಿದರು.

ಅವರೊಂದಿಗಿನ ಒಡನಾಟದ ಮತ್ತೊಂದು ಘಟನೆಯನ್ನು ನೆನಪಿಸಿಕೊಳ್ಳಲೇಬೇಕು. ಅವರು ಒಮ್ಮೆ ಮೈಸೂರಲ್ಲಿ ಪೂಜ್ಯ ಸುತ್ತೂರು ಶ್ರೀಗಳವರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುತ್ತೂರು ಶ್ರೀಗಳಿಗೆ ಸಿದ್ಧೇಶ್ವರ ಶ್ರೀಗಳನ್ನು ಮೈಸೂರಿನಲ್ಲಿ ಉಳಿಸಿಕೊಳ್ಳುವಷ್ಟು ಪ್ರೀತಿ ಮತ್ತು ಅಭಿಮಾನ ಇತ್ತಾದರೂ ಶ್ರೀಗಳ ವಿಶ್ವವ್ಯಾಪಿ ಸಂಚಾರದ ಬಗ್ಗೆ ತಿಳಿದಿದ್ದರಿಂದ ಅನೇಕ ಬಾರಿ ಮೈಸೂರಿನ ಸುತ್ತೂರು ಮಠಕ್ಕೆ ಅವರನ್ನು ಆಹ್ವಾನಿಸಿ ಅವರಿಂದ ಪ್ರವಚನಗಳನ್ನು ಏರ್ಪಡಿಸುತ್ತಿದ್ದರು.

ನಾನು ಭಾಗವಹಿಸಿದ ಕಾರ್ಯಕ್ರಮವೊಂದರಲ್ಲಿ ಪೂಜ್ಯ ಸಿದ್ಧೇಶ್ವರ ಶ್ರೀಗಳು ಬಹಳ ನಿಧಾನಗತಿಯಲ್ಲಿ ಇಳಿಸ್ವರದಲ್ಲಿ ಪ್ರವಚನ ಪ್ರಾರಂಭಿಸಿದರು. ಆಗ ಹೆಚ್ಚಿನ ಸಭಿಕರೆಲ್ಲ ಮೈಕ್ ಸರಿಯಿಲ್ಲ, ಧ್ವನಿ ಬಹಳ ಕಡಿಮೆ ಇದೆ, ಮೈಕ್–ಮೈಕ್ ಎಂದು ಎಚ್ಚರಿಸಿ, ಮೈಕಿನ ಧ್ವನಿಯನ್ನು ಏರಿಸಿ ಎಂದು ಸೂಚಿಸುತ್ತಿದ್ದರು. ಆಗ ನನ್ನ ಪಕ್ಕದಲ್ಲಿ ಇದ್ದ ಸುತ್ತೂರು ಶ್ರೀಗಳು ಮುಗುಳ್ನಗುತ್ತಿದ್ದರು. ಅವರ ನಗುವಿನ ಕಾರಣ ಕೇಳಿದಾಗ ಅವರು "ಹೆಗ್ಗಡೆಯವರೆ, ಅವರ ಮಾತಿನ ವೈಖರಿಯೇ ಹೀಗೆ. ಪ್ರವಚನವನ್ನು ಎಲ್ಲರೂ ಕೇಳುವಂತಾಗಬೇಕು ಎಂಬ ನಿಟ್ಟಿನಲ್ಲಿ ಜನರ ಗಮನ ಸೆಳೆಯಲು ಮೆಲುಧ್ವನಿಯಲ್ಲಿ ಪ್ರವಚನ ಪ್ರಾರಂಭಿಸುತ್ತಾರೆ" ಎಂದರು. ಕಾರ್ಯಕ್ರಮಕ್ಕೆ ಬರುವವರೆಲ್ಲರೂ ಕುತೂಹಲಿಗಳು, ಮುಮುಕ್ಷುಗಳಲ್ಲ ಅಥವಾ ತಿಳಿದುಕೊಳ್ಳಬೇಕೆಂಬ ಆಸಕ್ತರಲ್ಲ. ಕೇವಲ ಏನೋ ಪ್ರಚಾರಕ್ಕಾಗಿ, ದೊಡ್ಡವರು ಬರುತ್ತಾರಂತೆ, ಅವರ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆ ಎಂಬ ಉತ್ಸಾಹದಲ್ಲಿ ಬಂದಿರಬಹುದು ಅಥವಾ ಕೇಳುವ ಆಸಕ್ತಿ ಇಲ್ಲದಿದ್ದರೂ ಕೂಡ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ ಎಂದು ಹೇಳಿಕೊಳ್ಳುವ ಸಲುವಾಗಿ ಕಾರ್ಯಕ್ರಮದಲ್ಲಿ ಕೂತಿರುತ್ತಾರೆ. ಮಾತು ಪ್ರಾರಂಭಿಸಿದ ಐದು ನಿಮಿಷದಲ್ಲಿ ಅವರೆಲ್ಲರ ಚಿತ್ತ ಆಕರ್ಷಿಸಿ ಗಮನಸೆಳೆದು ಮತಿಯನ್ನು ಶುದ್ಧಗೊಳಿಸಿ ತಮ್ಮ ಪ್ರವಚನದ ಮಾತುಗಳನ್ನು ಕೇಳುವಂತೆ ಈ ರೀತಿ ಮಾಡುತ್ತಿದ್ದರು. ಇದು ಅವರ ವೈಶಿಷ್ಟ್ಯ. ಅವರ ಪ್ರವಚನಗಳಲ್ಲಿ ನಾನು ಕಂಡಂತಹ ವಿಶೇಷತೆಯೆಂದರೆ ಅವರು ಯಾವತ್ತೂ ಕೂಡ ಕಠಿಣ ಶಬ್ದಗಳನ್ನು ಬಳಸುತ್ತಿರಲಿಲ್ಲ. ಆಡುಭಾಷೆಯಲ್ಲಿ, ಸ್ಪಷ್ಟವಾದ ಉಚ್ಚಾರಣೆಯಲ್ಲಿ ಭಾಷಣ ಮಾಡುತ್ತಿದ್ದರು. ಎಲ್ಲ ಧರ್ಮಗಳ ಸಾರ, ತತ್ವ, ವಿಚಾರಗಳನ್ನು

ಜನಸಾಮಾನ್ಯರು ಕೂಡ ತಿಳಿದುಕೊಳ್ಳುವಂತೆ, ನೇರವಾಗಿ ಬದುಕಿಗೆ ಉಪಯುಕ್ತವಾಗುವಂತೆ ತಿಳಿಹೇಳುತ್ತಿದ್ದರು. ತತ್ವ–ವಿಚಾರಗಳು ನೇರವಾಗಿ ಜನಜೀವನಕ್ಕೆ ಹೇಗೆ ಸಂಬಂಧಿಸಿವೆ? ಹೇಗೆ ಮಾರ್ಗದರ್ಶಕವಾಗಿವೆ? ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು? ಎಂಬುದನ್ನು ಅವರು ತಿಳಿಯುವಂತೆ ಹೇಳುತ್ತಿದ್ದರು. ಪ್ರವಚನಗಳ ಮೂಲಕ ಅವರು ಎಲ್ಲರ ಹೃದಯವನ್ನು ತಟ್ಟುತ್ತಿದ್ದರು. ವಿದ್ಯಾವಂತರು ಹಾಗೂ ನಗರಪ್ರದೇಶದ ಜನರು ಮಾತ್ರವಲ್ಲದೆ ಗ್ರಾಮೀಣ ಪ್ರದೇಶಗಳ ಜನರೂ ಅವರ ಬಗ್ಗೆ ಅಪಾರ ಒಲವು, ಗೌರವ ಹೊಂದಿದ್ದರು. ನಡೆ–ನುಡಿ ಗುಣದಲ್ಲಿ ಮಹಾತ್ಮರಾಗಿದ್ದವರೊಬ್ಬರು ಕಾಷಾಯ ವಸ್ತ್ರ ಧರಿಸಬೇಕು ಎಂಬ ಇಚ್ಛೆಯಿಂದ ಗುರುಗಳ ಬಳಿ ಸನ್ಯಾಸ ದೀಕ್ಷೆ ಕೊಡಲು ವಿನಂತಿಸುತ್ತಾರೆ. ಆಗ ಅವರು "ನೀವು ಈಗಾಗಲೇ ಸನ್ಯಾಸದ ಕಟ್ಟುಪಾಡುಗಳನ್ನು ಮೀರಿದ ವ್ಯಕ್ತಿತ್ವ ಹೊಂದಿದ್ದೀರಿ, ಹಾಗಾಗಿ ನಿಮಗೆ ಸನ್ಯಾಸತ್ವದ ಅಗತ್ಯವಿಲ್ಲ" ಎಂದು ಹೇಳಿದರು. ಅಂತೆಯೇ ಸಿದ್ಧೇಶ್ವರ ಶ್ರೀಗಳು ಸ್ವಾಮಿಗಳಾಗಿದ್ದರೂ ಕಾಷಾಯವಸ್ತ್ರ ಧರಿಸುತ್ತಿರಲಿಲ್ಲ. ಶ್ರೇಷ್ಠ ಆಚಾರ, ವಿಚಾರ, ಚಿಂತನೆಗಳುಳ್ಳ ಶ್ರೀಗಳಾಗಿದ್ದರು. ವಿರಕ್ತರಾಗಿದ್ದರು. ಅವರಲ್ಲಿದ್ದ ವಿರಕ್ತಭಾವವೇ ಅವರಿಗೆ ಶ್ರೇಷ್ಠತೆಯನ್ನು ಒದಗಿಸಿದೆ. ಶ್ರೀಗಳು ಕೊನೆಗಾಲದಲ್ಲಿ ಆಹಾರ ಕಡಿಮೆ ಮಾಡುತ್ತ ಹೋದರು, ನೀರನ್ನೂ ಕೂಡ ತ್ಯಜಿಸಿದರು ಎಂದು ತಿಳಿದುಬಂತು. ಜೈನಧರ್ಮದ ಸಲ್ಲೇಖನವ್ರತದ ಬಗ್ಗೆ ಚೆನ್ನಾಗಿ ಅರಿತಿದ್ದರಿಂದ ಹಂತಹಂತವಾಗಿ ಆಹಾರವನ್ನು ಕಡಿಮೆ ಮಾಡಿರಬಹುದು ಎಂದೆನಿಸುತ್ತದೆ. ದೇಹದ ಉಪಯುಕ್ತತೆ ಇಲ್ಲ ಎಂದು ಭಾವಿಸಿ ಕೊನೆಗೆ ದೇಹದಿಂದ ಮುಕ್ತಿ ಪಡೆದರು. ಅಂತಹ ಮಹಾತ್ಮರಿಗೆ ನನ್ನ ಪ್ರಣಾಮಗಳು. ಅವರ ಚಿಂತನೆಗಳು ಸ್ಫೂರ್ತಿ ನೀಡಲಿ. ಅವರ ಪ್ರವಚನಗಳು, ಪ್ರಕಟಣೆಗಳು ಮಾಧ್ಯಮಗಳಲ್ಲಿ ಹಾಗೂ ಸಂಗ್ರಹರೂಪದಲ್ಲಿ ಲಭ್ಯವಿದೆ. ಈ ಮೂಲಕ ಅವರು ಸದಾ ನಮ್ಮೊಂದಿಗೇ ಇರುತ್ತಾರೆ. ಅವರ ಸಂದೇಶವನ್ನು ತಿಳಿದುಕೊಂಡು ಅವರಂತೆ ಹತ್ತಾರು ಜನ ಚಿಂತಕರು ಹುಟ್ಟಲಿ, ಅವರ ತತ್ವಾದರ್ಶಗಳನ್ನು ಅರಿತು ಎಲ್ಲರೂ ಬದುಕಿನಲ್ಲಿ ಅಳವಡಿಸಿಕೊಳ್ಳುವಂತಾಗಲಿ.

□

# ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು

**ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು**

ಅವರು ಈಗ ಮಾತ್ರ ಹಾಗಲ್ಲ; ಅವರು ಯಾವಾಗಲೂ ಹಾಗೇನೇ!! ಅವರು ಏನೊಂದನೂ ಬೇಕೆಂದವರಲ್ಲ; ಅವರು ಯಾವೊಂದನೂ ಬೇಕೆಂದವರಲ್ಲ. "ಬೇಕು" ಎಂಬ ಪದ ಅವರ ನಿಘಂಟಿನಲ್ಲಿ ಇಲ್ಲವೇ ಇಲ್ಲ. ಅವರೊಂದು ಜ್ಞಾನ–ವಿಜ್ಞಾನದ ವಿಶ್ವಕೋಶ. ಇದರಲ್ಲಿ ಎರಡು ಮಾತಿಲ್ಲ. ಆದರೆ ಆ ವಿಶ್ವಕೋಶದಲ್ಲಿ "ಬೇಕು" ಎಂಬ ಪದವೇ ಇಲ್ಲ. ಇದು ವಿಚಿತ್ರ ಆದರೂ ಸತ್ಯ. "ಬೇಕು" ಎಂಬ ಪದವಿಲ್ಲದ ವಿಶ್ವಕೋಶ ಅವರು.

ತಮ್ಮ ಬದುಕಿಗೆ "ಬೇಡ ದೀಕ್ಷೆ"ಯನ್ನು ಕೊಟ್ಟುಕೊಂಡು ಬದುಕಿದ ಮಹಾನುಭಾವರವರು. ಇಡೀ ಪ್ರಪಂಚ "ಅದು ಬೇಕು", "ಇದು ಬೇಕು" ಎನ್ನುತ್ತದೆ. ಪೂಜ್ಯ ಶ್ರೀಗಳು ಮಾತ್ರ "ಅದು ಬೇಡ", "ಇದು ಬೇಡ" ಎನ್ನುತ್ತಾರೆ. ಅವತ್ತು ಗುರುದೇವ ಮಲ್ಲಿಕಾರ್ಜುನ ಅಪ್ಪಗಳು "ನನ್ನ ನಂತರ ನೀನೇ" ಎಂದು ಹೇಳುತ್ತಾರೆ. ಆಗಲೂ "ಆ ಪಟ್ಟ, ಆ ಪದವಿ ನನಗೆ ಬೇಡ" ಎನ್ನುತ್ತಾರೆ. ಗುರುದೇವರಿಗೆ "ನಾನು ಸ್ಥಾವರವಾಗಲಾರೆ; ನಾನು ಜಂಗಮವಾಗಿ ಸಂಚರಿಸಬೇಕು. ಹಾಗೆಯೇ ನನಗೆ ಆಶೀರ್ವಾದ ಮಾಡಿ" ಎಂದು ಹೇಳುತ್ತಾರೆ. ಗುರುದೇವರು "ಅಸ್ತು" ಎನ್ನುತ್ತಾರೆ.

ಅಂದಿನಿಂದ ಗುರುಗಳ "ಅಸ್ತು"ವನ್ನೇ ಅಸ್ತಿತ್ವವಾಗಿಸಿಕೊಂಡು ಬದುಕಿದ ಪೂಜ್ಯರು ನಿತ್ಯಜಂಗಮರಾಗಿ ಬದುಕಿದರು. ಪೂಜ್ಯ ಗುರುದೇವ ಮಲ್ಲಿಕಾರ್ಜುನ ಅಪ್ಪಗಳು ಅನುಭವಮಂಟಪವಾದರೆ ಪೂಜ್ಯ ಶ್ರೀಗಳು ಪ್ರವಚನಗಳ ಜೈತ್ರಯಾತ್ರೆಯಾದರು.

ಭಕ್ತರು ಅವರಿಗೆ ಉತ್ತಮ "ಉಡುಗೆ ಕೊಡಬೇಕು, ತೊಡುಗೆ ಕೊಡಬೇಕು" ಎನ್ನುತ್ತಾರೆ;

ಅವರು "ಬೇಡ" ಎನ್ನುತ್ತಾರೆ.

ಭಕ್ತರು ಅವರಿಗೆ ಮೃಷ್ಟಾನ್ನಭೋಜನವನ್ನು ಉಣಬಡಿಸಬೇಕೆನ್ನುತ್ತಾರೆ;

ಅವರು "ಬೇಡ" ಎನ್ನುತ್ತಾರೆ.

ಭಕ್ತರು ಅವರಿಗೆ ಮಠ, ಮಹಲು, ವಿಲ್ಲಾಗಳನ್ನು ಕಟ್ಟಿಕೊಡಬೇಕೆನ್ನುತ್ತಾರೆ;

ಅವರು "ಬೇಡ" ಎನ್ನುತ್ತಾರೆ.

ಭಕ್ತರು ಅವರಿಗೆ ಲಿಮೋಸಿನ್, ಲೋಂಬಾರ್ಡಿಯಂಥ ಲಗ್ಜುರಿಯಸ್ ಕಾರುಗಳನ್ನು

ಕೊಡಬೇಕೆನ್ನುತ್ತಾರೆ;

ಅವರು "ಬೇಡ" ಎನ್ನುತ್ತಾರೆ.

ವಿದೇಶದಲ್ಲಿನ ಅವರ ಭಕ್ತರು ಅವರಿಗೆ "ವಿದೇಶದಲ್ಲಿಯೇ ಇದ್ದುಬಿಡಿ; ತಮಗೆಲ್ಲ ಅನುಕೂಲತೆಗಳನ್ನು ಮಾಡಿಕೊಡುತ್ತೇವೆ" ಎನ್ನುತ್ತಾರೆ;

ಅವರು "ಬೇಡ" ಎನ್ನುತ್ತಾರೆ.

ಅವರು ಆ ನಮ್ಮ ಶ್ರೀರಾಮಚಂದ್ರನ ಹಾಗೆ "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂದು ಹೇಳಿ ಬರುತ್ತಾರೆ; ಭಕ್ತರು ಅವರಿಗೆ "ಒಂದೆಡೆ ಇದ್ದುಬಿಡಿ. ನಾವೆಲ್ಲ ಚೆನ್ನಾಗಿ ನೋಡಿಕೊಳ್ಳುತ್ತೇವೆ" ಎನ್ನುತ್ತಾರೆ;

ಅವರು "ಬೇಡ" ಎನ್ನುತ್ತಾರೆ.

ಭಕ್ತರು ಅವರಿಗೆ "ಇಷ್ಟು ದಿನ ಪ್ರವಚನ ಮಾಡಿದ್ದೀರಿ. ಇನ್ನು ಹಾಗೆ ಆರಾಮಾಗಿ ಇರಿ" ಎನ್ನುತ್ತಾರೆ;

ಅದಕ್ಕೂ ಪೂಜ್ಯರು "ಹಾಗಿರುವುದು ಸರಿಯಲ್ಲ; ಹಾಗಿರುವುದು ಬೇಡ" ಎನ್ನುತ್ತಾರೆ.

ಕೇಂದ್ರ ಸರಕಾರ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಕೊಡಲು ಬರುತ್ತದೆ;

ಅವರು "ಬೇಡ" ಎನ್ನುತ್ತಾರೆ.

ರಾಜ್ಯ ಸರಕಾರಗಳು ಪ್ರಶಸ್ತಿಯನ್ನು ಹಿಡಿದುಕೊಂಡು ಅವರ ಬಳಿ ಬರುತ್ತವೆ;

ಅವರು "ಬೇಡ" ಎನ್ನುತ್ತಾರೆ.

ಮಾಧ್ಯಮಗಳು ಸ್ವಯಂಸ್ಫೂರ್ತಿಯಿಂದ ಅವರನ್ನು ಇನ್ನಷ್ಟು, ಮತ್ತಷ್ಟು ಪ್ರಚಾರಿಸಲು, ಪ್ರಸಾರಿಸಲು ಮುಂದೆ ಬರುತ್ತವೆ;

ಅವರು "ಬೇಡ" ಎನ್ನುತ್ತಾರೆ.

ರಾಜಕಾರಣಿಗಳು ಪೂಜ್ಯರ ಸಹವಾಸ ಬೇಕು, ಬೇಕು ಎನ್ನುತ್ತಾರೆ;

ಪೂಜ್ಯರು ನನಗವರ ಸಹವಾಸ "ಬೇಡ" ಎನ್ನುತ್ತಾರೆ.

ಇದೀಗ ಅಸಂಖ್ಯಾತ ಭಕ್ತರು ಪೂಜ್ಯರು ಇನ್ನಷ್ಟು, ಮತ್ತಷ್ಟು ದಿನ ಇರಬೇಕೆನ್ನುತ್ತಾರೆ;

ಅವರು "ಬೇಡ, ಬೇಡ" ಎನ್ನುತ್ತಿದ್ದಾರೆ.

ಅನುಭವಿ ವೈದ್ಯರು ಅವರಿಗೆ ಮಾತ್ರೆ, ಔಷಧಿ, ಇಂಜಕ್ಶನ್‌ಗಳನ್ನು ಕೊಡಲು ಮುಂದೆ ಬರುತ್ತಿದ್ದಾರೆ;

ಪೂಜ್ಯರು ಅವರಿಗೂ "ಬೇಡ, ಬೇಡ" ಎನ್ನುತ್ತಿದ್ದಾರೆ.

ಪೂಜ್ಯರ ಅಸಂಖ್ಯಾತ ಭಕ್ತರ ಪೂಜೆ, ಪ್ರಾರ್ಥನೆ, ಜಪ, ತಪಗಳಿಗೆ ಒಲಿದು ಆ "ಕಾಲರಾಯ" ಪೂಜ್ಯರ ಆಯುಷ್ಯ ಮತ್ತು ಆರೋಗ್ಯವನ್ನು ಇನ್ನಷ್ಟು, ಮತ್ತಷ್ಟು ಹೆಚ್ಚಿಸಬೇಕು ಎಂದು ಅಂದುಕೊಳ್ಳುತ್ತಿದ್ದಾನೆ;

ಪೂಜ್ಯರು ಅವನಿಗೂ ಸಹ "ಬೇಡ, ಬೇಡ" ಎನ್ನುತ್ತಿದ್ದಾರೆ.

ಪೂಜ್ಯರು "ಬೇಕು" ದೀಕ್ಷಿತರಲ್ಲ; ಅವರು "ಬೇಡ" ದೀಕ್ಷಿತರು; ಅವರು "ಸಾಕು" ದೀಕ್ಷಿತರು!!

ಪೂಜ್ಯರು ತಮ್ಮ ಬದುಕಿನುದ್ದಕ್ಕೂ ಕಾಂಚನಕ್ಕೂ "ಬೇಡ" ಎಂದರು.

ಅವರು ಲಾಂಛನಕ್ಕೂ "ಬೇಡ" ಎಂದರು.

ಭಕ್ತರನ್ನು ಪೂಜ್ಯರನ್ನು ಆಡಂಬರ, ಅದ್ಧೂರಿಗಳ ಮಧ್ಯದಲ್ಲಿ ನೋಡಬೇಕೆನ್ನುತ್ತಾರೆ;

ಅದಕ್ಕೆ ಪೂಜ್ಯರು "ಬೇಡ" ಎನ್ನುತ್ತಾರೆ.

ಕಾಂಚನ ಮತ್ತು ಲಾಂಛನಗಳ ಹಂಗು ತೊರೆದು ಬದುಕಿದ ಮಹಾನುಭಾವರವರು!!

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ;
ಬೆಲ್ಲ–ಸಕ್ಕರೆಯಾಗು ದೀನದುರ್ಬಲರಿಂಗೆ,
ಎಲ್ಲರೊಳಗೊಂದಾಗು ಮಂಕುತಿಮ್ಮ.

ಪೂಜ್ಯರು, ಡಿ.ವಿ.ಜಿ.ಯವರು ಹೇಳಿದ ಹಾಗೆ ಎಲ್ಲರೊಳಗೊಂದಾಗಿ ಬದುಕಿದರು. ಪೂಜ್ಯರು ಬೆಟ್ಟದಡಿಯ ಹುಲ್ಲಾದರು; ಅವರು ಜನಗಳ ಮನೆ, ಮನಗಳ ಮಲ್ಲಿಗೆಯಾದರು. ಅವರು, ವಿಧಿಯು ಕಷ್ಟಗಳ ಮಳೆಯನ್ನು ಸುರಿದಾಗ ಕಲ್ಲಾಗಿ ನಿಂತುಕೊಂಡರು. ಅವರು ದೀನದುರ್ಬಲರ ಬದುಕಲ್ಲಿ ಸ್ಫೂರ್ತಿ ತುಂಬಿ ಬೆಲ್ಲ–ಸಕ್ಕರೆಯಾದರು.

ಪರಮಪೂಜ್ಯರನ್ನು ತುಂಬ ಜನಗಳು ತಮ್ಮ ಬದುಕಿನ "ಐಕಾನ್" ಮತ್ತು "ಐಡಿಯಲ್" ಆಗಿಸಿಕೊಂಡಿದ್ದಾರೆ. ಬಹಳಷ್ಟು ಜನ ಪ್ರಚಲಿತ ಸ್ವಾಮೀಜಿಗಳು ಅವರ ಪ್ರವಚನಶೈಲಿಯನ್ನು ಅನುಸರಿಸುತ್ತಾರೆ. ಬಹಳಷ್ಟು ಜನ ಪ್ರವಚನಕಾರರು ಅವರ ಧ್ವನಿಯನ್ನು ಅನುಸರಿಸುತ್ತಾರೆ. ಪೂಜ್ಯರ ಧ್ವನಿಯನ್ನು ಅನುಸರಿಸಬಹುದು; ಅದು ಸುಲಭ. ಪೂಜ್ಯರ ಪ್ರವಚನಶೈಲಿಯನ್ನು ಅನುಸರಿಸಬಹುದು; ಅದು ಸುಲಭ. ಆದರೆ ಪೂಜ್ಯರನ್ನು ಅನುಸರಿಸುವುದು ಕಷ್ಟಕಷ್ಟ, ಅಹೋಕಷ್ಟ, ಕರಕಷ್ಟ, ಮಹಾಕಷ್ಟ!!

ಪೂಜ್ಯರು ಬರೀ ಸಂತರು ಮಾತ್ರವಲ್ಲ; ಅವರು ನಿಶ್ಚಿಂತರು ಕೂಡ ಅಹುದು. ಅವರು ತಲೆಯಲ್ಲಿ ಸಂತೆ ಇಲ್ಲದ ನಿಶ್ಚಿಂತ ಸಂತ. ಪೂಜ್ಯರು ನಿತ್ಯವಸಂತ; ಅವರೊಂದು ನಿತ್ಯಕೋಗಿಲೆ. ಲೌಕಿಕ ಕೋಗಿಲೆ ವಸಂತಸಮಯದಲ್ಲಿ ಮಾತ್ರ ಕೂಗುತ್ತದೆ. ಈ ಅಲೌಕಿಕ ಕೋಗಿಲೆ ಅನುಗಾಲವೂ ಕೂಗುತ್ತ ಬಂದಿದೆ.

ಪೂಜ್ಯ ಸಿದ್ಧೇಶ್ವರ ಶ್ರೀಗಳು ಸಿದ್ಧರೂ ಅಹುದು; ಅವರು ಈಶ್ವರರೂ ಅಹುದು; ಪೂಜ್ಯ ಸಿದ್ಧೇಶ್ವರ ಶ್ರೀಗಳು ಶುದ್ಧೇಶ್ವರರೂ ಅಹುದು; ಅವರು ಬುದ್ಧೇಶ್ವರರೂ ಅಹುದು. ಪೂಜ್ಯರು ಶುದ್ಧರೂ ಅಹುದು; ಅವರು ಈಶ್ವರರೂ ಅಹುದು. ಅವರು ಬುದ್ಧರೂ ಅಹುದು; ಅವರು ಈಶ್ವರರೂ ಅಹುದು. ಪೂಜ್ಯರು ಸಿದ್ಧೇಶ್ವರ, ಶುದ್ಧೇಶ್ವರ, ಬುದ್ಧೇಶ್ವರರ ತ್ರಿವೇಣೀಸಂಗಮ!!

ಮೊನ್ನೆ ತಾನೆ 27. 12. 2022 ಮಂಗಳವಾರದಂದು ನಾವು ಜ್ಞಾನಯೋಗಾಶ್ರಮಕ್ಕೆ ಹೋಗಿ ಪರಮಪೂಜ್ಯರ ದರ್ಶನ ಮಾಡಿಬಂದೆವು. ಪೂಜ್ಯರು ನಮ್ಮ ಜೊತೆಯಲ್ಲಿ ತುಂಬ ಲವಲವಿಕೆಯಿಂದ ಮಾತನಾಡಿದರು. ನಮ್ಮ ಬರವಣಿಗೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಮಾಡಿದರು. “ಯಾವಾಗಲೂ ನೀವು ಬರೆಯುತ್ತ ಇರಬೇಕು” ಎಂದು ಆದೇಶ ಮಾಡಿದರು.

ನಮ್ಮನ್ನು ನೋಡುತ್ತಲೇ ಪೂಜ್ಯರ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಿತು. ಅವರ ಕಣ್ಣಂಚಿನಿಂದ ಆನಂದಬಾಷ್ಪಗಳು ಮಿನುಗಿದವು. ಪೂಜ್ಯರಿಗೆ ನಮ್ಮ ಮೇಲೆ ಅಪಾರ ಪ್ರೀತಿ, ಅಭಿಮಾನ ಮತ್ತು ವಾತ್ಸಲ್ಯ. ಅದು ಸುಖಾಸುಮ್ಮನೆಯದಲ್ಲ; ಅದಕ್ಕೆ ಕಾರಣವಿದೆ.

ನಮ್ಮ ಬಾಲ್ಯ ಮಲ್ಲಿಕಾರ್ಜುನ ಅಪ್ಪಗಳ ಮಡಿಲಲ್ಲಿ ಮತ್ತು ಸಿದ್ಧೇಶ್ವರ ಬುದ್ಧಿಯವರ ಕೈಯಲ್ಲಿ ಬೆಳೆದಿದೆ.

ಶ್ರೀ ಜಗದ್ಗುರು ಶಂಕರಾಚಾರ್ಯರು ಹೇಳಿದ ಹಾಗೆ ನಾವು ಬಾಲಸ್ತಾವತ್ ಕ್ರೀಡಾಸಕ್ತರೂ ಅಲ್ಲ; ತರುಣಸ್ತಾವತ್ ತರುಣೀರಕ್ತರೂ ಅಲ್ಲ; ನಾವು ಬಾಲ್ಯದಲ್ಲಿ ಮಲ್ಲಿಕಾರ್ಜುನ ಅಪ್ಪಗಳವರ ಪ್ರವಚನಾಸಕ್ತರಾಗಿ ಮತ್ತು ಸಿದ್ಧೇಶ್ವರ ಬುದ್ಧಿಗಳವರ ಪಾಠಾಸಕ್ತರಾಗಿ ಬೆಳೆದಿದ್ದೇವೆ.

ಇನ್ನೊಂದು ವಿಷಯವನ್ನು ನಾವು ಇಲ್ಲಿ ಹೇಳಲೇಬೇಕು.

ಇಡೀ ನಾಡು ಪರಮಪೂಜ್ಯರಿಗೆ ಒಂದು ಅಪರೂಪದ ಗೌರವವನ್ನು ಸಲ್ಲಿಸಿದೆ. ಅದು “ಬಾಗಿದ ತಲೆಯ ಮತ್ತು ಮುಗಿದ ಕೈ” ಗೌರವ. ಜಾತ್ಯತೀತವಾಗಿ, ಪಕ್ಷಾತೀತವಾಗಿ, ವೃತ್ತಿ, ಪ್ರವೃತ್ತಿಗಳಿಗೆ ಅತೀತವಾಗಿ ಬರೀ ಜನಗಳು ಮಾತ್ರವಲ್ಲ, ಸರಕಾರಗಳು ಕೂಡ ಅವರಿಗೆ “ಬಾಗಿದ ತಲೆಯ ಮುಗಿದ ಕೈ” ಗೌರವ ಸಲ್ಲಿಸಿವೆ. ಇದಕ್ಕಿಂತ ಮಿಗಿಲಾದ ಭಾರತರತ್ನ, ಪದ್ಮವಿಭೂಷಣ, ಪದ್ಮಭೂಷಣ, ಪದ್ಮಶ್ರೀ ಪ್ರಶಸ್ತಿಗಳು ಉಂಟೆ? ಇದಕ್ಕಿಂತ ಮಿಗಿಲಾದ ಪಾರಿತೋಷಕ, ನೊಬೆಲ್ ಪಾರಿತೋಷಕಗಳುಂಟೆ, ಈ ದೇಶದಲ್ಲಿ ಮತ್ತು ಈ ಧರಣಿಮಂಡಲ ಮಧ್ಯದೊಳಗೆ?!!

□

# ವಿದೇಶದಲ್ಲಿ ನಾನು ಕಂಡ ಸಿದ್ಧೇಶ್ವರ ಶ್ರೀಗಳು

ಡಾ. ಶ್ರೀ ರುದ್ರಮುನಿ ದೇವರು

**ನಾ**ಡು ಕಂಡ ಅಪರೂಪದ ಸಂತರು, ನಡೆ–ನುಡಿ ಒಂದಾಗಿ ಬಾಳಿದವರು ಶ್ರೀ ಸಿದ್ಧೇಶ್ವರ ಸ್ವಾಮಿಗಳು. 'ಸದುವಿನಯವೇ ಸದಾಶಿವನ ಒಲುಮೆ' ಎಂಬಂತೆ ಸರಳವಾಗಿ ಬದುಕಿದವರು. ಸಿದ್ಧೇಶ್ವರ ಶ್ರೀಗಳನ್ನು ಎರಡೂವರೆ ದಶಕಗಳಿಂದಲೂ ನಾನು ಹತ್ತಿರದಿಂದ ಬಲ್ಲೆ. ಅವರೊಂದಿಗಿನ ಆತ್ಮೀಯವಾದ ಒಡನಾಟ ನನ್ನನ್ನು ಹಲವಾರು ಬಾರಿ ಪುಳಕಿತಗೊಳಿಸಿದೆ. ಶ್ರೀಗಳು ಎಷ್ಟು ಪುಸ್ತಕ ಪ್ರೇಮಿಗಳಾಗಿದ್ದರೋ, ಅಷ್ಟೇ ನಿಸರ್ಗದ ಆರಾಧಕರಾಗಿದ್ದರು. ಹೊಸದನ್ನು ಕಾಣುವ ಕೌತುಕ, ಅದರ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಅವರಲ್ಲಿ ಅಪಾರವಾಗಿತ್ತು. ನಿಸರ್ಗ, ಕಾಡು, ಬೆಟ್ಟ, ನದಿಗಳೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಒಟ್ಟಾರೆಯಾಗಿ ಅವರು ಪ್ರಕೃತಿಪ್ರಿಯರಾಗಿದ್ದರು.

ಅದು 2007ನೇ ಇಸ್ವಿ. ಪರಮಪೂಜ್ಯ ಸುತ್ತೂರು ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳವರೊಂದಿಗೆ ಯೂರೋಪ್ ಮತ್ತು ಅಮೆರಿಕ ದೇಶಗಳಿಗೆ ಪ್ರವಾಸಕ್ಕೆ ಹೋಗುವ ಸಂದರ್ಭ ಬಂದೊದಗಿದ್ದು ನನ್ನ ಜೀವನದ ಪುಣ್ಯ. ಶ್ರೀಗಳ ಒಂದು ವಿಶೇಷವೆಂದರೆ ಭಾರತದಲ್ಲಿ ಅವರು ಅನುಸರಿಸುತ್ತಿದ್ದ ದಿನಚರಿಯನ್ನೇ ಅಲ್ಲಿಯೂ ತಪ್ಪದೆ ಪಾಲಿಸುತ್ತಿದ್ದರು. ತಮ್ಮ ನಿತ್ಯದ ಚಟುವಟಿಕೆಗಳಿಗೆ ಚ್ಯುತಿ ಬಾರದಂತೆ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು.

ಸೃಷ್ಟಿಯ ವಿಶೇಷ ಕೌತುಕವೊಂದನ್ನು ನೋಡಲು ನಾವು ನಾರ್ವೆ ದೇಶದ ನಾರ್ತ್‌ಕೇಪ್‌ಗೆ ಹೋಗಿದ್ದೆವು. ಜೂನ್ 21ರಂದು ಅಲ್ಲಿ ಸೂರ್ಯ ಮುಳುಗುವುದಿಲ್ಲ. ದಿನದ 24 ತಾಸು ಅಲ್ಲಿ ಹಗಲೇ ಇರುತ್ತದೆ. ಈ ಕೌತುಕವನ್ನು ಕಾಣಲು ಪೂಜ್ಯರು ಬಹಳ ಆಸಕ್ತಿ ಹೊಂದಿದ್ದರು. ಅಲ್ಲಿಯ ಅತಿಯಾದ ಶೀತಗಾಳಿಗೆ ನಾವೆಲ್ಲ ನಲುಗಿದ್ದೆವು. ನಾನು ಮತ್ತು ಜೊತೆಗಿದ್ದ ಸಹಪ್ರವಾಸಿಗರೆಲ್ಲ ಬೆಚ್ಚನೆಯ ಉಡುಪುಗಳನ್ನು ಧರಿಸಿಕೊಂಡಿದ್ದೆವು. ಆದರೆ ಪೂಜ್ಯದ್ವಯರಿಬ್ಬರು ಅಂತಹ ತೀವ್ರ ಚಳಿಯ ವಾತಾವರಣವಿದ್ದರೂ ನಿತ್ಯದ ಉಡುಪಿನಲ್ಲಿ ಚಳಿಗಾಳಿಗೆ ಜಗ್ಗದೆ ಅಲ್ಲಿನ ಪ್ರಾಕೃತಿಕ ವಿಸ್ಮಯವನ್ನು ಅತ್ಯಂತ ಕುತೂಹಲದಿಂದ ವೀಕ್ಷಿಸುತ್ತಿದ್ದುದು ನಮ್ಮೆಲ್ಲರನ್ನೂ ದಿಗ್ಭ್ರಮೆಗೊಳಿಸಿತು. ಆಗ ಅಲ್ಲಿದ್ದುದು ಕೇವಲ $2^0$ ಉಷ್ಣಾಂಶ.

ಇದೇ ಸಂದರ್ಭದಲ್ಲಿ ನಮ್ಮ ಪ್ರವಾಸ ಗ್ರೀಕ್ ದೇಶದ ಅಥೆನ್ಸ್‌ನತ್ತ ಸಾಗಿತ್ತು. ಪೂಜ್ಯ ಸಿದ್ಧೇಶ್ವರ ಶ್ರೀಗಳು ಜಗತ್ತಿನ ಬಹುತೇಕ ಎಲ್ಲ ತತ್ತ್ವಜ್ಞಾನಿಗಳ ಕುರಿತು ಅಧ್ಯಯನ ಮಾಡಿದವರಾಗಿದ್ದರು. ಅವರ ಚಿಂತನೆಗಳಿಂದ ಪ್ರಭಾವಿತರೂ ಆಗಿದ್ದರು. ಸಾಕ್ರೆಟಿಸ್, ಪ್ಲೇಟೋ, ಆರಿಸ್ಟಾಟಲ್‌ರ ಕುರಿತು ಅವರು ಸಾಕಷ್ಟು ಅಧ್ಯಯನ ನಡೆಸಿದ್ದರು. ವಿಶ್ವದ ಶ್ರೇಷ್ಠ ತತ್ತ್ವಜ್ಞಾನಿಯಾಗಿದ್ದ ಸಾಕ್ರೆಟಿಸ್‌ರಿಗೆ ಕೊನೆಗೆ ಮರಣದಂಡನೆ ವಿಧಿಸಲಾಯಿತು ಎಂಬುದರ ಬಗ್ಗೆ ಶ್ರೀಗಳು ಮರುಕ ಹೊಂದಿದ್ದರು. ಸಾಕ್ರೆಟಿಸ್ ಕೊನೆಯ ದಿನಗಳನ್ನು ಕಳೆದ ಮತ್ತು ಅವರಿಗೆ ವಿಷ ನೀಡಿ ಕೊಲ್ಲಲಾದ ಜೈಲನ್ನು ನೋಡುವ ಇಚ್ಛೆಯನ್ನು ಶ್ರೀಗಳು ಹೊಂದಿದ್ದರು. ಆದರೆ ಸ್ಥಳದ ಬಗ್ಗೆ ಅಲ್ಲಿಯ ಸ್ಥಳೀಯರನ್ನು ವಿಚಾರಿಸಿದಾಗ ಅಲ್ಲಿ ಯಾರಿಂದಲೂ ಸರಿಯಾದ ಮಾಹಿತಿ ಸಿಗಲಿಲ್ಲ. ಅದೇ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು, ರಾಷ್ಟ್ರಪತಿಗಳಾಗಿದ್ದ ಕಲಾಂರವರು ಆ ಜಾಗಕ್ಕೆ ಭೇಟಿ ನೀಡಿದ ಸಂದರ್ಭವನ್ನು ಮತ್ತು ಅದು ದಿನಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು ನಮ್ಮೆಲ್ಲರಿಗೂ ತಿಳಿಸಿದರು. ನಮ್ಮ ಪ್ರವಾಸವನ್ನು ಮುಂದುವರೆಸಬೇಕಾಗಿದ್ದರೂ ಸಹ ಪೂಜ್ಯದ್ವಯರ ಅಪೇಕ್ಷೆಯಂತೆ ಆ ಸ್ಥಳವನ್ನು ಪತ್ತೆ ಹಚ್ಚಲು ಶ್ರಮಿಸಲಾಯಿತು. ಕೊನೆಗೂ ಆ ಸ್ಥಳಕ್ಕೆ ಭೇಟಿ ನೀಡಲಾಯಿತು. ಸಿದ್ಧೇಶ್ವರ ಶ್ರೀಗಳು ಅಲ್ಲಿ ಕುಳಿತು ಮಹಾನ್ ಚಿಂತಕ ಸಾಕ್ರೆಟಿಸ್‌ನ ಕುರಿತಾಗಿ ನಮ್ಮೆಲ್ಲರಿಗೂ ಉಪನ್ಯಾಸವನ್ನು ನೀಡಿದ್ದು ನನಗೆ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಯೂರೋಪ್ ದೇಶಗಳ ಪ್ರವಾಸವನ್ನು ಮುಗಿಸಿ ಮುಂದೆ ನಾವು ಅಮೆರಿಕ ದೇಶದ ಪ್ರವಾಸಕ್ಕೆ ತೆರಳಿದೆವು. ಯೂರೋಪ್‌ನಲ್ಲಿ ನಮಗೆ ಅತಿಯಾಗಿ ಕಾಡಿದ್ದ ಚಳಿ ಅಮೆರಿಕದಲ್ಲಿ ನಮ್ಮನ್ನೆಲ್ಲ ಇನ್ನೂ ಬಾಧಿಸಿತು. ಅದು 2008ರ ಜನವರಿ ಮಾಹೆ. ಅಮೆರಿಕದಲ್ಲಿ ವಿಪರೀತ ಚಳಿಯ ದಿನಗಳು. ಅಲ್ಲಿ $-7^0$ ವರೆಗೂ ಚಳಿ ಇರುತ್ತಿತ್ತು. ಅಂತಹ ಚಳಿಯಲ್ಲಿಯೂ ಅವರು ಬೆಳಗಿನ 5.30ಕ್ಕೆ ವಾಯುವಿಹಾರ ಮಾಡುತ್ತಿದ್ದರು. ಒಂದು ದಿನ ವಿಪರೀತ ಹಿಮ ಸುರಿಯುತ್ತಿತ್ತು; ಅದನ್ನು ಅವರು ವಾಯುವಿಹಾರ ಮಾಡುತ್ತಾ ಅತ್ಯಂತ ಖುಷಿಯಿಂದ ಆಸ್ವಾದಿಸಿದರು. ಅವರು ಎಷ್ಟು ಪ್ರಕೃತಿ ಆರಾಧಕರಾಗಿದ್ದರೆಂಬುದಕ್ಕೆ ಇದೊಂದು ನಿದರ್ಶನವಷ್ಟೆ. ಪೂಜ್ಯರು ತಮ್ಮ ನಿತ್ಯದ ಚಟುವಟಿಕೆಗಳು ಏರುಪೇರಾಗದಂತೆ ನೋಡಿಕೊಳ್ಳುತ್ತಿದ್ದರು. ಅಲ್ಲಿಯೂ ನಿತ್ಯ ಪ್ರವಚನ ನೀಡುತ್ತಿದ್ದರು. ಇಲ್ಲಿ ಶಿಷ್ಯರುಗಳಿಗೆ ಪಾಠ ಹೇಳುತ್ತಿದ್ದಂತೆ ಅಲ್ಲಿ ನನಗೆ ಮತ್ತು ಶ್ರೀ ಸಂಗಮದೇವರಿಗೆ ನಿತ್ಯವೂ ಪಾಠ ಹೇಳುತ್ತಿದ್ದರು.

2009ರಲ್ಲಿ ಅಮೆಜಾನ್ ಕಾಡನ್ನು ನೋಡಲು ನಾವೆಲ್ಲ ಪೂಜ್ಯದ್ವಯರೊಂದಿಗೆ ತೆರಳಿದ್ದೆವು. ಪೂಜ್ಯ ಶ್ರೀಗಳು ಅಮೆಜಾನ್ ಕಾಡಿನ ಸೌಂದರ್ಯವನ್ನು ನೋಡಿ ಮೂಕವಿಸ್ಮಿತರಾದರು. ಅಲ್ಲಿನ ಪ್ರಕೃತಿಯನ್ನು ಅನುಭವಿಸುತ್ತಾ ಅವರು ತಲ್ಲೀನರಾಗಿಬಿಟ್ಟರು. ಅಮೆರಿಕದ ಡೆಟ್ರಾಯಿಟ್‌ನಲ್ಲಿ ಒಮ್ಮೆ ವಾಯುವಿಹಾರಕ್ಕೆ ಹೋಗಿದ್ದಾಗ ಪ್ರಕೃತಿಯನ್ನು ಆಸ್ವಾದಿಸುತ್ತಾ 16 ಕಿ.ಮೀ. ದೂರ ಸಾಗಿ ಕಾಡು ಸೇರಿ, ದಾರಿ ಕಾಣದಂತಾಗಿದ್ದೆವು.

ಮೊಬೈಲ್ ನೆಟ್‌ವರ್ಕ್ ಸಹ ಸಿಗದಂತಹ ಜಾಗದಿಂದ, ಅಲ್ಲಿ ಅತಿಥ್ಯ ನೀಡಿದವರ ಸಹಕಾರದಿಂದ ಅಲ್ಲಿಂದ ಹೇಗೋ ಹೊರಬಂದೆವು. 2014ರಲ್ಲಿಯೂ ಅವರು ಆಸ್ಟ್ರೇಲಿಯ, ಚೀನಾ ಮತ್ತು ಜಪಾನ್ ದೇಶಗಳಿಗೆ ಪ್ರವಾಸಕ್ಕೆ ತೆರಳಿದ್ದಾಗ ಅವರುಗಳ ಸೇವೆಗೆ ನಾನು ಹೋಗಿದ್ದು ನನ್ನ ಬಾಳಿನ ಸುದೈವ.

ಪೂಜ್ಯ ಸಿದ್ಧೇಶ್ವರ ಶ್ರೀಗಳಿಗೆ ಅಮೆರಿಕದ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನ ಬಗ್ಗೆ ಅಪಾರವಾದ ಹೆಮ್ಮೆಯಿತ್ತು. ನಾನು ಅವರಿಗೆ ಯಾವಾಗ ಫೋನ್ ಮಾಡಿದರೂ ಅದರ ಬಗ್ಗೆ, ಅಲ್ಲಿನ ಚಟುವಟಿಕೆಗಳ ಬಗ್ಗೆ ವಿಚಾರಿಸದೆ ಅವರು ಮಾತು ಮುಗಿಸುತ್ತಿರಲಿಲ್ಲ. ವಿಶೇಷವೆಂದರೆ 2022 ಅಗಸ್ಟ್ 29ರಂದು ಅಲ್ಲಿ ಮಿಷನ್‌ನ ವತಿಯಿಂದ ಸ್ಥಾಪನೆಯಾಗುತ್ತಿರುವ ಹಿಂದೂ ದೇವಸ್ಥಾನದ ಶಂಕು ಸ್ಥಾಪನೆ ಕಾರ್ಯಕ್ರಮದ ನೇರಪ್ರಸಾರವನ್ನು ಭಾರತದಿಂದಲೇ ವೀಕ್ಷಿಸಿದರು. ಈ ಕಾರ್ಯಕ್ರಮ ನಡೆಯುತ್ತಿದ್ದಾಗ ಭಾರತೀಯ ಕಾಲಮಾನದ ಪ್ರಕಾರ ತಡರಾತ್ರಿಯಾಗಿತ್ತು. ಪೂರ್ತಿ ಕಾರ್ಯಕ್ರಮವನ್ನು ಅವರು ವೀಕ್ಷಿಸಿ, ಮಲಗುವುದಕ್ಕೂ ಮೊದಲು ಅಮೆರಿಕಕ್ಕೆ ದೂರವಾಣಿ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

2019ರಲ್ಲಿ ಪೂಜ್ಯರು ಕೊನೆಯ ಬಾರಿಗೆ ವಿದೇಶ ಪ್ರವಾಸವನ್ನು ಕೈಗೊಂಡಿದ್ದರು. ಕೆಲವು ಸ್ಮರಣೀಯ ಘಟನೆಗಳನ್ನು ಮಾತ್ರ ನಾನು ಇಲ್ಲಿ ಉಲ್ಲೇಖಿಸಿದ್ದೇನೆ. ಇಂತಹ ನಿದರ್ಶನಗಳು ಸಾಕಷ್ಟಿವೆ. ಅವೆಲ್ಲ ಅವರ ಸರಳತೆ, ಪ್ರಕೃತಿ ಪ್ರೀತಿ, ಅರಿಯುವ ಹಂಬಲವನ್ನು ನಮಗೆ ತಿಳಿಸುತ್ತವೆ. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಕಲಿಸಿದ ಜೀವನಪಾಠಗಳು, ಮೌಲ್ಯಗಳು ಸದಾ ಅಜರಾಮರವಾಗಿವೆ. ಅವುಗಳ ಹಾದಿಯಲ್ಲಿ ನಾವೆಲ್ಲ ನಡೆಯಬೇಕಿದೆ.

□

## ಸಿದ್ಧೇಶ್ವರ ಉವಾಚ

ನಾವು ಮಾಡುವ ಕಾರ್ಯಗಳಲ್ಲಿ ಶುಚಿ–ಶುದ್ಧ, ಅಶುಚಿ–ಅಶುದ್ಧ ಎಂದು ಎರಡು ಪ್ರಕಾರ. ನಾವು ಮಾಡುವ ಕೆಲಸಗಳು ಪವಿತ್ರವಾಗಿರಬೇಕು ಎಂದರೆ ಅವು ಶುಚಿಯಾಗಿರಬೇಕು, ಶುದ್ಧವಾಗಿರಬೇಕು ಎಂದರ್ಥ. ಯಾವ ಕೆಲಸವು ನಮಗೂ ಹಿತವಾಗಿದೆಯೋ, ಅನ್ಯರಿಗೂ ಹಿತವಾಗಿದೆಯೋ ಅದು ಶುಚಿಕಾರ್ಯ, ಶುದ್ಧಕಾರ್ಯ. ಯಾವ ಕೆಲಸವು ನಮಗೂ ಹಿತವಾಗಿಲ್ಲವೋ, ಅನ್ಯರಿಗೂ ಹಿತವಾಗಿಲ್ಲವೋ ಅದು ಅಶುಚಿಕಾರ್ಯ, ಅಶುದ್ಧ ಕಾರ್ಯ!

# ಶತಮಾನದ ಸಂತನ ಮಾಸದ ಚಿರನೆನಪು*

**ಕೆ.ಸಿ. ಶಿವಪ್ಪ**

**ಜಾ**ತಸ್ಯ ಮರಣಂ ಧ್ರುವಂ. ಹುಟ್ಟಿದವನಿಗೆ ಸಾವು ನಿಶ್ಚಿತ. 5.9.1940ರಂದು ವಿಜಯಪುರ ಜಿಲ್ಲೆಯ ಬಿಜ್ಜರಗಿ ಗ್ರಾಮದಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಜನನ. 2.1.2023ರಂದು ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ನಿಧನ. ಆದರೆ ಈ ನಿಧನ ಇತರರ ಸಾವಿಗಿಂತ ಭಿನ್ನವಾಗಿತ್ತು.

ಇವರ ಅನಾರೋಗ್ಯದ ಸುದ್ದಿ ಕೇಳಿದ ದಿನದಿಂದ ಜನಮನದಲ್ಲಿ ಅದೆಷ್ಟು ಕಾತರ, ಕಳವಳ! ನಿಧನರಾದ ಆ ಹೊತ್ತಿನಲ್ಲಿ ಅದೆಂತಹ ಶೋಕತಪ್ತ ಕಣ್ಣೀರು! ತಮ್ಮ ಮನೆಯ ಆಪ್ತರೊಬ್ಬರನ್ನು ಕಳೆದುಕೊಂಡ ತಬ್ಬಲಿತನದ ನೀರವತೆ!

ರಾಜ್ಯದ ಮೂಲೆಮೂಲೆಗಳಿಂದ ಬಂದ ಲಕ್ಷೋಪಲಕ್ಷ ಜನ ಪೂಜ್ಯರ ಪಾರ್ಥಿವ ಶರೀರದೆದುರು ಸಾಲುಸಾಲಾಗಿ ನಿಂತು ತೋರಿದ ಭಕ್ತಿಭಾವ! ಚಿತೆಗೆ ಅಗ್ನಿಸ್ಪರ್ಶವಾದಾಗ ಇಡೀ ನಾಡಿನ ಮನೆಮನೆಯ ಮಂದಿ ಟಿವಿ ಎದುರು ಕುಳಿತು ಬಿಕ್ಕಿ–ಬಿಕ್ಕಿ ಅತ್ತ ಆ ಸೂತಕದ ವಾತಾವರಣ!

ಮರಣವೇ ಮಹಾನವಮಿ ಎಂಬಂತೆ ವಿದಾಯ ಹೇಳಿದ ಶ್ರೀಗಳವರ ಅಂತಿಮ ಯಾತ್ರೆಯಲ್ಲಿ ಎಲ್ಲೂ ಸದ್ದುಗದ್ದಲವಿರಲಿಲ್ಲ; ನೂಕುನುಗ್ಗಾಟವಿರಲಿಲ್ಲ; ಆರ್ತತೆ ಕಟ್ಟೆಯೊಡೆದ ಆ ಸಂದರ್ಭದಲ್ಲೂ ಆ ಅಪಾರ ಜನಸ್ತೋಮ ತೋರಿದ ಅನುಪಮ ಅಕ್ಕರೆ, ಶಾಂತತೆ ಕೂಡಿದ ಶಿಸ್ತು ಒಂದು ಐತಿಹಾಸಿಕ ಸಂಗತಿ.

ಶತಮಾನದ ಓರ್ವ ಸಂತನಿಗೆ ಇದಕ್ಕಿಂತ ಇನ್ನಾವ ಗೌರವಾದರ, ಸಂತಾಪ, ಅಶ್ರು ಸಮರ್ಪಣ ದೊರಕಲಿಕ್ಕೆ ಸಾಧ್ಯ?

ಎಲ್ಲರೂ ಒಂದಲ್ಲ ಒಂದು ದಿನ ಸಾಯುತ್ತೇವೆ, ನಿಜ. ಕೆಲವರು ಉಯಿಲನ್ನೂ ಬರೆಯುತ್ತೇವೆ. ಆದರೆ ಸಿದ್ಧೇಶ್ವರರು 1914ರಲ್ಲಿ ಬರೆದಿಟ್ಟ ಉಯಿಲಿನ ಒಕ್ಕಣೆ ಮಾತ್ರ

---

* 15.1.2023ರಂದು ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿವಿಧ ಸಂಘಸಂಸ್ಥೆಗಳು ಏರ್ಪಡಿಸಿದ್ದ ನಿರಾಭಾರಿ ಚರಮೂರ್ತಿ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಸಂತಾಪಸೂಚಕ ಸಭೆಯಲ್ಲಿ ಅರ್ಪಿಸಿದ ಗೌರವಪೂರ್ವಕ ನುಡಿನಮನ.

ವಿರಳಾತಿವಿರಳ! ಸಾಮಾನ್ಯರ ಚಿಂತನೆಗೆ ನಿಲುಕದ ಅಪ್ರತಿಮ ನಿರ್ಧಾರ! ಜೀವನದ ಯಥಾರ್ಥ ಅಂತಿಮ ಸತ್ಯವನ್ನರಿತ ದರ್ಶನ ಚಿತ್ರಣ! ಕಾಲನ ಜೊತೆಜೊತೆ ಮುಖಾಮುಖಿ ನಡೆಸಿದ ಸುಂದರ ಸಂದರ್ಶನ! ಜೀವನದ ಸಾರವನ್ನು ಮನದಾಳದ ಅಭೀಪ್ಸೆಯನ್ನು ಆಧ್ಯಾತ್ಮಿಕವಾಗಿ ಬರೆದ ಅಪರೂಪದ ಅಭಿವಂದನ ಪತ್ರ.

ಅಲ್ಲಮ 'ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರ' ಎಂದರೆ, ಸಿದ್ಧೇಶ್ವರರು ಅರಿವನ್ನೇ ತಮ್ಮ ಜೀವನಯೋಗವನ್ನಾಗಿ ರೂಪಿಸಿಕೊಂಡು ಬಯಲ ಬದುಕಿಗೆ ಭಾಷ್ಯ ಬರೆದರು. ಸಣ್ಣಪುಟ್ಟ ಆಚರಣೆಗಳ ಆಚೆಗೆ ನಿಂತ ಈ ಅಲ್ಲಮಪ್ರಭೆ ಆ ವಚನಕ್ಕೆ ಜೀವಂತ ಉದಾಹರಣೆಯಾಗಿ ಬದುಕಿ ಕಣ್ಮರೆಯಾಯಿತು.

ಹೊಳೆದದ್ದು ನಕ್ಷತ್ರ; ಮಿಕ್ಕಿದ್ದು ಆಕಾಶ;
ಯಾವ ಅಳತೆಗೆ ಇನಿತು ಎಟುಕದದು ಬಯಲು.
ಸಾಧನೆಯ ಶಿಖರದಲ್ಲಿ ನಿಂತಾಗ ಎಲ್ಲ ಬರಿ ಶೂನ್ಯ.
ಸರಿತೆ ಕಡಲಾದಾಗ ಭಿನ್ನತೆಯ ಜಲವೆಲ್ಲಿ?
ದೇವಮಿಲನ ಈ ಬಯಲ ಯಾನ!

ಪಂಚಭೂತಗಳಲ್ಲಿ ಲೀನವಾದ ಸಂತನ ಆತ್ಮ ಜನಮನದಲ್ಲಿ ಶಾಶ್ವತವಾಗಿ ನೆಲೆಯೂರಿತು. ಸಾವಿನಲ್ಲೂ ಸಮಾಜಮುಖಿಯಾಗಿ ಸಂದೇಶ ಸಾರಿತು.

ಅಲ್ಲಮನ ವಚನಗಳಿಗೆ ಪೂಜ್ಯರೇ ಬರೆದ ಭಾವಭಾಷ್ಯ ಹೀಗಿದೆ:

"ಪರವಸ್ತು ಏನೂ ಏನೂ ಅಲ್ಲದ್ದರಿಂದ ಏನೂ ಏನೂ ಅದರೊಳಗೆ ಇಲ್ಲದ್ದರಿಂದ ಅದು ಬರಿ ಬಯಲು. ಅದು ನಿತ್ಯ ನಿರಂಜನ. ಅದು ಅನಂತ ಶಾಂತಿಯ ನೆಲೆ. ಗುರುವಿನಿಂದ ಬಯಲನರಿತು, ಬಯಲನೆ ಪರಿಭಾವಿಸಿ ಆ ಬಯಲೊಳಗೆ ತಮ್ಮನ್ನು ಅರ್ಪಿಸಿಕೊಳ್ಳುವುದೇ ಪೂಜೆ!" ಅಂಥ ಪೂಜೆಗೈದವರು ಬಯಲಿನಲ್ಲಿ ಬೆರೆತು ಒಂದಾದ ಮಹಾನುಭಾವರು. ಸಿದ್ಧೇಶ್ವರರು ಅದನ್ನೇ ನಂಬಿದರು; ಅದನ್ನೇ ಪೂಜಿಸಿದರು; ಅದರಲ್ಲಿಯೇ ಬಯಲಾಗಿಹೋದರು.

**ವಿದ್ವತ್ತಿನ ತವನಿಧಿ**

ಪೂಜ್ಯರು ಅಧ್ಯಯನಶೀಲರು. ಓದು ಸದಾ ಅವರ ಸಂಗಾತಿ. 60–70ರ ವಯಸ್ಸಿನಲ್ಲಿ ಕಣ್ಣಿನ ತೊಂದರೆ ಕಾಣಿಸಿಕೊಂಡರೂ ಓದುವುದು ಅವರ ನಿತ್ಯದ ನಿಯಮವಾಗಿತ್ತು.

ವಿದ್ವತ್ತು ಅವರ ಹೆಗಲಿನ ಮೇಲೆ ಎಂದೂ ಭಾರವಾಗಿ ಕಾಣಲೇ ಇಲ್ಲ. ಅರಿಯಬಾರದ ಘನವನರಿದು ಅರಿಯದಂತಿದ್ದವರು ಸಿದ್ಧೇಶ್ವರರು. ಹಿರಿದು ಕಿರಿದೆಂಬ ಶಬ್ದವಡಗಿ ಗುಹೇಶ್ವರಲಿಂಗದ ನಿಜವನ್ನರಿತು ಸುಮನ ಸುಜ್ಞಾನ ತೊರೆಯಲ್ಲಿ ಮಿಂದು

ಪುನೀತರಾದವರು ಅವರು. ಮನದ ಮುಂದಣ ಆಸೆಯೇ ಮಾಯೆ ಎಂದರಿತು ಜ್ಞಾನವನ್ನೇ ದಿವ್ಯರತ್ನವೆಂದು ಪರಿಗಣಿಸಿ ಪಾರಮಾರ್ಥಿಕ ಲೋಕದ ಸಿರಿವಂತರಾದವರು.

ಅಲ್ಲಮವಾಣಿಯಲ್ಲಿ ದೇವನಿರವನ್ನು ಅನುಭವಿಸಿದ ಸಿದ್ಧೇಶ್ವರರು 'ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ, ಭ್ರಾಂತಿಬೇರನ್ನು ಅಗೆದು' ಹೊರಹಾಕಿದರು. ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ ಆವಾಗಲೂ ಜಾಗರವಿದ್ದು ತಮ್ಮನ್ನು ತಾವು ಕಾಪಾಡಿಕೊಂಡರು.

ಹೃದಯಕಮಲಮಧ್ಯದಲ್ಲಿ ಮೂರ್ತಿಗೊಂಡಿಪ್ಪ ಗುಹೇಶ್ವರಲಿಂಗವನ್ನು ಅವರು ಪೂಜಿಸಿದ ಪರಿಯಾದರೂ ಎಂತಹುದು? ಕ್ಷಮೆಯೇ ಅಭಿಷೇಕ, ವೈರಾಗ್ಯವೇ ಪುಷ್ಪಮಾಲೆ, ಸಮಾಧಿಸಂಪತ್ತೇ ಗಂಧ, ನಿರಹಂಕಾರವೇ ಅಕ್ಷತೆ, ವಿಶ್ವಾಸವೇ ಧೂಪ, ದಿವ್ಯಜ್ಞಾನವೇ ದೀಪ, ಮೌನವೇ ಘಂಟೆ, ನಿರ್ವಿಕಲ್ಪತೆಯೇ ಪ್ರದಕ್ಷಿಣೆ. ಈ ಬಗೆಯ ಅಂತಃಕರಣ ಸೇವೆಯಿಂದ ಬಾಹ್ಯಕ್ರಿಯೆ ಎತ್ತಲೋ ಸರಿಯಿತು. ಶಬ್ದದ ಲಜ್ಜೆ ಮೂಲೆಗುಂಪಾಯಿತು. ಹೂವಿಲ್ಲದ ಪರಿಮಳದ ಪೂಜೆ ಅದಾಯಿತು. ಜಂಗಮತತ್ವ ಜೀವನಾದರ್ಶವಾಯಿತು.

> ಬ್ರಹ್ಮಪದವಿಯನೊಲ್ಲೆ ವಿಷ್ಣುಪದವಿಯನೊಲ್ಲೆ
> ರುದ್ರಪದವಿಯನೊಲ್ಲೆ
> ನಾನು ಮತ್ತಾವ ಪದವಿಯನೊಲ್ಲೆನಯ್ಯ
> ಕೂಡಲಸಂಗಮದೇವ ನಿಮ್ಮ ಸದ್ಭಕ್ತರ
> ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ

ಬಸವಣ್ಣನವರ ಈ ಸುಂದರ ವಚನ ಪೂಜ್ಯರಿಗೆ ಕೇವಲ ಮಾತಾಗಿ ಉಳಿಯಲಿಲ್ಲ. ಈ ಶರಣಸಂಸ್ಕೃತಿಯ ಸ್ವೀಕೃತಿ ಇಹದ ಎಲ್ಲ ಕಾಮನೆಗಳ ನಿರಾಕರಣೆಗೆ ಭದ್ರ ಬುನಾದಿಯಾಯಿತು. ಭಾರತ ಸರ್ಕಾರದ ಪದ್ಮಶ್ರೀ, ವಿಶ್ವವಿದ್ಯಾನಿಲಯಗಳ ಡಾಕ್ಟರೇಟ್ ಪದವಿಗಳನ್ನು ವಿನಯಪೂರ್ವಕವಾಗಿ ನಿರಾಕರಿಸುವ ಮನೋದಾರ್ಢ್ಯವನ್ನು ಅವರಿಗೆ ವಚನಸಾರಶಕ್ತಿ ನೀಡಿತೆನ್ನಬಹುದು.

ಮಾಡುವ ಮಾಟದೊಳಗೆ ತಾನಿಲ್ಲದಂತಿದ್ದ ವಿರಾಗಿ ಅವರು. ಆಸೆ ಆಮಿಷಗಳಿಗೆ ಹೊರಗು. ಮಹಾನುಭಾವಿಗಳ ಸಂಗದಲ್ಲಿ ಒಳಗು. ಹೀಗೆ ಅವರ ತನುಮನ ಶುದ್ಧವಾಯಿತು; ಸರ್ವಾಂಗ ಶುದ್ಧವಾಯಿತು. ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾದರು. ಮಹಾಬೆಳಗಿನೊಳಗೆ ಸಹಸ್ರಕಿರಣದ ಸ್ವಯಂಪ್ರಕಾಶವಾದರು.

ಪೂಜ್ಯರದು ಕಳಂಕರಹಿತ ಪರಿಶುದ್ಧ ನಡೆ. ತನ್ನ ತಾ ಅರಿದಿಹೆನೆಂಬ ಅಹಂಕಾರ–ರಹಿತ ವಿನೀತತೆ. ಸಂಗಮನಾಥನಲ್ಲಿ ಶರಣಭಾವ. ಮನದಲ್ಲಿ ಅವನದೇ ನೆನಹು, ಕಿವಿಯಲ್ಲಿ ಅವನದೇ ಕೀರುತಿ. ತತ್ಫಲವಾಗಿ ವಚನದಲ್ಲಿ ಅವನದೇ ನಾಮಾಮೃತ.

ಪರುಷದ ಸಾಮೀಪ್ಯದಿಂದ ಕಬ್ಬುನ ಹೊನ್ನಾದಂತೆ, ಪೂಜ್ಯರು ನುಡಿದದ್ದು ಮುತ್ತಿನ ಹಾರವಾಯಿತು, ಮಾಣಿಕ್ಯದ ದೀಪ್ತಿಯಾಯ್ತು, ನುಡಿಯಲ್ಲಿ ನಡೆ ಮೇಳೈಸಿದುದರ ಫಲವಾಗಿ ಲಿಂಗ ಕೂಡ ಮೆಚ್ಚಿ ಅಹುದಹುದು ಎಂಬಂತಾಯಿತು. ಸಂಗನ ಒಲವಿನ ಕರುಣಾಕಟಾಕ್ಷದಿಂದ ಪೂಜ್ಯರ ಸಾಹಿತ್ಯ ಶಿವತತ್ವವಾಯಿತು.

**ಜ್ಞಾನಾಗ್ನಿಯ ಚೆಂಬೆಳಕು**

ಪೂಜ್ಯರು ಎಲ್ಲೋ ಕಂಡ ಚಿತ್ರದ ಬಿಳಿಬಣ್ಣ ಅವರ ಪಾಲಿಗೆ ಕಾಮನಬಿಲ್ಲಾಯಿತು. ಕಾಡದಾರಿಯಲ್ಲಿ ಕಂಡ ವನಸುಮವೊಂದು ಅವರ ದೃಷ್ಟಿಯಲ್ಲಿ ಸುರಲೋಕದ ಮಂದಾರವಾಯಿತು. ಯಾರ ಕಣ್ಣಿಗೂ ಬೀಳದ ಪುಟ್ಟ ವಚನವೊಂದು ಅವರ ಪಾಲಿಗೆ ಅರಿವಿನ ತಿರುಳಾಯಿತು. ಇಂಥದೊಂದು ನೆನಪು ನನ್ನ ಪಾಲಿಗೆ ಇನ್ನೂ ಹಸಿರಾಗಿದೆ.

ದಿನಾಂಕ 24.4.2010. ಸುಮಾರು 12 ವರ್ಷಗಳ ಹಿಂದಿನ ಮಾತು. ಇದೇ ಸಭಾಂಗಣದಲ್ಲಿ ಸಿದ್ಧೇಶ್ವರರು 40–45 ನಿಮಿಷಗಳ ಕಾಲ ಹಡಪದಪ್ಪಣ್ಣನವರ ಪುಣ್ಯಸ್ತ್ರೀ ಲಿಂಗಮ್ಮನವರ ಕೆಳಕಂಡ ವಚನ ಕುರಿತು ಪ್ರವಚನ ನೀಡಿದರು.

ಕರಗವ ಸುಟ್ಟೆ, ಕಂದಲವನೊಡೆದೆ,
ಮರನ ಮುರಿದೆ, ಬಣ್ಣವ ಹರಿದೆ,
ಭಿನ್ನಗಣ್ಣು ಕೆಟ್ಟಿತ್ತು, ಜ್ಞಾನಗಣ್ಣಿಲಿ ನಿಮ್ಮನೆ ನೋಡಿ
ಕೂಡಿ ಸುಖಿಯಾದೆನಯ್ಯಾ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

"ಜ್ಞಾನಾಗ್ನಿಯಿಂದ ದೇಹದ ಅಹಂಕಾರ ದಹನ; ಶಿವಜ್ಞಾನದರಿವಿನಿಂದ ಭಿನ್ನ ಕ್ರಿಯಾದೃಷ್ಟಿ ನಷ್ಟ. ಮಹಾಘನಲಿಂಗದ ಪ್ರಕಾಶದಿಂದ ತಮೋಗುಣ ಅಳಿದು ತಾನು ಸುಖಿ. ಬಚ್ಚಬರಿಯ ಬೆಳಗಿನೊಳಗೆ ಓಲಾಡಿ ಬಯಲಲ್ಲಿ ಬಯಲಾಗುವ ಅನುಭವ ತನ್ನದಾಗಿ ನಾನೆಷ್ಟು ಪರಮಸುಖಿ" ಎನ್ನುವ ವಚನಕಾರ್ತಿಯ ಮನದಾಳದ ಅನುಭವವನ್ನು ಎಳೆಎಳೆಯಾಗಿ ಅಂದು ಶ್ರೀಗಳವರು ತೆರೆದಿಟ್ಟರು. ಅಂಥ ವಚನವ್ಯಾಖ್ಯಾನವಿಧಾನ ಅವರಿಗೆ ಮಾತ್ರ ಕರಗತವಾಗಿತ್ತು.

ಪೂಜ್ಯರ ಇಂತಹ ಅನೇಕಾನೇಕ ವಚನಗಳು ಅಲ್ಲಲ್ಲಿ ಚದುರಿಹೋಗಿವೆ. ಇವನ್ನೆಲ್ಲ ಒಂದೆಡೆ ಸಂಗ್ರಹಿಸಿ ಕೃತಿರೂಪದಲ್ಲಿ ಹೊರತರುವುದಾದರೆ ಅದೊಂದು ಅಕ್ಷರ ಸೇವೆಯಾದೀತು.

**ಹಳೆಯ ಮೈಸೂರಿಗೆ ಪೂಜ್ಯರ ಆಗಮನ**

ಸಿದ್ಧೇಶ್ವರರನ್ನು ಮನದುಂಬಿ ನೆನೆಯುತ್ತಿರುವ ಈ ಗಳಿಗೆಯಲ್ಲಿ ಮರೆಯಲಾಗದ, ಮರೆಯಬಾರದ ವಿಶಿಷ್ಟ ವಿಷಯವೊಂದಿದೆ. ಇದನ್ನು ಇಲ್ಲಿ ಹೇಳುವಾಗ ಇಲ್ಲಿಯೇ ಉಪಸ್ಥಿತರಿರುವ ಪೂಜ್ಯ ದೇಶಿಕೇಂದ್ರ ಶ್ರೀಗಳವರಿಗೆ ನನ್ನ ಮಾತು ಕೊಂಚ ಮುಜುಗರ ತರುತ್ತದೆ ಎಂದು ನಾನು ಬಲ್ಲೆ. ಆದರೂ ಹೇಳದೆ ಹೋದರೆ ಅದು ಅಪಚಾರವಾದೀತು.

ಈ ಮಾತೆಂದರೆ ಸಿದ್ಧೇಶ್ವರ ಸ್ವಾಮೀಜಿ ಅವರ ಬಗ್ಗೆ ದೇಶಿಕೇಂದ್ರ ಶ್ರೀಗಳವರಿಗಿದ್ದ ಗೌರವಭಾವ ಹಾಗೂ ಆಪ್ತ ಒಡನಾಟ. ಹಳೆಯ ಮೈಸೂರಿನ ಈ ಭಾಗದ ಜನರಿಗೆ ಕಲ್ಯಾಣಕರ್ನಾಟಕದ ಈ ಅನುಪಮ ಶರಣರನ್ನು ಪರಿಚಯಿಸಿದ, ಅವರ ಅನಂತ ಸಾಧನೆಗಳ ಗರಿಮೆ–ಹಿರಿಮೆಯನ್ನು ತೆರೆದಿಟ್ಟ ವಿಶೇಷ ಸುಯೋಗ ಹಾಗೂ ಯಶಸ್ಸು ಪೂಜ್ಯರಿಗೆ ಸಲ್ಲುತ್ತದೆ ಎಂಬುದು ನಿರ್ವಿವಾದ.

ಪ್ರತಿ ವರ್ಷ ಬೇಸಿಗೆ ಅವಧಿಯಲ್ಲಿ ಸುತ್ತೂರು, ಊಟಿ, ಮೈಸೂರಿನಲ್ಲಿ ಸುತ್ತೂರು ಶ್ರೀಗಳವರು ಏರ್ಪಡಿಸುತ್ತಿದ್ದ ಶಿಬಿರಗಳಲ್ಲಿ ಸಿದ್ಧೇಶ್ವರರು ಪಾಲ್ಗೊಳ್ಳುತ್ತಿದ್ದುದು ಒಂದು ವೈಶಿಷ್ಟ್ಯ ಎನ್ನಬಹುದು.

ಅಂತೆಯೇ ಕಳೆದೆರಡು ದಶಕಗಳಲ್ಲಿ ಪೂಜ್ಯರ ವಿದೇಶ ಪ್ರವಾಸ ಕಾರ್ಯಕ್ರಮಗಳನ್ನು ಸುತ್ತೂರು ಶ್ರೀಮಠ ವ್ಯವಸ್ಥಿತವಾಗಿ ಏರ್ಪಡಿಸುವ ಮೂಲಕ ವಿದೇಶೀಯರಿಗೆ ಸಿದ್ಧೇಶ್ವರರ ಪ್ರವಚನಸುಧೆಯ ರಸದೌತಣ ಲಭಿಸುವಂತೆ ಮಾಡಿದೆ. ಮಿಗಿಲಾಗಿ ಭಗವಚ್ಚಿಂತನ, ಭಕ್ತಿಯೋಗ, ಸಿದ್ಧಾಂತ ಶಿಖಾಮಣಿ, ಅಲ್ಲಮಪ್ರಭುದೇವರ ವಚನ–ನಿರ್ವಚನ, Patanjali's Yoga Sutras, Shiva Sutras, Narada Bhakti Sutras – ಮುಂತಾದ ಅವರ ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಅವರ ಮಾರ್ಗದರ್ಶನದಲ್ಲಿ ಶಿವಶರಣರ ಆಯ್ದ ವಚನಗಳ ವ್ಯಾಖ್ಯಾನಮಾಲೆಯ ಹದಿನೈದು ಸಂಪುಟಗಳನ್ನೂ ಜೆಎಸ್ಎಸ್ ಮಹಾವಿದ್ಯಾಪೀಠ ಪ್ರಕಟಿಸಿದೆ. ಸದ್ಯದಲ್ಲೇ ಶ್ರೀಗಳವರ 'Vachanas of Allama Prabhu' ಇಂಗ್ಲಿಷ್ ಕೃತಿ ಬೆಳಕು ಕಾಣಲಿದೆ. ಅಲ್ಲಮನ ಮಾತಿನ ಘನಭಾವದ ಸರಳ ನಿರೂಪಣೆ ಈ ಹೊತ್ತಿಗೆಯ ವಿಶೇಷತೆ.

ಅವರ ಮಾರ್ಗದರ್ಶನದಲ್ಲಿ ಕಳೆದ ಐದಾರು ವರ್ಷಗಳಿಂದ ಸಿದ್ಧವಾದ ಇಂತಹದೊಂದು ಹೆಬ್ಬೊತ್ತಿಗೆ ಪ್ರಕಟವಾದಾಗ ಪೂಜ್ಯರ ಮೊಗದಲ್ಲಿ ಮುಗುಳುನಗೆ ಕಾಣುವ ಭಾಗ್ಯ ನಮ್ಮದಾಗಲಿಲ್ಲ. ಇಷ್ಟಾಗಿ ಬಾಳಿನಲ್ಲಿ ಸುಖದುಃಖದ ನಡುವಿನ ಗೆರೆ ಅವರ ದೃಷ್ಟಿಯಲ್ಲಿ ಮಾಸಿಹೋಗಿದ್ದಂತೂ ಸತ್ಯ!

ಸುತ್ತೂರು ಶ್ರೀಗಳವರ ದೂರದೃಷ್ಟಿಯ ಫಲವಾಗಿ ಸಿದ್ಧೇಶ್ವರ ಶ್ರೀಗಳವರ ಸಮ್ಮತಿಯೊಂದಿಗೆ 12.3.1999 ರಂದು 24 ವರ್ಷಗಳ ಹಿಂದೆ ಜ್ಞಾನಯೋಗ ಫೌಂಡೇಶನ್ ಬಿಜಾಪುರದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಪ್ರತಿಷ್ಠಾನದ ರೂಪುರೇಷೆ ನಿಯಮಗಳನ್ನು ಸಿದ್ಧಪಡಿಸುವ ಹಾಗೂ ಪ್ರತಿಷ್ಠಾನದ ಸಂಸ್ಥಾಪಕ ಟ್ರಸ್ಟಿಯಾಗುವ ಸದವಕಾಶ ನನಗೆ ದೊರಕಿತ್ತು. 2001ನೇ ಇಸವಿಯಲ್ಲಿ ಅಮೆರಿಕದಲ್ಲಿ ಪ್ರವಚನ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಶ್ರೀ ಸಿದ್ಧೇಶ್ವರರು ಮೇರಿಲ್ಯಾಂಡ್‌ನಲ್ಲಿ ಜೆಎಸ್ಎಸ್ ಸ್ಪಿರಿಚುಯಲ್ ಮಿಷನ್ ಅನ್ನು ಉದ್ಘಾಟಿಸಿದರಲ್ಲದೆ 'ವಚನಸಂಗಮ' ಧ್ವನಿ ಸುರಳಿ ಹಾಗೂ ಸಿಡಿಗಳನ್ನು ಬಿಡುಗಡೆ ಮಾಡಿದ್ದರು.

**ಜ್ಞಾನದಾಸೋಹ**

ಬಸವ ತತ್ವದಲಿ ಕರುಣೆಕಾಂತಿಯ ಕಂಡು, ಬಯಲ ಏಕಾಂತದಲಿ ಅಲ್ಲಮನ ನೋಡಿ, ಅಕ್ಕನನುಭಾವದಲಿ ಆತ್ಮಸಾಂಗತ್ಯದಲಿ, ಶಿವಭಾವದಲಿ ನಿಂತವರು ನಮ್ಮ ಸಿದ್ಧೇಶ್ವರರು.

ಜ್ಞಾನದಾಸೋಹದಲಿ ಕಾಯಕವ ಕಂಡವರು, ತನ್ನದೆನ್ನುವುದ ನಿರತ ಮರೆತ ನಿರ್ಮೋಹಿ. ವಿನಯಶೀಲತೆಯೇ ಮೈವೆತ್ತವರು ಇವರು.

ಸಮಚಿತ್ತ, ಅನುಕಂಪೆ, ನಿರ್ಮಮತೆ, ಉತ್ತಮತೆ, ಸೌಜನ್ಯ, ಔದಾರ್ಯ ಗುಣಗಳಿಗೆ ಆಗರವಾದವರು. ಸ್ವಚ್ಛ ಬದುಕಿಗೆ ಒತ್ತುಕೊಟ್ಟವರು, ಜೊತೆಯವರನ್ನು ಹಾಗಿರಲು ಪ್ರೇರೇಪಿಸಿದವರು, ನಿರ್ಲಿಪ್ತರು, ಹೃದಯವಂತರು; ಕರುಣೆತೊರೆಯಲ್ಲಿ ಮಿಂದು ಮೇಲೆದ್ದವರು. ಮನದೃಷ್ಟಿಭಾವದಲಿ ಜಡವ ಪರಿವರ್ತಿಸುವ ಪರುಷಗುಣ, ಅಂತರಂಗದಲಿ ಇನಿತ ಬಯಸದ ನಿಷ್ಠೆ, ಚಿತ್ತಸಮಾಧಾನ ಸದಾ ಅವರ ನಗುಮೊಗದ ಹೆಗ್ಗುರುತಾಗಿತ್ತು.

> ಜೀವನ ಅದೊಂದು ಐಶ್ವರ್ಯ.
> ಹೊಸತನವೆ ಬಾಳು; ಹಳಸಿಕೆಯೆಲ್ಲ ಸಾವು.
> ವಿಷಯಾಸಕ್ತ ಲೋಕವನು ನೋಡು ಅನಾಸಕ್ತಿಯಿಂದ.
> ನಗುನಗುತ ಬಾಳ್; ಹೊರಡು ಕರೆ ಬರಲ್ ಅಳದೆ.
> ಹಸನು ಹಗುರದ ಬಾಳು. ತಣ್ಣಗಿರಿಸಾತ್ಮವನು;
> ಭಾಗ್ಯವನು ನೆನೆದು ನಲಿ.

– ಎಂದೆಲ್ಲ ಸಂದೇಶವಿತ್ತ ದೀಪಧಾರಿಗಳು ನಮ್ಮ ಸಿದ್ಧೇಶ್ವರರು. ಇಂಥ ಗುರುವರ್ಯರಿಗೆ ಸಕಲ ವಸುಧೆ ಕುಟುಂಬ.

'ನೀವೇಕೆ ಆತ್ಮಚರಿತ್ರೆ ಬರೆಯಬಾರದು?' ಎಂದು ವೀಣಾ ಬನ್ನಂಜೆಯವರು ಕೇಳಿದ ಪ್ರಶ್ನೆಗೆ ಶ್ರೀಗಳವರ ಉತ್ತರ : 'ಘಟನಾನೆ ಇಲ್ಲ, ಇನ್ನು ಏನು ಚರಿತ್ರ ಬರೆಯೋದು?' ಈ ಬಗೆಯ ನಿರ್ಲಿಪ್ತತೆ ಪೂಜ್ಯರಿಂದ ಮಾತ್ರ ಸಾಧ್ಯ.

**ವ್ಯಕ್ತಿತ್ವದ ಅನಂತಮುಖ**

ಶುಭ್ರ ಶ್ವೇತ ವಸ್ತ್ರಧಾರಿ. ಆದರೆ ಅದು ಮಿಂಚುವ ರೇಷ್ಮೆಬಟ್ಟೆಯಂತೂ ಆಗಿರಲಿಲ್ಲ. ಸಾಧಾರಣದಲ್ಲಿ ಸಾಧಾರಣ ಲುಂಗಿ; ಎದೆ ತುಂಬಿ ನಿಂತ ತೋಳಂಗಿ, ಕಿಸೆಯಂತೂ ಮೊದಲೇ ಇಲ್ಲ. ಯಾರಾದರೂ ಏನನ್ನಾದರೂ ಕೊಡಲು ಮುಂದಾದರೆ, ನಗೆಮೊಗದ ಸಂತೃಪ್ತ ನಿರಾಕರಣೆಯೆ ಉತ್ತರ. ಫಲತಾಂಬೂಲ, ಹೂಹಾರ, ದಕ್ಷಿಣೆ ಏನನ್ನಾದರೂ ಸಮರ್ಪಿಸಬಂದರೆ, ಅದೇ ಗೌರವದ ಮೌನ. ಹೆಚ್ಚೆಂದರೆ, ಕೈಮುಟ್ಟಿ ಹಿಂದಿರುಗಿಸುವ ಮನೋಭಾವ. ಕೊರಳಿಗೆ ಹೂಮಾಲೆ ಹಾಕಲು ಬಂದವರಿಗೆ ಅದನ್ನೊಪ್ಪದ ಕೈಸನ್ನೆ.

ಶ್ರೀಗಳವರ ಸರಳತನ, ಅಪರಿಗ್ರಹ, ಆಡಂಬರರಹಿತ ಜೀವನವಿಧಾನವನ್ನರಿತವರಿಗೆ ಅವರ ಈ ಸ್ವಭಾವ ಅಪಾರ ಮೆಚ್ಚುಗೆಗೆ ಪಾತ್ರವಾಗಿತ್ತು.

ಪೂಜ್ಯರು ಸಮಯನಿಷ್ಠರು. ಎಂದೂ ಯಾವುದೇ ಕಾರ್ಯಕ್ರಮಕ್ಕೆ – ಪ್ರವಚನವೂ ಸೇರಿದಂತೆ – ಅವರು ತಡವಾಗಿ ಬಂದದ್ದೇ ಇಲ್ಲ. ಗಡಿಯಾರವನ್ನು ನೋಡದೆ, ಉಪನ್ಯಾಸವನ್ನು ನಿಶ್ಚಿತ ಸಮಯಕ್ಕೆ ಮುಗಿಸುವ ಅವರ ಆ ಸಾಮರ್ಥ್ಯ ಎಲ್ಲರನ್ನೂ ಅಚ್ಚರಿಗೊಳಿಸುತ್ತಿತ್ತು.

**ಪ್ರವಚನ ಮಾಲೆ**

ನೀತಿಕತೆ ಹೇಳುತ್ತಾ ತೋರಿದರು ದಿವ್ಯತೆಯ; ಸಂಯಮಕೆ ಶರಣಾದ ಈ ನೀತಿ ಪಾಲಕರು ಹರಿದ ಬಟ್ಟೆಯ ತೊಟ್ಟ ಜ್ಞಾನದಾಸೋಹಿಗಳು. ಜಗದ ಬೆಳಕಾದ ಗುಣಸಂಪನ್ನರು.

ಅವರ ಮಾತುಗಳಲ್ಲಿ ಪಾಂಡಿತ್ಯ ಎಂದೂ ವಿಜೃಂಭಿಸಲೇ ಇಲ್ಲ; ಜನಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಸಿ ಹೇಳುವ ಕಥನಕೌಶಲ ಅವರಿಗೆ ಜನ್ಮತಃ ಸಿದ್ಧಿಸಿತ್ತು. ಪ್ರವಚನಕಲೆಯಲ್ಲಿ ಅವರಿಗೆ ಅವರೇ ಉಪಮೆ; ಹೂವಿನ ಎಸಳನ್ನು ಬಿಡಿಸಿಟ್ಟು ಪಕಳೆಗಳನ್ನು ಅರಳಿಸಿ ತೋರಿಸುವ ಅದ್ಭುತ ವಿವರಣಾಪದ್ಧತಿ ಅವರದು.

ವಿಜ್ಞಾನ ಕುರಿತ ಅತ್ಯಾಧುನಿಕ ಸಂಶೋಧನಾ ಸಂಗತಿಯಿರಲಿ, ಪರಮಾರ್ಥದ ಸೂಕ್ಷ್ಮ ಒಳನೋಟವಿರಲಿ, ವೇದೋಪನಿಷತ್ತುಗಳ ಸಾರಸಂಪದವಿರಲಿ, ಶರಣಧಾರೆಯ ಷಟ್‌ಸ್ಥಲ ವಿವರಣೆಯಿರಲಿ, ಪತಂಜಲ ಯೋಗಸೂತ್ರದ ಸೂಕ್ತಿ ವ್ಯಾಖ್ಯಾನವಿರಲಿ, ಅಲ್ಲೆಲ್ಲ ಸರಳ ನೇರ ವಿವೇಚನಾಬದ್ಧ ಪ್ರತಿಪಾದನೆ.

ಜಟಿಲ ವಿಷಯಗಳೂ ಅವರ ಮಾತಿನಲ್ಲಿ ಸರಳಾತಿಸರಳ. ರೈತಾಪಿ ಜನರು ಕೂಡ ತಲೆದೂಗುವಂತಹ ಅಮೃತೋಪಮ ನುಡಿಮುತ್ತುಗಳು. ಅಂತಹ ಸ್ನಿಗ್ಧ ವಾಗ್ಮಿತೆ ಅವರದು. ಪ್ರವಚನದ ಮೊದಲಲ್ಲೇ ಅವರು ತುಂಬು ಹೃದಯದಿಂದ ಕೈಮುಗಿದು ಸಭೆಗೆ ನಮಸ್ಕರಿಸುವ ಆ ವಿನಯದ ನಡೆ ಆಸಕ್ತ ಕೇಳುಗರ ಮನದಲ್ಲಿ ಹೆಪ್ಪುಗಟ್ಟಿರುತ್ತಿತ್ತು.

ಕಳೆದ ಆರು ದಶಕಗಳಲ್ಲಿ ನಾಡಿನಾದ್ಯಂತ ಅವರು ನೀಡಿರುವ ಉಪನ್ಯಾಸಗಳು ಪ್ರಾಯಶಃ 10,000ಕ್ಕೂ ಮಿಗಿಲೆಂದು ಕಾಣುತ್ತದೆ.

ಪ್ರವಚನದ ಸಮಯದಲ್ಲಿ ವೇದಿಕೆಯಲ್ಲಿ ಅವರೊಬ್ಬರೇ. ಸಾಧಾರಣ ಕುರ್ಚಿ, ಮುಂದೆ ಒಂದು ಪುಟ್ಟ ಟೇಬಲ್, ಅದರ ಮೇಲೆ ಕೆಲವು ಹೂಗಳು. ಪ್ರಾರ್ಥನೆಯ ನಂತರ ಉಪನ್ಯಾಸ. ಪ್ರಾರಂಭದಲ್ಲಿ ಮಂದಗತಿಯಲ್ಲಿ ಮೆಲ್ಲಗೆ, ಕೇಳಿಯೂ ಕೇಳಿಸದಂತೆ, ಮೆಲ್ಲನೆಯ ಮಾತು. ಬರುಬರುತ್ತಾ ತಂಗಾಳಿ ಬೀಸಿದಂತೆ, ಹುಣ್ಣಿಮೆ ಚಂದ್ರ ನಕ್ಕಂತೆ ಕೇಳುಗರ ಮನದಲ್ಲಿ ಉಕ್ಕೇರುತ್ತಿದ್ದ ಆನಂದಾನುಭವ.

ಪ್ರವಚನದ ಹೊತ್ತಿನಲ್ಲಿ ಪಿಸುಮಾತು ಕೇಳಿಸಿದಂತಹ ನಿಶ್ಶಬ್ದತೆ. ಸೂಜಿ ಬಿದ್ದರೂ ಸದ್ದಾಗುವಂತಹ ವಾತಾವರಣ. ಉತ್ತರ ಕರ್ನಾಟಕ ಭಾಷೆಯ ಚಂದದ ಬಳಕೆ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡಿಬಿಡುತ್ತಿತ್ತು.

**ಸಮಯದ ಸದುಪಯೋಗ**

ಪೂಜ್ಯರದು ಸಾಮಾನ್ಯವಾಗಿ ಪ್ರತಿದಿನ ಯೋಜಿತ, ನಿಯಮಿತ ವೇಳಾಪಟ್ಟಿ. ಸೂರ್ಯೋದಯಕ್ಕೆ ಮುನ್ನ ಬೆಳಗ್ಗೆ 4–5 ಗಂಟೆಗೆ ಎಚ್ಚರ. ಧ್ಯಾನ, ನಂತರ ಊರ ಹೊರಗಿನ ಸ್ವಚ್ಛ ಪ್ರದೇಶದಲ್ಲಿ ಒಂದೆರಡು ತಾಸು ವಾಯುವಿಹಾರ. ಅಗತ್ಯವಿದ್ದಾಗ ಆಪ್ತರೊಡನೆ ಕೆಲ ನಿಮಿಷ ಮಾತುಕತೆ. ಬಿರುಸಿನ ನಡಿಗೆ, ಸೂರ್ಯಕಿರಣಕ್ಕೆ ಮೈಯೊಡ್ಡುವಿಕೆ. ಮೊಬೈಲ್ ಅವಾಂತರವಿಲ್ಲ, ಅನಗತ್ಯ ಚರ್ಚೆಗಳಿಲ್ಲ.

ಬಳಿಕ ನಿರ್ದಿಷ್ಟ ಸ್ಥಳದಲ್ಲಿ ಆಯಾ ಪ್ರದೇಶದ 20–30 ಅಭಿಮಾನಿಗಳೊಂದಿಗೆ ಆಯ್ದ ವಿಷಯದ ಬಗ್ಗೆ ಪರಸ್ಪರ ಚರ್ಚೆ. ಸ್ನಾನ–ಪೂಜೆ–ಪ್ರಸಾದ, ದಿನಪತ್ರಿಕೆಗಳ ಪ್ರಮುಖ ಆಯ್ದ ಸುದ್ದಿಗಳ ಓದುವಿಕೆ, ಓದಿಸುವಿಕೆ. ಅಧ್ಯಯನದಲ್ಲಿ ತಲ್ಲೀನತೆ. ಗುರುಕುಲ ಪದ್ಧತಿಯಲ್ಲಿ ಶಿಷ್ಯರಿಗೆ ಶಾಸ್ತ್ರಗ್ರಂಥಗಳ ಪಾಠಪ್ರವಚನ, ಮಧ್ಯಾಹ್ನ–ಸಂಜೆ. ಅತಿಥಿಗಳೊಂದಿಗೆ ಕೆಲ ಹೊತ್ತು ಭೇಟಿ. ನಡಿಗೆ–ವಿಶ್ರಾಂತಿ. ಸಾಯಂಕಾಲ ಪೂಜೆ–ಪ್ರಸಾದ. ಸಂಜೆ ಹೊತ್ತಿನ ನಡಿಗೆ. ಓದು. 9 ಗಂಟೆಗೆ ವಿಶ್ರಾಂತಿ.

ಮೊದಲೆಲ್ಲ ಸಂಜೆ ಹೊತ್ತಿಗೆ ಪ್ರವಚನವಿರುತ್ತಿತ್ತು. ಆಮೇಲೆ ಬೆಳಗ್ಗೆ ಹೊತ್ತಿಗೆ ಪ್ರವಚನ ಕಾರ್ಯ ಪ್ರಾರಂಭವಾಯಿತು. ಹಿತಮಿತ ಮಾತುಕತೆ, ಒಳಿತನ್ನೇ ನೋಡುವ, ಕೇಳುವ ನುಡಿಯುವ ಸ್ವಭಾವ. ಸಕಾರಾತ್ಮಕ ಚಿಂತನೆಗಷ್ಟೇ ಒತ್ತು. ಬೇಸರ ದುಗುಡ ಖಿನ್ನತೆ ಕಾತರ ಮೊದಲಾದ ನಕಾರಾತ್ಮಕ ಸಂಗತಿಗಳಿಗೆ ಅವಕಾಶವೇ ಇಲ್ಲ. ದೈವಚಿಂತನೆ ಶಾಂತಚಿತ್ತತೆ ಸಾಮಾಜಿಕ ಒಳಿತಿಗಷ್ಟೇ ಅವರ ಸಮಯ ಮೀಸಲು. ಪ್ರಕೃತಿಯೊಡನೆ ತಾದಾತ್ಮ್ಯಭಾವನೆ.

**ನಿಸರ್ಗಪ್ರೀತಿ**

ಶ್ರೀಗಳವರು ಸೌಂದರ್ಯೋಪಾಸಕರು. ಪ್ರಕೃತಿ ಎಲ್ಲೆಲ್ಲಿ ತನ್ನ ವಿಶೇಷತೆ ಪ್ರಕಟಿಸುತ್ತಿತ್ತೋ ಅಲ್ಲೆಲ್ಲ ಅವರ ಆರಾಧನಾಭಾವ ವ್ಯಕ್ತವಾಗುತ್ತಿತ್ತು. ಅವರಿಗೆ ಗಿಡಮರ, ಹೂಗೊಂಚಲು, ಪ್ರಾಣಿ–ಪಕ್ಷಿ, ಕಡಲತೀರಗಳೆಂದರೆ ಅದೊಂದು ಅದ್ಭುತ ಜಗತ್ತು. ಆ ನಿಶಾಂತ ಮೌನದಲ್ಲಿ, ಅವರ ಆನಂದಪರವಶತೆ ಮುಗ್ಧ ಮಗುವಿನಂತಿರುತ್ತಿತ್ತು.

**ನಾವೀಗ ಮಾಡಬೇಕಾದದ್ದು**

ಸಿದ್ಧೇಶ್ವರರು ಪ್ರಚಾರಪ್ರಿಯತೆಗೆ ಬಿಡಿಗಾಸಿನಷ್ಟೂ ಬೆಲೆ ಕೊಟ್ಟವರಲ್ಲ. ಸಾಮಾನ್ಯ ಜನರ ಬದುಕು ಸಂತೋಷದಿಂದಿರಬೇಕು, ಜನರು ದುಷ್ಟ ಚಟಗಳಿಂದ ದೂರವಿರಬೇಕೆಂಬ

ಕನಸ ಕಂಡವರು. ಈ ಕನಸನ್ನು ನನಸು ಮಾಡುವ ಸಲುವಾಗಿ ಪ್ರವಚನವನ್ನು ತಮ್ಮ ಕಾಯಕ–ಸಾಧನವನ್ನಾಗಿ ಬಳಸಿಕೊಂಡವರು. ಸಮಾಜದ ಸಮಷ್ಟಿ ಅಭ್ಯುದಯಕ್ಕಾಗಿ ಅವಿರತ ಶ್ರಮಿಸಿದವರು.

ತೊಗಟೆಯನ್ನೇ ತಿರುಳೆಂದು ಭಾವಿಸುತ್ತಿರುವ ಇಂದಿನ ಕಾಲಘಟ್ಟದಲ್ಲಿ ಗಟ್ಟಿಯಾದದ್ದೇಕೋ ಮರೆಯಾಗುತ್ತಿದೆ. ಆದರ್ಶಚರಿತರನ್ನು ದುರ್ಬೀನು ಹಾಕಿ ಹುಡುಕಬೇಕಾದ ಅನಿವಾರ್ಯತೆ ಎಂದಿಗಿಂತ ಇಂದು ಹೆಚ್ಚಾಗಿದೆ. ಈ ದಿಸೆಯಲ್ಲಿ ಪೂಜ್ಯರ ಸರಳ, ಸುಂದರ, ಪ್ರಾಮಾಣಿಕ ಬದುಕು ನಮಗೆ ಮಾದರಿ. ಅವರ ನುಡಿ ಅನುಷ್ಠಾನದಲ್ಲಿ ಕಾರ್ಯಗತವಾದರೆ ಯಾವುದೇ ಕಚ್ಚಾಟ, ಕೂಗಾಟ, ಕಿರುಚಾಟ, ಪೇಚಾಟಗಳಿರುವುದಿಲ್ಲ.

ಪೂಜ್ಯರ ಪವಿತ್ರ ಜೀವನ, ಅನುಪಮ ಸಾಧನೆ, ಶಾಲಾಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಮೂಡಿಬರುವಂತಾಗಲಿ. ನಮ್ಮ ಗ್ರಂಥಾಲಯಗಳಲ್ಲಿ ಅವರ ಕೃತಿಗಳು ರಾರಾಜಿಸಲಿ. ವಿಶ್ವವಿದ್ಯಾಲಯಗಳಲ್ಲಿ ಅವರ ಸಾಹಿತ್ಯ ಕುರಿತಂತೆ ವಿಚಾರಸಂಕಿರಣ, ಕಾರ್ಯಾಗಾರಗಳು ಏರ್ಪಡಲಿ; ಅಧ್ಯಯನಪೀಠ ಸ್ಥಾಪನೆಯಾಗಲಿ. ಅವರನ್ನು ಕುರಿತ ಸಂಶೋಧನೆಗೆ ನೆರವಾಗುವ ವ್ಯವಸ್ಥೆ ಮನೆಮಾಡಲಿ. ಅವರ ಅಚ್ಚಳಿಯದ ನೆನಪಿಗಾಗಿ ಸಾಕ್ಷ್ಯಚಿತ್ರ ಹಾಗೂ ಚಿತ್ರಸಂಪುಟ ಹೊರಬರಲಿ.

ಈ ನಿಟ್ಟಿನತ್ತ ಸರ್ಕಾರ, ಸಂಘಸಂಸ್ಥೆಗಳು ಗಮನ ಹರಿಸಲಿ. ಅದುವೇ ನಾವು ಪೂಜ್ಯರಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ.

**ಶತಶತ ನಮನ**

ಮೊದಲ ಬಾರಿಗೆ 1998ರಲ್ಲಿ ಪೂಜ್ಯರನ್ನು ಕಂಡ ಆ ದಿವಸ ನನ್ನ ಬಾಳಿನ ಭಾಗ್ಯದ ಬಾಗಿಲು ತೆರೆಯುತ್ತದೆ ಎಂಬ ಕಲ್ಪನೆ ನನಗೆ ಕಿಂಚಿತ್ತೂ ಇರಲಿಲ್ಲ. ಯಾವ ಪುಣ್ಯಾತ್ಮರ ಕರುಣಾಲಹರಿ ಹೇಗೆ ವ್ಯಕ್ತಿಯೋರ್ವನ ದಿಕ್ಕುದೆಸೆಯನ್ನೇ ಪರಿವರ್ತಿಸುತ್ತ ಜೀವನಶೈಲಿಗೆ ಎಂತೆಂಥ ತಿರುವು ಕೊಡುತ್ತದೋ ಇದೊಂದು ಬಿಡಿಸಲಾಗದ ಒಗಟು. ಇಷ್ಟಾಗಿ, ಇದೆಲ್ಲಾ ಅವರವರ ನಂಬಿಕೆಯ ವಿಷಯ.

ಅವರ ಪ್ರೀತಿಧಾರೆಯಲ್ಲಿ ಮಿಂದು ಪುನೀತರಾದ ಸಾವಿರಾರು ಜನರಲ್ಲಿ ನಾನೂ ಒಬ್ಬ. ಯೂರೋಪ್, ಅಮೆರಿಕದಲ್ಲಿ ಎರಡು ಮೂರು ತಿಂಗಳ ಕಾಲ ಪ್ರವಚನ ನೀಡಿದ ಸಮಯದಲ್ಲಿ ಅವರೊಂದಿಗೆ ಸಂಚರಿಸುವ ಸದವಕಾಶ ನನ್ನದಾಗಿತ್ತು. ಅದು ನನ್ನ ಪೂರ್ವಜನ್ಮದ ಪುಣ್ಯ.

ಮುಂಬರುವ ಪೀಳಿಗೆಗಾಗಿ ಅನವರತ ಶ್ರೇಯಸ್ಸಿನ ಕನಸ ಕಂಡ ಈ ಘನಮನದ, ಉದಾತ್ತಚರಿತರ ನೆನಪೇ ದಿವ್ಯಚೈತನ್ಯಚೈತ್ರ. ಕತ್ತಲೆಯ ದಾರಿಯಲ್ಲಿ ಪ್ರಜ್ವಲಿಸುವ

ನಂದಾದೀಪ. ಕೊಟ್ಟೆನೆಂಬ ಅರಿವಿರದೆ ಭವ್ಯ ಆಕಾಶದಲ್ಲಿ, ಕಡಲಿನಲೆಯಲ್ಲಿ ಮರೆಯಾದ ಈ ಚಿತ್ತಶುದ್ಧರು ನಾಡಿನ ಅಭ್ಯುದಯದ ಹಣತೆಗೆ ತಿಲಕಪ್ರಾಯರು; ಜೀವನ್ಮುಕ್ತರು.

"ಈ ಪ್ರಪಂಚದಲ್ಲಿ ಒಳ್ಳೆಯದನ್ನೆಲ್ಲ ಹೇಳಿ ಆಗಿದೆ. ಉಳಿದಿರುವುದು ಆಚರಣೆ ಮಾತ್ರ". ಸಂತರ ಈ ವಾಣಿ ಇಂದು ನಮಗೆ ಎಚ್ಚರದ ಗಂಟೆ.

ಕಾಲವಕ್ಷಯದೀಪವದರ ಪಾತ್ರೆಯಪಾರ
ಬಾಳ್ ಅದರಿನಾದೊಂದು ಕಿರುಹಣತೆ ಮಿಣುಕು.
ಗಾಳಿಯಾರಿಪುದೊಂದನಿನ್ನೊಂದ ಹೊತ್ತಿಪುದು
ತೈಲಧಾರೆಯಖಂಡ – ಮಂಕುತಿಮ್ಮ

ಋತುಚಕ್ರ ತಿರುಗುವುದು, ಕಾಲನೆದೆ ಮರುಗುವುದು
ಮೃತನ ಮಣ್ಣಿಂದ ಹೊಸ ಹುಲ್ಲು ಮೊಳೆಯುವುದು.
ಕ್ಷಿತಿ ಗರ್ಭಧರಿಸುವಳು ಮತ್ತುದಿಸುವುದು ಜೀವ
ಸತತ ಕೃಷಿಯೋ ಪ್ರಕೃತಿ – ಮಂಕುತಿಮ್ಮ

ಅರಳುವಿಕೆ ಬಾಡುವಿಕೆ ಈ ನೆಲದ ಹೂ ಸತ್ಯ
ಈ ಲೋಕನಾಟಕದ ಕೊನೆ ಅಂಕ ನಿಧನ
ಬಾಳ ಪಲ್ಲವಿ ಜನನ; ಮರಣ ಅಂತಿಮ ಚರಣ
ಸಾವು ಅಂತಿಮ ಸತ್ಯ – ಮುದ್ದುರಾಮ

ಬಾಳ ಹುಣ್ಣಿಮೆ ನೀನು ಮನುಕುಲದ ಗುರುದೇವ ;
ಸಾಲುದೀಪವೊ ನಿನ್ನ ಆ ಹೆಜ್ಜೆ ಗುರುತು
ನಿನಗೆ ಶತಶತ ನಮನ ಓ ಓ ಸಿದ್ಧಪುರುಷ !
ಹರಸು ನಮ್ಮನು ಸತತ – ಮುದ್ದುರಾಮ

**ಇನ್ನೆಂದೊ ಇತ್ತ ಇಂಥವರು!**

□

# ‘ಇದ್ದರಲ್ಲಾ...ಇಲ್ಲದಂತೆ!’
# ಶತಮಾನದ ಸಂತ ಶ್ರೀ ಸಿದ್ಧೇಶ್ವರ ಸ್ವಾಮಿಗಳು

**ಪ್ರೊ. ಮಲೆಯೂರು ಗುರುಸ್ವಾಮಿ**

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ಬಯಲ ಜೀವನ ಬಯಲ ಭಾವನೆ
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರಾ

ಅಲ್ಲಮನ ಈ ವಚನವನ್ನು ನಿರ್ವಚಿಸುತ್ತಾ ಹೋದಂತೆ ಲಿಂಗೈಕ್ಯರಾದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಬದುಕು ನಮ್ಮ ಕಣ್ಣುಗಳ ಮುಂದೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ವಿಜಯಪುರ ಜಿಲ್ಲೆಯ ತಿಕೋಟ ತಾಲ್ಲೂಕಿನ ಬಿಜ್ಜರಗಿ ಗ್ರಾಮದಲ್ಲಿ 11.10.1941 ರಂದು (ಶಾಲಾ ದಾಖಲಾತಿ ಪ್ರಕಾರ ಸೆಪ್ಟೆಂಬರ್ 1940) ಶರಣ ದಂಪತಿಗಳಾದ ಓಗೆಪ್ಪಗೌಡ ಬಿರಾದಾರ ಮತ್ತು ಸಂಗವ್ವ ದಂಪತಿಗಳ ಮಗನಾಗಿ ಜನಿಸಿದ ‘ಸಿದ್ಧಗೊಂಡ ಓಗೆಪ್ಪಗೌಡ ಬಿರಾದಾರ’ ಶ್ರೀ ಸಿದ್ಧೇಶ್ವರ ಸ್ವಾಮಿಗಳಾಗಿ ಬೆಳೆದ ಪರಿ, ಈ ಬದುಕನ್ನು ಅಪ್ಪಿಕೊಂಡು, ಬದುಕಿನಾಚೆಯ ಅಚಿಂತ್ಯ ಆಯಾಮಗಳನ್ನು ದರ್ಶಿಸಿದ ಪರಿ ಅಚ್ಚರಿ ಮೂಡಿಸುವಂತದು. ಪ್ರೌಢಶಾಲೆಯಲ್ಲಿ ಇರುವಾಗಲೇ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಪ್ರವಚನಗಳ ಪ್ರಭಾವಕ್ಕೆ ಒಳಗಾಗಿ ‘ಇಹ’ದ ಮೋಹವನ್ನು ಹಂತಹಂತವಾಗಿ ವಿಸರ್ಜಿಸುತ್ತಾ ‘ಮಹ’ದ ದಾರ್ಶನಿಕ ದಾರಿಗಳನ್ನು ಅವರು ಕಂಡುಕೊಳ್ಳತೊಡಗಿದುದು ಆಸ್ತಿಕ ಜನತೆಯ ಮಹಾಭಾಗ್ಯವೇ ಸರಿ.

ಜ್ಞಾನಯೋಗವನ್ನೇ ತಮ್ಮ ಜೀವನಯೋಗವನ್ನಾಗಿಸಿಕೊಂಡು ಬಯಲ ಬದುಕನ್ನು ಬದುಕಿದ ಪೂಜ್ಯ ಶ್ರೀ ಸಿದ್ಧೇಶ್ವರರ ಬದುಕು ಮೇಲುನೋಟಕ್ಕೆ ಸಾಮಾನ್ಯರಲ್ಲಿ ಸಾಮಾನ್ಯರಂತೆ ಕಂಡುಬರುತ್ತಿತ್ತು. ಸದಾ ಶುಭ್ರ ಶ್ವೇತಧಾರಿಗಳಾಗಿರುತ್ತಿದ್ದ ಸ್ವಾಮೀಜಿಯವರ ಬದುಕು ಅವರ ಅಂತರಂಗದ ಧವಳಶ್ರೀಗೆ ಕನ್ನಡಿ ಹಿಡಿದಂತೆ ಇರುತ್ತಿತ್ತು. ಸದಾ ಮಂದ್ರಸ್ಥಾಯಿಯಲ್ಲಿಯೇ ಸಂಚರಿಸುತ್ತಿದ್ದ ಅವರ ಮಾತು ಅನಂತ ಧ್ವನಿತರಂಗಗಳಲ್ಲಿ

ಕೇಳುಗರ ಎದೆಯೊಳಕ್ಕೆ ಇಳಿದುಬಿಡುತ್ತಿತ್ತು. ಅವರದ್ದು ಒಂದು ರೀತಿಯಲ್ಲಿ ಮೌನದ ಮಾತು; ಮಾತಿನ ಮೌನ! ಆದ್ದರಿಂದಲೇ ಅವರ ಪ್ರವಚನಗಳು ಕೇವಲ ಕೇಳಿಸಿಕೊಳ್ಳುವ ಮಾತುಗಳಾಗಿರಲಿಲ್ಲ; ಅನುಭವಿಸುವ ನಾದತರಂಗಗಳಾಗಿರುತ್ತಿದ್ದುವು. ಅಧರಕ್ಕೆ ಮಧುರ, ಉದರಕ್ಕೆ ಭೇಷಜ. ಉದಾ: 'ಯೋಗ' ಎನ್ನುವುದನ್ನು ಅವರು ತಿಳಿಸುವ ಪರಿ ಹೀಗೆ – 'ಯೋಗವೆಂದರೆ ಪರಮಸತ್ಯವನ್ನು ಅರಿತು, ಅನುಭವಿಸಿ ಆನಂದಿಸುವುದು. ಇಲ್ಲೊಂದು ಸುಂದರ ಹೂವಿದೆ. ಕಣ್ಣು ಈ ಹೂವನ್ನು ನೋಡುತ್ತದೆ. ನೋಡಿದ ಹೂವಿನಲ್ಲಿ ಮನಸ್ಸು ಕೂಡುತ್ತದೆ; ಸೌಂದರ್ಯವನ್ನು ಅನುಭವಿಸುತ್ತದೆ; ಆನಂದಿಸುತ್ತದೆ. ಈ ಕೂಡುವಿಕೆಯೇ ಯೋಗ.' ಪ್ರಾಪಂಚಿಕ ವಸ್ತುವಿನ ಯೋಗದಿಂದ ಕ್ಷಣಿಕ ಸುಖ, ಸಮಾಧಾನ. ಪಾರಮಾರ್ಥಿಕ ಪರಮ ಸತ್ಯವಸ್ತುವಿನ ಯೋಗದಿಂದ ಪರಮಾನಂದ, ಶಾಶ್ವತ ಸುಖ, ಶಾಂತಿ, ಸಮಾಧಾನ.

"ಭವಮಾಲೆ. ಭೌತಿಕವಸ್ತುವಿನ ಪ್ರೇಮವು ಸಾಮಾನ್ಯ ಪ್ರೇಮ, ಅಭೌತಿಕ ಸತ್ಯ ವಸ್ತುವಿನ ಪ್ರೇಮವು ಪರಮಪ್ರೇಮ. ಅದು ಭಕ್ತಿ. ಸಾಮಾನ್ಯ ಪ್ರೇಮವು ಮನುಷ್ಯನನ್ನು ಬಂಧಿಸುತ್ತದೆ; ಪರಮಪ್ರೇಮವು ಮುಕ್ತಗೊಳಿಸುತ್ತದೆ.

"ಮಹಾತ್ಮರ ಮಾತುಗಳನ್ನು ನಾವು ಕಂಠಪಾಠ, ಗಿಳಿಪಾಠ ಮಾಡಿದ ಮಾತ್ರಕ್ಕೆ ಅವು ನಮ್ಮನ್ನು ಎಂದೂ ರಕ್ಷಿಸುವುದಿಲ್ಲ. ಆ 'ಶಿವನುಡಿ'ಗಳನ್ನು ನಾವು ಮನನಮಾಡಿ ರಕ್ತಗತ ಮಾಡಿಕೊಳ್ಳಬೇಕು. ಆತ್ಮಸಾತ್ ಮಾಡಿಕೊಳ್ಳಬೇಕು. ಆಗ ಅವು ನಮ್ಮನ್ನು ಕಾಯುತ್ತವೆ.

"ಪ್ರೇಮವು ಹೃದಯದ ಒಂದು ಮಧುರ ಭಾವಾಂಶ. ಈ ಪ್ರೇಮಭಾವದಿಂದ ವಸ್ತುಗಳು ಸುಖದಾಯಕವಾಗಿ ಪರಿಣಮಿಸುತ್ತವೆ. ಜೀವನವು ರಸಪೂರ್ಣವಾಗುತ್ತದೆ. ಈ ಭಾವವೇ ಇಲ್ಲದಿದ್ದರೆ ಮನುಷ್ಯನಿಗೂ, ಯಂತ್ರಗಳಿಗೂ ವ್ಯತ್ಯಾಸವೇ ಉಳಿಯುವುದಿಲ್ಲ! ಯಂತ್ರಮಾನವನು ನಮಗಿಂತ ಎಷ್ಟೋ ಪಾಲು ಬುದ್ಧಿವಂತನಿದ್ದಾನೆ. ಆದರೆ ಅವನು ಮಾನವನಂತೆ ಸುಖದುಃಖಗಳನ್ನು ಅನುಭವಿಸಲಾರನು. ಏಕೆಂದರೆ ಯಂತ್ರಮಾನವನಿಗೆ ಪ್ರಚಂಡ ಬುದ್ಧಿಯಿದೆ; ಆದರೆ ಹೃದಯವಿಲ್ಲ". (ಕೃಪೆ: 'ನಾನಾರು' ಕೃತಿ)

ಶ್ರೀ ಸಿದ್ಧೇಶ್ವರರ ಪ್ರವಚನಗಳಲ್ಲಿ ಇಂತಹ ಸಾವಿರಾರು ಬೀಜರೂಪದ ಮಾತುಗಳು ಇಡಿಕಿರಿದಿರುತ್ತವೆ. ಬಹುಭಾಷಾವಿದ್ವಾಂಸರಾದ ಪೂಜ್ಯರು ಕನ್ನಡ, ಹಿಂದಿ, ಸಂಸ್ಕೃತ, ಮರಾಠಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರ ಮಾತುಗಳಲ್ಲಿ ಜೋಗ ಜಲಪಾತದ ಧುಮ್ಮಿಕ್ಕುವ ರಭಸವಾಗಲಿ, ಉಕ್ಕೇರಿದ ನದಿಯ ಭೋರ್ಗರೆತವಾಗಲಿ ಕಂಡುಬರುತ್ತಿರಲಿಲ್ಲ. ಪರಿಶುದ್ಧ ಪಾರದರ್ಶಕ ನಿರ್ಮಲ ತೊರೆ ಸಮತಟ್ಟು ಬಯಲಿನಲ್ಲಿ ಕೇಳಿಯೂ ಕೇಳಿಸದಿದ್ದಂತೆ ಹರಿಯುವ ಸ್ವರೂಪದ್ದಾಗಿತ್ತು. ಆ ಕಾರಣಕ್ಕಾಗಿಯೇ ಕರ್ನಾಟಕ, ಮಹಾರಾಷ್ಟ್ರಗಳ ಯಾವುದೇ ಪ್ರದೇಶದಲ್ಲಿ ಅವರ ಪ್ರವಚನ ನಡೆದರೂ ಕಿಕ್ಕಿರಿದು ಜನ ಸೇರುತ್ತಿದ್ದರು. ಅನೇಕ ಕಡೆ ಅವರ ಪ್ರವಚನಗಳು

ಸೂರ್ಯೋದಯಕ್ಕೆ ಮೊದಲೇ ಪ್ರಾರಂಭವಾಗುತ್ತಿದ್ದುದೂ ಉಂಟು. ಹೀಗಿದ್ದೂ 2–3 ಸಾವಿರ ಜನ ಸೇರಿಬಿಡುತ್ತಿದ್ದರು. ಅದೂ ಒಂದೆರಡು ದಿನದ್ದಲ್ಲ, ತಿಂಗಳುಗಟ್ಟಲೆ ಪ್ರವಚನ. ಅಲ್ಲೆಲ್ಲೂ ಅವರ ಪಾಂಡಿತ್ಯ ಪ್ರದರ್ಶನವಾಗಲಿ, ಯಾವುದೇ ನಿರ್ದಿಷ್ಟ ಧರ್ಮದ ಪ್ರಸಾರದ ಉದ್ದೇಶವಾಗಲಿ ಕಿಂಚಿತ್ತೂ ಕಂಡುಬರುತ್ತಿರಲಿಲ್ಲ. ಮಾತಿನ ಮೂಲಧಾತು ಉಪನಿಷತ್ತುಗಳು ವಚನಗಳಾದರೂ ಅದಕ್ಕೆ ಪೂರಕವಾಗಿ ಜಗತ್ತಿನ ಪ್ರಮುಖ ಧರ್ಮಗಳು ಹಾಗೂ ಪ್ಲೇಟೋ, ಅರಿಸ್ಟಾಟಲ್, ಲಾವೋತ್ಸೆ, ಕ್ರಿಸ್ತ, ಬುದ್ಧ, ಮಹಾವೀರ ಎಲ್ಲರೂ ಬಂದುಹೋಗುತ್ತಿದ್ದರು. ಈ ಎಲ್ಲರೂ ಹೇಳುವುದು ಒಂದೇ ಧರ್ಮ, ಅದೇ ಮಾನವ ಧರ್ಮ ಎನ್ನುವುದನ್ನು ಕೇಳುಗರ ಮನಂಬುಗುವಂತೆ ವಿವರಿಸುತ್ತಿದ್ದರು. ಜಡವಸ್ತುಗಳೆಂದು ನಾವು ಹೇಳುವ ಮಣ್ಣು–ಕಲ್ಲು, ಹಾಗೆಯೇ ಹೂವು, ಹಣ್ಣು ಗಿಡಮರಗಳು ಪ್ರಾಣಿಪಕ್ಷಿಗಳು ಅವರ ಗಂಭೀರ ಪ್ರವಚನದಲ್ಲಿ ಗೌರವಾನ್ವಿತ ಸ್ಥಾನ ಪಡೆಯುತ್ತಿದ್ದುವು. ಎಲ್ಲದರಲ್ಲಿಯೂ ಭಗವತ್‌ಚೈತನ್ಯವನ್ನು ಕಂಡು ಮಣಿಯುತ್ತಿದ್ದ ಪೂರ್ಣದೃಷ್ಟಿಯ ಭವ್ಯ ಮಾನವ ಅವರು.

ಸದಾ ಅಂತರ್ಮುಖಿಯಾಗಿರುತ್ತಿದ್ದ ಪೂಜ್ಯರ ಪಾಂಡಿತ್ಯವೂ ಅಸಾಮಾನ್ಯವಾದುದೇ ಆಗಿತ್ತು. ತಮ್ಮ ಗುರುಗಳು ಮಾಡುತ್ತಿದ್ದ ಮರಾಠಿ ಭಾಷೆಯಲ್ಲಿನ 'ಸಿದ್ಧಾಂತ ಶಿಖಾಮಣಿ' (ವೀರಶೈವ ಧರ್ಮದ ಒಂದು ಬಹುಚರ್ಚಿತ ಕೃತಿ) ಪ್ರವಚನವನ್ನು ಕೇಳುತ್ತಾ ಅವರು ಮಾಡಿಕೊಂಡಿದ್ದ ಟಿಪ್ಪಣಿಗಳು ಅವರ ಗುರುಗಳ ಆಶಯದಂತೆ ಮುಂದೆ ಕನ್ನಡದಲ್ಲಿ ಗ್ರಂಥಸ್ಥರೂಪ ಪಡೆದದ್ದು ಒಂದು ಚಾರಿತ್ರಿಕವಾಗಿ ದಾಖಲಾರ್ಹವಾದ ಸಂಗತಿ. ಪೂಜ್ಯ ಶ್ರೀ ಸಿದ್ಧೇಶ್ವರರಿಗೆ 'ಅಲ್ಲಮ' ಸದಾ ಮೈಮನಗಳಲ್ಲಿ ತುಂಬಿಕೊಂಡಿದ್ದು ಒಂದು ವಿಶೇಷ. ಅವನ ಸಮಗ್ರ ವಚನಗಳಿಗೆ ಇವರು ಬರೆದಿರುವ ವ್ಯಾಖ್ಯಾನವನ್ನು ನೋಡಿದರೆ ಸಾಮಾನ್ಯ ಓದುಗರಿಗಷ್ಟೇ ಅಲ್ಲ, ಪ್ರಬುದ್ಧರಿಗೂ ದಿಗ್ಭ್ರಮೆಯಾಗುತ್ತದೆ. ಇದು ಪೂಜ್ಯ ಶ್ರೀ ಸಿದ್ಧೇಶ್ವರರು ಅನುಷ್ಠಾನ ಮಾಡಿಕೊಂಡು ಬಂದ ವಿಶ್ವಪೂಜೆ ಎಂದೇ ಭಾವಿಸಬೇಕಾಗುತ್ತದೆ. ಇತ್ತೀಚೆಗೆ ಅವುಗಳ ಇಂಗ್ಲಿಷ್ ಭಾಷಾಂತರದ ಬೃಹತ್ ಕೃತಿಯ ಸಿದ್ಧತೆ ಅಂತಿಮ ಹಂತದಲ್ಲಿತ್ತು. ಇವರ ಜೊತೆ ಕೆಲಸ ಮಾಡುತ್ತಿದ್ದ ದೊಡ್ಡ ದೊಡ್ಡ ಇಂಗ್ಲಿಷ್ ಭಾಷಾ ವಿದ್ವಾಂಸರು, ತತ್ವಜ್ಞಾನದ ಪ್ರಾಧ್ಯಾಪಕರು. ಭಾಷಾಂತರದ ಅಂತಿಮರೂಪದ ಒಪ್ಪಿಗೆಗಾಗಿ ಕಾಯುತ್ತಿದ್ದುದು ಶ್ರೀ ಸಿದ್ಧೇಶ್ವರರ ತೀರ್ಮಾನವನ್ನೇ! ಅವರ 'ಭಕ್ತಿಯೋಗ', 'ಭಗವಚ್ಚಿಂತನ', 'ನಾನಾರು?' ಮುಂತಾದ ಅನೇಕ ಕೃತಿಗಳು ಮುಮುಕ್ಷುಗಳ ನಿತ್ಯ ಕೈಪಿಡಿಯಂತಿವೆ. ಧರ್ಮ, ದೇವರು, ಧಾರ್ಮಿಕ ಪ್ರವಚನಗಳೆಲ್ಲಾ ಲಾಭದಾಯಕ ಉದ್ಯಮದ ಸ್ವರೂಪವನ್ನು ಪಡೆಯುತ್ತಿರುವ ಕಾಲಮಾನದಲ್ಲಿ, ಧರ್ಮಪ್ರಸಾರದ ಕೇಂದ್ರಗಳು ಪಂಚತಾರಾ ಹೋಟೆಲ್‌ಗಳಂತೆ ಕಣ್ಣು ಕೋರೈಸುವಂತಿರುವ ದಿನಗಳಲ್ಲಿ, ಆಕರ್ಷಕ ಮಾತುಗಾರಿಕೆಯನ್ನು ರೂಢಿಸಿಕೊಂಡು ಮುಗ್ಧ ಜನತೆಯಲ್ಲಿ ಮತ್ತಷ್ಟು ಮೌಢ್ಯವನ್ನು ತುಂಬುವ ಹುನ್ನಾರ ನಡೆಯುತ್ತಿರುವ ದಿನಗಳಲ್ಲಿ ಶ್ರೀ ಸಿದ್ಧೇಶ್ವರರಂತಹವರೂ ಇದ್ದರು ಎನ್ನುವುದೇ ಅವರ ಮಹತ್ತಿಗೆ ಸಾಕ್ಷಿಯಾಗಿದೆ. ಉತ್ತರ

ಕರ್ನಾಟಕದ ಜನ ಕೆಲವು ವರ್ಷಗಳ ಹಿಂದೆ ನೆರೆಹಾವಳಿಗೆ ತುತ್ತಾದಾಗ ಸುತ್ತೂರು ಜಗದ್ಗುರುಗಳವರ ನೇತೃತ್ವದಲ್ಲಿ ಅಲ್ಲಿಗೆ ಹೋಗಿ ನೊಂದವರಿಗೆ ಸಹಾಯಹಸ್ತ ಚಾಚಿದ ಸಂದರ್ಭದಲ್ಲಿ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು, "ಎಲ್ಲಿಯ ದಕ್ಷಿಣ ಕರ್ನಾಟಕ, ಎಲ್ಲಿಯ ಉತ್ತರ ಕರ್ನಾಟಕ? ಇದು ಕೇವಲ ರಾಜಕೀಯದವರು ಭೌಗೋಳಿಕವಾಗಿ ಹಾಕಿದ ಕೃತಕ ಗೆರೆಗಳು. ಈಗ ತಾವೆಲ್ಲ ಈ ಕೃತಕ ಭಾವಗಳನ್ನು ತೊರೆದು, ನೊಂದವರ ಕಣ್ಣೀರು ಒರೆಸಲು ಬಂದಿದ್ದೀರಿ. ಇಲ್ಲಿ ಉತ್ತರವೂ ಇಲ್ಲ, ದಕ್ಷಿಣವೂ ಇಲ್ಲ. ಎಲ್ಲ ಒಂದರೊಳಗೊಂದು ವಿಲೀನವಾಗಿ 'ಕೂಡಲ ಸಂಗಮ'ದಂತಾಗಿದೆ; ಭಾವಗಳು ಬೆರೆತಾಗ ಮನುಷ್ಯನ ಕೃತಕ ಗೆರೆಗಳೆಲ್ಲ ಕ್ಷಣಾರ್ಧದಲ್ಲಿ ಒಂದಾಗುತ್ತದೆ. ಜಗತ್ತೂ ಸಹ ಒಂದು ದಿನ ಹೀಗೆಯೇ ಎಲ್ಲ ಕೃತಕ ಗೆರೆಗಳನ್ನು ಅಳಿಸಿಹಾಕುವ ದಿನ ಬೇಗನೆ ಬರಲಿ ಎಂದು ಆಶಿಸುತ್ತೇನೆ" ಎಂದಿದ್ದರು.

ಪ್ರಾಯಶಃ ಪೂಜ್ಯರ ಈ ಮಾತು ಎಂದು ಜಗತ್ತಿನ ಕಣ್ಣು ತೆರೆಸೀತೋ ನೋಡಬೇಕು.

ಅವರ ಅಂತಿಮ ಅಭಿವಾದನ ಪತ್ರ ಮತ್ತೆ ಕೂಡ ಮತ್ತೆ ಮನನ ಮಾಡುವಂತಹದ್ದು.

ಬದುಕು ಅನುಭವಗಳ ಪ್ರವಾಹ. ಅದರ ಸಿರಿವಂತಿಕೆಯು ವಿಶ್ವಚಿಂತನೆ ಹಾಗೂ ಸತ್ಯಶೋಧನೆಗಳಿಂದ. ಅದರ ಸೌಂದರ್ಯವು ರಾಗ–ದ್ವೇಷರಹಿತವಾದ ಹಾಗೂ ಅಸೀಮಿತವಾದ ಸದ್ಭಾವದಿಂದ. ಅದನ್ನು ಸುಭಗ ಹಾಗೂ ಸಮೃದ್ಧಗೊಳಿಸುವುದೇ ಸಾಧನೆ. ಅಂತಹ ಜೀವನದ ಉಪಯುಕ್ತವಾದ ಅನುಭವಗಳನ್ನು ಆಸಕ್ತರೊಂದಿಗೆ ಹಂಚಿಕೊಳ್ಳುವುದೇ ಧರ್ಮ. ಅದು ಸ್ವ–ಪರ ನೆಮ್ಮದಿಗೆ ಕಾರಣ.

ನನ್ನದು ಆವೇಗವಿಲ್ಲದ, ಸಾವಧಾನವಿಲ್ಲದ ಸಾಮಾನ್ಯ ಬದುಕು. ಅದನ್ನು ರೂಪಿಸಿದವರು ಗುರುದೇವರು. ಅದನ್ನು ಹದಗೊಳಿಸಿದವರು ನಾಡಿನ ಪೂಜ್ಯರು, ಹಿತೈಷಿಗಳು, ಸಹ–ಹೃದಯರು, ಸಾಧಕರು ಹಾಗೂ ಶ್ರೀಸಾಮಾನ್ಯರು.

ನಿಸರ್ಗವು ಮೈಮನಸ್ಸುಗಳಿಗೆ ತಂಪನ್ನಿತ್ತಿದೆ. ತಾತ್ವಿಕ ಚಿಂತನೆಗಳು ತಿಳಿ ಬೆಳಗ ಹರಡಿವೆ. ಜಾಗತಿಕ ತತ್ತ್ವಜ್ಞಾನಿಗಳ ಮತ್ತು ವಿಜ್ಞಾನಿಗಳ ಶೋಧನೆಗಳು ದೃಷ್ಟಿಯ ಪರಿಸೇವೆಯನ್ನು ದೂರ ದೂರ ಸರಿಸಿವೆ. ಆದ್ದರಿಂದಲೇ ನಾನು ಎಲ್ಲರಿಗೂ ಎಲ್ಲದಕ್ಕೂ ಉಪಕೃತ. ಬದುಕು ಮುಗಿಯುತ್ತಿದೆ; ದೀಪ ಆರಿದಂತೆ; ತೆರೆ ಅಡಗಿದಂತೆ; ಮೇಘ ಕರಗಿದಂತೆ. ಉಳಿಯುವುದು ಬರೀ ಬಯಲು; ಮಹಾಮೌನ, ಶೂನ್ಯ ಸತ್ಯ! ಹಲವು ದಶಕಗಳ ಕಾಲ ಈ ಅದ್ಭುತ ಜಗತ್ತಿನಲ್ಲಿ ಬಾಳಿದ್ದೇನೆ; ನೋಡಿ ತಿಳಿದು ಅನುಭವಿಸಿದ್ದೇನೆ, ನನ್ನ ಬದುಕು ಕೊನೆಗೊಳ್ಳುವ ಮುಂಚೆ ಅದನ್ನು ಕೃತಜ್ಞತೆಯಿಂದ ಸ್ಮರಿಸಬೇಕು. ಅದಕ್ಕಾಗಿ ಅಭಿವಾದನ ಪತ್ರ.

ಇಂತಹ ಶತಮಾನದ ಸಂತ ಈಗ ಕೇವಲ ನೆನಪು ಮಾತ್ರ.

□

# ಮಾನವಚೈತನ್ಯದ ಅನಂತ ಸಾಧ್ಯತೆಗಳ ಅಸಾಧಾರಣ ಪ್ರತಿಮಾರೂಪ

**ಶಂಕರ್ ದೇವನೂರು**

**ಒಂ**ದು ಮಾತಿದೆ. 'ಶರಣರ ಜೀವನವನ್ನು ಮರಣದಲ್ಲಿ ನೋಡು' ಎನ್ನುವಂತೆ ಇಂದು ವಿಜಯಪುರದಲ್ಲಿ ಅಷ್ಟೊಂದು ಜನಸ್ತೋಮ ಸೇರಲು ಅವರೇನು ಆಸ್ತಿ ನೀಡಿದ್ದರೇ? ಹಣ ನೀಡಿದ್ದರೇ? ಇಲ್ಲ, ಅಲ್ಲಿ ಬಂದಿರುವ ಜನಸಾಗರ ಹಿಡಿದು ತಂದವರಲ್ಲ, ಬದಲಿಗೆ ಹುಡುಕಿ ಬಂದವರು. ತಮ್ಮ ಸರಳತೆ, ಸಹಜತೆಯಿಂದಲೇ ಕೋಟ್ಯಂತರ ಜನರನ್ನು ಸಂಪಾದಿಸಿದವರು ಶ್ರೀ ಸಿದ್ಧೇಶ್ವರ ಸ್ವಾಮೀಜಿ.

ಸುಮಾರು 25 ವರ್ಷಗಳ ಹಿಂದೆ ನಾನು ಉತ್ತರ ಕನ್ನಡ ಜಿಲ್ಲೆಯ ಕರ್ನಾಟಕ ವಿದ್ಯುತ್ ನಿಗಮದ ಕಾಳಿ ಜಲವಿದ್ಯುತ್ ಯೋಜನೆಯಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಅಲ್ಲಿನ ಸಮೀಪದಲ್ಲಿದ್ದ ಕೈಗಾ ಅಣು ವಿದ್ಯುತ್ ಸ್ಥಾವರ ಕೇಂದ್ರದಲ್ಲಿ ಸ್ನೇಹಿತರೆಲ್ಲ ಬಸವ ಜಯಂತಿಯನ್ನು ಆಚರಣೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಸಿದ್ಧೇಶ್ವರ ಸ್ವಾಮೀಜಿಯವರು ಕಾರ್ಯಕ್ರಮಕ್ಕೆ ಬಂದಿದ್ದಾಗ ನನಗೆ ಅವರನ್ನು ನೋಡುವಂತಹ ಭಾಗ್ಯ ಸಿಕ್ಕಿದ್ದು. ಅದಕ್ಕೂ ಪೂರ್ವದಲ್ಲಿ ಅವರ 'ಸಿದ್ಧಾಂತ ಶಿಖಾಮಣಿ' ಸೇರಿದಂತೆ ಎಲ್ಲ ಕೃತಿಗಳನ್ನೂ ಓದಿ ಪ್ರಭಾವಿತನಾಗಿದ್ದೆ. ಮುಂದೆ ಅವರೊಂದಿಗೆ ಒಡನಾಟ ಹೆಚ್ಚಾಗಿ ಸಾಕಷ್ಟು ವಿಷಯಗಳ ಚರ್ಚೆಗಳಾದವು. ನಂತರ ಅವರೊಂದಿಗೆ ಪ್ರವಚನಗಳನ್ನು ಮಾಡಲೂ ಕೂಡ ಆರಂಭಿಸಿದೆ. ಆ ವೇಳೆ ಅವರು 'ಶಂಕರ್ ನೀವೇ ಪ್ರವಚನ ಮಾಡಿ, ನಾನೇ ಕೇಳುತ್ತೇನೆ' ಎನ್ನುತ್ತಿದ್ದ ಮಾತುಗಳಲ್ಲಿ ನನಗೆ ಅವರ ಶಿಶುಸಹಜ ಮುಗ್ಧತೆಯ ಭಾವ ಕಾಣುತ್ತಿತ್ತು. ಅಹಂಕಾರವಿಲ್ಲ, ದರ್ಪವಿಲ್ಲ. ಎಲ್ಲವನ್ನು ತಿಳಿದು ಏನೂ ಗೊತ್ತಿಲ್ಲದ ಹಾಗೇ ಇದ್ದ ಅವರ ಅಂತಃಕರಣ ನನಗೆ ಇಷ್ಟವಾಯಿತು. ಅವರಿಂದ ನಾನು ಕಲಿತದ್ದು ವಿನಯತೆ, ಹಿತಮಿತ ಮಧುರ ಮಾತು. ಇವುಗಳನ್ನು ಕಲಿತು ಅನೇಕ ಕಾರ್ಯಕ್ರಮಗಳಲ್ಲಿ ಪ್ರವಚನ ಆರಂಭಿಸಿದೆ.

ಸಾಕಷ್ಟು ಬಾರಿ ವೇದಿಕೆಗಳಲ್ಲಿ ನನ್ನ ಪ್ರವಚನಗಳಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರು ಕೂಡ ಕಿವಿಯಾಗುತ್ತಿದ್ದರು. ನಾನು ಅವರ ಪ್ರವಚನಕ್ಕೆ ಕಿವಿಯಾಗುತ್ತಿದ್ದೆ. ಈ ವೇಳೆ ಅನೇಕ ಸಂದಿಗ್ಧ ವಿಚಾರಗಳನ್ನು ಚರ್ಚಿಸಿ ಬಗೆಹರಿಸಿಕೊಳ್ಳುತ್ತಿದ್ದೆನು. ಚರ್ಚೆಯಲ್ಲಿ ಒಮ್ಮೆ ನಾನು ಅವರನ್ನು ಕೇಳಿದೆ 'ಅಧ್ಯಾತ್ಮ ಎಂದರೆ ಏನು ಗುರುಗಳೆ?' ಎಂದಾಗ

ಬಂದ ಸರಳ ಸೂತ್ರ 'ಸರಳತೆ ಮತ್ತು ಸಹಜತೆಯ ಬದುಕಿನ ದೈನಂದಿನ ನಡೆ' ಅದೇ ಆಧ್ಯಾತ್ಮಿಕತೆ. ಅಧ್ಯಾತ್ಮವೆಂಬುದು ಬೋಧನೆಯ ವಸ್ತುವಲ್ಲ. ಅದು ಬದುಕಿನ ನಡೆ ಎಂದು ನನಗೆ ಪರಿಚಯಿಸಿದರು. 'ಬೇಗ ಜೀವಿಸಲು ಮುಂದಾದರೆ ಜೀವಿತದ ಪರಿಮಿತಿಯ ಅವಧಿ ಕಡಿಮೆಯಾಗುತ್ತದೆ. ಉತ್ತಮವಾಗಿ ಜೀವಿಸಲು ಮೊದಲು ಉತ್ತಮವಾಗಿ ಬೆಳವಣಿಗೆಯಾಗಬೇಕು' ಎಂದು ಹೇಳುತ್ತಿದ್ದರು.

ಸ್ವಾಮೀಜಿಗಳು ಸುತ್ತೂರಿಗೆ ಬಂದಾಗಲೆಲ್ಲ ನಾನು ಅವರನ್ನು ಮಠದಲ್ಲಿ ಭೇಟಿಯಾಗಿ ಅವರ ಪ್ರವಚನವನ್ನು ಕೇಳಿದಾಗ ನಮ್ಮ ಮನಸ್ಸಿನಲ್ಲಿದ್ದ ಭಾರ ದೂರವಾಗಿ ಮನಸ್ಸು ಹತ್ತಿಯಂತೆ ಹಗುರವಾಗುತ್ತಿತ್ತು. ಹಗುರವಾದಾಗ ಮನಸ್ಸು ಒಳ್ಳೆಯದನ್ನು ತುಂಬುತ್ತದೆ ಎಂಬುದು ಆ ದಾರ್ಶನಿಕರನ್ನು ನೋಡಿದಾಗ ತಿಳಿಯುತ್ತಿತ್ತು.

ಮುಗುಳು ನಗುತ್ತಿದ್ದ ಅವರ ಮುಖ ನೋಡುತ್ತಿದ್ದರೆ ಸಮಸ್ಯೆಗಳೇ ಹತ್ತಿರ ಬರುತ್ತಿರಲಿಲ್ಲ ಅನಿಸುತ್ತದೆ. ಆದ್ದರಿಂದಲೇ ಅವರನ್ನು ನೋಡಿದಾಗ ನನಗನಿಸಿದ್ದು, 'ಮಾನವಚೈತನ್ಯದ ಅನಂತ ಸಾಧ್ಯತೆಗಳ ಅಸಾಧರಣ ಪ್ರತಿಮಾರೂಪವೇ ಸಿದ್ಧೇಶ್ವರ ಸ್ವಾಮೀಜಿ.'

ಅವರೊಂದಿಗಿನ ನನ್ನ ಒಡನಾಟದಲ್ಲಿ ಗ್ರಹಿಸಿದ್ದು, ಯಾವುದೇ ಒಂದು ಜೀವಿಗೆ ಆಗುವ ದುಃಖ ಹಿಂಸೆಗಳು ಪರಿಸರದಲ್ಲಿರುವ ಎಲ್ಲ ಜೀವಿಗಳ ಮೇಲೂ ಪರಿಣಾಮ ಬೀರುತ್ತದೆ. ಆದ್ದರಿಂದ ಅವರ ದೃಷ್ಟಿಯಲ್ಲಿ ಇಡೀ ಜೀವಕುಲವನ್ನೇ ಒಂದು ಎನ್ನಬಹುದಾಗಿದೆ.

ಒಮ್ಮೆ ಅವರ ಕಾಲಿಗೆ ಪೆಟ್ಟು ಬಿದ್ದಾಗ, ಪೂಜ್ಯರೇ ಹೇಗಿದ್ದೀರ? ಎಂದು ಕೇಳಿದಾಗ 'ಯಂತ್ರ ಕೆಟ್ಟಿದೆ. ನಾನಲ್ಲ' ಎಂದು ಹಸನ್ಮುಖದಿಂದ ಉತ್ತರಿಸಿದರು. ಆಗ ನನಗೆ ಅರ್ಥವಾದದ್ದು ಅಲ್ಲಮನ ವಚನ 'ಕಂದಲು ಕರಗಿತ್ತು ಬೆಣ್ಣೆ ಉಳಿದಿತ್ತು ಗುಹೇಶ್ವರ', ಈ ದೇಹ ಅಳಿಯುತ್ತದೆ ಆದರೆ ನಾವು ಮಾಡಿದ ಸೇವೆ, ಕೊಟ್ಟ ಪ್ರೀತಿ ಉಳಿಯುತ್ತದೆ ಎಂಬ ಮಾತು ಅವರಿಂದ ಅರ್ಥವಾಯಿತು.

□

# ಮಹತ್ವಪೂರ್ಣ ಕೃತಿಗಳನ್ನು ನೀಡಿ ನಿರ್ಗಮಿಸಿದ ನಿರ್ಮೋಹಿ

**ಪ್ರೊ. ಸಿದ್ದು ಯಾಪಲಪರವಿ**

ವಿಜಯಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರಭಾವ ಮತ್ತು ವ್ಯಕ್ತಿತ್ವದ ಕುರಿತು ಎಷ್ಟೇ ಹೇಳಿದರೂ ಉತ್ತರ ಒಂದೇ: ಅವರೊಬ್ಬ ನಿರ್ಮೋಹಿ ಸಂತರು. ಬುದ್ಧನ ಧ್ಯಾನ, ಅಲ್ಲಮನ ಬಯಲು, ಓಶೋನ ಜ್ಞಾನ ಪ್ರಾಪ್ತಿ ಮಾಡಿಕೊಂಡವರು. ತಮ್ಮ ಸಾವಿರಾರು ತಾಸುಗಳ ಪ್ರವಚನಗಳನ್ನು ಅಷ್ಟೇ ಕರಾರುವಾಕ್ಕಾಗಿ ದಾಖಲಿಸಿದ ಅಪರೂಪದ ಸಾಹಿತಿಗಳೂ ಹೌದು!

ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಮತ್ತು ಗೀತೆಯ ಸಾರವನ್ನು ಆಳವಾಗಿ ಅರ್ಥೈಸಿಕೊಂಡವರು. ಭಾರತೀಯ ಕಾವ್ಯಪರಂಪರೆಯ ಘನತೆಯನ್ನು ವಿಭಿನ್ನ ದೃಷ್ಟಿಕೋನದಿಂದ, ಮಹಾಕಾವ್ಯಗಳನ್ನು ಆಸ್ವಾದಿಸಿದವರು ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು. ವೇದ, ಉಪನಿಷತ್ತು ಹಾಗೂ ಶಾಸ್ತ್ರಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ವ್ಯಾಖ್ಯಾನಿಸಿದ್ದಾರೆ. ಕನ್ನಡ, ಸಂಸ್ಕೃತ, ಮರಾಠಿ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಯ ಮೇಲೆ ಹೊಂದಿದ್ದ ಪ್ರಭುತ್ವದಿಂದಾಗಿ ಇವರ ವ್ಯಾಖ್ಯಾನ ಅತ್ಯಂತ ಅಧಿಕೃತ ಮತ್ತು ಅಧಿಕಾರಯುತ. ಕನ್ನಡ ವಚನ ಪರಂಪರೆಯ ಬಹು ದೊಡ್ಡ ಜ್ಞಾನಿ ಅಲ್ಲಮನ ವಚನಗಳನ್ನು, ವಿಶೇಷವಾಗಿ ಬೆಡಗಿನ ವಚನಗಳನ್ನು, ಸಾವಿರ ಪುಟಗಳಲ್ಲಿ ನಮ್ಮ ಕೈಗೆ ನೀಡಿದ್ದಾರೆ. ಇದೇ ಕೃತಿಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಕೂಡ ಮಾಡಿದ್ದಾರೆ.

ತತ್ವಶಾಸ್ತ್ರವನ್ನು ದರ್ಶನಶಾಸ್ತ್ರವೆಂದು ಕರೆಯುವ ಮೂಲ ಉದ್ದೇಶ ಪ್ರಕೃತಿ ಮತ್ತು ಮನುಷ್ಯನ ಅಂತರಾಳದ ದರ್ಶನದ ಅಗತ್ಯ. ಶೂನ್ಯ, ಬಯಲು, ಶಬ್ದ ಮತ್ತು ನಿಶ್ಶಬ್ದದ ವಿವರಣೆಗಾಗಿ ಬಹು ದೊಡ್ಡ ಹುಡುಕಾಟ ಸಾಗಿದ ಹೊತ್ತಿನಲ್ಲಿ ಸಿದ್ಧೇಶ್ವರ ಅಪ್ಪಗಳು ನಿರ್ವಚನದ ಹಾದಿ ಸುಗಮಗೊಳಿಸಿದರು. ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆಯುವ ಮತ್ತು ಬಯಲನು ಮಹಾಬಯಲಾಗಿ ಆಸ್ವಾದಿಸುವ ಆಧ್ಯಾತ್ಮಿಕ ಕ್ರಮವನ್ನು ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. ಸಂಸ್ಕೃತ ಮೂಲದಲ್ಲಿ ನೆಲೆಗೊಂಡ ವೇದ, ಉಪನಿಷತ್ತು ಮತ್ತು ಕನ್ನಡದ ನಿಜಗುಣ ಶಾಸ್ತ್ರವನ್ನು ಸರಳೀಕರಿಸಿದರು.

ಅಧ್ಯಾತ್ಮ ಪರಿಭಾಷೆಯಲ್ಲಿ ಅಡಗಿರುವ ಭೌತಶಾಸ್ತ್ರದ ಆಳವನ್ನು ತಮ್ಮ ಕೃತಿಗಳಲ್ಲಿ ಸಮರ್ಪಕವಾಗಿ ವ್ಯಾಖ್ಯಾನಿಸಿದ್ದಾರೆ. ಆಧ್ಯಾತ್ಮಿಕ ಶಾಸ್ತ್ರಗಳ ಸಾರವನ್ನು ಗ್ರಹಿಸುವುದೆಂದರೆ

ಅಂಗೈಯಲ್ಲಿ ಆಕಾಶವನ್ನು ಹಿಡಿಯುವ ಸಾಹಸ. ಅಲ್ಬರ್ಟ್ ಐನ್‌ಸ್ಟೈನ್ ಸಿದ್ಧಾಂತದ ವೈಜ್ಞಾನಿಕ ಅಂಶಗಳನ್ನು ದರ್ಶನಶಾಸ್ತ್ರದ ಮೂಲಕ ಪರಿಚಯಿಸುವ ಪ್ರಯತ್ನದಲ್ಲಿ ಸಫಲರಾದರು.

ವ್ಯಕ್ತಿಯ ಪಾಂಡಿತ್ಯ ಕೇವಲ ಮಾತುಗಳ ಮೂಲಕ ಗಾಳಿಯಲ್ಲಿ ಲೀನವಾಗಿ ಮಾಯವಾಗಬಾರದು ಎಂಬುದು ಅವರ ಒಳಗೆ ಅಡಗಿ ಕುಳಿತಿದ್ದ ಸಾಹಿತಿಯ ಗ್ರಹಿಕೆಗೆ ಇತ್ತು. ಮುಖ್ಯವಾಗಿ ಪ್ರಕೃತಿಯ ಶಕ್ತಿ ಮತ್ತು ಪಂಚಮಹಾಭೂತಗಳ ದೈತ್ಯ ಚೈತನ್ಯವನ್ನು ತಮ್ಮ ಕೃತಿಗಳಲ್ಲಿ ವೈಜ್ಞಾನಿಕ ದೃಷ್ಟಿಯಿಂದ ದಾಖಲಿಸಿದ್ದಾರೆ. ಅವರ ಗುರುಗಳಾದ ಪೂಜ್ಯ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಆಧ್ಯಾತ್ಮಿಕ ವಿಚಾರಗಳನ್ನು ತಮ್ಮ ಪರಮ ಗುರುಗಳಾದ ಗದುಗಿನ ಪೂಜ್ಯ ಶಿವಾನಂದ ಮಹಾಸ್ವಾಮಿಗಳ ಮೂಲಕ ಪಡೆದುಕೊಂಡಿದ್ದರು. ಅನಂತರ ಸಿದ್ಧೇಶ್ವರರು ಅದೇ ಪರಂಪರೆಯ ಅದ್ವಿತೀಯ ವಾರಸುದಾರರೆನಿಸಿಕೊಂಡರು.

ಪರಂಪರಾಗತವಾಗಿ ಬಂದ ಶಾಸ್ತ್ರಗಳು ಬರಿದೆ ಬಾಯಿಂದ ಬಾಯಿಗೆ ಸಾಗಿದರೆ ಸಾಲದು. ಅದು ಕೃತಿಗಳ ಮೂಲಕ ದಾಖಲಾದಾಗ ಮಾತ್ರ ಅಜರಾಮರವಾಗುತ್ತದೆ ಎಂಬ ಅರಿವು ಪೂಜ್ಯರಿಗೆ ಇತ್ತು. ಆದ್ದರಿಂದ ತಮ್ಮ ಬಿಡುವಿನ ಸಮಯವನ್ನು ಅತ್ಯಂತ ಸಂಯಮದಿಂದ ಬರಹಕ್ಕೆ ಮೀಸಲಿಡುತ್ತಿದ್ದರು. ಪೂಜ್ಯರ ಪಾಲಿಗೆ ಶಿವಯೋಗ ಮತ್ತು ಲಿಂಗಪೂಜೆಯೆಂದರೆ ಓದು ಮತ್ತು ಬರಹ.

ಪ್ರವಚನಕ್ಕೆ ಮೊದಲು ಮತ್ತು ನಂತರ ಯಾವ ಸಂಗತಿಗಳನ್ನು ಅಕ್ಷರಕ್ಕೆ ಇಳಿಸಬೇಕೆಂಬ ಮೈಂಡ್ ಮ್ಯಾಪಿಂಗ್ ಅವರಲ್ಲಿ ಇರುತ್ತಿತ್ತು. ಸೃಜನಶೀಲ ಬರಹ ಮತ್ತು ಆಧ್ಯಾತ್ಮಿಕ ಬರಹಗಳ ಮಧ್ಯೆ ತುಂಬಾ ವ್ಯತ್ಯಾಸವಿದೆ. ಸೃಜನಶೀಲ ಬರಹಕ್ಕೆ ಇರುವ ಸ್ವಾತಂತ್ರ್ಯ ಇಲ್ಲಿ ಇರುವುದಿಲ್ಲ. ಮೂಲ ಆಶಯಕ್ಕೆ ಅಪಚಾರವಾಗದಂತೆ ಶಾಸ್ತ್ರದ ಆಳವನ್ನು ವಿಭಿನ್ನವಾಗಿ ವಿವರಿಸುವ ಅಧಿಕಾರ ಇರುತ್ತದೆ. ಆದರೆ ಅದೇ ಅಂತಿಮವೂ ಅಲ್ಲ. ವೈಜ್ಞಾನಿಕ ಸಿದ್ಧಾಂತ ಮಾದರಿಯ ನಿರಂತರ ಸಂಶೋಧನಾತ್ಮಕ ಹುಡುಕಾಟವಷ್ಟೇ! ಮಾತಿಗಿಂತಲೂ ಗಂಭೀರವಾದ ಆಯಾಮಗಳನ್ನು ಪೂಜ್ಯರು ತಮ್ಮ ಕೃತಿಗಳಲ್ಲಿ ದಾಖಲಿಸುವುದರ ಮೂಲಕ ಯಶಸ್ವಿಯಾಗಿದ್ದಾರೆ.

ಅವರ ಪ್ರಮುಖ ಕೃತಿಗಳಾದ ಸಿದ್ಧಾಂತ ಶಿಖಾಮಣಿ, ಅಲ್ಲಮಪ್ರಭುದೇವರ ವಚನ–ನಿರ್ವಚನ, ಪ್ರವಚನಗಳ ಒಂದರಿಂದ ಹತ್ತು ಮಾಲಿಕೆಗಳು, ಬದುಕು, ಸಿದ್ಧರಾಮೇಶ್ವರ ವಚನ–ಪ್ರವಚನ, ನುಡಿಮುತ್ತುಗಳು, ಬದುಕು ಹೂದೋಟ, ಬದುಕು ಆರಾಧನೆ, ಸಾಂದರ್ಭಿಕ ಪ್ರವಚನಗಳು, ಮಾರುತಿ ಯೋಗ, ನೆಲದ ಮರೆಯ ನಿಧಾನ, ನಾನಾರು, ಭಗವಚ್ಚಿಂತನ, ಅಂತರಂಗದ ಕೃಷಿ, ಭಕ್ತಿಯೋಗ ಮತ್ತು ಜೀವನಯೋಗ, ಮನೆಯೊಡೆಯ, ದಿವ್ಯಾನುಭವ, ಗೀತಾಮಾಧುರ್ಯ, ಶಾಂತಿಪಥ, ಗುರುಪಥ, ಸಂಸ್ಕಾರ ಶಿಬಿರದ ಕೈಪಿಡಿ, ಪ್ರಭುದೇವರ ಪ್ರಭೆ, ಚನ್ನಬಸವೇಶ್ವರ ವಚನಗಳು, ನೀತಿ ಯೋಗ,

ಶಾಂತಿಯೋಗ, ಸದ್ಭಾವ-ಸತ್ಕಾರ್ಯಯೋಗ, ಪತಂಜಲಿ ಯೋಗಸೂತ್ರ, ಆನಂದಯೋಗ, ಭಾವಸಂಪದ, ಕಠೋಪನಿಷತ್ತು, ಈಶಾವಾಸ್ಯೋಪನಿಷತ್ತು, ಮುಂಡಕೋಪನಿಷತ್ತು, ಶಿವಸೂತ್ರ.

ಅಲ್ಲದೆ ಇಂಗ್ಲಿಷ್ ಕೃತಿಗಳಾದ ಟೇಲ್ಸ್, ಡಿವೋಶನಲ್ ಸೇಯಿಂಗ್ಸ್ ಆಫ್ ಬಸವೇಶ್ವರ, ನಿಜಗುಣಾಸ್ ಎಕ್ಸಪೊಜಿಶನ್ ಆಫ್ ಸ್ಪಿರಿಚ್ಯುವಲ್ ವಿಸ್ಡಂ, ರಿಫ್ಲೆಕ್ಷನ್ ಆಫ್ ದ ಡಿವೈನ್, ದಿ ಗಾಡ್ ಹಾಗೂ ಇನ್ನೂ ಹತ್ತಾರು ಕೃತಿಗಳನ್ನು ಸ್ಮರಿಸಬಹುದು.

ಹತ್ತು ತಾಸುಗಳ ಗಾಢವಾದ ಅಧ್ಯಯನ, ಎರಡು ತಾಸುಗಳ ಮೌನ ನಡಿಗೆ, ಮಿತ ಆಹಾರ ಸೇವನೆ, ಅಂತರಂಗದ ಲಿಂಗಾಂಗಸಾಮರಸ್ಯ, ಒಂದೆರಡು ತಾಸು ಮಾತ್ರ ಸಾರ್ವಜನಿಕ ದರ್ಶನ ಹಾಗೂ ಒಂದೇ ತಾಸಿನ ಪ್ರವಚನ ಇವರ ದಿನಚರಿ.

ಪ್ರವಚನಗಳು ಮುಗಿದ ಮೇಲೆ ಸುಂದರ ಪರಿಸರದ ಮಡಿಲಲ್ಲಿ ಬರಹ ಆರಂಭ. ಕೇವಲ ಬರಹದ ಸುತ್ತ ಮಾತ್ರ ಚರ್ಚೆ ಮಾಡುವ ಪ್ರಾಜ್ಞರ ಬಳಗ. ಇತರರು ಅನಗತ್ಯ ಮಾತಿಗಿಳಿಯುವ ಅಥವಾ ಚರ್ಚೆ ಮಾಡುವ ಧೈರ್ಯ ಬಾರದಂತಹ ಮಂದಹಾಸ. ಕೇವಲ ನೋಡಬೇಕು, ಇವರ ನೆಲದ ಮರೆಯ ನಿಧಾನದ ಜ್ಞಾನಾಮೃತದ ಸವಿ ಅನುಭವಿಸಬೇಕು ಎನಿಸುವ ಮೇರು ವ್ಯಕ್ತಿತ್ವ.

ಒಬ್ಬ ಶ್ರೇಷ್ಠ ಬರಹಗಾರನಿಗೆ ಅತ್ಯಗತ್ಯವಿರುವ ದಿವ್ಯ ಏಕಾಂತವನ್ನು ತಮ್ಮ ಸಾಧನೆಯ ಮೂಲಕ ಸಂಪಾದಿಸಿಕೊಳ್ಳುವ ಅಸಾಧಾರಣ ಟೈಮ್ ಮ್ಯಾನೇಜ್‌ಮೆಂಟ್. ಮಾತಿಗಿಂತಲೂ ಮೌನಕ್ಕಿರುವ ಸಾಮರ್ಥ್ಯ ಮತ್ತು ಅದನ್ನು ಬರಹಕ್ಕೆ ಇಳಿಸುವ ವಿವೇಚನೆ ಇವರ ದಿವ್ಯ ಶಕ್ತಿ. ಒಂದೇ ಬಗೆಯ ಜೀವನಶೈಲಿಯನ್ನು ನಿರಂತರ ಆರು ದಶಕ ಕಾಪಾಡಿಕೊಂಡರು.

ಸಾಹಿತ್ಯ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳ ಸಾಧನೆಗೆ ಕೊಡಮಾಡುವ ಎಲ್ಲ ಪ್ರಶಸ್ತಿ, ಪುರಸ್ಕಾರಗಳನ್ನು ನಯವಾಗಿ ತಿರಸ್ಕರಿಸಿದರು. ವಿವಾದ, ಗೊಂದಲ ಉಂಟುಮಾಡುವ ಹೇಳಿಕೆ ಮತ್ತು ಬರಹಗಳಲ್ಲಿ ನಂಬಿಕೆ ಇರಲಿಲ್ಲ. ಇವರ ಸಾಹಿತ್ಯದ ಆಡಿಯೋ, ವಿಡಿಯೋ ಮತ್ತು ಗ್ರಂಥಸ್ವರೂಪದ ದಾಖಲೆಗಳನ್ನು ಅವರ ಅಭಿಮಾನಿಗಳು, ಶಿಷ್ಯರು ಕಾಪಾಡಿರುವುದು ಬಹು ದೊಡ್ಡ ಸಾಂಸ್ಕೃತಿಕ ದಾಖಲೆ.

ಹತ್ತಾರು ದೇಶಗಳನ್ನು ಸುತ್ತುವಾಗಲೂ ಬಯಲ ಬೆರಗು, ಶಬ್ದದೊಳಗಿನ ನಿಶ್ಶಬ್ದವನ್ನು ಹುಡುಕುತ್ತಿದ್ದರು. ಅವರು ಹುಡುಕಿಟ್ಟ ನಿಧಿಯನ್ನು ಕಾಪಾಡುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ನಿರ್ಮೋಹಿ, ನಿರಹಂಕಾರಿ, ನಿರ್ಲಿಪ್ತರು ಈ ಶತಮಾನದ ಸಂತರು ಕೇವಲ ಭೌತಿಕವಾಗಿ ನಿರ್ಗಮಿಸಿದ್ದಾರೆ.

□

# ಅಮನಸ್ಕ ಸಂತ

ಡಾ. ಎಂ.ಎನ್. ನಂದೀಶ್ ಹಂಚೆ

ಅಲ್ಲಮ ಪ್ರಭುದೇವರನ್ನು 'ಅಮನಸ್ಕ ಯೋಗಿ' ಎಂದು ವಚನಕಾರರು ಸಂಬೋಧಿಸುತ್ತಾರೆ. ಅಮನಸ್ಕ ಎಂದರೆ ಮನಸ್ಸು ಇಲ್ಲದಿರುವವನು ಎಂದು ಅರ್ಥವಲ್ಲ. ಮನಸ್ಸನ್ನು ನಿರ್ವೇಗಕ್ಕೆ ಒಳಪಡಿಸಿದವನು ಎಂದರ್ಥ. ಇಂಥ ಮನಸ್ಸಿನವನಿಗೆ ರಾಗ ದ್ವೇಷಗಳಿಲ್ಲ. ಕಾಮಕ್ರೋಧಗಳಿಲ್ಲ, ಮೋಹಲೋಭಗಳಿಲ್ಲ. ಹಾಗೆಂದ ಮಾತ್ರಕ್ಕೆ ಅವನಿಗೆ ಯಾವುದರ ಬಗೆಗೂ ಏನೂ ಅಭಿಪ್ರಾಯವಿಲ್ಲವೆಂದಲ್ಲ. ಅದೊಂದು ಯೋಗದ ಸ್ಥಿತಿ. ವಚನಕಾರ ಷಣ್ಮುಖಸ್ವಾಮಿ ತನ್ನ ವಚನವೊಂದರಲ್ಲಿ "ಸಕಲ ಸಾಧನಂಗಳಿಲ್ಲದೆ ಬಹು ಪ್ರಯಾಸವಿಲ್ಲದೆ, ಅತಿ ಸುಲಭದಲ್ಲಿಯೇ ಜೀವನ್ಮುಕ್ತಿಯನೀವ ಅಮನಸ್ಕ ಯೋಗವೆಂತೆನೆ, ಅಂತರಂಗದ ಮನಮಂ ನೆನೆಯದಂತೆ ಮುದ್ರಿಸಿ ನಿರ್ಲಕ್ಷ್ಯದೊಳ್ನಿಲುವುದೆ ಅಮನಸ್ಕ ರಾಜಯೋಗ ನೋಡಾ ಅಖಂಡೇಶ್ವರಾ." ಈ ಸ್ಥಿತಿಯನ್ನು ತಲುಪಿದವನು ಇತರರ ಅಂತರಂಗವನ್ನಷ್ಟೆ ಅಲ್ಲ, ತನ್ನ ಅಂತರಂಗದ ಯಾವ ನೆನಹೂ ಘನವಾಗಿ ಇಲ್ಲದಂತೆ ಮಿಕ್ಕು ಮೀರಿ ನಿಲ್ಲುವ ಸ್ಥಿತಿಯನ್ನು ಹೊಂದುತ್ತಾನೆ. ಇದು ಸುಲಭಸಾಧ್ಯವಲ್ಲ. ಈ ಎತ್ತರವನ್ನು ಏರಿದವನು ಅಲ್ಲಮ ಪ್ರಭುದೇವ ಮಾತ್ರ. ಆದುದರಿಂದಲೇ ಆತ ಗೋರಕ್ಷಕನಂತೆ ಘನಗೊಂಡವನಲ್ಲ. ಹಠಯೋಗದಿಂದ ತನ್ನ ಶರೀರವನ್ನು ವಜ್ರದಂತೆ ಕಠಿಣಗೊಳಿಸಿ ಕೊಂಡು ಯಾವ ಲೋಹವೂ, ವಸ್ತುವೂ ತನ್ನನ್ನು ಛೇದಿಸದಂತೆ ಮಾಡಿಕೊಂಡವನ್ನಲ್ಲ. ಅಥವಾ ಸೊನ್ನಲಿಗೆ ಸಿದ್ಧರಾಮನಂತೆ ಲೌಕಿಕದ ಕ್ರಿಯೆಯಲ್ಲಿಯೇ ನೆಲೆ ನಿಂತವನ್ನಲ್ಲ. ಆತ ಬರಿಯ ಬಯಲು, ಬರಿಯ ಶೂನ್ಯ. ಕಣ್ಣಿಗೆ ಕಂಡರೂ ಮುಟ್ಟಲಾರದವನು. ಲೋಕದೊಳಗಿದ್ದರೂ ಲೋಕರಹಿತನು.

ನಾವಾರೂ ಹನ್ನೆರಡನೆಯ ಶತಮಾನದವರಲ್ಲ. ಅಲ್ಲಮನನ್ನು ಕಣ್ಣಿನಿಂದ ಕಂಡವರಲ್ಲ. ಆತನ ಬಗೆಗೆ ತಿಳಿದವರಷ್ಟೆ, ಅನುಭವಿಸಿದವರಲ್ಲ. ಆ ಬಗೆಯ ದಿವ್ಯ ಅನುಭವವನ್ನು ಈ ಕಾಲದಲ್ಲಿ ದೊರಕಿಸಿದವರು ವಿಜಯಪುರದ ಜ್ಞಾನಯೋಗಾಶ್ರಮದ ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳವರು. 2014ರಲ್ಲಿ ಪೂಜ್ಯರು ತಮ್ಮ ಅಂತಿಮ ವಿಧಿವಿಧಾನಗಳ ಬಗ್ಗೆ ಬರೆದ ಮರಣಶಾಸನವನ್ನು ಓದಿದವರಿಗೆ ಮೇಲಿನ ಮಾತಿನ ವಿವರಗಳು ಸ್ವಯಂವೇದ್ಯವಾಗುತ್ತವೆ. ಅದನ್ನು ನಾವು ವಿಧಿವಿಧಾನವೆನ್ನುವುದು ಸೂಕ್ತವಾಗಲಾರದು.

ಏಕೆಂದರೆ ಅದರಲ್ಲಿ ಯಾವ ಪರಂಪರಾಗತವಾದ ವಿದಿ–ವಿಧಾನಗಳಿರಲ್ಲಿಲ್ಲ. ಅದು ಕೇವಲ ಬಯಲು ಮಾತ್ರ.

ಅವರ ಮಗುವಿನಂತ ಮುಗ್ಧ ಮನಸ್ಸು ಹೂವಿನಂತೆ ಸುಗಂಧಯುಕ್ತವಾಗಿತ್ತು. ಸದಾ ಹಸನ್ಮುಖಿಯಾಗಿತ್ತು. ಒಮ್ಮೆ ನಾನು ಬಾಗಲಕೋಟೆಯಲ್ಲಿ ಅವರನ್ನು ಕಾರ್ಯ ನಿಮಿತ್ತ ಕಾಣಲೆಂದು ಹೋಗಿದ್ದೆ. ಅಷ್ಟರಲ್ಲಾಗಲೇ ಅವರು ಈ ಉಯಿಲು ಬರೆದಿದ್ದರು. ಅದು ಅವರ ಆಪ್ತೇಷ್ಟರಿಗೆ ಮಾತ್ರ ತಿಳಿದಿತ್ತು. ನನ್ನ ಪೂರ್ವಸುಕೃತದಿಂದ ಅವರನ್ನು ಹತ್ತಿರದಿಂದ ಅರಿಯುವ ಒಡನಾಡುವ ಅವಕಾಶ ನನಗೆ ಲಭ್ಯವಾಗಿದ್ದರಿಂದ, ಒಂದು ದಿನ ಸಂಜೆ, ಅವರ ಶಿಷ್ಯರು ಹಾಗೂ ನಾನು ಶ್ರೀಗಳವರ ಸುತ್ತ ಕುಳಿತು ಹರಟುತಿದ್ದೆವು. ಹಾಗೆ ನಾವು ನಮ್ಮ ಪರಿಮಿತಿಗೆ ಅನುಗುಣವಾಗಿ ಮಾತನಾಡುವುದನ್ನೂ ಅವರು ಸಹಜವೆಂಬಂತೆ ಸ್ವೀಕರಿಸುತ್ತಿದ್ದರು. ನಡುವೆ ಪೂಜ್ಯರಿಗೆ ಆಪ್ತರಾಗಿದ್ದ ಆಲಮಟ್ಟಿಯ ಶ್ರೀಗಳು ಪೂಜ್ಯರು ಮಾಡಿರುವ ಉಯಿಲಿನ ವಿಚಾರವನ್ನು ತೆಗೆದರು. ನಾನು 'ಹೌದೆ ಬುದ್ಧಿ, ಅದರ ಅಗತ್ಯವಿತ್ತೆ' ಎಂದು ಕೇಳಿದೆ. ಅದಕ್ಕೆ ಅವರೇನೂ ಪ್ರತಿಕ್ರಿಯಿಸಲಿಲ್ಲ. ಪೂಜ್ಯರ ಬಗ್ಗೆ ಅಸಾಧಾರಣ ಗೌರವ ಅಭಿಮಾನ ಇಟ್ಟುಕೊಂಡಿದ್ದ, ಈಗ ಶಿವಾನಂದ ಮಠದ ಜಗದ್ಗುರುಗಳಾಗಿರುವ ಶ್ರೀ ಶಿವಾನಂದ ಸ್ವಾಮಿಗಳು (ಆಗಿನ ಕೈವಲ್ಯಾನಂದ ಶ್ರೀಗಳು) ಉತ್ತರವಿತ್ತು, "ಹೌದು ಸಾರ್, ಗುರುಗಳು ಉಯಿಲು ಮಾಡಿದ್ದಾರೆ. ಅದರಲ್ಲಿ ತಮ್ಮ ಶರೀರವನ್ನು ಅಗ್ನಿಯಲ್ಲಿ ಸುಡಬೇಕು ಎಂದು, ಗದ್ದುಗೆ ನಿರ್ಮಿಸಬಾರದೆಂದು ಬರೆದಿದ್ದಾರೆ" ಎಂದು ತಿಳಿಸಿದರು. ನನ್ನ ಅಲ್ಪಜ್ಞಾನದಿಂದ ನಾನು "ಅಲ್ಲಾ, ನಮ್ಮಲ್ಲಿ ಸಮಾಧಿ ಮಾಡುವುದು ತಾನೇ ಪದ್ಧತಿ" ಎಂದೆ. ಅದಕ್ಕೆ ಆಲಮಟ್ಟಿಯ ಶ್ರೀಗಳು "ಹಾಗೆ ಮಾಡಬಾರದೆಂದೇ ಸ್ವಾಮಿಗಳು ಹಾಗೆ ಉಯಿಲು ಬರೆದಿರುವುದು" ಎಂದರು. ಆ ತಕ್ಷಣಕ್ಕೆ ಪ್ರತಿಕ್ರಿಯಿಸಿದ ಕೈವಲ್ಯಾನಂದರು, "ಬುದ್ಧಿಯವರು ಬಹಳ ತಿಳಿದವರು, ಸಮಾಧಿ ಮಾಡಿದರೆ ಸಮಾಧಿ ಮಾಡಿದ ಕಡೆ ಮಾತ್ರ ಗದ್ದುಗೆ ಮಾಡಬೇಕಾಗುತ್ತದೆ. ಸುಟ್ಟ ಆ ಬೂದಿಯನ್ನು ಗಾಳಿಯಲ್ಲಿ ತೇಲಿಬಿಟ್ಟರೆ ಅದು ಎಲ್ಲಿ ಹೋಗುತ್ತದೋ ಅಲ್ಲೆಲ್ಲ ಗದ್ದುಗೆ ಮಾಡಬಹುದು ಎಂದರು. ನಮ್ಮ ಈ ಸಂಭಾಷಣೆಯ ಬಗ್ಗೆ ಯಾವ ಭಾವವನ್ನೂ ಪ್ರಕಟಿಸದೆ ತಮ್ಮ ಪಾಡಿಗೆ ತಾವಿದ್ದ ಪೂಜ್ಯ ಸಿದ್ಧೇಶ್ವರ ಸ್ವಾಮಿಗಳವರು ಒಮ್ಮೆಲೆ ಜೋರಾಗಿ ನಗಲಾರಂಭಿಸಿದರು. 'ನಮಗೆ ಈ ಯೋಚನೆಯೇ ಹೊಳೆದಿರಲಿಲ್ಲ, ನಮ್ಮ ಸ್ವಾಮಿಗಳು ಬಹಳ ಶಾಣ್ಯಾರಿದ್ದಾರೆ' ಎಂದು ತಲೆದೂಗುತ್ತ "ಮತ್ತೆ ಹಾಗೆಲ್ಲಾದರೂ ಮಾಡಿಬಿಟ್ಟೀರಿ" ಎಂದರು. ಪೂಜ್ಯ ಕೈವಲ್ಯಾನಂದರು ಹೇಳಿದ್ದು ಕೇವಲ ಹುಡುಗಾಟಕ್ಕೆ ಎಂಬುದು ಅಲ್ಲಿದ್ದವರಿಗೆಲ್ಲ ತಿಳಿದಿತ್ತು. ಆದರೆ. ನಮ್ಮ ವಿಪರೀತ ಬುದ್ಧಿಮತ್ತೆಯ ಬಗ್ಗೆ ಅವರ ನಗುವಷ್ಟೇ ಉತ್ತರವಾಗಿತ್ತು.

ದೇಹದ ಬಗ್ಗೆ ನಿರ್ಲಕ್ಷ್ಯದಿಂದಿದ್ದ ಪೂಜ್ಯರು ಇಲ್ಲ ಜೀವಿಗಳ ಬಗ್ಗೆಯೂ ಅಪಾರ

ಅನುಕಂಪೆಯನ್ನು ಹೊಂದಿದ್ದರು. 2010 ರಲ್ಲಿ ಆಗ ಸಚಿವರಾಗಿದ್ದ ದಿವಂಗತ ಎಚ್.ಎಸ್. ಮಹಾದೇವ ಪ್ರಸಾದ್ ಅವರ ಒತ್ತಾಯದ ಮೇರೆಗೆ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳನ್ನು ಒಪ್ಪಿಸಿ ಗುಂಡ್ಲುಪೇಟೆಯಲ್ಲಿ ಒಂದು ತಿಂಗಳುಗಳ ಕಾಲ ಪ್ರವಚನ ಮಾಡಲು ಒಪ್ಪಿಸಿದರು. ಅವರ ಪ್ರವಚನ ಹಾಗೂ ವಾಸ್ತವ್ಯಕ್ಕೆ ಜೆಎಸ್‌ಎಸ್ ಕಾಲೇಜು ಹಾಗೂ ವಿದ್ಯಾರ್ಥಿ ನಿಲಯದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಆಗ ನಾನು ಅಲ್ಲಿ ಅಧ್ಯಾಪಕನಾಗಿದ್ದೆ. ಜಗದ್ಗುರುಗಳವರ ಸೂಚನೆಯ ಮೇರೆಗೆ ನಮ್ಮ ಅಧ್ಯಾಪಕರಲ್ಲಿ ಹಲವರು ಅವರ ಜೊತೆ ಇರುವ ಅವಕಾಶವಾಯಿತು. ಪೂಜ್ಯರು ಪ್ರತಿ ನಿತ್ಯ ಎರಡು ಬಾರಿ ವಾಯುವಿಹಾರಕ್ಕೆ ತೆರಳುತ್ತಿದ್ದರು. ಅಲ್ಲಿಗೆ ಬಂದು ವಾಸ್ತವ್ಯ ಹೂಡಿದ ಮೊದಲ ದಿನವೇ ನಮಗೆ ಕರೆ ಬಂದಿತು. ತಾವು ವಾಕಿಂಗ್ ಹೋಗುವ ವಿದ್ಯಾರ್ಥಿ ನಿಲಯದ ಮುಂಭಾಗದ ಬಯಲಿನಲ್ಲಿ ವಿಪರೀತ ಕಟ್ಟಿರುವೆಗಳಿವೆಯಲ್ಲ ಎಂದರು. ಅಂದು ಅವರು ತಮ್ಮ ಕೋಣೆಯಲ್ಲಿಯೇ ಉಳಿದರು.  ಈ ಸಂಗತಿಯನ್ನು ನಾವು ಮಹದೇವಪ್ರಸಾದ್ ಅವರಿಗೆ ತಿಳಿಸಿದೆವು. ಅವರು ತಕ್ಷಣವೇ ಗುಂಡ್ಲುಪೇಟೆಯ ಪಟ್ಟಣ ಪಂಚಾಯ್ತಿಗೆ ಅಧಿಕಾರಿಗಳಿಗೆ ಆದೇಶಿಸಿ ಅಂದು ಸಂಜೆಯೇ ವಿದ್ಯಾರ್ಥಿನಿಲಯದ ಬಯಲಿನಲ್ಲೆಲ್ಲ ಡಿಡಿಟಿ ಸಿಂಪಡಿಸಲಾಯಿತು. ಕಟ್ಟಿರುವೆಗಳೆಲ್ಲ ನಾಶವಾದವು. ನಮಗೆ ಬಹಳ ಆನಂದ. ಪೂಜ್ಯರು ನಾಳೆ ಆರಾಮವಾಗಿ ಬಯಲಿನಲ್ಲಿ ವಾಕಿಂಗ್ ಮಾಡಬಹುದು ಎಂದು.  ಮಾರನೆಯ ದಿನ ಮುಂಜಾನೆ ಎದ್ದ ಪೂಜ್ಯ ಸಿದ್ಧೇಶ್ವರರು ವಿದ್ಯಾರ್ಥಿನಿಲಯದ ಮೆಟ್ಟಿಲುಗಳ ಮೇಲೆ ಧ್ಯಾನಸ್ಥ ಸ್ಥಿತಿಯಲ್ಲಿ ನಿಂತಿದ್ದರು. ಬೆಳಗ್ಗೆ ಸರಿಯಾದ ಸಮಯಕ್ಕೆ ಏಳಲಾರದೆ, ಬಲವಂತಕ್ಕೆ ಎದ್ದು ಬಂದ ನಾವು, ಪೂಜ್ಯರಿಗೆ ನಮಸ್ಕರಿಸಿ, 'ಬುದ್ಧಿ, ವಾಕಿಂಗ್' ಎಂದೆ.  ಬಯಲಿನ ಕಡೆ ಕೈತೋರಿ 'ಏನಿದೆಲ್ಲ' ಎಂದರು.  ನಾನು ಉತ್ಸಾಹದಿಂದ ಎಲ್ಲವನ್ನೂ ವಿವರಿಸಿ, 'ಬುದ್ಧಿ ಇನ್ನು ಚಿಂತೆಯಿಲ್ಲ ಎಲ್ಲ ಇರುವೆಗಳು ಸತ್ತಿವೆ ಎಂದೆ. ದುಃಖಭಾವದಿಂದ ಪೂಜ್ಯರು, 'ನಮ್ಮ ಮಾತನ್ನು ತಪ್ಪು ತಿಳಿದು ಎಂಥ ಅಕಾರ್ಯ ಮಾಡಿದಿರಿ! ಎಷ್ಟು ಜೀವಗಳನ್ನು ಕೊಂದಿರಿ. ನಮಗೆ ಜೀವ ಕೊಡಲು ಸಾಧ್ಯವಿಲ್ಲದಿರುವಾಗ ಕೊಲ್ಲುವ ಅಧಿಕಾರವೂ ಇರುವುದಿಲ್ಲ" ಎಂದು ಹೇಳಿ ವಾಕಿಂಗ್ ಮಾಡದೆ ತಮ್ಮ ಕೋಣೆಗೆ ತೆರಳಿದರು. ಅಂದಿನಿಂದ ಅವರು ಅಲ್ಲಿ ಇದ್ದಷ್ಟು ದಿನ ಎಂದೂ ಬಯಲಿನಲ್ಲಿ ವಾಕಿಂಗ್ ಮಾಡಲಿಲ್ಲ. ಆದರೆ ಅಧ್ಯಾಪಕನಾಗಿದ್ದ ನನಗೆ ಅವರ ಮಾತನ್ನು ಸರಿಯಾಗಿ ಅರಿತುಕೊಳ್ಳಲು ಅರಿಯಲು ಆಗಲೇ ಇಲ್ಲ ಎನ್ನುವ ಕೊರಗು ಮಾತ್ರ ಸದಾ ಕಾಡುತ್ತಲೇ ಇತ್ತು.

□

# ಬೆರಳಿನ ಬರವಣಿಗೆಗೆ ಬದುಕೇ ಸಾಕ್ಷಿಯಾದಾಗ...

**ಎನ್. ನಾಗಶ್ರೀ ತ್ಯಾಗರಾಜ್**

ಬೇಕು ಬೇಡಂಗಳಿಲ್ಲ, ಕೋಪ ತಾಪಗಳಿಲ್ಲ
ಹುಸಿ ಮಾತು ಬಿರುನುಡಿಗಳೊಂದಿಲ್ಲ ಮನದಿ
ತನ್ನದೆನ್ನುವುದೆಲ್ಲ ಮರೆತು ನಿಂತವನೀತ
ಸಂತನೆಂದರೆ ಯೋಗಿ – ಮುದ್ದುರಾಮ

ಜಗತ್ತಿನ ಈ ಬದುಕನ್ನು ಗಮನಿಸಿದರೆ, ಈ ಮೇಲಿನ ಪದ್ಯದ ಪದಗಳು ವ್ಯತಿರಿಕ್ತವೇನೋ ಎಂದೆನಿಸುತ್ತದೆ. ಇಂದಿನ ಕಾಲದಲ್ಲಿ ಇವೆಲ್ಲಾ ಸಾಧ್ಯವಾ? ಎಂಬ ದೊಡ್ಡ ಪ್ರಶ್ನೆ ಮೂಡುವುದು ಸಹಜ. ಇಷ್ಟರಮಟ್ಟಿಗೆ ಈ ಪ್ರಪಂಚದ ಆಗುಹೋಗುಗಳು ನಡೆಯುತ್ತಿವೆ. ಒಳ್ಳೆಯತನ–ಕೆಟ್ಟತನ ಎಂಬುದೆಲ್ಲಾ ಈ ಜಗತ್ತಿನಲ್ಲಿ ಇಲ್ಲ. ನಾವು ಒಂದು ವಿಷಯವನ್ನು ಹಾಗೂ ಒಂದು ವಸ್ತುವನ್ನು ಹೇಗೆ ನೋಡುತ್ತೇವೆ ಎಂಬುದರ ಮೇಲೆ ಈ ನಿರ್ಧಾರಗಳು ಮೂಡುತ್ತವೆ. ಆದರೂ ಜಗತ್ತಿನ ದೃಷ್ಟಿಯಿಂದ ಸಮಾಜಕ್ಕೆ ಹಾಗೂ ಸಮಷ್ಟಿಪ್ರಜ್ಞೆಗೆ ಯಾವುದು ಒಳಿತಾಗುತ್ತದೆಯೋ, ಅದನ್ನು ಒಳ್ಳೆಯತನ ಎಂತಲೂ, ಸಮಾಜ ಘಾತುಕ ಗುಣ–ಸ್ವಭಾವಗಳನ್ನು ಕೆಟ್ಟತನ ಎಂತಲೂ ನಾವು ನಂಬಿಸಿದ್ದೇವೆ. ಅದು ಸತ್ಯ ಕೂಡಾ ಹೌದು. ಏನೇ ಆದರೂ, ಇಂದಿನ ಜಗತ್ತಿಗೆ ಒಳ್ಳೆಯತನವೆಂಬುದು ಸೂಕ್ತವಾದುದಲ್ಲ, ಸ್ವಲ್ಪವಾದರೂ ಕೆಟ್ಟವರಾಗಿರಬೇಕು ಎಂಬುದನ್ನು ಹಲವರು ಹೇಳುತ್ತಲೇ ಇರುತ್ತಾರೆ. ಈ ಒಳ್ಳೆಯ ಹಾಗೂ ಕೆಟ್ಟ ನಡವಳಿಕೆಗಳಿಗೆ ಕಾಲದೇಶಗಳ ಪರಿಧಿ ಇಲ್ಲ. ಕಾಲ ಯಾವುದೇ ಇರಲಿ, ಕೊನೆಗೆ ಒಳ್ಳೆಯತನಕ್ಕೇ ವಿಜಯ ಸಿಕ್ಕುವುದು. ಅದನ್ನರಿಯಲು ಕೊಂಚ ಕಾಲ ಬೇಕು ಮತ್ತು ಈ ಕಾಲಕ್ಕಾಗಿ ಕಾಯಬೇಕು. ಸಮಾಜಘಾತುಕವಾಗಿರುವ ಕೆಟ್ಟತನಗಳಿಗೆ ಎಂದಿದ್ದರೂ ಅಪಜಯ.

ಒಬ್ಬ ಮನುಷ್ಯ ಒಳ್ಳೆಯ ಹಾದಿಗೆ ಬಂದನೆಂದರೆ, ಅದೇ ಜಯದ ಸಂಕೇತದಂತೆ. ಆತ ತನ್ನದು, ತನಗಾಗಿ, ತನಗೋಸ್ಕರ ಎಂದು ಬದುಕುವುದಕ್ಕಿಂತ ಮತ್ತೊಬ್ಬರಿಗೆ ಒಳಿತಾಗಲಿ, ಮತ್ತೊಬ್ಬರಿಗೆ ಶುಭವಾಗಲಿ, ಮತ್ತೊಬ್ಬರಿಗೆ ಗೆಲುವಾಗಲಿ ಎಂದೇ ಬಯಸುತ್ತಿರುತ್ತಾನೆ. ಹೀಗೆ ಸಮರ್ಪಣಾಭಾವದಿಂದಷ್ಟೇ ಮನಸ್ಸು ಶುದ್ಧಿಯಾಗುವುದು. ಶುದ್ಧವಾದ ಮನಸ್ಸಿನಿಂದಷ್ಟೇ ಶುದ್ಧ ಮಾತುಗಳು ಹೊರಹೊಮ್ಮುವುದು. ಅಂತಹ ಶುದ್ಧ ಮಾತುಗಳು ಎದುರಿಗಿರುವ ವ್ಯಕ್ತಿಯೊಳಗಿನ ವ್ಯಕ್ತಿತ್ವವನ್ನು ಅರಳಿಸುವಂತೆ

ಇರುತ್ತದೆಯೇ ಹೊರತು ಕೆರಳಿಸುವುದಿಲ್ಲ. ಮಾತುಗಳಲ್ಲಿ ಅನೇಕ ರೀತಿಯ ಮಾತುಗಳಿವೆ. ಸತ್ಯ ಮಾತು, ನೇರ ಮಾತು, ಸಾಂತ್ವನದ ಮಾತು, ಚೇತೋಹಾರಿ ಮಾತು, ಉತ್ಸಾಹದ ಮಾತು, ಧೈರ್ಯದ ಮಾತು, ಹಸಿ ಮಾತು, ಹುಸಿ ಮಾತು ಪೂಜ್ಯ ಮಾತು, ಪೊಳ್ಳು ಮಾತು, ಜೊಳ್ಳು ಮಾತು, ಸುಳ್ಳು ಮಾತು – ಹೀಗೆ ಪಟ್ಟಿ ಮಾಡುತ್ತಾ ಹೋದರೆ ಲೇಖನಕ್ಕಿಂತ ಪಟ್ಟಿಯೇ ಉದ್ದವಾದೀತು. ಈ ಪದಗಳಲ್ಲೆಲಾ, ಸ್ವಚ್ಛ ಮನಸ್ಸಿನ ಸುಂದರ ಬದುಕಿಗೆ ಹುಸಿಮಾತು, ಬಿರುನುಡಿಗಳ ಅಗತ್ಯವಿಲ್ಲವೆಂಬುದನ್ನು ಕವಿಯು ಪದ್ಯದ ಮೂಲಕ ಸ್ಪಷ್ಟಪಡಿಸಿದ್ದಾರೆ.

ಅವರಿದ್ದಾಗ ಇವರ ಬಗ್ಗೆ, ಇವರಿದ್ದಾಗ ಅವರ ಬಗ್ಗೆ ಹೇಳಿ ಹೇಳಿ, ಇಬ್ಬರೂ ಇದ್ದಾಗ ಮೌನ ವಹಿಸುವಂತಹ ವ್ಯಕ್ತಿಗಳಿದ್ದಾರೆ. ಇವು ಹುಸಿಮಾತುಗಳ ಉದಾಹರಣೆ. ಇದೊಂದು ರೀತಿ ಜಾಣ ನಡೆ. ಆದರೆ ಬಿರುನುಡಿ ಎಂಬುದಿದೆಯಲ್ಲಾ, ಸ್ವಲ್ಪ ಕಷ್ಟಕರ. ಎಷ್ಟೋ ಮಂದಿಯ ಸ್ನೇಹಸಂಬಂಧಗಳು ಬಿರುಕು ಬಿಟ್ಟಿರುವುದು ಈ ಬಿರುನುಡಿಗಳಿಂದಲೇ. ಒಳ್ಳೆಯ ಗುಣದವರು ಎಂದೆನಿಸಿಕೊಂಡವರೂ ಕೂಡಾ, ಅದೇನೋ ತನ್ನ ಸುತ್ತಲೂ ಜನರಿದ್ದಾರೆ ಎಂದು ತಿಳಿದ ಕೂಡಲೇ, ತನ್ನ ಕೆಳಗಿನವರ ಮೇಲೆ ಬಿರುನುಡಿಗಳಿಂದ ಚಾಟಿ ಬೀಸುವುದು. ಆ ಮೂಲಕ ತಾನೇನೋ ದೊಡ್ಡವ ಎಂಬ ಭಾವ ತಾಳುತ್ತಾ, "ಇವರೆಲ್ಲಾ ದಂಡಪಿಂಡಗಳು. ಹೇಳಿದ್ದು ಸರಿಯಾಗಿ ಕೇಳಲ್ಲ, ಹೇಳಿದ್ದು ಸರಿಯಾಗಿ ಮಾಡಲ್ಲ" ಎಂದು ಬಯ್ಯುವುದು. ಆ ನಂತರ ಸುತ್ತಲಿದ್ದ ಜನ ಖಾಲಿಯಾಗಿ ಕೊನೆಗೆ ಇವರಿಬ್ಬರೇ ಉಳಿದುಕೊಂಡಾಗ, "ಅಯ್ಯೋ! ನಿಮ್ಮಿಂದಲೇ ಈ ಕಾರ್ಯವೆಲ್ಲಾ ಆದದ್ದು. ನೀವಿಲ್ಲದಿರೆ ಏನೂ ಸಾಧ್ಯವಿಲ್ಲ" ಎಂದು ಹೊಗಳುವುದು. ಜನಗಳ ನಡುವೆ ಇದ್ದಾಗ ಕೋಪದಲ್ಲಿ ಬಾಯಿಗೆ ಬಂದ ಹಾಗೆ ಬಯ್ದು, ಈಗ ಯಾರೂ ಇಲ್ಲದಾಗ ಹೊಗಳಿ ಉಪ್ಪರಿಗೆ ಏರಿಸಿದರೆ ಅದು ಹುಸಿಮಾತು, ಬಿರುನುಡಿಗಳಾಗುವುದಿಲ್ಲವೆ? ಹೀಗೆ ಅನಿಸಿಕೊಂಡವರು ಮುಂದೆ ಇವರ ಜೊತೆ ಕಾರ್ಯ ನಿರ್ವಹಿಸಲು ಒಪ್ಪುವರೆ? ಖಂಡಿತಾ ಇಲ್ಲ. ಅದೊಂದು ಮಾತು, ನಮ್ಮ ಸಮಾಜದಲ್ಲಿದೆ. ನಾಲ್ಕು ಜನರ ಮುಂದೆ ಇದ್ದಾಗ ಹೊಗಳಬೇಕು, ಒಬ್ಬರೇ ಇದ್ದಾಗ ಬಯ್ದು ಬುದ್ಧಿ ಹೇಳಬೇಕು. ಹಾಗಾದಾಗ ಮಾತ್ರ ಹೇಳುವವರ ಹಾಗೂ ಕೇಳುವವರ ವ್ಯಕ್ತಿತ್ವ ಎರಡೂ ಉಜ್ವಲವಾಗಿ ಬೆಳಗುತ್ತದೆ. ವ್ಯಕ್ತಿತ್ವವೇನೋ ಸರಿ. ಆದರೆ ಈ ಬೇಕು–ಬೇಡಗಳಿಲ್ಲದ ಬದುಕನ್ನು ಯೋಚಿಸುವುದಾದರೂ ಹೇಗೆ? ಗರಿಷ್ಠವಾದುದು ಬೇಕು, ಕನಿಷ್ಠವಾದುದು ಬೇಡ ಎಂಬುದೇ ಎಲ್ಲರ ಮಂತ್ರವಾಗಿರುವ ಈ ಆಧುನಿಕ ಪ್ರಪಂಚದಲ್ಲಿ ಅದನ್ನು ಮೀರಿ ನಿಂತವರಿದ್ದಾರೆಯೇ? 'ದೊರೆತದು ಹಸಾದವೆಂದುಣು' ಎಂಬ ಡಿವಿಜಿಯವರ ಪದ ಓದಿದರೂ, ತಿಳಿದರೂ, ಹೇಳಿದರೂ ಅಂತೆಯೇ ನಡೆಯಲು ಮಾತ್ರ ಕುಂಟುಹೆಜ್ಜೆಯೇ ನಮ್ಮದಾಗಿರುತ್ತದೆ. ಬೇಕು–ಬೇಡಗಳಾಚೆಗಿನ ಬದುಕು ಶಾಂತ ಎಂಬುದನ್ನು ಜಗತ್ತಿನ ಹಲವಾರು ದಾರ್ಶನಿಕರು ಬದುಕಿ ಬಾಳಿ ತೋರಿಸಿದ್ದಾರೆ.

ಆದರೂ ನಾವುಗಳು ಮಾತ್ರ ಈ ಕಾರ್ಯಗಳೆಲ್ಲಾ ನಾನಿದ್ದರಷ್ಟೇ ಆಗೋದು, ನಾನು ನಿಂತರೆ ಮಾತ್ರ ನಡೆಯೋದು. ನಾನು ಕೊಂಚ ಬೇರೆ ಕಡೆ ಇದ್ದರೆ ಇಲ್ಲಿ ಎಲ್ಲವೂ ಅಯೋಮಯ ಎಂಬ ಭ್ರಮಾಲೋಕದಲ್ಲಿಯೇ ಇರುತ್ತೇವೆ. ಈ ಪ್ರಪಂಚಕ್ಕೆ ಏನಿರಬೇಕು, ಏನಿರಬಾರದು ಎಂಬುದು ತಿಳಿದಿದೆ. ನಾವೆಲ್ಲಾ ನಿಮಿತ್ತಮಾತ್ರರು. ನಾವಿರಲಿ ನಾವಿರದಿರಲಿ ಪ್ರಪಂಚ ನಿಶ್ಚಿಂತೆಯಿಂದ ಎಂದಿನಂತೆ ನಡೆಯುತ್ತದೆ. ಬರುವಾಗ ಏನೂ ತರಲಿಲ್ಲ, ಹೋಗುವಾಗ ಏನೂ ಹೊತ್ತೊಯ್ಯಲಿಲ್ಲ, ನಡುವಿರುವ ನಾಲ್ಕು ದಿನಗಳಲ್ಲಿ ನಾವು ಭಗವಂತ ನೀಡಿದ ಆಜ್ಞೆಯನ್ನು ಪಾಲಿಸುವ ಆಜ್ಞಾಪಾಲಕರಾಗಬೇಕೇ ಹೊರತು ಆಜ್ಞಾಬೋಧಕರಾಗಬಾರದು. ಆಗ ಬೇಕು–ಬೇಡಗಳ ಮೀರಿ ನಿಲ್ಲಲು ಸಾಧ್ಯ. ಈ ಬೇಕು–ಬೇಡಗಳ ಪರಿಧಿಯನ್ನು ನಾವು ಮೀರಿದಾಗ ಮಾತ್ರ ಕೋಪ–ತಾಪಗಳು ಒಡಮೂಡುವುದಿಲ್ಲ. ಇಲ್ಲದಿರೆ ಘಳಿಗೆ–ಘಳಿಗೆಗೂ ಕೋಪ ವ್ಯಕ್ತಪಡಿಸುತ್ತಾ ಸಾಗುತ್ತೇವೆ. ಯಾವುದೇ ಸಂದರ್ಭದಲ್ಲೂ, ಯಾವ ವ್ಯಕ್ತಿಯ ಮೇಲೆಯೇ ಆಗಲಿ ಕೋಪದಿಂದ ಮಾತನಾಡದೆ, ಶಾಂತರೀತಿಯಿಂದ ವರ್ತಿಸುವವನೇ ನಿಜವಾದ ಸಂತ. ಆತನೇ ಯೋಗಿ ಎಂಬ ಮಾತನ್ನು ಈ ಪದ್ಯವು ತಿಳಿಸುತ್ತದೆ.

ಇಂತಹ ಒಂದು ಪದ್ಯವು ಮೂಡಬೇಕಾದರೆ, ಅಂತಹ ಒಂದು ವ್ಯಕ್ತಿಯನ್ನು ಕವಿಯು ನೋಡಿರಲೇಬೇಕು. ಸಾಹಿತ್ಯವೆಂದರೆ ಅದು ಕೇವಲ ಕಲ್ಪನೆಯ ವಿಲಾಸವಲ್ಲ, ಬದುಕಿನ ವಾಸ್ತವ ಕೂಡ. ಆ ವಾಸ್ತವವನ್ನು ನೋಡಿದ ಕಣ್ಣುಗಳು, ಬುದ್ಧಿ–ಮನಸ್ಸು–ಹೃದಯದ ಮೂಲಕ ಇಂತಹ ಪದ್ಯವನ್ನು ರಚಿಸಲು ಸಾಧ್ಯ. ಆ ಪದ್ಯ ಬರೆದ ಕವಿ ಕೆ.ಸಿ. ಶಿವಪ್ಪನವರು. ಆ ಪದ್ಯದ ಹೃದ್ಯವೇ ಜ್ಞಾನಯೋಗಿ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು. ಈ ಪದ್ಯಕ್ಕೆ ಕಾರಕವೂ ಅವರೇ, ಪೂರಕವೂ ಅವರೇ, ಸಾದೃಶ್ಯವೂ ಅವರೇ ಎಂದು ಸ್ವತಃ ಕವಿಗಳೇ ಒಂದೆಡೆ ಹೇಳಿದ್ದಾರೆ. ಈ ಜ್ಞಾನಯೋಗಿಗಳ ಬದುಕ ನೋಡಿಯೇ ಈ ಪದ್ಯ ಬರೆದಿರುವುದು ಎಂದು ಅವರು ನನ್ನ ಬಳಿ ಹೇಳಿದ್ದರು. ಹಾಗಿದ್ದ ಮೇಲೆ ಅವರ ಬರವಣಿಗೆಗೆ ಬದುಕೇ ಸಾಕ್ಷಿಯಾಯಿತಲ್ಲವೇ? ಎಲ್ಲವನ್ನೂ ಮೀರಿನಿಂತ ಅಂತಹ ಮಹಾನ್ ಚೇತನಕ್ಕೆ ನಮ್ಮದೊಂದು ಭಾವಪೂರ್ಣ ನಮನ. ವಿ. ಸೀತಾರಾಮಯ್ಯನವರ ಕವಿತೆಯೊಂದು ಸ್ಮೃತಿಪಟಲದಲ್ಲಿ ಬರುತ್ತಿದೆ.

ಮಾನವದೆತ್ತರ ಆಗಸದೇರಿಗೆ
ಏರುವವರೆಗೂ ಏರೇವು.
ಮಾನವಹೃದಯಕೆ ವಿಶ್ವವಿಶಾಲತೆ
ಹಾಯುವವರೆಗೂ ಹಾದೇವು.

ಹೌದಲ್ಲವೇ?

□

# ದಿವ್ಯಚೇತನ, ಜ್ಞಾನಯೋಗಿ ಸಿದ್ಧೇಶ್ವರ ಶ್ರೀ

**ಸಂಗಮೇಶ ಎನ್. ಜವಾದಿ**

**ಕಾ**ಮವ ಸುಟ್ಟು ಹೋಮವನರಸಿ
ತ್ರಿಪುರ ಸಂಹಾರದ ಕೀಲ ಬಲ್ಲಡೆ
ಯೋಗಿಯಾದಡೇನು, ಭೋಗಿಯಾದಡೇನು?
ಶೈವನಾದಡೇನು, ಸನ್ಯಾಸಿಯಾದಡೇನು?
ಅಶನವ ತೊರೆದಾತ, ವ್ಯಸನವ ಮರೆದಾತ
ಗುಹೇಶ್ವರಲಿಂಗದಲ್ಲಿವರ ಹಿರಿಯರೆಂಬೆನು

ಎನ್ನುವ ಅಲ್ಲಮಪ್ರಭುದೇವರ ಈ ವಚನದಂತೆ ಉತ್ತರವಾಗಿ ಬದುಕು ಸಾಗಿಸಿದ ಬಸವಗುರುವಿನ ಸತ್ಯತತ್ವವನ್ನು ಅನುಷ್ಠಾನಗೈದ ಶತಮಾನದ ನಿಜಶರಣ, ಬಸವನಾಡಿನ ಭಗೀರಥ, ರಾಷ್ಟ್ರ ಕಂಡ ಶ್ರೇಷ್ಠ ಮಹಾನ್ ಸಂತ. ನಡೆದಾಡಿದ ದಾರ್ಶನಿಕ, ಕೋಟ್ಯಂತರ ಭಕ್ತರ ಸಮೂಹದಲ್ಲಿ ಬೆಳಕು ತಂದ ಆಧ್ಯಾತ್ಮಿಕ ಪ್ರವಚನಕಾರ, ಮೇರುಪ್ರವರ್ತಕರು, ಪ್ರವರ್ಧಕರು, ಸರಳತೆಯ ಸಾಕಾರಮೂರ್ತಿ, ಸ್ನೇಹಸಂಗಮಜೀವಿ, ಜ್ಞಾನ ಯೋಗಾಶ್ರಮದ ಪರಮಪೂಜ್ಯ ಸಿದ್ಧೇಶ್ವರ ಸ್ವಾಮೀಜಿಯವರು ಸೃಷ್ಟಿಕರ್ತನಲ್ಲಿ ಲೀನರಾಗಿದ್ದು, ಅಧ್ಯಾತ್ಮಲೋಕ ಬಡವಾಗಿದೆ. ಹೇ ಆಧ್ಯಾತ್ಮಿಕ ವೀರ, ನೀವಿಲ್ಲದ ಈ ನಾಡು ಊಹಿಸಿಕೊಳ್ಳಲಾರದ ಸ್ಥಿತಿಯಲ್ಲಿ ಇದೆ. ಹಾಗಾಗಿ ನಿಮಗೆ ಸಾವಿಲ್ಲ ಶರಣರೇ, ನೀವು ಕೊಟ್ಯಂತರ ಹೃದಯಗಳಲ್ಲಿ ಅಜರಾಮರರು. ನಿಮ್ಮ ದಿವ್ಯಚೇತನಕ್ಕೆ ಕೋಟಿ ಕೋಟಿ ನಮನಗಳು. ಅವರ ಅಂತರಾತ್ಮಕ್ಕೆ ಭಕ್ತಿಯ ಶರಣಾರ್ಥಿ ಸಲ್ಲಿಸುತ್ತಾ, ಶ್ರೀಗಳು ನಡೆದುಬಂದ ದಾರಿಯ ಕುರಿತು ಸಂಕ್ಷಿಪ್ತವಾಗಿ ತಿಳಿಸುವ ಕಾರ್ಯ ಈ ಸಂದರ್ಭದಲ್ಲಿ ಮಾಡಿದ್ದೇವೆ.

ಜ್ಞಾನಜ್ಯೋತಿ, ವೈರಾಗ್ಯಮೂರ್ತಿ, ಶತಮಾನ ಕಂಡ ಶ್ರೇಷ್ಠ ಮನುಕುಲದ ಶಾಂತಿದೂತ, ಸೌಹಾರ್ದತೆ, ಸಹೋದರತೆ, ಸಹಬಾಳ್ವೆ, ಮಾನವೀಯತೆ, ಸಮಾನತೆಯ ಮೌಲ್ಯಗಳನ್ನು ಸಾರಿ ಬೋಧಿಸಿದ ಬೋಧಕ, ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರು ಅತ್ಯಮೂಲ್ಯ ಪ್ರವಚನಗಳ ಮೂಲಕ ನಾಡಿನ ಜನತೆಗೆ ಜ್ಞಾನದಾಸೋಹ ನೀಡುತ್ತಾ, ಸನ್ಮಾರ್ಗದಲ್ಲಿ ನಡೆಯಲು ಮತ್ತು ಸರಳ ಜೀವನಕ್ಕೆ ಪ್ರೇರೇಪಣೆ ನೀಡಿದ ಕರುಣಾಮಯಿ ಚೇತನರು.

ಪೂಜ್ಯ ಸಿದ್ಧೇಶ್ವರ ಸ್ವಾಮೀಜಿಯವರು ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಸಾಮಾನ್ಯ ರೈತ ಕುಟುಂಬದಲ್ಲಿ 5.9.1940ರಂದು ಜನಿಸಿದರು. ಸಿದ್ಧೇಶ್ವರ ಶ್ರೀಗಳ ಬಾಲ್ಯದ ಹೆಸರು ಸಿದ್ದಗೊಂಡಪ್ಪ ಎಂಬುದಾಗಿತ್ತು.

ಇವರು ತಮ್ಮೂರಿನ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ, ನಂತರ ಕೊಲ್ಲಾಪುರ ವಿಶ್ವವಿದ್ಯಾನಿಲಯದಿಂದ ತತ್ವಶಾಸ್ತ್ರ ವಿಷಯದಲ್ಲಿ ಎಂ.ಎ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಾಸು ಮಾಡಿದರು. ಬಳಿಕ ಜ್ಞಾನದಾಸೋಹ ನೀಡುವ ವಿಜಯಪುರದ ಜ್ಞಾನಯೋಗಾಶ್ರಮಕ್ಕೆ ಬಂದರು. ಅಲ್ಲಿ ಗದುಗಿನ ಶಿವಾನಂದ ಶ್ರೀಗಳ ಪರಂಪರೆಯಲ್ಲಿ ಸಾಗಿ ಬಂದು ಇವರು ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನೆರಳಲ್ಲಿ ಅಧ್ಯಾತ್ಮದ ಕುರಿತು ಅಧ್ಯಯನ ಮಾಡಿದರು.

ಕನ್ನಡ, ಸಂಸ್ಕೃತ, ಇಂಗ್ಲಿಷ್, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ನಿಪುಣರಾಗಿ, ಅಲೌಕಿಕ ಜೀವನದ ಬಗ್ಗೆ ತುಂಬ ಆಳವಾದ ಅಧ್ಯಯನ ನಡೆಸಿದ ಶ್ರೇಷ್ಠ ಅನುಭಾವಿಗಳು, ಸೌಜನ್ಯ ಸ್ವಭಾವದವರು ಆಗಿದ್ದರು.

ಇಂತಹ ಮೃದುಸ್ವಭಾವದ ತ್ಯಾಗಮಯಿ ಶ್ರೀಗಳು ಜ್ಞಾನಯೋಗಾಶ್ರಮದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಅವರ ಗುರುಗಳ ಮಾರ್ಗದರ್ಶನದಲ್ಲೇ ಆಶ್ರಮದ ಚಟುವಟಿಕೆಗಳನ್ನು ಮುಂದುವರಿಸಿದ್ದು ಇದೀಗ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಹೀಗೆ ಆಶ್ರಮದ ಜೊತೆಗೆ ಭಾರತೀಯ ತತ್ವಜ್ಞಾನ, ಆಧ್ಯಾತ್ಮಿಕ ಚಿಂತನೆಗೆ ಕೊಡುಗೆ ನೀಡಿದ ಶ್ರೇಷ್ಠ ಸಂತ ಜ್ಞಾನಯೋಗಿಗಳು ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು.

'ನಡೆದಾಡುವ ದೇವರು' ಎಂದೇ ಕರೆಯಲ್ಪಡುವ ಅವರ ಸರಳ ಬದುಕು ಸರ್ವರಿಗೂ ಮಾದರಿ. ಅವರ ಆಧ್ಯಾತ್ಮಿಕ ಪ್ರವಚನ ಕೋಟ್ಯಂತರ ಭಕ್ತರ ಜೀವನಕ್ಕೆ ಪ್ರೇರಣೆಯ ಮಾರ್ಗದರ್ಶಿ ಶಕ್ತಿಯಾಗಿತ್ತು. ಶ್ರೇಷ್ಠ ಚಿಂತನೆ, ಅಪಾರ ತತ್ವಜ್ಞಾನದ ಜ್ಞಾನಭಂಡಾರ ಆಗಿದ್ದ ಅವರು ದೇಶವಿದೇಶಗಳಲ್ಲಿ ತಮ್ಮ ಪ್ರವಚನದ ಮೂಲಕ ಜ್ಞಾನಯೋಗಿ, ಆಧ್ಯಾತ್ಮಿಕ ಗುರುವಾದವರು.

ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ, ಕುರ್ಚಿ, ಅಧಿಕಾರ, ಪದವಿ, ಹುದ್ದೆ ಯಾವುದಕ್ಕೂ ತಲೆಕೆಡಿಸಿಕೊಳ್ಳದ ಸಂತ. ಬದುಕು ಎಷ್ಟು ಸುಲಭ, ಸರಳ ಎಂಬುದು ಇವರನ್ನು ನೋಡಿಯೇ ಕಲಿಯಬೇಕು ಎಂಬುದನ್ನು ಜಗತ್ತಿಗೆ ಸಾರಿದ್ದಾರೆ.

ಅನೇಕ ಅತ್ಯುನ್ನತ ಪ್ರಶಸ್ತಿ, ಶ್ರೇಷ್ಠ ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್‌ಗಳನ್ನು ನಯವಾಗಿ ತಿರಸ್ಕರಿಸಿ ಇವೆಲ್ಲವುಗಳಿಂದ ಬಹು ದೂರ ಉಳಿದ ಚಾರಿತ್ರಿಕ ವ್ಯಕ್ತಿತ್ವ ಅವರದ್ದು. ಬರೆದಷ್ಟು ವಿಸ್ತೃತಗೊಳ್ಳುವ ಅವರ ನಿಸ್ವಾರ್ಥ ಸಾಧನೆ ಆಕಾಶದ ತೀರ ಹುಡುಕುವ ಹಾದಿಯನ್ನು ಪಯಣಿಸಿದಂತೆ. ಬಸವಣ್ಣನವರ ಹಾದಿಯಲ್ಲಿ

ಕ್ರಮಿಸಿದ ಶ್ರೇಷ್ಠ ಸಂತ, ಚಿಂತಕ, ಆಧ್ಯಾತ್ಮಿಕ ಪ್ರವರ್ತಕ, ಮಹಾನ್ ತತ್ವಜ್ಞಾನಿ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರದು ಅತ್ಯಂತ ಸುಂದರ ವ್ಯಕ್ತಿತ್ವದ ಬದುಕಾಗಿತ್ತು.

ಹೀಗೆ ಸಿದ್ಧೇಶ್ವರ ಶ್ರೀಗಳವರ ಪ್ರವಚನ ಕೇಳಿದವರು ಅದರಲ್ಲೇ ಅನುರಕ್ತರಾಗಿ ಬಿಡುತ್ತಿದ್ದರು. ಪ್ರವಚನ ಕಾರ್ಯಕ್ರಮ ಎಲ್ಲಿ ಏರ್ಪಡಾದರೂ ಸಹ ಅಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. ಅವರ ಪ್ರವಚನಗಳಿಗಿದ್ದ ಶಕ್ತಿ ಅಂತಹದ್ದು ಎಂದರೆ ತಪ್ಪಾಗಲಾರದು.

ಹಾಗಾಗಿ ನಮ್ಮ ನಾಡು ಕಂಡ ಅಪರೂಪದ ಅನುಭಾವಿ ಸಂತರಾದ ವಿಜಯಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಭೌತಿಕವಾಗಿ ಇನ್ನಿಲ್ಲವಾದುದು ಅತ್ಯಂತ ದುಃಖದ ಸಂಗತಿ. ಪೂಜ್ಯ ಸ್ವಾಮೀಜಿರವರು ಪಂಚಭಾಷಾ ಪ್ರವೀಣರಾಗಿ, ಸತ್ಯತತ್ವದ ಆರಾಧಕರಾಗಿದ್ದರು. ವಚನಸಾಹಿತ್ಯವನ್ನು ಜನತೆಗೆ ಮನದಟ್ಟಾಗುವಂತೆ ಸರಳವಾಗಿ ಬೋಧಿಸಿ ಅವರ ಆಂತರಿಕ ಪರಿವರ್ತನೆಗೆ ಕಾರಣರಾಗಿದ್ದರು. ಕ್ಲಿಷ್ಟಕರವಾದ ವಿಷಯಗಳನ್ನೂ ಸರಳವಾದ ಭಾಷೆಯಲ್ಲಿ ಬೋಧಿಸುತ್ತಿದ್ದರು. ಕಠಿಣ ತತ್ವಗಳನ್ನು ಜನಸಾಮಾನ್ಯರಿಗೆ ನಿಲುಕುವ ಭಾಷೆಯಲ್ಲಿ ಬೋಧಿಸಿ, ಪಂಡಿತಪಾಮರರಿಗೂ ಜ್ಞಾನಸುಧೆಯನ್ನು ಉಣಬಡಿಸಿದವರು.

ಅದಕ್ಕಾಗಿಯೇ ಪೂಜ್ಯರು ತೋರುತ್ತಿದ್ದ ನಿಷ್ಕಲ್ಮಶ ಪ್ರೀತಿ, ನಿರ್ಮಲ ಅಂತಃಕರಣ ಸರ್ವರಿಗೂ ಆದರ್ಶ. ಮನದ ಮಲಿನತೆ ಅಳಿದರೆ ನೋಡುವುದೆಲ್ಲವು ದಿವ್ಯವೇ. ಕಾಣುವ ಜಗವೆಲ್ಲವು ದೈವದ ಅಭಿವ್ಯಕ್ತಿಯೇ ಎಂದು ಅರಿತು ಬೋಧಿಸಿದವರು. ಜಗದ ಎಲ್ಲೆಡೆ ಸಂಚರಿಸಿ ಜ್ಞಾನದ ನುಡಿಗಳನ್ನು ಜನರಿಗೆ ಬೋಧಿಸಿ, ಅಸಂಖ್ಯಾತ ಭಕ್ತರ ಮನಸ್ಸಿನ ನೋವನ್ನು ಕಳೆದವರು. ತಮ್ಮನ್ನು ಆರಾಧಿಸುವವರ ನಡುವೆ ತಾವು ತಾವಾಗಿಯೇ ಇದ್ದು ನಿರಾಭಾರಿ ಸಂತರಾಗಿ ಬದುಕಿದರು.

ಬಸವಾದಿ ಶರಣರಂತೆ ಸರಳವಾಗಿ ಬಾಳಿದ ಶ್ರೀಗಳು ನಿಸರ್ಗದ ನಿಯಮದಂತೆ ಜೀವನ ಚೈತನ್ಯವನ್ನೇ ಕಂಡು ಆನಂದಿಸಿದವರು. ತಮ್ಮ ಪ್ರವಚನಗಳಲ್ಲಿ ಮಾನವೀಯತೆಯ ಮೌಲ್ಯಗಳ ಸಂದೇಶಗಳಿಂದ ಜನತೆ ಕಲಿಯಬಹುದಾದ ಬದುಕಿನ ಸೂಕ್ಷ್ಮಾತಿಸೂಕ್ಷ್ಮ ಅನುಭವ ಮತ್ತು ಅನುಭಾವಗಳನ್ನು ಉಣಬಡಿಸಿದರು.

ತಮ್ಮ ಪ್ರವಚನಗಳ ಮೂಲಕ ಬಸವಾದಿ ಶರಣರ ಹಾಗೂ ನಮ್ಮ ನಾಡಿನ ಎಲ್ಲಾ ದಾರ್ಶನಿಕರ ಶ್ರೇಷ್ಠತೆಯನ್ನು ಇಂದಿನ ಸಮಾಜಕ್ಕೆ ಪರಿಚಯಿಸಿದ್ದ ಕೀರ್ತಿ ಇವರಿಗೆ ಸಲ್ಲುತ್ತದೆ. ಜನರಿಗೆ ಜಗತ್ತನ್ನು ಮತ್ತು ಅದರ ಸೌಂದರ್ಯವನ್ನು ನೋಡುವ ನಿಜವಾದ ದೃಷ್ಟಿಯನ್ನು ಪ್ರವಚನದ ಮೂಲಕ ಕರುಣಿಸಿದ ಕರುಣಾಕರ. ಹೀಗೆ ನುಡಿದಂತೆ ನಡೆದು ಇಂದಿನ ಪ್ರಜ್ಞಾವಂತ ನಾಗರಿಕ ಸಮಾಜಕ್ಕೆ ಆದರ್ಶಚೇತನರಾಗಿ ಬಾಳಿದ ನಿಜಶರಣರು.

ಅಲ್ಲದೆ, ಸಿದ್ಧೇಶ್ವರ ಶ್ರೀಗಳು ಎಷ್ಟು ಸರಳತೆಯಿಂದ ಬದುಕುತ್ತಿದ್ದರು ಎಂಬುದಕ್ಕೆ ಅವರು ಪದ್ಮಶ್ರೀ ಪ್ರಶಸಿಯನ್ನು ವಿನಯದಿಂದ ನಿರಾಕರಿಸಿರುವುದು ಅದೀಗ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಈ ಕುರಿತು ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಗೆ ಪತ್ರ ಬರೆದಿದ್ದ ಅವರು "ಭಾರತ ಸರಕಾರ ನೀಡುವ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗಳ ಮೇಲೆ ನನಗೆ ಅಪಾರ ಗೌರವವಿದೆ. ಪದ್ಮಶ್ರೀ ಪ್ರಶಸ್ತಿ ಘೋಷಿಸಿದ್ದಕ್ಕೆ ಧನ್ಯವಾದಗಳು. ನಾನೊಬ್ಬ ಸಾಮಾನ್ಯ, ಅಧ್ಯಾತ್ಮದೆಡೆಗೆ ಒಲವಿರುವ ವ್ಯಕ್ತಿ ಅಸಾಮಾನ್ಯ ಜೀವನ ನಡೆಸುತ್ತ, ಆಧ್ಯಾತ್ಮಿಕ ಬೋಧನೆಯ ಮೂಲಕ ಜನರ ಜೀವನ ಉದಾತ್ತಗೊಳಿಸುವ ಉದ್ದೇಶ ನನ್ನದು. ಹಾಗಾಗಿ ಪ್ರಶಸ್ತಿಗಳ ಅವಶ್ಯಕತೆಯು ನನಗಿಲ್ಲ. ಎಲ್ಲ ಗೌರವಾದರಗಳೊಂದಿಗೆ ಈ ಪ್ರಶಸ್ತಿಯನ್ನು ಹಿಂದಿರುಗಿಸುತ್ತಿದ್ದೇನೆ. ಅನ್ಯಥಾ ಭಾವಿಸದಿರಿ. ನನಗಿಂತ ಸಾಧನೆ ಮಾಡಿದ ಅನೇಕ ಸಾಧಕರಿದ್ದು ಅವರನ್ನು ಗುರುತಿಸಿ ಪುರಸ್ಕಾರ ನೀಡಿ" ಎಂದು ತಿಳಿಸಿದ್ದರು.

ಇದಲ್ಲದೆ, ಈ ಹಿಂದೆ ಒಲಿದು ಬಂದಿದ್ದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಸಹ ಅವರು ನಿರಾಕರಿಸಿದ್ದು ಸರ್ವವಿದಿತ.

ಅದಕ್ಕಾಗಿ ಸಮಾಜಕ್ಕೆ ಯಾವುದನ್ನು ಅತಿ ಹೆಚ್ಚು ಹೇರಬೇಡಿ, ಪೀಠವನ್ನು ಕಟ್ಟುವುದಕ್ಕಿಂತ ಮನಸುಗಳನ್ನು ಕಟ್ಟಿ ಎನ್ನುವ ಅವರ ವಾಣಿಯಂತೆ ಅವರ ಜೀವನ ಸಾಗಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಅತ್ಯಂತ ಸರಳ ಸಜ್ಜನಿಕೆಯ ಸಾಕಾರಮೂರ್ತಿ, ನನ್ನದು–ತನ್ನದೆಂಬ ಮಮಕಾರ ತೊರೆದ ಮಹಾಪುರುಷರೇ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು. ಇವರು ಸಂತರಷ್ಟೇ ಅಲ್ಲ ಜ್ಞಾನೋಪಾಸಕರು ಕೂಡ. ಸಂತರು ನಾಡಿನಲ್ಲಿ ಬಹಳ ಜನ ಇದ್ದರು, ಈಗಲೂ ಇದ್ದಾರೆ. ಆದರೆ ಜ್ಞಾನಯೋಗಿಗಳು ಬಹಳ ಅಪರೂಪ. ಅಂಥವರಲ್ಲೊಬ್ಬರು ಶ್ರೀ ಸಿದ್ಧೇಶ್ವರ ಸ್ವಾಮಿಗಳು. ನಿಸ್ವಾರ್ಥ ಸೇವಕರು, ಯಾರ ಹಂಗಿಗೂ ಒಳಗಾಗದೆ ಸರ್ವಜನರಿಂದಲೂ ಪ್ರೀತಿ, ವಿಶ್ವಾಸಕ್ಕೆ ಘನತೆ–ಗೌರವ ತಂದುಕೊಟ್ಟವರು. ಅಹಂಕಾರ–ಮಮಕಾರಗಳಿಲ್ಲದ, ಇಹಪರ ಎರಡೂ ಒಂದೇ ಎಂದು ಸಾರಿದವರು.

ಅವರಿಂದು ದೈಹಿಕವಾಗಿ ಇಲ್ಲದೆ ಇರಬಹುದು, ಆದರೆ ಮಾನಸಿಕವಾಗಿ ಕೋಟ್ಯಂತರ ಹೃದಯಗಳಲ್ಲಿ ಅಜರಾಮರರು. ಸರ್ವರ ಹೃದಯಮಂದಿರದಲ್ಲಿ ಸದಾ ಕಾಲ ಶಾಶ್ವತವಾಗಿದ್ದಾರೆ.

ನಿಮ್ಮ ಅಂತರಂಗದ ಅಂತರಾತ್ಮಕ್ಕೆ ಭಕ್ತಿಯ ನಮನಗಳು.

□

# ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ : ನೂತನ ಯುಗ–ಪುರಾತನ ಪಥ

ಪ್ರಕಾಶ ಗಿರಿಮಲ್ಲನವರ

ಮನುಷ್ಯನಿಗೆ ದುಃಖ ಏಕಿದೆ ಎಂದು ಕ್ರಿ.ಪೂ.ದಲ್ಲಿಯೇ ಬುದ್ಧನು ಸಂಶೋಧಿಸಿದ. ಮನುಷ್ಯನ ವರ್ತಮಾನದ ಬದುಕು ಸುಖಮಯವಾಗದಿರಲು ಆಶೆಯೇ ಕಾರಣವಾಗಿ ದುಃಖ ಮೂಲವಾಗಿದೆ ಎಂದು ಬುದ್ಧ ಹೇಳಿದ. ಬುದ್ಧನ ತರುವಾಯ ಎರಡು ಸಾವಿರ ವರ್ಷಗಳ ಹಿಂದೆ ಸಾಂಖ್ಯಕಾರಿಕೆಯ ಕರ್ತೃ ಈಶ್ವರಕೃಷ್ಣನು ಮನುಷ್ಯನಿಗೆ ದುಃಖ, ರೋಗರುಜಿನಗಳು ಏಕೆ ಬರುತ್ತವೆ? ಎಂದು ಚಿಂತಿಸಿದ. ಹೀಗೆ ಸಾವಿರ ಸಾವಿರ ವರುಷಗಳಿಂದ ಮನುಷ್ಯನ ಸುಖಮಯ ಬದುಕಿಗೆ ಬೇಕಾದ ಮೌಲ್ಯಗಳನ್ನು ಕಂಡುಕೊಳ್ಳಲು ಅನೇಕ ದಾರ್ಶನಿಕರು, ಮಹಾನುಭಾವಿಗಳು ಪ್ರಯತ್ನಿಸುತ್ತ ಬಂದಿದ್ದಾರೆ. ಅಂಥ ಸಂತ ಮಹನೀಯರಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಒಬ್ಬರು.

ಮನುಷ್ಯನಿಗೆ ವರ್ತಮಾನದ ಬದುಕು ಬಹಳ ಮುಖ್ಯ ಎಂದು ಹೇಳುತ್ತಾರೆ. ಆದರೆ ವರ್ತಮಾನವು ಭೂತ ಮತ್ತು ಭವಿಷ್ಯತ್‌ಗಳ ನಡುವಿನ ಬಿಂದುವಾಗಿದೆ. ಭೂತಕಾಲದ ನೆನಪುಗಳೊಂದಿಗೆ, ಭವಿಷ್ಯದ ಕನಸುಗಳನ್ನು ಕಟ್ಟಿಕೊಂಡು ಬದುಕುವುದು ವರ್ತಮಾನದ ಕರ್ತವ್ಯವಾಗಿದೆ. ಆದರೆ ಕೆಲವರು ಭೂತಕಾಲದ ನೆನಪುಗಳಿಗೆ ಜೋತುಬಿದ್ದು ವರ್ತಮಾನ ಮತ್ತು ಭವಿಷ್ಯತ್ತುಗಳನ್ನು ಮರೆತುಬಿಡುತ್ತಾರೆ; ಇನ್ನು ಕೆಲವರು ಭವಿಷ್ಯದ ಕನಸುಗಳನ್ನು ಕಾಣುತ್ತ ವರ್ತಮಾನದ ಸುಖಮಯ ಬದುಕನ್ನು ಹಾಳುಮಾಡಿಕೊಳ್ಳುತ್ತಾರೆ. ಅಂತೆಯೇ ಅನುಭಾವಿ ಅಲ್ಲಮಪ್ರಭುದೇವರು 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು' ಎಂದು ಹೇಳುತ್ತಾರೆ. ನಾವು ನಿಂತ ಹೆಜ್ಜೆ ಅಂದರೆ ವರ್ತಮಾನವನ್ನು ಅರ್ಥಮಾಡಿಕೊಳ್ಳಲು 'ಹಿಂದಣ ಹೆಜ್ಜೆ'ಗಳನ್ನು ಅಂದರೆ ನಮ್ಮ ಭಾರತೀಯ ಪುರಾತನ ಪರಂಪರೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಹಿಂದಣ ಹೆಜ್ಜೆಯಲ್ಲಿ ವೇದಗಳಿವೆ, ಉಪನಿಷತ್ತುಗಳಿವೆ, ದಾರ್ಶನಿಕರು–ಸಂತರು–ಮಹಂತರು–ಋಷಿಗಳು–ಶರಣರು ಇದ್ದಾರೆ. ಅವರು ಕೊಟ್ಟ ಸಾರ್ವಕಾಲಿಕ ಮೌಲ್ಯಗಳಿವೆ. ಉದಾತ್ತವೂ ಉಜ್ವಲವೂ ಆದ ಪರಂಪರೆಯಿದೆ.ಹೀಗಿದ್ದೂ ನಮ್ಮ ವರ್ತಮಾನದ ಬದುಕು ಅವ್ಯೈಚಾರಿಕವಾಗಿದೆ, ಅಪಸವ್ಯದಿಂದ ಕೂಡಿದೆ. ಇದಕ್ಕೆ ಕಾರಣವೇನು? ನಾವು ಹಿಂದಣ ಹೆಜ್ಜೆಯನ್ನು ಮರೆತಿರುವುದೇ ಆಗಿದೆ. ಹಿಂದಣ ಹೆಜ್ಜೆ ಮತ್ತು ಭವಿಷ್ಯದ ಶೋಧಗಳನ್ನು ನಾವು ಅರಿತುಕೊಂಡು, ವರ್ತಮಾನದಲ್ಲಿ ಆನಂದದಿಂದ

ಬದುಕಬೇಕೆಂಬ ಆಶಯಕ್ಕಾಗಿ, ನೂತನ ಯುಗ, ಪುರಾತನ ಪಥಗಳ ನಡುವೆ ಸೇತುವೆಯಾಗಿ ನಿಂತಿದ್ದಾರೆ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು.

ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ವಿಜಯಪುರ ಜ್ಞಾನಯೋಗಾಶ್ರಮದ ನಿರಾಭಾರಿಗಳು. ಅವರು ನಮ್ಮ ದಿನಮಾನದ ಅಪರೂಪದ ರಾಷ್ಟ್ರಸಂತರು. ಜನಮನದ ಮೈಲಿಗೆಯನ್ನು ತೊಳೆಯ ಬಂದ ಜ್ಞಾನಯೋಗಿಗಳು. ಜಗತ್ತಿನ ಸಕಲ ದರ್ಶನಗಳನ್ನು ಅಧ್ಯಯನ ಮಾಡಿದ ಅಪರೂಪದ ಚಿಂತಕರು. ಸಕಲ ಶಾಸ್ತ್ರಗಳ ಅನುಭವವನ್ನು ಅನುಭಾವವಾಗಿ ಪರಿವರ್ತಿಸಿದ ಅನುಭಾವಿಗಳು. ನಡೆದಾಡುವ ದೇವರು, ಸುಳಿದಾಡುವ ಧರ್ಮ ಎಂದು ಜನಮಾನಸದಲ್ಲಿ ಉಳಿದುಕೊಂಡವರು.

ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ವಿಜಯಪುರ ಜಿಲ್ಲೆಯ ಬಿಜ್ಜರಗಿಯಲ್ಲಿ ಸೆಪ್ಟೆಂಬರ್ 5, 1940ರಂದು ಜನಿಸಿದರು. (ಶ್ರೇಷ್ಠ ತತ್ವಜ್ಞಾನಿ ಸರ್ವಪಲ್ಲಿ ಡಾ. ರಾಧಾಕೃಷ್ಣನ್ ಅವರ ಜನ್ಮದಿನವೂ ಸೆಪ್ಟೆಂಬರ್ 5 ಆಗಿರುವುದು ಒಂದು ಯೋಗಾಯೋಗ) (ಕೆಲವು ಕಡೆ ಶ್ರೀಗಳ ಹುಟ್ಟಿದ ದಿನಾಂಕ 24 ಅಕ್ಟೋಬರ್ ಎಂದಿದೆ). ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಪೂಜ್ಯ ಶ್ರೀ ಶಿವಾನಂದ ಜಗದ್ಗುರುಗಳ ಕರಕಮಲಸಂಜಾತರಾಗಿ ಹಳ್ಳಿ ಹಳ್ಳಿ ತಿರುಗಿ ಶುದ್ಧ ಅಧ್ಯಾತ್ಮದ ಅರಿವು ಮೂಡಿಸುವ ಕಾರ್ಯ ಮಾಡುತ್ತಿದ್ದರು. ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳು ಮಲ್ಲಿಕಾರ್ಜುನ ಸ್ವಾಮಿಗಳವರ ಪರಮಾಪ್ತ ಶಿಷ್ಯರಾಗಿ ಪಾಶ್ಚಾತ್ಯ ಮತ್ತು ಪೌರಸ್ತ್ಯ ಸಕಲ ದರ್ಶನಗಳನ್ನು ಅಧ್ಯಯನ ಮಾಡಿದರು. ಕೊಲ್ಲಾಪುರ ವಿಶ್ವವಿದ್ಯಾಲಯದಿಂದ ತತ್ತ್ವಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಸಂಪಾದಿಸಿದರು. ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳವರೊಂದಿಗೆ ಈ ನಾಡನ್ನು ಸುತ್ತಿದರು. ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ್, ಹಿಂದಿ ಮೊದಲಾದ ಭಾಷೆಗಳಲ್ಲಿ ಪಾರಂಗತರಾಗಿ ತಮ್ಮ ಅಸ್ಖಲಿತವಾಣಿಯಿಂದ ಪ್ರವಚನ ಯೋಗಿಯಾದರು. ಪೂಜ್ಯರು ಶಿವಯೋಗದ ನಿಜಸಾಧಕರು. ಅಂತೆಯೇ ಲೋಕಸಂಗ್ರಹಕ್ಕಾಗಿ ಪ್ರವಚನ ಕಾಯಕವನ್ನು ನಿಷ್ಠೆಯಿಂದ ಕೈಕೊಂಡರು.ಪೂಜ್ಯ ಮಲ್ಲಿಕಾರ್ಜುನ ಮಹಾಸ್ವಾಮಿಗಳು 1975ರಲ್ಲಿ ಸ್ಥಾಪಿಸಿದ ವಿಜಯಪುರ ಜ್ಞಾನಯೋಗಾಶ್ರಮ ಶ್ರೀಗಳಿಗೆ ಒಂದು ನೆಲೆಯಾದರೂ, ಅನಿಕೇತನ ಪ್ರಜ್ಞೆಯ ಜಂಗಮಮೂರ್ತಿಯಾಗಿದ್ದ ಅವರು ಲೋಕಕಲ್ಯಾಣಕ್ಕಾಗಿ ಸದಾಸಂಚಾರಿಗಳಾಗಿದ್ದರು.

ಅತ್ಯಂತ ಕಿರಿಯ ವಯಸ್ಸಿನಲ್ಲಿ ಯೋಗಜೀವನಕ್ಕೆ ಒಳಗಾದ ಪೂಜ್ಯ ಸಿದ್ಧೇಶ್ವರ ಸ್ವಾಮಿಗಳು ಅಸಾಧಾರಣ ವೈರಾಗ್ಯಮೂರ್ತಿಗಳು. ಪೂಜ್ಯರನ್ನು ನೋಡಿದಾಗಲೆಲ್ಲ ನಮಗೆ ರಮಣ ಮಹರ್ಷಿಗಳು, ರಾಮಕೃಷ್ಣ ಪರಮಹಂಸರು ಜ್ಞಾಪಕಕ್ಕೆ ಬರುತ್ತಾರೆ. ಅಪಾರ ವಿದ್ವತ್ತಿನ ಖಣಿಯಾಗಿರುವ ಪೂಜ್ಯರು ಸದುವಿನಯದ ಸಾಕಾರಮೂರ್ತಿಗಳು. ತುಂಬಿ ತುಳುಕುವ ವಿದ್ವತ್ತಿದ್ದರೂ ನಿರಾಡಂಬರ ನಿರಾಲಂಬ ನಿರಪೇಕ್ಷ ಭಾವದ ಸಂತರಾಗಿ ಅವರು ನಮಗೆ ಕಾಣುತ್ತಾರೆ. ಆಶೆ–ಆಮಿಷಗಳನ್ನು ಗೆದ್ದವರು ಶರಣರೆಂದು

ವಚನಕಾರರು ಹೇಳುತ್ತಾರೆ. ಅಂಥ ಶರಣತ್ವದ ಪರಿಪೂರ್ಣ ಲಕ್ಷಣವನ್ನು ನಾವು ಪೂಜ್ಯ ಸಿದ್ಧೇಶ್ವರ ಸ್ವಾಮಿಗಳವರಲ್ಲಿ ಕಾಣಬಹುದು.

ವೇದಗಳ ಕಾಲದಿಂದಲೂ ಪ್ರವಚನ ಕಲೆ ಇರುವುದನ್ನು ಗಮನಿಸಬಹುದು. ಗುರುಗಳು ವೇದ–ಉಪನಿಷತ್ತುಗಳ ಜ್ಞಾನವನ್ನು ತಮ್ಮ ಶಿಷ್ಯರಿಗೆ ಪ್ರವಚನದ ಮೂಲಕವೇ ಧಾರೆಯೆರೆಯುತ್ತಿದ್ದರು. ಶಿಷ್ಯರಿಗೆ ಮಾತ್ರವಲ್ಲ ಜ್ಞಾನಪಿಪಾಸುಗಳಾದ ಜಿಜ್ಞಾಸು ಭಕ್ತರಿಗೂ ಸಾಧನೆಯ ದಿಕ್ಕನ್ನು ತೋರಿಸುವ ಒಂದು ಪ್ರಕ್ರಿಯೆಯಾಗಿ ಪ್ರವಚನ ಬೆಳೆದುಬಂದಿದೆ. ಪ್ರವಚನ ನಾಲ್ಕು ಗೋಡೆಯ ನಡುವೆ ನಡೆದರೆ ಅದು ಶಿಷ್ಯರಿಗೆ ಅನುಗ್ರಹಿಸಿದ ಅರಿವಿನ ಬೆಳಕಾಗುತ್ತದೆ, ಅದೇ ಪ್ರವಚನ ಬಯಲಿನಲ್ಲಿ ನಡೆದರೆ ಕೇಳಿದ ಲಕ್ಷ ಲಕ್ಷ ಕಿವಿಗಳು ಪಾವನವಾಗುತ್ತವೆ. ಅಂತೆಯೇ ಬುದ್ಧನಿಂದ ಹಿಡಿದು ಸಿದ್ಧೇಶ್ವರ ಮಹಾಸ್ವಾಮಿಗಳವರೆಗೆ ಈ ಪ್ರವಚನ ಕಾಯಕ ಮುಂದುವರೆದುಕೊಂಡು ಬಂದಿದೆ. ಗುರುವಾದವನು ತಾನು ಕಂಡು ಅನುಭವಿಸಿದ, ಆಚರಿಸಿದ, ಆನಂದಿಸಿದ ಮೌಲ್ಯಗಳನ್ನು ಪ್ರವಚನದಲ್ಲಿ ಪ್ರತಿಪಾದಿಸುತ್ತಾನೆ. ನಡೆ–ನುಡಿ ಒಂದಾದ ಗುರುಗಳ ನುಡಿಗಳು ಜ್ಯೋತಿರ್ಲಿಂಗವಾಗುತ್ತವೆ. ಅಂತೆಯೇ ಅಲ್ಲಮ 'ಮಾತೆಂಬುದು ಜ್ಯೋತಿರ್ಲಿಂಗ' ಎಂದು ಹೇಳುತ್ತಾನೆ. ರಾಮಕೃಷ್ಣ ಪರಮಹಂಸರು ಬಹಳ ಕಲಿತವರಲ್ಲ, ಪ್ರಕಾಂಡ ವಾಗ್ಮಿಗಳಲ್ಲ, ಆದರೂ ತಮ್ಮ ಸದುವಿನಯದ ನುಡಿಗಳಿಂದ ಲೋಕದ ಜನರನ್ನೆಲ್ಲ ತಮ್ಮತ್ತ ಸೆಳೆದುಕೊಳ್ಳುತ್ತಿದ್ದರು. ಇದೇ ಮಾದರಿಯಲ್ಲಿ ಸಿದ್ಧೇಶ್ವರ ಮಹಾಸ್ವಾಮಿಗಳವರ ವಾಣಿಯನ್ನು ಕೇಳಲು ಲಕ್ಷೋಪಲಕ್ಷ ಜನರು ಕಾತರಿಸುತ್ತಿದ್ದರು. ಪೂಜ್ಯರು ಹಳ್ಳಿ–ಪಟ್ಟಣ–ನಗರಪ್ರದೇಶದ ಭೇದವೆನಿಸಿದೆ, ಸಮುದಾಯದ ಭಕ್ತಿಯ ಕರೆಗೆ ಓಗೊಟ್ಟು ಆಗಮಿಸುತ್ತಿದ್ದರು.

ಪೀಠ–ಸಿಂಹಾಸನ–ಪ್ರತಿಷ್ಠೆ ಮೊದಲಾದ ಯಾವ ಮಾಯಾಮೋಹದ ಸುಳಿಗೂ ಸಿಗದ ಪೂಜ್ಯರು ಒಂದು ಸಾಮಾನ್ಯ ಕುರ್ಚಿಯಲ್ಲಿ ನಿರಾಳವಾಗಿ ಕುಳಿತು ತಮ್ಮ ಅನುಭಾವದ ಬುತ್ತಿಯನ್ನು ಅತ್ಯಂತ ಸರಳವಾಗಿ, ಉಣಬಡಿಸುತ್ತಿದ್ದ ಕಲೆ ವಿನೂತನವಾದುದು. 'ಅಜ್ಜನ ಹೆಗಲ ಮೇಲೆ ಕುಳಿತ ಮೊಮ್ಮಗ ಅಜ್ಜನಿಗಿಂತ ವಿಶಾಲವೂ ರಮ್ಯವೂ ಆದ ಸೃಷ್ಟಿಯನ್ನು ಕಾಣುತ್ತಾನೆ' ಎಂಬ ಕುವೆಂಪು ಅವರ ಮಾತಿನಂತೆ ಸಿದ್ಧೇಶ್ವರ ಸ್ವಾಮಿಗಳು ನಮಗೆ ಪ್ರವಚನದ ಮೂಲಕ ತೋರುವ ಜ್ಞಾನವೂ ಅಷ್ಟೇ ವಿಶಾಲವೂ, ವೈವಿಧ್ಯಮಯವೂ ಆಗಿದೆ.

ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರವಚನ ಹೇಳುವಲ್ಲಿ ಸೂರ್ಯನೇಮಿ. ಅವರು ಸರಿಯಾದ ಸಮಯಕ್ಕೆ ಬಂದು ಪ್ರವಚನ ಪ್ರಾರಂಭ ಮಾಡುತ್ತಿದ್ದರು. ಒಂದು ಗಂಟೆ ಕ್ಲುಪ್ತ ಅವಧಿಯಲ್ಲಿ ಹೇಳಬೇಕಾದುದನ್ನು ಹೇಳಿ, ಸಂಸ್ಕೃತ ಉಕ್ತಿ, ವಚನಗಳ ನುಡಿಗಳನ್ನು ವಿಶ್ಲೇಷಣೆಗೆ ಒಳಗುಮಾಡಿ, ವಿವರಣೆ ನೀಡಿ, ದೃಷ್ಟಾಂತಗಳ ಮೂಲಕ ಮನದಟ್ಟಾಗಿಸುತ್ತಿದ್ದರು. ಪೂಜ್ಯರ ಪ್ರವಚನ ಜನಸಮುದಾಯದಲ್ಲಿ ಒಂದು ರೀತಿಯ

ಕ್ರಿಯಾತ್ಮಕವಾದ ಸಮಯಪ್ರಜ್ಞೆಯನ್ನು ಕಲಿಸಿ, ಒಂದು ಶಿಸ್ತಿಗೆ ಒಳಪಡಿಸುತ್ತದೆ.

ಜೀವನದುದ್ದಕ್ಕೂ ಸಾಧನೆ ಮಾಡುತ್ತ ಬಂದಿರುವ ಪೂಜ್ಯರು ಕವಿಹೃದಯದವರು. 'Songs of Silence' ಎಂಬ ಅವರ ಕವನಸಂಕಲನ ಅನುಭಾವ ಮತ್ತು ವಿದ್ವತ್‌ಲೋಕದ ಗಮನ ಸೆಳೆದಿರುವುದನ್ನು ಕಾಣಬಹುದು. ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ನಿರಂತರವಾಗಿ ಮಾಡುತ್ತಿದ್ದ ಪ್ರವಚನಗಳನ್ನೆಲ್ಲ ಅಕ್ಷರರೂಪದಲ್ಲಿ ದಾಖಲಿಸಿದ ಶ್ರೇಯಸ್ಸು ಪೂಜ್ಯ ಶ್ರೀಗಳವರದು. 'ಶ್ರೀಮದ್ಭಗವದ್ಗೀತೆ', 'ಕಠೋಪನಿಷತ್ತು', 'ಶ್ವೇತಾಶ್ವತರೋಪನಿಷತ್ತು' 'ಕೇನೋಪನಿಷತ್ತು', 'ಮಾಂಡುಕೋಪನಿಷತ್ತು', 'ಮುಂಡಕೋಪನಿಷತ್ತು', 'ಸಿದ್ಧಾಂತ ಶಿಖಾಮಣಿ', 'ಪತಂಜಲಿ ಯೋಗಸೂತ್ರ' ಮೊದಲಾದ ಸಂಸ್ಕೃತ ಗ್ರಂಥಗಳಿಗೆ ಸರಳಗನ್ನಡದಲ್ಲಿ ವ್ಯಾಖ್ಯಾನವನ್ನು ನೀಡಿ ಜ್ಞಾನಪಿಪಾಸುಗಳ ದಾಹವನ್ನು ಹಿಂಗಿಸಿದ್ದಾರೆ.

'ಶಾಂತಿಪಥ', 'ಸಿದ್ಧರಾಮೇಶ್ವರ ವಚನಗಳು', ಸಮಾಜಸಂಪದ', 'ಹಠಯೋಗ', 'ವಿಶ್ವಧರ್ಮದ ವಿವಿಧ ಸೂತ್ರಗಳು', 'ಈಶಾವಾಸ್ಯೋಪನಿಷತ್ತು' ಮೊದಲಾದ ಕೃತಿಗಳನ್ನು ರಚಿಸಿ, ಅಧ್ಯಾತ್ಮಪ್ರಪಂಚವನ್ನು ಸಿರಿವಂತಗೊಳಿಸಿದ್ದಾರೆ. ಪೂಜ್ಯ ಶ್ರೀಗಳು 1991ರ ಶ್ರಾವಣ ಮಾಸದಲ್ಲಿ ಸುತ್ತೂರು ಮಠದಲ್ಲಿ 'ಭಗವಚ್ಚಿಂತನ' ವಿಷಯವಾಗಿ 29 ದಿನಗಳ ಕಾಲ ಪ್ರವಚನ ನೀಡಿದರು. ಅದು ಇಡೀ ನಾಡಿನ ಗಮನ ಸೆಳೆಯಿತು. ಪ್ರವಚನದ ಸಾರ ಅದೇ ಹೆಸರಿನಲ್ಲಿ ಪ್ರಕಟವಾಯಿತು. ಈ ಕೃತಿ ಇಲ್ಲಿಯವರೆಗೆ ಐವತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿ ದಾಖಲೆಯನ್ನೇ ನಿರ್ಮಿಸಿದೆ. ನಂತರದ ದಿನಮಾನದಲ್ಲಿ ಪೂಜ್ಯ ಶ್ರೀಗಳ ಪ್ರವಚನಗಳನ್ನು ಡಾ. ಶ್ರದ್ಧಾನಂದ ಸ್ವಾಮಿಗಳು ವ್ಯವಸ್ಥಿತವಾಗಿ ಸಂಗ್ರಹಿಸಿ, ಸಂಕಲಿಸಿ, ಸಂಪಾದಿಸಿ ಪ್ರಕಟಿಸತೊಡಗಿದರು. 'ನಾನಾರು', 'ಆನಂದಯೋಗ', 'ಭಕ್ತಿಯೋಗ', 'ಇದು ಸತ್ಯಾನ್ವೇಷಣೆ', 'ಬದುಕು' ಮೊದಲಾದ ನಾಲ್ವತ್ತಕ್ಕೂ ಹೆಚ್ಚು ಪ್ರವಚನಸಂಗ್ರಹಗಳು ಪ್ರಕಟಗೊಂಡಿವೆ.

ಸುತ್ತೂರು ಮಠದಲ್ಲಿ ನಾಲ್ಕಾರು ಚಿಂತಕರೊಂದಿಗೆ ಸೇರಿ 'ಬಸವಾದಿ ಶಿವಶರಣರ ವಚನಗಳಿಗೆ ಮರುವ್ಯಾಖ್ಯಾನ' ರಚಿಸುವ ಕಾರ್ಯವನ್ನು ಪೂಜ್ಯರು ಕೈಕೊಂಡರು. ಅವರ ಪ್ರಯತ್ನದ ಫಲವಾಗಿ 'ಬಸವೇಶ್ವರ ವಚನದೀಪಿಕೆ' ಮೊದಲ ಸಂಪುಟ ಪ್ರಕಟವಾಯಿತು. ನಂತರ ಪೂಜ್ಯ ಶ್ರೀಗಳೇ ಬರೆದ 'ಅಲ್ಲಮನ ವಚನ–ನಿರ್ವಚನ' ಒಂದು ಅದ್ಭುತವಾದ ಕೃತಿಯಾಗಿದೆ. ಅಲ್ಲಮನ ಅನುಭಾವವನ್ನು ಅತ್ಯಂತ ಸರಳವಾಗಿ ಹೇಳುವ ಕೃತಿ ಇದಾಗಿದೆ. ಇಂಥ ಕೃತಿಯನ್ನು ಮೀರಿಸುವ ಇನ್ನೊಂದು ಕೃತಿ ಕನ್ನಡದಲ್ಲಿ ಬಂದಿಲ್ಲವೆಂಬುದು ಆಶ್ಚರ್ಯದ ಸಂಗತಿ.

ಪೂಜ್ಯರ ಹೊಳಪುಳ್ಳ ಕಣ್ಣು, ಅಂತಃಕರಣ ಉಕ್ಕಿ ಹೊರಸೂಸುವ ವಾತ್ಸಲ್ಯಪೂರ್ಣ ನಗು, ಹೃದ್ಯವಾದ ಮಾತು ಇವೆಲ್ಲ ಯಾರನ್ನೇ ಆದರೂ ವಿನೀತರನ್ನಾಗಿ ಮಾಡುತ್ತವೆ. ಖಾದಿ ಬಿಳಿ ಬಟ್ಟೆ ಧರಿಸಿ, ಪ್ರವಚನಮಂಟಪಕ್ಕೆ ದಯಮಾಡಿಸುವಾಗ ಭಕ್ತಿ–ಜ್ಞಾನ–

ವೈರಾಗ್ಯಗಳು ಮುಪ್ಪುರಿಗೊಂಡ ಸಾಕಾರಮೂರ್ತಿಯೇ ನಡೆದುಬರುವಂತೆ ಭಾಸವಾಗುತ್ತದೆ. ಎರಡೂ ಕೈಗಳನ್ನು ಜೋಡಿಸಿ ಭಕ್ತವೃಂದಕ್ಕೆ ಶ್ರೀಗಳವರು ನಮಿಸುವಾಗ ಅದೆಂತಹ ಭಕ್ತಿಸಂವೇದನೆಯುಂಟಾಗುತ್ತಿತ್ತು ಎಂಬುದನ್ನು ಬರೆದು ಹೇಳುವುದು ಕಠಿಣ.

ಪೂಜ್ಯರು ನಿಜವಾದ ಅರ್ಥದಲ್ಲಿ ಜಂಗಮಮೂರ್ತಿಗಳಾಗಿ ಕಾರ್ಯ ಮಾಡುತ್ತಿದ್ದರು. ಅವರ ಮಠ ಯಾವುದು? ಅವರ ವಾಸಸ್ಥಾನ ಯಾವುದು? ಎಂಬ ಪ್ರಶ್ನೆಗಳಿಗೆ ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭು ಹೇಳಿದ ಉತ್ತರಗಳನ್ನೇ ಹೇಳಬಹುದಾಗಿದೆ. 'ದೇಶವೆಮ್ಮದು ಹೇಳುವೊಡೆ ಪರದೇಶ, ಲೇಸಮಾಡುವ ಠಾವುಗಳಭಿಲಾಷೆಯಿಲ್ಲದೆ ಹೊದ್ದುವೆವು' ಎಂಬ ಪ್ರಭುವಿನ ಮಾತುಗಳು ಶ್ರೀಗಳವರಿಗೆ ಯಥಾವತ್ತಾಗಿ ಒಪ್ಪುತ್ತವೆ. 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ಜೀವನಧ್ಯೇಯ ಅವರದಾಗಿತ್ತು.

ಶ್ರೀಗಳವರದು ತಪೋನಿಷ್ಠ ಜೀವನ. ಪೂಜೆ, ಜಪ, ತಪಗಳಲ್ಲಿ ಶ್ರೀಗಳವರದು ಅಚಲವಾದ ನಿಷ್ಠೆ. ಅದಕ್ಕೆ ನಿಯಮಿತತನದ ಒಪ್ಪವಿಟ್ಟಿದ್ದರು. ಶರಣರ ಕಾಯಕಧರ್ಮವನ್ನು ಅವರು ಕಡೆಗಣಿಸುವವರಲ್ಲ. ಅವರ ಸ್ವಾನುಭಾವವೇ ಒಂದು ಶಿವಾನುಭವ. ಅದನ್ನೇ ಪ್ರವಚನದ ಮೂಲಕ ಬಿತ್ತರಿಸುತ್ತಿದ್ದರು. ಎಲ್ಲ ಬಗೆಯ ಅಧ್ಯಾತ್ಮಜ್ಞಾನವನ್ನು ಅವರು ಅರಿತುಕೊಂಡು ಅದನ್ನೇ ಸಹಜವಾದ, ತಿಳಿಯಾದ ಪಂಡಿತಮಾನ್ಯವಾದ ಪಾಮರಗ್ರಾಹ್ಯವಾದ ಭಾಷೆಯಲ್ಲಿ ತಿಳಿಸಿಕೊಡುತ್ತಿದ್ದರು. ಅವರಿಗೆ ಪ್ರವಚನಕಲೆ ದೈವದತ್ತವಾಗಿ, ಗುರುವಿನ ಹರಕೆಯಾಗಿ ಬಂದ ಮಹಾ ಕೊಡುಗೆಯಾಗಿದೆ. ಅವರ ಪ್ರವಚನಗಳನ್ನು ಎಷ್ಟು ದಿನ ಕೇಳಿದರೂ ಕೇಳಬೇಕೆನ್ನುವ ಆಶೆ ಹೆಚ್ಚುತ್ತಲೇ ಹೋಗುತ್ತದೆ. ಒಂದು ದಿನವೂ ಅವರು ಪ್ರವಚನ ಮಾಡುವ ಕಾಯಕವನ್ನು ತಪ್ಪಿಸಲಿಲ್ಲ. ಇತ್ತೀಚೆಗೆ ಕಾಖಂಡಕಿ ಗ್ರಾಮದಲ್ಲಿ ಅವರ ಕೊನೆಯ ಪ್ರವಚನ ನಡೆಯಿತು.

ಮನುಷ್ಯನಲ್ಲಿರುವ ಅವಗುಣಗಳನ್ನು ಕಳೆದುಕೊಂಡು, ಮನಸ್ಸನ್ನು ಹಿಡಿತದಲ್ಲಿಟ್ಟು ಕೊಂಡು, ಕರ್ಮಯೋಗದಿಂದ, ಭಕ್ತಿಯೋಗದ ಸಾಧನೆ ಮಾಡಿ, ಭಕ್ತಿಯೋಗದಿಂದ ಜ್ಞಾನಯೋಗದ ಕಡೆಗೆ ಸಾಗಿ ಭಕ್ತಿ–ಜ್ಞಾನ–ಕರ್ಮಗಳ ನಿಜವಾದ ಅರಿವು ಪಡೆಯುವುದೇ ಮನುಷ್ಯಜೀವನದ ಪರಮಗುರಿ ಎಂಬ ಸತ್ಯವನ್ನು ತಮ್ಮ ಪ್ರವಚನಗಳ ಮೂಲಕ ಅರುಹಿದ ಪೂಜ್ಯರ ಜ್ಞಾನಶಕ್ತಿಗೆ ಮಣಿಯದವರಾರು!

**ಅಧ್ಯಾತ್ಮ–ವಿಜ್ಞಾನಗಳ ಸಮನ್ವಯ**

ಅಧ್ಯಾತ್ಮ ಮತ್ತು ವಿಜ್ಞಾನ ಎರಡೂ ವಿರುದ್ಧ ಪದಗಳೆಂದು ಅನೇಕರು ಭಾವಿಸುತ್ತಾರೆ. ವಿಜ್ಞಾನವೆಂದರೆ ವಿವೇಕ. ಅದು ಕಾರಣಸಿದ್ಧಾಂತದ ಮೇಲೆ ಅವಲಂಬಿತವಾಗಿದೆ. ಕಾರಣವಿಲ್ಲದೆ ಯಾವುದನ್ನೂ ನಂಬಲಾರದು. ರೋಗಗಳು ಬರಲು ಕಾರಣವೇನು? ಪ್ರಕೃತಿವಿಕೋಪಗಳಾಗಲು ಕಾರಣವೇನು? ಹೀಗೆ ಕಾರಣಗಳನ್ನು ಹುಡುಕುವ ಪ್ರಕ್ರಿಯೆ

ಯನ್ನು ಅದು ಅವಲಂಬಿಸಿದೆ. ಹಾಗೆಯೇ ವಿಜ್ಞಾನ ಇಂದ್ರಿಯಾನುಭವಜನ್ಯವಾಗಿದೆ. ವಿಜ್ಞಾನದ ಕೆಲವು ಕೊಡುಗೆಗಳು ನಮಗೆ ಇಂದ್ರಿಯಗೋಚರವಾಗುವುದಿಲ್ಲ. ಉದಾ: ತಂತಿಯಲ್ಲಿ ವಿದ್ಯುತ್ ಹರಿಯುವುದು. ಆದರೆ ಯಂತ್ರಗಳು ತಿರುಗುವುದು, ವಿದ್ಯುದ್ದೀಪಗಳು ಹೊತ್ತಿಕೊಳ್ಳುವ ಮೂಲಕ ಅದರ ಅನುಭವ ನಮಗಾಗುತ್ತದೆ. ವಿಜ್ಞಾನವು ಖಚಿತ ಮತ್ತು ಸತ್ಯತತ್ವಗಳ ಮೇಲೆ ನಿಂತಿದೆ. ಯಾವುದೋ ದೇಶದಲ್ಲಿರುವ ವಿಜ್ಞಾನಿಯೊಬ್ಬ ಶೋಧಿಸಿರುವುದನ್ನು ಎಲ್ಲ ದೇಶದ ಜನರೂ ಒಪ್ಪಿ ಅದಕ್ಕೆ ಸಾರ್ವತ್ರಿಕ ಮುದ್ರೆಯೊತ್ತುತ್ತಾರೆ. ಉದಾ: 'ಎಲ್ಲ ವಸ್ತುಗಳು ಗುರುತ್ವಾಕರ್ಷಣೆಗೆ ಒಳಗಾಗಿವೆ' ಎಂಬ ಸಂಗತಿಯನ್ನು ಎಲ್ಲರೂ ಸತ್ಯವೆಂದು ಒಪ್ಪಿದ್ದಾರೆ. ಹೀಗೆ ವಿಜ್ಞಾನ ಕಾರಣಸಿದ್ಧಾಂತ, ಇಂದ್ರಿಯಾನುಭವ ಮತ್ತು ಖಚಿತತೆ ಈ ಮೂರು ಆಯಾಮಗಳ ಮೇಲೆ ಸಿದ್ಧಗೊಳ್ಳುತ್ತದೆ. ಇದೇ ತತ್ವಗಳ ಮೇಲೆಯೇ ಅಧ್ಯಾತ್ಮವಿಜ್ಞಾನವೂ ಪ್ರತಿಪಾದಿತವಾಗಿದೆ ಎಂಬುದನ್ನು ಜನಸಾಮಾನ್ಯರಿಗೂ ತಿಳಿಸುವ ಪ್ರಯತ್ನ ಮಾಡಿದವರು ಸ್ವಾಮಿ ವಿವೇಕಾನಂದರು ಮತ್ತು ಪೂಜ್ಯ ಸಿದ್ಧೇಶ್ವರ ಸ್ವಾಮಿಗಳು ಎಂಬುದು ಗಮನಾರ್ಹವಾದ ಸಂಗತಿ.

ಭಾರತೀಯ ಸಂಸ್ಕೃತಿಯನ್ನು ತಮ್ಮ ಪ್ರವಚನಗಳ ಮೂಲಕ ಪರಿಚಯಿಸುವ ಪೂಜ್ಯ ಸಿದ್ಧೇಶ್ವರ ಸ್ವಾಮಿಗಳು ವೇದ–ಉಪನಿಷತ್ತುಗಳ ಸಾರವನ್ನು ಆಧುನಿಕ ಯುಗದ ವಿಜ್ಞಾನದ ಆವಿಷ್ಕಾರಗಳೊಂದಿಗೆ ತೂಗಿ ನೋಡುತ್ತಾರೆ. ಇಂದು ಮಾಹಿತಿ ತಂತ್ರಜ್ಞಾನದ ಪರಿಣಾಮವಾಗಿ ಜಗತ್ತು ಬೆರಳತುದಿಯಲ್ಲಿ ಬಂದು ನಿಂತಿದೆ. ಪಾರಂಪರಿಕ ಶಿಕ್ಷಣ ಪದ್ಧತಿಯೂ ಬದಲಾಗಿ, ಕಂಪ್ಯೂಟರ್–ಮೊಬೈಲ್ ಕೇಂದ್ರಿತ ಶಿಕ್ಷಣ ದೊರಕುತ್ತಿದೆ. ಹೀಗೆ ಏನೆಲ್ಲ ಬದಲಾವಣೆಗಳಾಗುತ್ತಿದ್ದರೂ ನಮ್ಮ ಧಾರ್ಮಿಕ ಸಂಪ್ರದಾಯಗಳು ವೈಚಾರಿಕ–ವೈಜ್ಞಾನಿಕ ತಳಹದಿಯ ಮೇಲೆ ನಿಲ್ಲದೆ ಮತ್ತಷ್ಟು ಮೂಢನಂಬಿಕೆ–ಅಂಧಶ್ರದ್ಧೆಗಳನ್ನು ಬೆಳೆಸುತ್ತಿರುವುದು ನಿಜಕ್ಕೂ ಆಘಾತಕಾರಿಯಾದ ಸಂಗತಿಯಾಗಿದೆ.

ಹಾಗೆ ನೋಡಿದರೆ, ಭಾರತೀಯ ಸಂಸ್ಕೃತಿಯ ನಿರ್ಮಾಪಕರಲ್ಲಿ ವಿಜ್ಞಾನಿಗಳ ಕೊಡುಗೆಯೂ ಅನನ್ಯವಾಗಿದೆ. ಆರ್ಯಭಟ, ವರಾಹ, ಸುಶ್ರುತ ಮೊದಲಾದ ಮಹಾನುಭಾವರು ಜ್ಞಾನ–ವಿಜ್ಞಾನಕ್ಕೆ ನೀಡಿದ ಕಾಣಿಕೆಯೂ ಅಪೂರ್ವವಾದುದು. ಸೈದ್ಧಾಂತಿಕ ತಳಹದಿಯ ಮೇಲೆ ರೂಪುಗೊಂಡಿದ್ದ ಭಾರತೀಯ ದರ್ಶನಗಳೆಲ್ಲ ಒಂದು ವರ್ಗದವರ ಭಾಷೆಯ ಹಿಡಿತದಲ್ಲಿ ಸಿಕ್ಕು ವೈಜ್ಞಾನಿಕ ಸತ್ಯಗಳ ಮೇಲೆ ಮೂಢನಂಬಿಕೆ–ಅಂಧಶ್ರದ್ಧೆಯ ಮುಚ್ಚಳ ಮುಚ್ಚಿತು. ಮನುಷ್ಯನ ಸ್ವಾರ್ಥ, ಅವನ ಅವೈಚಾರಿಕತೆ ಕಾರಣವಾಗಿ ಧರ್ಮಸಿದ್ಧಾಂತಗಳು ಅಪವ್ಯಾಖ್ಯಾನಕ್ಕೆ ಒಳಗಾದವು.

ಈ ಹಿನ್ನೆಲೆಯಲ್ಲಿ ಪೂಜ್ಯ ಸಿದ್ಧೇಶ್ವರ ಶ್ರೀಗಳು ಯಾವುದೇ ಧರ್ಮದ ಮುಖವಾಣಿ ಯಾಗಿ ಮಾತನಾಡಲಿಲ್ಲ. ಅವರಿಗೆ ಎಲ್ಲ ಧರ್ಮಗಳೂ ಒಂದೇ. ಎಲ್ಲ ಧರ್ಮಗಳ ಸಾರವನ್ನು ಸಾರುವುದೇ ಅವರ ಪರಮೋದ್ದೇಶವಾಗಿತ್ತು. ಅರ್ಥಹೀನವಾದ ಆಚರಣೆಗಳಲ್ಲಿ ತೊಡಗಿ ಮನುಷ್ಯ ಅವೈಚಾರಿಕತೆಯಲ್ಲಿ ಸ್ಥಗಿತಗೊಂಡಿದ್ದಾನೆ. ಅಂಥ ಮನುಷ್ಯನಲ್ಲಿ

ಒಂದು ವೈಚಾರಿಕಪ್ರಜ್ಞೆ ಮೂಡಬೇಕೆಂದರೆ ಅಧ್ಯಾತ್ಮದ ಜೊತೆಗೆ ವಿಜ್ಞಾನವೂ ಬೇಕು ಎಂಬುದು ಶ್ರೀಗಳ ಅಭಿಪ್ರಾಯವಾಗಿತ್ತು.

'ಧರ್ಮವಿಲ್ಲದ ವಿಜ್ಞಾನ ಕುರುಡು; ವಿಜ್ಞಾನವಿಲ್ಲದ ಧರ್ಮ ಕುಂಟು' ಎಂದು ಜಗತ್ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನ್ ಹೇಳುತ್ತಾನೆ. ಯಾವ ವ್ಯಕ್ತಿಯಲ್ಲಿ ವೈಜ್ಞಾನಿಕ ಮನೋಭಾವ ಇರುತ್ತದೆಯೋ ಅಂಥ ವ್ಯಕ್ತಿ ಶುದ್ಧ ಅಧ್ಯಾತ್ಮಜೀವಿಯಾಗಬಲ್ಲ ಎಂದು ಶ್ರೀಗಳು ಹೇಳುತ್ತಾರೆ. ಎಲ್ಲವನ್ನು ಪ್ರಶ್ನಿಸುವ, ಅದಕ್ಕೆ ಸಮರ್ಪಕ ಉತ್ತರವನ್ನು ಕಂಡುಕೊಳ್ಳುವ ಸಕಾರಾತ್ಮಕ ಮನೋಭಾವ ಬೇಕು. ಆದರೆ ನಮ್ಮ ತರುಣರು ಒಂದು ಅಸ್ವಸ್ಥ ಪರಿಸರದಲ್ಲಿ ಬದುಕುತ್ತಿದ್ದಾರೆ. ಇತ್ತ ಅಧ್ಯಾತ್ಮದತ್ತ ಒಲವು ತೋರಿದರೂ ಸಮಕಾಲೀನ ಸಂದರ್ಭಗಳಿಗೆ ಯಾವುದೇ ರೀತಿ ಸ್ಪಂದಿಸಲಾರದಷ್ಟು ದುರ್ಬಲರಾಗಿದ್ದಾರೆ. ಸಾವಿರಾರು ವರುಷಗಳ ಹಿಂದೆ ಕಠೋಪನಿಷತ್ತಿನಲ್ಲಿ ಹೇಳಿದ 'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ' ಎಂಬ ಮಾತನ್ನು ಇಂಥವರಿಗಾಗಿ ಪೂಜ್ಯ ಶ್ರೀಗಳು ಉಲ್ಲೇಖಿಸುತ್ತಾರೆ. ಏಳಿರಿ! ಎಚ್ಚರಾಗಿರಿ, ನಾವು ಜ್ಞಾನಿಗಳು–ವಿಜ್ಞಾನಿಗಳು ಆಗಬೇಕಾದರೆ ನಮ್ಮೊಳಗಿನ ಅದ್ಭುತ ಶಕ್ತಿಯನ್ನು, ಮನಸ್ಸನ್ನು ದುಡಿಸಬೇಕೆಂದು ಪೂಜ್ಯರು ಪ್ರತಿಪಾದಿಸುತ್ತಾರೆ. ಯುವಜನಾಂಗದಲ್ಲಿ ವ್ಯಕ್ತಿತ್ವ ವಿಕಸನವಾಗಬೇಕು, ಅವರಲ್ಲಿ ಅಪಾರವಾದ ಶಕ್ತಿ ಸಾಮರ್ಥ್ಯಗಳಿವೆ. ಅದನ್ನು ಸರಿಯಾದ ಉಪಕ್ರಮದಲ್ಲಿ ಉಪಯೋಗಿಸುವ ಮನಸ್ಸು ಮಾಡಬೇಕು. ಇಂದು ಯುವಕರು ಪಡೆಯುತ್ತಿರುವ ಶಿಕ್ಷಣ ಅವರನ್ನು ನಿಂತ ನೆಲದಿಂದ, ಪರಂಪರೆ, ಸಂಸ್ಕೃತಿಗಳಿಂದ ದೂರ ಸರಿಸುತ್ತಿದೆ. ಮಾನವೀಯ ಮೌಲ್ಯಗಳು ಅಧಃಪತನಗೊಳ್ಳುತ್ತಿವೆ. ವಿಜ್ಞಾನದ ಆವಿಷ್ಕಾರಗಳಿಂದ ಭೌತಿಕ ಶ್ರೀಮಂತಿಕೆಯನ್ನು ನಾವು ಪಡೆದಿದ್ದೇವೆ, ಭೋಗಸುಖದ ಬೆನ್ನುಹತ್ತಿದ್ದೇವೆ. ಆದರೆ ನಮ್ಮ ಅಸ್ತಿತ್ವ ಮತ್ತು ಅಸ್ಮಿತೆಗಳನ್ನು ಕಳೆದುಕೊಂಡಿದ್ದೇವೆ. ಇದಕ್ಕೆಲ್ಲ ನಮ್ಮ ಅತಿಯಾದ ಅಪೇಕ್ಷೆ–ಮೋಹಗಳೇ ಕಾರಣ ಎಂದು ಶ್ರೀಗಳು ಹೇಳುತ್ತಾರೆ. ಇಂದು ಕಂಪ್ಯೂಟರ್–ಮೊಬೈಲ್‌ಗಳಿಂದ ಕ್ರಾಂತಿಯೇ ಆಗಿದೆ. ನಿಜ, ಆದರೆ ಅದರಿಂದ ಉತ್ಪಾದಿತವಾಗುತ್ತಿರುವ ಇ–ತ್ಯಾಜ್ಯ ಒಂದು ಜಾಗತಿಕ ಸಮಸ್ಯೆಯಾಗಿದೆ. ಮೊಬೈಲ್ ಇಲ್ಲದೆ ಒಂದು ಕ್ಷಣವೂ ಬದುಕಲಾರದ ಸ್ಥಿತಿಗೆ ಬಂದುಬಿಟ್ಟಿದ್ದಾರೆ. ಏನೆಲ್ಲವನ್ನೂ ಮನುಷ್ಯರು ಬಿಟ್ಟಾರು, ಮೊಬೈಲ್ ಮಾತ್ರ ಬಿಡಲಾರರು ಎಂಬುವಷ್ಟರಮಟ್ಟಿಗೆ ಮನುಷ್ಯ ಅದರ ಬೆನ್ನುಹತ್ತಿದ್ದಾನೆ. ಅದಕ್ಕಾಗಿ ಇಂದು ವಿಜ್ಞಾನಿಗಳು ಮೊಬೈಲ್‌ನಿಂದ ಮನುಷ್ಯನನ್ನು ದೂರ ಇಡುವುದು ಹೇಗೆ ಎಂಬುದರ ಕುರಿತು ಚಿಂತಿಸುತ್ತಿದ್ದಾರೆ ಎಂಬ ರೋಚಕ ಸಂಗತಿಯನ್ನು ಸಿದ್ಧೇಶ್ವರ ಸ್ವಾಮಿಗಳು ಬೆಳಗಾವಿ ಪ್ರವಚನದಲ್ಲಿ ಹೇಳಿದ್ದರು.

ವಿಜ್ಞಾನವಾದದ ಪರಿಣಾಮವಾಗಿ ನಾವು ಭೌತಿಕ ಶ್ರೀಮಂತಿಕೆಯ ಬದುಕು ಸಾಗಿಸಬಹುದು, ಆದರೆ ಮನಸ್ಸಿನ ಶಾಂತಿಯನ್ನು ಪಡೆಯಲು ಸಾಧ್ಯವಿಲ್ಲ. 'ಹಾಸಿಗೆಯನ್ನು ಕೊಳ್ಳಬಹುದು; ನಿದ್ರೆಯನ್ನಲ್ಲ' ಎಂಬ ಮಾತಿನಂತೆ, ಭೋಗವಸ್ತುಗಳನ್ನು ಖರೀದಿಸಬಹುದು, ಭೋಗಿಸಲು ಶಕ್ತವಾದ ಶರೀರ, ಮನಸ್ಸುಗಳೇ ಇಲ್ಲದಿದ್ದರೆ ಅಂಥ

ಭೌತಿಕ ಸುಖದಿಂದ ಏನು ಪ್ರಯೋಜನ? ಅಂತಿಮಸತ್ಯದ ಸಾಕ್ಷಾತ್ಕಾರ ಜ್ಞಾನಿಗಳಿಗೆ, ಅನುಭಾವಿಗಳಿಗೆ, ವಿಜ್ಞಾನಿಗಳಿಗೆ ಸಾಧ್ಯವಾಗುತ್ತದೆ ಎಂದು ಶ್ರೀಗಳು ಹೇಳುತ್ತಾರೆ. ಅಬ್ದುಲ್ ಕಲಾಂ ಒಬ್ಬ ವಿಜ್ಞಾನಿಯಾಗಿರುವಂತೆ ಶ್ರೇಷ್ಠ ಅಧ್ಯಾತ್ಮಜೀವಿಯೂ ಆಗಿದ್ದರು ಎಂಬುದನ್ನು ಶ್ರೀಗಳು ಉದಾಹರಣೆಯಾಗಿ ನೀಡುತ್ತಿದ್ದರು.

ಒಟ್ಟಾರೆ, ವಿಜ್ಞಾನಕ್ಕೆ ಅಧ್ಯಾತ್ಮದ ಊರುಗೋಲು ಬೇಕು. ಅದರಿಂದಲೇ ಜಗದ ಏಳ್ಗೆ ಸಾಧ್ಯ ಎಂದು ಶ್ರೀಗಳು ಪರಿಭಾವಿಸಿದ್ದರು. ಶ್ರೀಗಳು ಸೂಕ್ತ ಉದಾಹರಣೆ ಗಳೊಂದಿಗೆ ಜನರ ಮನಸ್ಸಿಗೆ ತಟ್ಟುವ ರೀತಿಯಲ್ಲಿ ಉಪದೇಶ ನೀಡುತ್ತಿದ್ದರು. ನೂತನ ಯುಗ–ಪುರಾತನ ಪಥಗಳ ನಡುವಿನ ಕೊಂಡಿಯಾಗಿ ವರ್ತಮಾನದ ಬದುಕನ್ನು ಸಹ್ಯಗೊಳಿಸಲು ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದ ಪೂಜ್ಯರ ಜೀವನ ನಮಗೆಲ್ಲ ಆದರ್ಶವೂ, ಅನುಕರಣೀಯವೂ ಆಗಿದೆ. ಶ್ರೀಗಳು ದಿನಾಂಕ 2.1.2023ರಂದು ಲಿಂಗೈಕ್ಯರಾದರು. 2014ರಲ್ಲಿ ಗುರುಪೂರ್ಣಿಮೆಯಂದೇ ತಮ್ಮ ಜೀವನದ ಕೊನೆಯ ಸಂದೇಶವನ್ನು ಅವರು ಬರೆದಿಟ್ಟಿದ್ದರು. ‘ಹಲವು ದಶಕಗಳ ಕಾಲ ಈ ಅದ್ಭುತ ಜಗತ್ತಿನಲ್ಲಿ ಬಾಳಿದ್ದೇನೆ; ನೋಡಿ ತಿಳಿದು ಅನುಭವಿಸಿದ್ದೇನೆ. ನನ್ನ ಬದುಕು ಕೊನೆಗೊಳ್ಳುವ ಮುಂಚೆ ಅದನ್ನು ಕೃತಜ್ಞತೆಯಿಂದ ಸ್ಮರಿಸಬೇಕು ಎಂದು ತಿಳಿಸುತ್ತ ತಮ್ಮ ದೇಹದ ವಿಷಯವಾಗಿಯೂ ನಾಲ್ಕು ಆಶಯನುಡಿ ಪ್ರಸ್ತಾಪಿಸಿದ್ದರು. 1. ದೇಹವನ್ನು ಭೂಮಿಯಲ್ಲಿಡುವ ಬದಲು ಅಗ್ನಿಯರ್ಪಿತ ಮಾಡುವುದು, 2. ಶ್ರಾದ್ಧಿಕ ವಿಧಿ–ವಿಧಾನ ಕ್ರಮಗಳು ಅನಗತ್ಯ, 3. ಚಿತಾಭಸ್ಮವನ್ನು ನದಿ ಅಥವಾ ಸಾಗರದಲ್ಲಿ ವಿಸರ್ಜಿಸುವುದು. 4. ಯಾವುದೇ ಬಗೆಯ ಸ್ಮಾರಕ ನಿರ್ಮಿಸಲಾಗದು. ಈ ಕೊನೆಯ ಆಶಯವನ್ನು ಅವರು ಇಬ್ಬರು ನ್ಯಾಯಾಧೀಶರ ಸಮ್ಮುಖದಲ್ಲಿ ವಿಲ್ ಮಾಡಿಟ್ಟಿದ್ದರು. ‘ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಸಹಜವೂ ಇಲ್ಲ, ಅಸಹಜವೂ ಇಲ್ಲ, ನಾನೂ ಇಲ್ಲ, ನೀನೂ ಇಲ್ಲ. ಇಲ್ಲ ಇಲ್ಲ ಎಂಬುದು ತಾನಿಲ್ಲ. ಗುಹೇಶ್ವರನೆಂಬುದು ತಾ ಬಯಲು’ ಎಂಬ ಅಲ್ಲಮನ ವಚನದ ಆಶಯಕ್ಕೆ ಅನುಗುಣವಾಗಿ ತಮ್ಮ ಬದುಕನ್ನು ನಡೆಸಿ ಅವರು ವಿದೇಹಮುಕ್ತರಾದರು. ಪಂಚಭೂತಗಳಲ್ಲಿ ಒಂದಾದರು. ಅಂಥ ಮಹಾತ್ಮರಿಗೆ ಸಾವಿಲ್ಲ, ಅವರು ಸಾವನರಿಯರು. ಅವರು ನಿತ್ಯಮುಕ್ತರು. ಅಂಥ ಪ್ರಾತಃಸ್ಮರಣೀಯ ಪುಣ್ಯಪುರುಷರ ಕಾಲದಲ್ಲಿ ನಾವೆಲ್ಲ ಇದ್ದೆವು ಎಂಬುದೇ ಒಂದು ಪವಾಡ! ಒಂದು ಸೋಜಿಗ!!

□

# ಅಷ್ಟು ಅವಸರವೇನಿತ್ತು ಬುದ್ಧಿ?!

**ಟಿ. ದೇವಿದಾಸ್**

ನಮ್ಮ ಕಾಲದ ವೈಚಿತ್ರ್ಯ ಮತ್ತು ಶ್ರೇಷ್ಠ ಕುತೂಹಲದ ವ್ಯಕ್ತಿಗಳಾಗಿ, ದೈವತ್ವದ ಪರಮ ಚಿಂತನೆಯಲ್ಲಿ ಬದುಕನ್ನು, ಬದುಕಿನ ಸಾರ್ಥಕತೆಯನ್ನು ಕಂಡ ಅಪ್ಪಟ ಕನ್ನಡದ ಮನಸ್ಸು ಹೀಗೆ ನಮ್ಮ ನಡುವೆಯೇ ಇದ್ದು ನಮ್ಮಂತಾಗದೆ ವಿಶೇಷವಾಗಿ ತಮ್ಮ ಬಾಳನ್ನು ಬದುಕಿದ ಇಬ್ಬರು ದೈವೀಸ್ವರೂಪಿ ಜಂಗಮರು ಎಂದರೆ ಒಬ್ಬರು ಸಿದ್ಧಗಂಗೆಯ ಜಗದಗಲ ಜೀವಜಂಗಮ ಪೂಜ್ಯ ಡಾ. ಶ್ರೀ ಶಿವಕುಮಾರ ಸ್ವಾಮಿಗಳು, ಇನ್ನೊಬ್ಬರು ಪೂಜ್ಯ ಸಿದ್ಧೇಶ್ವರ ಶ್ರೀಗಳು. ಮಹನೀಯರು, ಮಾನವತಾವಾದಿ ನಿಷ್ಠರು ಎಂತ ಸಂಬೋಧಿಸಲ್ಪಡುವ ಇವರೀರ್ವರೂ ನಮ್ಮ ಕಾಲದ ಅಮೃತಬಿಂದುಗಳು. ಇವರಿಗೆ ಇವರೇ ಸಾಟಿಯೆಂಬಂತೆ ಬಾಳಿ ಬದುಕಿದವರು. ಮೇಲ್ಪಂಕ್ತಿಯಾಗಿ ಬದುಕನ್ನು ಸವೆದರು, ಸವೆದು ಗಂಧವಾಗೇ ಉಳಿದುಬಿಟ್ಟರು. ಶರಣರ ಔನ್ನತ್ಯವನ್ನು ಮರಣದಲ್ಲಿ ಕಾಣ ಬೇಕಂತೆ! ಸರಿಹೊತ್ತಿನ ಆಧುನಿಕತೆಯಲ್ಲೂ ಹೀಗೆ ಬದುಕಲು ಯಾರಿಂದ ಸಾಧ್ಯ ಎಂಬ ಚಿಂತನೆಗೂ ಸಾಧ್ಯವಿಲ್ಲದೆ ಬದುಕಿದವರು ಇವರೀರ್ವರು. ಯಾರು ಏನೇ ಅಂದರೂ ಈರ್ವರೂ ಮರೆಯಲಾಗದ ಅಮೃತಫಲಗಳು. ಇಬ್ಬರನ್ನೂ ಕಳೆದುಕೊಂಡ ಈ ನೆಲ ನಿಜವಾದ ಅರ್ಥದಲ್ಲಿ ಅಮೂಲ್ಯ ರತ್ನಗಳನ್ನು ಕಳೆದುಕೊಂಡಿದೆ. ಒಂದು ಸಲ ಸುಮ್ಮನೆ ಕುಳಿತು ಈರ್ವರ ಬದುಕನ್ನು ಆಲೋಚಿಸಿದರೆ, ಅಬ್ಬಾ ಎನ್ನುವಷ್ಟು ಅಚ್ಚರಿ! ಮೈಮನ ತುಂಬುವಷ್ಟು ರೋಮಾಂಚನ! ಬೃಹದಾಕಾರವೂ ಆಕಾಶದೆತ್ತರವೂ ಆಗಿ ಕಾಣುವ ಈ ಎರಡು ವ್ಯಕ್ತಿತ್ವಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ನಾವೆಷ್ಟು ಪೀಚು ಅನಿಸುತ್ತದೆ!

ಅನ್ಯರಲ್ಲಿ ಇರುವ ಗುಣವನ್ನು ಗ್ರಹಿಸುವ ಬಹು ದೊಡ್ಡ ಔದಾರ್ಯದ ಮನಸ್ಸು ಶ್ರೀ ಸಿದ್ಧೇಶ್ವರ ಸ್ವಾಮಿಗಳಲ್ಲಿ ಅಂತರ್ಗತವಾಗಿತ್ತು. ಅದಕ್ಕಾಗಿ ಅವರು ಬಹು ಎತ್ತರವನ್ನು ಏರಿದ ಮಹಾನ್ ಮಾನವತಾವಾದಿಯಾಗಿ ನಮಗೆ ಕಂಡರು. ಪ್ರೀತಿಯನ್ನು ಮೊಗೆಮೊಗೆದು ಉಣಿಸಿದರು. ಒಳ್ಳೆಯದನ್ನು ಮಾತ್ರ ಹಿಂಜಿ ಹಿಂಜಿ ಸಮಾಜಕ್ಕೆ ಉಣಿಸಿದರು. ಒಂದೇ ಒಂದು ಸಲವೂ ಅವರಲ್ಲಿ ಈ ಸಮಾಜದಲ್ಲಿರುವ ವಕ್ರತೆ ಕಾಣಲಿಲ್ಲ. ವಕ್ರವಾಗಿ ಕಂಡಿದ್ದನ್ನೂ ನೇರವಾಗಿ ನೋಡಿದರು. ವ್ಯಾಖ್ಯಾನಿಸಿದರು. ಯಾರನ್ನೂ ಒಪ್ಪುವ, ಅಂತೆಯೇ ಸ್ವೀಕರಿಸುವ ಮನೋಧರ್ಮ ಸಹಜವಾಗೇ ಅವರಲ್ಲಿತ್ತು. ಒಳ್ಳೆಯದನ್ನು ಒಳ್ಳೆಯ ಭಾವದಲ್ಲಿ ನೋಡುವ ಅವರ ಮನಸ್ಸು ಸಮಾಜದ ಓರೆಕೋರೆಗಳನ್ನು

ತಿದ್ದಲು ನಿರಂತರವಾಗಿ ಯತ್ನಿಸಿತ್ತು. ಸಮಾಜದ ಲೋಪವನ್ನು, ದೋಷವನ್ನು ಸರಿಪಡಿಸುವ ಚಡಪಡಿಕೆ ಅವರಲ್ಲಿತ್ತು. ಅವರ ಪ್ರವಚನಗಳನ್ನು ಕೇಳಿದರೆ ಆದರ್ಶವೇ ಮೈದಳೆದು ನಿಂತಿರುತ್ತಿತ್ತು. ನೈತಿಕತೆ ಅವರ ಬಹು ದೊಡ್ಡ ಶಕ್ತಿ. ಅವರು ಏನೇ ಹೇಳಿದರೂ ಅದು ಪೊಳ್ಳು ಆದರ್ಶವೆನಿಸದಿರಲು ಕಾರಣ, ಅವರು ನಡೆದು ಬಂದ ರೀತಿ!

ತಾವು ಸದಾಕಾಲವೂ ಧರಿಸುವ ಶ್ವೇತವರ್ಣದ ಬಟ್ಟೆಯಷ್ಟೇ ಮೈ-ಮನಸ್ಸುಗಳನ್ನು ಶುಚಿಯಾಗಿಟ್ಟುಕೊಂಡ ಪರಮವೈರಾಗ್ಯದ ಮೂರ್ತಿಯಾಗಿ ನಮಗೆ ಕಾಣಲು ಸಾಧ್ಯವಾಗಿದ್ದು ನಡೆ ನುಡಿಯಲ್ಲಿನ ಸಮನ್ವಯದ ಸಾಂಗತ್ಯದಿಂದ! ಕಣ್ಣಲ್ಲಿ ತುಂಬಿಕೊಂಡಿದ್ದ ಸಾತ್ವಿಕ ಮೌನದಿಂದ! ಮನಸು ಇನ್ನೊಂದು ಲೋಕದ ಹುಡುಕಾಟದಲ್ಲಿರುವಂತೆ ಭಾಸವಾಗಿದ್ದರಿಂದ! ಮಾಸದ ತೇಜಸ್ಸು ಅವರ ಮುಖದಲ್ಲಿ ಮಡುಗಟ್ಟಿದ್ದರಿಂದ! ಆದರೆ, ನಮ್ಮವರು ಅಂತ ಅನಿಸುವುದು ಮಾತ್ರ ನಮ್ಮಂತೆ ಶುಭ್ರವಾದ ಬಿಳಿ ಬಟ್ಟೆಯನ್ನು ಮೈತುಂಬಾ ಧರಿಸಿದ್ದರಿಂದ!

ವಕ್ರವಾಗದೆ, ಹೊಂಚದೆ, ಕೆಟ್ಟದ್ದನ್ನು ಕಾಣಲಾರದೆ, ಬಳುಕಲಾರದೆ ಇರುವ ಭಾಷೆಯಿಂದ ಯಾವ ಸೃಷ್ಟಿಶೀಲತೆಯೂ ಸಾಧ್ಯವಿಲ್ಲ ಎನಿಸಿಯೇ, ಅವರ ಹದವಾದ ಏರಿ ಇಳಿಯುವ ಮಾತಿನ ಓಘದ ಗಂಧದ ಮಾತುಗಳನ್ನು ಕೇಳಿಸಿಕೊಳ್ಳುವುದಕ್ಕೆ ಕಿವಿಗೆ ಹಿತವೆನಿಸುತ್ತದೆ. ಯಾವ ಉದ್ವೇಗವೂ ಆವೇಶವೂ ಇಲ್ಲದ ಹದ ತಪ್ಪದ ಅವರ ಮಾತುಗಳು ಅಪ್ಯಾಯಮಾನವಾಗಿ ತೋರುತ್ತಲೇ ಇರುತ್ತದೆ ಎಂದಿಗೂ! ಎಂಥವನಿಗೂ ಅರ್ಥವಾಗುವ ಉತ್ತರ ಕರ್ನಾಟಕದ ಅವರ ದೇಸೀ ಲಯದ ಮಾತುಗಳು ಸ್ವದೇಶಿಯಾಗಿದ್ದು ಯಾವ ವಿಮರ್ಶೆಯ ಪ್ರಜ್ಞೆಯನ್ನೂ ಕಳೆದುಕೊಳ್ಳುತ್ತಿರಲಿಲ್ಲ. ಅವರು ಒಂದು ರೀತಿ Critical Insider ಇದ್ದ ಹಾಗೆ ಮಾತನಾಡಿದರು. ಕಥೆ, ಉಪಮೆ, ರೂಪಕಗಳು ಸೃಷ್ಟಿಶೀಲವಾಗಿ ಅವರ ಮಾತುಗಳಲ್ಲಿ ಕಂಡದ್ದು ಈ ಬಗೆಯ ದೃಷ್ಟಿಕೋನದ ಒಳಚಿಂತನೆಗಳಿಂದ!

ಸಿದ್ಧೇಶ್ವರರು ಒಳಮನಸಿನಲ್ಲೂ, ಮನುಷ್ಯ ಸಹಜ ಸ್ವಭಾವದಲ್ಲೂ ಹುಟ್ಟಿಕೊಳ್ಳಬಹುದಾದ ಅಸಹಜವೇನಲ್ಲದ ನೆಗೆಟಿವ್ ಚಿಂತನೆಯನ್ನು ಅನ್ಯಥಾ ಮಾಡಿದವರು ಅಲ್ಲವೇನು? ಎಂದರೆ ಮಾಡಿರಬಹುದಾದ ಸಂದರ್ಭ ಸನ್ನಿವೇಶಗಳು ಅವರ 82 ವರ್ಷದ ಬದುಕಿನಲ್ಲಿ ಎದುರಾಗಿರಲೇಬೇಕು. ಇಲ್ಲ, ಮುಖಾಮುಖಿ ಆಗಿರಲೇಬೇಕು ಎಂದು ಅನಿಸಲು ಕಾರಣ ಅವರು ಸ್ವಭಾವತಃ ಸಾತ್ವಿಕರು ಆಗಿರುವುದರಿಂದ! ಎಲ್ಲದರಿಂದರಲ್ಲೂ ಒಳಿತನ್ನೇ ಬಯಸುವವರಿಗೆ ಈ ಕಾಲವಲ್ಲ ಎಂಬುದು ಎಲ್ಲರ ಅನುಭವಜನ್ಯ ಸತ್ಯ! ಆದರೆ, ಸತ್ಯವಂತರಿಗೆ, ಸಾತ್ವಿಕರಿಗೆ ಇದು ಕಾಲವಲ್ಲ ಎಂಬ ಮಾತು ಕೇಳಿದ ಮೇಲೂ ಆ ಮಾತನ್ನು ಸುಳ್ಳು ಮಾಡಿದವರು ಸಿದ್ಧೇಶ್ವರರು ಎಂದರೆ ಉತ್ಪ್ರೇಕ್ಷೆಯಾಗಲಾರದು!

ಆದರೆ, ಈ ಮಾತು ಒಮ್ಮೊಮ್ಮೆ ಪೂರ್ಣಸತ್ಯವಾಗಿ ಕಾಣುತ್ತದೆ, ಸಿದ್ಧೇಶ್ವರರ ಪಾಲಿಗೆ ಮಾತ್ರ! ಯಾಕೆಂದರೆ, ಅವರನ್ನು ಎಲ್ಲರೂ ಮುಟ್ಟಲೊಲ್ಲೆವು! ಅವರ ನೈತಿಕತೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲೊಲ್ಲೆವು! ಅವರ ನಿಜಮನಸ್ಸನ್ನು ಅರ್ಥೈಸಿಕೊಳ್ಳಲೊಲ್ಲೆವು! ಹೋಗಲಿ, ಕೊನೆಯ ಪಕ್ಷ ಅವರ ಮಾತುಗಳನ್ನು ಕೇಳಲೊಲ್ಲೆವು, ಅವರನ್ನು ಓದಲೊಲ್ಲೆವು! ಹಾಗೂ ಹೀಗೂ ಮಾಡಿ ಅವರನ್ನು ನಾವು ಸಾತ್ವಿಕರೆಂದು ಹೊಗಳುತ್ತಾ, ನಮ್ಮೊಳಗಿನ ಅನೈತಿಕತೆಯನ್ನು ಮರೆಯುತ್ತಾ ಅವರನ್ನು ಅನುಸರಿಸಲೊಲ್ಲೆವು! ಹುಸಿ ಶ್ಲಾಘನೆಯ ಮಾತುಗಳನ್ನು ಅವರ ಬಗ್ಗೆ ಆಡುತ್ತ, ಅವರನ್ನು ದೇವರನ್ನಾಗಿ ಮಾಡುವ ದೊಡ್ಡಸ್ಥಿಕೆಯನ್ನು ತೋರಿಸುವುದು ಕಪಟವೆನಿಸುತ್ತದೆ!

ಜಾತಿ, ಮತ, ಪಂಥಗಳನ್ನು ಮೀರಿ ನಿಂತ ನಮ್ಮ ಕಾಲದ ನಿಜ ಸಂತನನ್ನು ನಾವು ಸ್ವೀಕರಿಸುವ ಬಗೆಯಲ್ಲೇ ಗೊಂದಲವಿದೆ. ಹೊಲಸು ರಾಜಕೀಯದ ವಾಸನೆಯಿದೆ. ಅವರನ್ನು ನಿಜ ಮನಸ್ಸಿನಿಂದ ಆರಾಧಿಸುವುದು ಓದುಬರೆಹವಿಲ್ಲದ ಹಳ್ಳಿಗರು ಮಾತ್ರ! ಓದಿಕೊಂಡವರು ಅವರನ್ನು ವಿಮರ್ಶೆಯ ಕಟಕಟೆಗೆ ತಂದು ನಿಲ್ಲಿಸುತ್ತಾರೆ. ಅತ್ಯಾಧುನಿಕ ವೈದ್ಯಕೀಯ ವ್ಯವಸ್ಥೆಯಿರುವ ಈ ಕಾಲದಲ್ಲಿ ಅವರನ್ನು ಉಳಿಸಿಕೊಳ್ಳುವುದು ಅಂಥಾ ಶ್ರಮವೇನೂ ಆಗಿರಲಿಲ್ಲ. ಆದರೂ ಸಾಯಬೇಕೆಂಬ ದೃಢ ನಿಲುವನ್ನು ಹೊಂದಿದ ಅವರ ಬದುಕಿನ ಕೊನೆಯ ದಿನಗಳಲ್ಲಿ, ಗಳಿಗೆಗಳಲ್ಲಿ ಅವರನ್ನು ಕಾಡಿದ್ದಾದರೂ ಏನು? ಯಾವ ಹಂಬಲ ಅವರಲ್ಲಿತ್ತು? ಬದುಕಿನ ಸತ್ಯವನ್ನು ಅವರು ಕಂಡಿದ್ದಾದರೂ ಹೇಗೆ? ಅಥವಾ ಈ ಬದುಕನ್ನು ಮುಗಿಸಿದರೆ ಮಾತ್ರ ಬದುಕಿನ ಸತ್ಯವನ್ನು ಕಾಣಲು ಸಾಧ್ಯ ಎಂದು ಹೊರಟರೆ? ಯಾವ ಆಸೆಯೂ ಇಲ್ಲದೆ ಬದುಕಿದ ಅವರಿಗೆ ಕೊನೆಯ ಹಂತದಲ್ಲಿಯೂ ಯಾವ ಆಸೆಯೂ ಕಾಡಲಿಲ್ಲ ಎಂದರೆ ಅವರ ಮನಃಸ್ಥಿತಿಯನ್ನು ಅರ್ಥೈಸಿಕೊಳ್ಳಲು ಯಾವ ಮಾರ್ಗ ನಮಗಿದೆ? ಯಾವ ಒಳನೋಟಗಳು ನಮ್ಮಲ್ಲಿವೆ?

ನಾನು ಹೇಳುವುದು ಇಷ್ಟೆ: ಕೊನೆಯಪಕ್ಷ ಅವರ ಬದುಕು ಅಥವಾ ಬದುಕಿನ ಕುರಿತಾದ ಅವರ ಒಳನೋಟಗಳು ನಮ್ಮೊಳಗೂ ಸ್ವಲ್ಪವಾದರೂ ಹುಟ್ಟಿಕೊಳ್ಳಬೇಕು. ಹೆಚ್ಚೇನೂ ಅಲ್ಲದಿದ್ದರೂ, ಸ್ವಲ್ಪ ಮಟ್ಟಿಗಾದರೂ! ಯಾವುದದು? ಅಲ್ಲದಿದ್ದರೂ ಕೊನೆಯ ಪಕ್ಷ ಸ್ವಾರ್ಥವನ್ನಾದರೂ ತಕ್ಕಮಟ್ಟಿಗಾದರೂ ತ್ಯಜಿಸಲು ಸಾಧ್ಯವಾಗುವುದು?' ನಿತ್ಯದ ಬದುಕಿನಲ್ಲಿ ಪರೋಪಕಾರವನ್ನು ರೂಢಿಸಿಕೊಳ್ಳುವುದು ಅಲ್ಪಮಟ್ಟಿಗಾದರೂ ಸಾಧ್ಯವಾಗಬೇಕು! ಎಲ್ಲದರಿಂದ, ಎಲ್ಲರಿಂದ ಬಿಟ್ಟು ಬದುಕುವುದನ್ನು, ಲೌಕಿಕದ ಸುಖಗಳಿಂದ ಎಷ್ಟು ಸಾಧ್ಯವೋ ಅಷ್ಟು ಅಗಲಿ ಇರುವುದನ್ನು ಕಲಿಯಲು ಇನಿತಷ್ಟಾದರೂ ಸಾಧ್ಯವಾಗಬೇಕು! ಲೋಕವ್ಯವಹಾರದಲ್ಲಿ ಎಲ್ಲದರ ನಡುವೆಯೇ ಇದ್ದೂ ಇಲ್ಲದಂತೆ ಬದುಕಲು ದಿನದ ಸ್ವಲ್ಪ ಹೊತ್ತಾದರೂ ಸಾಧ್ಯವಾಗಬೇಕು! ಆದರೆ, ಇದೆಲ್ಲ ಹೇಳುವುದಕ್ಕೆ ಕೇಳುವುದಕ್ಕೆ ಮಾತ್ರ ಸಾಧ್ಯ ಎಂಬುದನ್ನು ನಾವು ಬಲ್ಲೆವು. ಆದ್ದರಿಂದ, ಈ ಮೌಲ್ಯಗಳ ಅನುಕರಣೆ, ಅನುಸರಣೆ ನಮ್ಮಿಂದ ಸಾಧ್ಯ ಇಲ್ಲವೇ ಇಲ್ಲ! ಯಾಕೆಂದರೆ, ಅವರಷ್ಟು

ಎತ್ತರದ ಚಿಂತನೆಯನ್ನು ನಾವು ಬದುಕಿನಲ್ಲಿ ರೂಢಿಸಿಕೊಂಡವರಲ್ಲ. ಅಂಥ ಸಾಧಕರನ್ನು ಅವರು ಇದ್ದಾಗಲೂ, ಅಗಲಿದ ಮೇಲೂ ಅವರನ್ನು ಹಾಡಿ ಹೊಗಳುವ, ಆ ಮೂಲಕ ಬದುಕುವುದನ್ನು ಕಲಿತ ನಮಗೆ ಅಂಥ ಸರಳ ಬದುಕು ಒಲ್ಲದಾಗಿದೆ!

ಇಪ್ಪತ್ತನೆಯ ಶತಮಾನ ಕನ್ನಡದ ಅತ್ಯುತ್ತಮ ಕಾಲ ಎಂದು ಜಿಎಸ್ಸೆಸ್ ಹೇಳಿದ್ದರು. ನಿತ್ಯ ಬದುಕಿನಲ್ಲೇ ನಮ್ಮನ್ನು ವಿಸ್ಮಯಗೊಳಿಸುವಂಥ ಈ ಶತಮಾನದ ಆಚೀಚೆಯ ಕೆಲವು ವರ್ಷಗಳಲ್ಲಿ ಅನೇಕ ಸಾಧಕರು ನಮ್ಮೊಂದಿಗೇ ಇದ್ದು ಬಾಳಿ ಹೋದರು. ಅವರ ಗುಣದೋಷಗಳು ನಮ್ಮ ಮೆಚ್ಚುಗೆಯ ಅಂಶವಾಗೇ ನಮಗೆ ಈ ಸಾಧಕರು ಕಾಣುತ್ತಾರೆ, ಕಾಣಬೇಕು. ಕಲೆ, ಸಾಹಿತ್ಯ, ಶಿಕ್ಷಣ, ಜನಪದ, ವಿಜ್ಞಾನ, ಕ್ರೀಡೆ, ಪರಿಸರ– ಇವೇ ಮುಂತಾದ ಎಲ್ಲ ಪ್ರಕಾರಗಳಲ್ಲಿಯೂ ಅದ್ಭುತವೆನಿಸಬಹುದಾದ ಅಚ್ಚರಿಯನ್ನು ಸೃಷ್ಟಿಸಿಯೇ ಇವರು ನಮ್ಮನ್ನಗಲಿದರು. ಬಹುಸಂಖ್ಯಾತರು ಮೆಚ್ಚಿದ್ದು ಬೇರೆ, ನಿರ್ದಿಷ್ಟ ವರ್ಗ, ಜಾತಿ, ಪಂಥಗಳೇ ಮೆಚ್ಚಿ ಕೊಂಡಾಡಿದ್ದೂ ಬೇರೆ! ಆದರೆ, ಎಲ್ಲರೂ ಮೆಚ್ಚುವ ಸಾಧಕರಲ್ಲಿ ಸಿದ್ಧೇಶ್ವರರು ಪ್ರಾತಃಸ್ಮರಣೀಯರು.

ಯಾಕೆಂದರೆ, ಅವರು ಒಂದು ಇಸಂಗೆ ಅಂಟಿಕೊಂಡೇ ಬದುಕಲಿಲ್ಲ. ತಮ್ಮದೇ ಆದ ತತ್ವಸಿದ್ಧಾಂತವನ್ನು ಹೇರಿದವರಲ್ಲ, ಪಕ್ಷ ಕಟ್ಟಿದವರಲ್ಲ, ಶಿಷ್ಯಸಂಕುಲವನ್ನು ಕಟ್ಟಿಕೊಂಡು ಮೆರೆದವರಲ್ಲ, ಕರ್ಮಠರಾಗದೆ ಪುರಾಣ, ಗೀತೆ, ವೇದೋಪನಿಷತ್ತುಗಳನ್ನೂ ಓದಿದರು. ವೈದಿಕ ಸಾಹಿತ್ಯವನ್ನೂ ಓದಿದರು. ಆಧುನಿಕವೆನಿಸುವ ವಚನ ಮತ್ತು ದಾಸಸಾಹಿತ್ಯವನ್ನೂ ಓದಿದರು. ಕಲೆಯನ್ನೂ ಆರಾಧಿಸಿದರು. ಸಾಹಿತ್ಯವನ್ನೂ ಓದಿದರು. ಗಣಿತ ಮತ್ತು ವಿಜ್ಞಾನವನ್ನೂ ಅಭ್ಯಾಸ ಮಾಡಿದರು. ಅವುಗಳ ಪ್ರಸ್ತುತತೆಯನ್ನೂ ವ್ಯಾಖ್ಯಾನಿಸಿದರು. ಗಾಂಧಿಯನ್ನೂ ಮೀರುವಂತೆ ಸರಳ ಬದುಕನ್ನೂ ಬಾಳಿ ಬದುಕಿದರು. ದೀನರನ್ನೂ ದಲಿತರನ್ನೂ ಪಂಡಿತಪಾಮರರನ್ನೂ ಲಿಂಗಭೇದವಿಲ್ಲದೆ, ಪ್ರೀತಿಯಿಂದ ಎಲ್ಲ ಜೀವಸಂಕುಲವನ್ನೂ ಒಂದು ದೃಷ್ಟಿ' ಒಂದು ಭಾವದಿಂದ ಕಂಡು, ಅಂತೆಯೇ ಎಲ್ಲವನ್ನೂ ಗೌರವಿಸಿ ಬದುಕಿದರು. ಸಿದ್ಧೇಶ್ವರರ ಎಲ್ಲ ಜೀವನಮೌಲ್ಯಗಳನ್ನು ಉಳಿಸುವ ಕಾರಣಕ್ಕಾಗಿಯಾದರೂ ಅವರನ್ನು ನಮ್ಮ ಹಾಗೂ ಮುಂದಿನ ತಲೆಮಾರುಗಳು ಓದಬೇಕು. ಅವರ ಉಪನ್ಯಾಸಗಳನ್ನು ಕೇಳಬೇಕು. ಅಂಥ ವ್ಯವಸ್ಥೆ ತಕ್ಷಣಕ್ಕೂ, ಶಾಶ್ವತಕ್ಕೂ ಒದಗುವಂತೆ ಮಾಡಬೇಕಾದ ಹೊಣೆ ನಮ್ಮ ಮೇಲಿದೆ.

ವೈಚಾರಿಕವಾಗಿ, ಭಾವನಾತ್ಮಕವಾಗಿ, ಬೌದ್ಧಿಕವಾಗಿ 'ಬುದ್ಧಿ'ಯೆಂದೇ ಸಂಬೋಧಿಸಲ್ಪಟ್ಟ ಪೂಜ್ಯ ಸಿದ್ಧೇಶ್ವರ ಶ್ರೀಗಳು, ಈ ಬದುಕನ್ನು ಅಂತ್ಯಗೊಳಿಸಲು ಸಲ್ಲೇಖನಗೊಂಡರೆ ಎಂಬ ಆಲೋಚನೆ ಹುಟ್ಟುವಷ್ಟು ಸಾವಿಗಾಗಿ ಅವಸರಪಟ್ಟರೆ? ಅಷ್ಟಕ್ಕೂ ಅಂಥ ಅವಸರವೇನಿತ್ತು, ಬುದ್ಧಿ?

□

# ಜ್ಞಾನದಾಸೋಹಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು

**ನಗರ್ಲೆ ಶಿವಕುಮಾರ**

ಶ್ರೀಗುರುವೆ ಎನಗೆ ಕಾಯವು, ಶ್ರೀಗುರುವೆ ಎನಗೆ ಪ್ರಾಣವು
ಶ್ರೀಗುರುವೆ ಎನಗೆ ಇಹವು, ಶ್ರೀಗುರುವೆ ಎನಗೆ ಪರವು
ಶ್ರೀಗುರುವೆ ಎನಗೆ ಗತಿಯು, ಶ್ರೀಗುರುವೆ ಎನಗೆ ಮತಿಯು
ಶ್ರೀಗುರುಪಾದವೆ ಎನಗೆ ಘನತರ ಮುಕ್ತಿಗೆ ಕಾರಣವು
ಗುಹೇಶ್ವರ ಗುಹೇಶ್ವರಾ, ನಿಮ್ಮಾಣೆ ಇದು ಸತ್ಯ.

**– ಅಲ್ಲಮಪ್ರಭುದೇವರು**

ವಿಜಯಪುರ ನಗರವು ಕ್ರಿ.ಶ. 6ನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರ ಅಧೀನದಲ್ಲಿ ಬೆಳೆದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಪ್ರಸಿದ್ಧಿಗೊಂಡಿತು. ಬಾದಾಮಿ ಚಾಲುಕ್ಯರ ಮಾಂಡಲಿಕನೊಬ್ಬ ಬಿಜಾಪುರ ಪಟ್ಟಣವನ್ನು ಕಟ್ಟಿ ಅದಕ್ಕೆ ವಿಜಯಪುರ ಎಂದು ಹೆಸರಿಟ್ಟನೆಂದು ತಿಳಿದುಬರುತ್ತದೆ. ಕ್ರಿ.ಶ. 1199ರಲ್ಲಿ ಅದು ದೇವಗಿರಿಯ ಯಾದವರ ರಾಜಧಾನಿಯಾಗಿತ್ತೆಂದು ಶಾಸನಗಳಿಂದ ತಿಳಿಯಬಹುದು. ಯಾದವರ ನಂತರ ವಿಜಯಪುರ ನಗರವು ಕ್ರಿ.ಶ. 1312ರಲ್ಲಿ ಮುಸಲ್ಮಾನರ ಆಳ್ವಿಕೆಗೆ ಒಳಪಟ್ಟಿತ್ತು. ಇಂತಹ ನಾಡಿನಲ್ಲಿ ಶರಣಧರ್ಮ ಬೆಳೆದು ಬಂದು, ಹಲವಾರು ಮಠಗಳು ಸ್ಥಾಪನೆಯಾದವು. 12ನೆಯ ಶತಮಾನದಲ್ಲಿ ಶರಣರು ನೀಡಿದ ಅನುಭಾವವನ್ನು ನಾಡಿಗೆ ನೀಡಲು ಕಳೆದ ಶತಮಾನದಲ್ಲಿ ಮಹಾಜ್ಞಾನಿಗಳಾಗಿದ್ದಂತಹ ವೇದಾಂತಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರಿಂದ ವಿಜಯಪುರ ನಗರದ ಜ್ಞಾನಯೋಗಾಶ್ರಮವು ಸ್ಥಾಪಿತಗೊಂಡು ಜ್ಞಾನದ ಸುಧೆಯು ಎಲ್ಲಡೆ ಹರಡಿತು. ಶ್ರೀಗಳವರ ಕರಕಮಲಸಂಜಾತರಾದವರು ಜ್ಞಾನದಾಸೋಹಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು.

**ಬಾಲ್ಯಜೀವನ :** ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ತಾಯಿಯ ತವರೂರಾದ ನಂದರಗಿ (ನಂದಿಹಾಳ) ಗ್ರಾಮದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳು 1940 ಸೆಪ್ಟೆಂಬರ್ 5ರಂದು ಜನಿಸಿದರು. ಅವರ ಕರ್ಮಭೂಮಿ ತಂದೆಯ ಊರಾದ ತಿಕೋಟಾ ತಾಲ್ಲೂಕು ಬಿಜ್ಜರಗಿ. ತಂದೆಯವರಾದ ಶ್ರೀ ಓಗೆಪ್ಪ ಬಿರಾದಾರರವರು ಖ್ಯಾತ ಚಿತ್ರ ಕಲಾವಿದರು. ಗೃಹಿಣಿಯಾದ ತಾಯಿ ಶ್ರೀಮತಿ ಸಂಗಮ್ಮನವರು. ಈ ದಂಪತಿಗೆ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು. ಹಿರಿಯ ಮಗ ಶ್ರೀ ಸಿದ್ಧಗೊಂಡಪ್ಪನವರೇ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಶ್ರೀ ಸಿದ್ಧೇಶ್ವರರಿಗೆ ಬಾಲ್ಯದಿಂದಲೂ ಚುರುಕುಬುದ್ಧಿ. ಸ್ವಗ್ರಾಮ ಬಿಜ್ಜರಗಿ ಶಾಲೆಯಲ್ಲಿ 4ನೆಯ ತರಗತಿಯವರೆಗೆ ಅಭ್ಯಸಿಸಿದರು. 1955–56ರಲ್ಲಿ 7ನೆಯ ವರ್ಗ ಮುಲ್ಕಿ ಪರೀಕ್ಷೆ ಬರೆಯಲು ವಿಜಯಪುರದ ಶ್ರೀ ಸಿದ್ಧೇಶ್ವರ ಪದವಿಪೂರ್ವ ಕಾಲೇಜಿಗೆ ಬಂದಾಗ, ಶಾಲೆಯ ಸಮೀಪವೇ ಇದ್ದ ಶಿವಾನುಭವ ಮಂಟಪದಲ್ಲಿ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು ಹೇಳುತ್ತಿದ್ದ ಅಧ್ಯಾತ್ಮ ಪ್ರವಚನ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಮನಸ್ಸನ್ನು ಆಕರ್ಷಿಸಿತು. ಪರೀಕ್ಷೆಗಳನ್ನು ಮುಗಿಸಿ ಸಹಪಾಠಿಗಳು ಸ್ವಗ್ರಾಮಕ್ಕೆ ಹಿಂತಿರುಗಿದರು. ಆದರೆ ಶ್ರೀ ಸಿದ್ಧಗೊಂಡಪ್ಪನವರು ಬಿಜ್ಜರಗಿಗೆ ಮರಳದೆ ಗುರುವಿನ ಆಶ್ರಯಕ್ಕೆ ಹಂಬಲಿಸಿ ವಿಜಯಪುರದಲ್ಲಿಯೇ ಉಳಿದುಕೊಂಡು, ಬೆಳಗ್ಗೆ ಪ್ರವಚನ ಕೇಳುವುದು, ರಾತ್ರಿ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು ತಂಗುತ್ತಿದ್ದ ಕೊಠಡಿಯ ಮುಂಭಾಗದಲ್ಲೇ ಮಲಗುತ್ತಿದ್ದ ಶ್ರೀ ಸಿದ್ಧಗೊಂಡಪ್ಪನವರನ್ನು ಗಮನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು ಅವರ ಬಗ್ಗೆ ವಿಚಾರಿಸಿದರು. ಬಾಲಕನಲ್ಲಿದ್ದ ಜ್ಞಾನಸುಧೆಯನ್ನು ಗ್ರಹಿಸಿ, ಶ್ರೀ ಓಗೆಪ್ಪ ಬಿರಾದಾರರವರನ್ನು ಶ್ರೀಗಳವರು ಕರೆಯಿಸಿಕೊಂಡು ಮಾತನಾಡಿ, ಶ್ರೀಮತಿ ಸಂಗಮ್ಮನವರನ್ನು ಸಮಾಧಾನಪಡಿಸಿ, ತಮ್ಮ ಆಶ್ರಮದಿಂದಲೇ ಹೆಚ್ಚಿನ ವಿದ್ಯಾಭ್ಯಾಸ ಮಾಡಿಸುವುದಾಗಿ ಹೇಳಿ ಸಿದ್ಧಗೊಂಡಪ್ಪನವರನ್ನು ತಮ್ಮಲ್ಲಿಯೇ ಉಳಿಸಿಕೊಂಡರು.

**ಅಧ್ಯಾತ್ಮಪ್ರವಚನ :** ಪ್ರೌಢಶಾಲೆಗೆ ಸೇರಿಸಿ ಮುಂದಿನ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟಿದ್ದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು 1957ರಲ್ಲಿ ಚಡಚಣದಲ್ಲಿ ಪ್ರವಚನ ಆರಂಭಿಸಿದಾಗ ತಮ್ಮೊಂದಿಗೆ ಶ್ರೀ ಸಿದ್ಧಗೊಂಡಪ್ಪನವರನ್ನು ಕರೆದುಕೊಂಡು ಹೋಗಿದ್ದರು. ಚಡಚಣದಲ್ಲಿ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಶ್ರೀ ಸಿದ್ದಗೊಂಡಪ್ಪನವರನ್ನು ಅಧಿಕೃತ ಶಿಷ್ಯರನ್ನಾಗಿ ಸ್ವೀಕರಿಸಿದರು. ಆ ಸಂದರ್ಭದಲ್ಲಿ "ಶ್ರೀ ಸಿದ್ಧೇಶ್ವರ ಸ್ವಾಮಿಗಳು" ಎಂದು ನಾಮಕರಣ ಮಾಡಿದರು. ಅವರ ವಿದ್ಯಾಭ್ಯಾಸಕ್ಕೆ ಎಲ್ಲ ನೆರವನ್ನೂ ನೀಡಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಪದವಿ ಪಡೆದ ನಂತರ ಕೊಲ್ಹಾಪುರ ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರ ವಿಷಯದಲ್ಲಿ ಉನ್ನತ ಶ್ರೇಣಿಯಲ್ಲಿ ಎಂ.ಎ. ಪದವಿಯನ್ನು ಪಡೆದು ತಮ್ಮ ಗುರುಗಳ ಪ್ರೀತಿಗೆ ಪಾತ್ರರಾದರು.

ಕೊಲ್ಲಾಪುರದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು 1960ನೆಯ ಇಸವಿಯಲ್ಲಿ 'ಸಿದ್ಧಾಂತ ಶಿಖಾಮಣಿ' ವಿಷಯ ಕುರಿತು ಮರಾಠಿಯಲ್ಲಿ ಪ್ರವಚನ ಮಾಡಿದರು. ಪ್ರವಚನವನ್ನು ಕೇಳಿ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು 400 ಪುಟಗಳ ಟಿಪ್ಪಣಿಯನ್ನು ತಯಾರಿಸಿರುತ್ತಾರೆ. ಇದನ್ನು ನೋಡಿದ ಗುರುಗಳು ಶಿಷ್ಯನ ಅದ್ಭುತ ಬರವಣಿಗೆಯನ್ನು ಕಂಡು ಸಂತೋಷಗೊಂಡು 'ಸಿದ್ಧಾಂತ ಶಿಖಾಮಣಿ' ಗ್ರಂಥವನ್ನು ಮುದ್ರಿಸಲು ಅನುಮತಿ ನೀಡಿದರು. ಗುರುಗಳ ಕೃಪಾಶೀರ್ವಾದದಿಂದ ವಿಜಯಪುರ ಸೇರಿದಂತೆ ಹಲವಾರು ಕಡೆ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಪ್ರವಚನವನ್ನು ನೀಡಿ ಪ್ರಸಿದ್ಧಿಯನ್ನು ಪಡೆದರು.

ಶ್ರೀಗಳವರ ಅಗಾಧ ಪಾಂಡಿತ್ಯಕ್ಕೆ ಭಕ್ತಸಾಗರ ಮನಸೋತಿತು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಂತೆಯೇ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಪ್ರವಚನದ ಮೂಲಕ ಕರ್ನಾಟಕ ಮತ್ತು ಮಹಾರಾಷ್ಟ್ರದ ವಿವಿಧ ನಗರಗಳು ಹಾಗೂ ಗ್ರಾಮಗಳಲ್ಲಿ ತಿಂಗಳುಗಟ್ಟಲೆ ಜ್ಞಾನಪ್ರಸಾರ ಮಾಡುತ್ತಿದ್ದರು.

**ನಿಸರ್ಗಪ್ರೇಮಿ :** ಸಾವಿರ ಸಾವಿರ ಸಂಖ್ಯೆಯಲ್ಲಿ ಭಕ್ತರು ಪೂಜ್ಯರ ಪ್ರವಚನಕ್ಕೆ ಆಗಮಿಸುತ್ತಿದ್ದರು. ಶ್ರೀಗಳವರು ತಮ್ಮ ಪ್ರವಚನದಲ್ಲಿ ಕಲ್ಲು, ಮಣ್ಣು, ಗಿಡ, ಮರ, ಹೂ, ಹಣ್ಣು, ಪಕ್ಷಿ, ಪ್ರಾಣಿಗಳ ಬಗ್ಗೆ ಅಗಾಧವಾಗಿ ವರ್ಣಿಸಿ, ಮನುಷ್ಯರಲ್ಲಿ ಎಲ್ಲರ ಬಗ್ಗೆ ಪ್ರೀತಿ, ಕರುಣೆ, ಮಮತೆ ಇರಬೇಕೆಂದು ಎಚ್ಚರಿಸುತ್ತಿದ್ದರು. ಪ್ರವಚನವು ಸರಳ ಸುಲಲಿತವಾಗಿ ಸೂಜಿಗಲ್ಲಿನಂತಹ ಸೆಳೆತ, ಭಾಷೆ, ಧಾಟಿ, ಪದಪ್ರಯೋಗ, ಸಣ್ಣ ಉಪಮಾನಗಳ, ಕಥೆಗಳ ಮೂಲಕ ಪ್ರವಚನದಲ್ಲಿಯೇ ಎಲ್ಲರಿಗೂ ಜೀವನದ ಪಾಠವನ್ನು ಕಲಿಸುತ್ತಿದ್ದರು. ಅಧ್ಯಾತ್ಮವೇದಾಂತವನ್ನು ದೃಷ್ಟಾಂತಗಳ ಮೂಲಕ ಹೇಳುತ್ತಾ, ಕೇಳುಗರ ಮನಸ್ಸನ್ನು ಸೂರೆಗೊಳ್ಳುತ್ತಿದ್ದರು. ಸುತ್ತಮುತ್ತಲಿನ ಪರಿಸರವನ್ನು ಆರಾಧಿಸುವ ಮೂಲಕ ಬದುಕನ್ನು ಅರಿತು, ದೇವರ ಅಸ್ತಿತ್ವವನ್ನು ಅರ್ಥೈಸಿಕೊಂಡು, ಎಲ್ಲರ ಬಾಳಲ್ಲಿ ಅಳವಡಿಸಿಕೊಳ್ಳುವುದರ ಬಗ್ಗೆ ಸರಳವಾಗಿ ತಮ್ಮ ಪ್ರವಚನಗಳ ಮೂಲಕ ಪ್ರಸ್ತುತಪಡಿಸಿ ಭಕ್ತರ ಬಾಳಿಗೆ ಬುತ್ತಿ ಇದ್ದಂತೆ, ಎಲ್ಲರ ಹೃದಯದಲ್ಲಿ ಶಾಶ್ವತ ಸ್ಥಾನವನ್ನು ನೆಲೆಗೊಳಿಸಿದ್ದಾರೆ.

**ಬಹುಭಾಷಾಪಂಡಿತರು :** ಸರಳತೆಯಲ್ಲಿ ಸರಳತೆಯನ್ನು ಶ್ರೀ ಸಿದ್ಧೇಶ್ವರ ಸ್ವಾಮಿಗಳು ಅನುಸರಿಸಿ ವೇದಾಂತ, ಗೀತ, ಯೋಗಸೂತ್ರ ವಚನಗಳ ಸಾರವನ್ನು ತಮ್ಮ ಪ್ರವಚನದಲ್ಲಿ ಭಕ್ತಸಮೂಹಕ್ಕೆ ಮನಮುಟ್ಟುವಂತೆ ವಿವರಿಸುತ್ತಿದ್ದರು. ಸರಳತೆ, ಯೋಗದ ಮನೋಭಾವ, ಸಹಾನುಭೂತಿ, ಶಾಂತ ಮನಃಸ್ಥಿತಿ ಅವರದ್ದಾಗಿತ್ತು. ಕನ್ನಡ, ಸಂಸ್ಕೃತ, ಮರಾಠಿ, ಹಿಂದಿ, ಇಂಗ್ಲಿಷ್ ಹಾಗೂ ಪರ್ಷಿಯನ್ ಭಾಷೆಗಳನ್ನು ನಿಷ್ಣಾತರಾಗಿದ್ದ ಶ್ರೀಗಳವರು ದೇಶವಿದೇಶಗಳಲ್ಲಿ ಪ್ರವಚನದ ಮೂಲಕ ಹೆಸರು ಪಡೆದರು. ಶ್ರೀಗಳ ಪ್ರವಚನಕ್ಕೆ ಸ್ಥಳದ ಸುತ್ತಮುತ್ತಲಿನ ನೂರಾರು ಕಿ.ಮೀ. ದೂರದಿಂದಲೂ ಜನ ಬಂಡಿ, ಬಸ್, ರೈಲುಗಳ ಮೂಲಕ ಸಮಯಕ್ಕೆ ಸರಿಯಾಗಿ ಹಾಜರಾಗಿ ಪ್ರವಚನ ಕೇಳಿ ಪುನೀತರಾಗಿ ಬದುಕಲು ಪಾಠವನ್ನು ಕಲಿಯುತ್ತಿದ್ದರು.

ಪೂಜ್ಯ ಶ್ರೀಗಳವರು ತಮ್ಮ ಆಳವಾದ ಅಧ್ಯಯನದಿಂದ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಅಲ್ಲಮಪ್ರಭು, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಏಸುಕ್ರಿಸ್ತ, ಪೈಗಂಬರ್, ಮಹಾವೀರ, ಲೆನಿನ್, ಕಾರ್ಲ್‌ಮಾರ್ಕ್ಸ್, ನೆಲ್ಸನ್ ಮಂಡೇಲಾ ಸೇರಿದಂತೆ ಜಗತ್ತಿನ ಎಲ್ಲ ದಾರ್ಶನಿಕರನ್ನೂ ಸಂಪೂರ್ಣವಾಗಿ ಅಧ್ಯಯನ ಮಾಡಿ, ತಮ್ಮ ಪ್ರವಚನದ ಮೂಲಕ ಅವರೆಲ್ಲರ ಚಿಂತನೆಗಳನ್ನು ಜನಮಾನಸಕ್ಕೆ ಮುಟ್ಟಿಸುತ್ತಿದ್ದರು. ಶ್ರೀ ಸಿದ್ಧೇಶ್ವರ ಸ್ವಾಮಿಗಳವರಲ್ಲಿ ಯಾವುದೇ ಜಾತಿ, ಧರ್ಮ, ಲಿಂಗತಾರತಮ್ಯ ಇರಲಿಲ್ಲ. ಅವರ ಮಾತು, ನಡೆ, ನುಡಿಯಲ್ಲಿ ಯಾವುದೇ ಟೀಕೆ, ಟಿಪ್ಪಣಿ ಇರಲಿಲ್ಲ. ಯಾವುದೇ ರಾಗ–

ದ್ವೇಷಕ್ಕೆ ಅವಕಾಶ ಇರಲಿಲ್ಲ. ಸಕಾರಾತ್ಮಕ ಚಿಂತನೆಯೇ ಪ್ರವಚನದ ಸಾರವಾಗಿತ್ತು.

'ಸಿದ್ಧಾಂತ ಶಿಖಾಮಣಿ'ಯಲ್ಲದೆ, ಭಗವದ್ಗೀತೆಯನ್ನು ಕನ್ನಡಕ್ಕೆ ಸರಳೀಕರಿಸಿ, ಅನುವಾದ ಮಾಡಿದ್ದರು. ಅವರ ಪ್ರವಚನದ ನೂರಾರು ಪುಸ್ತಕಗಳು ಪ್ರಕಟವಾಗಿವೆ. ವಿಜಯಪುರ ಜ್ಞಾನಯೋಗಾಶ್ರಮ, ಸುತ್ತೂರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರವಚನದ ಸಿಡಿ, ಗ್ರಂಥಗಳು ಭಕ್ತರ ಮನೆ ಸೇರಿವೆ. ಈ ಕಿಸೆ ಇಲ್ಲದ ಸಂತರು ಯಾವುದೇ ವಿವಾದಕ್ಕೆ ಒಳಗಾಗದೆ ಅಕ್ಷರಶಃ ಆದರ್ಶದ ಜೀವನವನ್ನು ಬಾಳಿ, ನಡೆದಾಡಿದ ದೇವರಾಗಿ ಜನಮಾನಸದಲ್ಲಿ ಉಳಿದರು.

**ಪ್ರಶಸ್ತಿ, ಪುರಸ್ಕಾರಗಳಿಂದ ದೂರ :** ನಡೆನುಡಿಯಲ್ಲಿ ಒಂದಾಗಿದ್ದ ಪೂಜ್ಯ ಶ್ರೀಗಳವರು ಅಪರೂಪದಲ್ಲೇ ಅಪರೂಪದ ಸಂತರಾಗಿ ಎಂದಿಗೂ ಪಾದಪೂಜೆಯನ್ನು ಭಕ್ತರಿಂದ ಬಯಸದ ಶ್ರೀಗಳು ತಾವು ಭಾಗವಹಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಹೂವು, ಫಲತಾಂಬೂಲ, ಕಾಣಿಕೆ ನೀಡಿದರೂ ಸ್ವೀಕರಿಸದೆ ಅಪ್ಪಟ ಸನ್ಯಾಸಿಯಾಗಿದ್ದರು. ಶ್ರೀಗಳವರ ಓಡಾಟಕ್ಕೆಂದು ಭಕ್ತರು ಕಾರನ್ನು ಕೊಡಿಸಿದರೆ ಅದನ್ನು ನಯವಾಗಿ ತಿರಸ್ಕರಿಸಿದರು. ಸಂಘ–ಸಂಸ್ಥೆಗಳು ಗೌರವಿಸಿ ಪುರಸ್ಕರಿಸಲು ಬಂದಾಗಲೂ ಒಪ್ಪಲಿಲ್ಲ. ಕರ್ನಾಟಕ ವಿಶ್ವವಿದ್ಯಾಲಯವು ಪೂಜ್ಯ ಶ್ರೀಗಳವರಿಗೆ ಗೌರವ ಡಾಕ್ಟರೇಟ್ ನೀಡಲು ಮುಂದೆ ಬಂದಾಗ ಅದನ್ನು ಸ್ವೀಕರಿಸಲು ನಿರಾಕರಿಸಿದರು. ಜ್ಞಾನಯೋಗಾಶ್ರಮದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಅನುದಾನ ನೀಡಿದಾಗಲೂ ಸ್ವೀಕರಿಸಲಿಲ್ಲ. 2019ರಲ್ಲಿ ಭಾರತ ಸರ್ಕಾರದ ಅತ್ಯುನ್ನತ ನಾಗರಿಕ ಗೌರವ 'ಪದ್ಮಶ್ರೀ' ಪ್ರಶಸ್ತಿಗೆ ಪೂಜ್ಯಶ್ರೀಗಳವರು ಆಯ್ಕೆಯಾದಾಗ "ನಾನೊಬ್ಬ ಸನ್ಯಾಸಿ. ಪ್ರಶಸ್ತಿ, ಪುರಸ್ಕಾರಗಳ ಅಗತ್ಯ ನನಗಿಲ್ಲ" ಎಂದು ನಯವಾಗಿ ನಿರಾಕರಿಸಿ ನಿಜವಾದ ಸಂತರೆನಿಸಿಕೊಂಡ ಮಹಾಪುರುಷರು. ಸಕಲಶಾಸ್ತ್ರವಿಶಾರದರಾದ ಶ್ರೀಗಳು ಪುರಾಣಕಾಲದ ಋಷಿ ಸದೃಶ ವ್ಯಕ್ತಿತ್ವ ಹೊಂದಿದ್ದ ಜ್ಞಾನನಿಧಿಗಳಾಗಿ, ಜ್ಯೋತಿರ್ಲಿಂಗಸ್ವರೂಪದ ದಾರ್ಶನಿಕರಾಗಿದ್ದರು.

**ಸುತ್ತೂರು ಶ್ರೀಮಠದೊಡನೆ ಅವಿನಾಭಾವ ಸಂಬಂಧ :** ಸುತ್ತೂರು ಶ್ರೀಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೊಂದಿಗೆ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಅವಿನಾಭಾವ ಸಂಬಂಧವಿತ್ತು. ಶ್ರೀಮಠದ ಜಾತ್ರೆ, ಜಯಂತಿ, ಶಿಬಿರ ಸೇರಿದಂತೆ ಯಾವುದೇ ಮಹತ್ವದ ಕಾರ್ಯಕ್ರಮಗಳು ಜರುಗಿದಾಗಲೂ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಉಪಸ್ಥಿತಿ ಯಾವಾಗಲೂ ಇದ್ದೇ ಇರುತ್ತಿತ್ತು. ಸಿದ್ಧೇಶ್ವರ ಶ್ರೀಗಳ ಬಗ್ಗೆ ವಿಶೇಷ ಪ್ರೀತಿ, ಕಾಳಜಿ, ಹೊಂದಿದ್ದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಜೆಎಸ್‌ಎಸ್ ಸಂಸ್ಥೆಗಳ ಮೂಲಕ ವಿದೇಶಗಳಲ್ಲೂ ಕಾರ್ಯಕ್ರಮ ಆಯೋಜಿಸಿ, ಪ್ರವಚನ ಕೊಡಿಸುತ್ತಿದ್ದರು. ಸಿದ್ಧೇಶ್ವರ ಶ್ರೀಗಳು ತಮ್ಮ ವಿದ್ವತ್ಪೂರ್ಣ ಪ್ರವಚನಗಳ ಮೂಲಕ ದೇಶವಿದೇಶಗಳ ಜನತೆಗೆ ಮಹಾಜ್ಞಾನವನ್ನು ಹಂಚಿದ್ದರು.

**ಅಂತಿಮ ದಿನಗಳು :** 2022 ಡಿಸೆಂಬರ್ ತಿಂಗಳಿನಿಂದ ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಪೂಜ್ಯರು ಜ್ಞಾನಯೋಗಾಶ್ರಮದಲ್ಲಿ ವಿಶ್ರಾಂತಿಯಲ್ಲಿದ್ದರು. ಸ್ವ-ಇಚ್ಛೆಯಿಂದ ಶ್ರೀಗಳು ಕೊನೆಗಾಲದಲ್ಲಿ ಆಹಾರ ಕಡಿಮೆ ಮಾಡುತ್ತಾ, ನೀರನ್ನು ಕೂಡ ತ್ಯಜಿಸಿದರು. ಅಂತಹ ಸಂದರ್ಭದಲ್ಲಿ ರಾಜ್ಯದ ಧಾರ್ಮಿಕ ಗುರುಗಳು, ರಾಜಕೀಯ ಮುಖಂಡರು, ಭಕ್ತ ಸಮೂಹ ಶ್ರೀಗಳವರ ದರ್ಶನವನ್ನು ಪಡೆಯುತ್ತಿದ್ದರು. ಇದನ್ನು ತಿಳಿದ ಮೈಸೂರು ಪ್ರಾಂತ್ಯದ ಹಲವು ಭಕ್ತರು ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ದರ್ಶನ ಪಡೆಯಲು ಸುತ್ತೂರು ಪೂಜ್ಯ ಜಗದ್ಗುರುಗಳವರಲ್ಲಿ ನಿವೇದಿಸಿಕೊಂಡಾಗ ಜಗದ್ಗುರುಗಳವರು ದರ್ಶನ ಮಾಡಿಸಿಕೊಟ್ಟರು. ಅಂತಿಮ ದರ್ಶನಭಾಗ್ಯ ಪಡೆದವರಲ್ಲಿ ನಾನೂ ಒಬ್ಬ ಎಂದು ತಿಳಿಸಲಿಚ್ಛಿಸುತ್ತೇನೆ. 2 ಜನವರಿ 2023ರಂದು ಲಿಂಗೈಕ್ಯರಾದ ನಾಡಿನ ಮಹಾಸಂತ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ದಿವ್ಯಚೇತನಕ್ಕೆ ಅನಂತಕೋಟಿ ಭಕ್ತಿಯ ನಮನಗಳನ್ನು ಅರ್ಪಿಸುತ್ತೇನೆ.

ಮೈಸೂರಿನಲ್ಲಿ ಶ್ರೀ ಸುತ್ತೂರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ 15.1.2023ರಂದು ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರಿಗೆ ನುಡಿನಮನ ಕಾರ್ಯಕ್ರಮವನ್ನು ವೀರಶೈವ-ಲಿಂಗಾಯತ ಬಳಗಗಳ ಒಕ್ಕೂಟ, ಎಚ್.ವಿ. ರಾಜೀವ್ ಸ್ನೇಹಬಳಗ, ಶ್ರೀ ಪತಂಜಲಿ ಯೋಗಶಿಕ್ಷಣ ಸಮಿತಿ, ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಭಕ್ತವೃಂದದವರಿಂದ ಆಯೋಜಿತವಾಗಿತ್ತು. ಜ್ಞಾನಯೋಗಾಶ್ರಮದ ಶ್ರೀ ಬಸವಲಿಂಗ ಸ್ವಾಮಿಗಳು, ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು, ಸಾಹಿತಿಗಳಾದ ಶ್ರೀ ಕೆ.ಸಿ. ಶಿವಪ್ಪ, ವಿಶ್ರಾಂತ ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್, ನಿಜಗುಣ ಸತ್ಸಂಗ ಬಳಗದ ಡಾ. ಸಿ.ಪಿ. ರಾಮಶೇಷ್‌ರವರುಗಳು ನುಡಿನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು. ಇದೇ ರೀತಿ ಪೂಜ್ಯರ ಸ್ಮರಣ ಕಾರ್ಯಕ್ರಮಗಳು ನಾಡಿನಾದ್ಯಂತ ನಡೆಯುತ್ತಿವೆ.

ನೆರೆಹೊರೆಯವರನ್ನು ಕಂಡು ನಾನು ಉರಿದೇಳುತ್ತಿದ್ದರೆ  
ನನ್ನ ಪೂಜೆ ಪುನಸ್ಕಾರಗಳಿಗೇನು ಬೆಲೆ?  
ಸ್ವಾರ್ಥ ತ್ಯಜಿಸಿದರೆ ಆದರ್ಶ ಸಾಧಿಸುತ್ತದೆ.  
ಹೃದಯ ಪರಿಮಳವಾದರೆ ಮಾತು ಮಕರಂದವಾಗುತ್ತದೆ!  
ಮನಸ್ಸು ರಸಪಾಕವಾದರೆ ಮನುಷ್ಯ ಮಹಾನುಭಾವನಾಗುತ್ತಾನೆ.  
ತನ್ನನ್ನೂ, ತನ್ನ ಸೌಖ್ಯವನ್ನೂ ಮರೆತು ಪರರ ಹಿತಕ್ಕಾಗಿ ಮಾಡುವ  
ಕಾರ್ಯವೇ ತಪಸ್ಸು. ಅದರಿಂದ ಸತ್ಯಸಾಕ್ಷಾತ್ಕಾರ!

– ಸಿದ್ಧೇಶ್ವರ ಮಹಾಸ್ವಾಮಿಗಳು

□

# ಎಲ್ಲವನ್ನೂ ನೋಡಿ, ಆನಂದಿಸಿ, ಆದರೆ 'ಬೇಕು' ಎನ್ನದಿರಿ

ಡಾ. ವಿ.ಬಿ. ಆರತೀ

ಅಭಿನವ ಅಲ್ಲಮರಾಗಿದ್ದ ಶ್ರೀ ಸಿದ್ಧೇಶ್ವರ ಯೋಗಿಗಳು ತಮ್ಮ ಭೌತಿಕ ಅಸ್ತಿತ್ವದ ಸೀಮೆಗಳನ್ನು ಕಳಚಿಕೊಂಡು ಅಸೀಮಾಸ್ತಿತ್ವವಾಗಿದ್ದಾರೆ ಈಗ. ಅವರಿತ್ತ ಸಂದೇಶಗಳ ಅನುರಣನವು ಇಂದಿಗೂ ಎಂದೆಂದಿಗೂ ನಮ್ಮ ಮತಿ–ಮನಗಳಿಗೆ ಬೆಳಕಾಗಿವೆ. ಶ್ರೀಗಳ ಅಸಂಖ್ಯ ವಿವೇಕೋಕ್ತಿಗಳಲ್ಲಿ ಕೆಲವನ್ನು ಸಾರವಾಗಿ ಇಲ್ಲಿ ನೋಡೋಣ.

"ತ್ಯಾಗ ಮಾಡುವುದು ಹೇಗೆ?" ಎಂಬ ಪ್ರಶ್ನೆಗೆ ಶ್ರೀ ಸಿದ್ಧೇಶ್ವರರ ಉತ್ತರ ಮನೋಜ್ಞ. ನಾವು ಮುಂದೆಮುಂದಕ್ಕೆ ನಡೆದುಹೋಗಬೇಕಾದರೆ ಏನು ಮಾಡಬೇಕು? ನಮ್ಮ ಪಾದವು ಇದ್ದ ಸ್ಥಳದಿಂದ ಎದ್ದು ಮುಂದೆ ಹೋಗಬೇಕು, ಅಲ್ಲವೆ? ಪಾದವೇನಾದರೂ 'ಇಲ್ಲ! ನಾನು ನನ್ನ ಸ್ಥಾನವನ್ನು ಬಿಟ್ಟು ಹೋಗಲಾರೆ' ಎಂದು ಅಲ್ಲೇ ನಿಂತರೆ ಮುಂದುವರಿಯುವುದು ಸಾಧ್ಯವೆ? 'ತ್ಯಾಗ' ಎಂದರೆ 'ಮುಂದುವರಿಯುವುದು'. ಒಂದನ್ನು ಬಿಟ್ಟಾಗಲೇ ಮತ್ತೊಂದರ ಲಾಭ. ಬಿಡುವುದು ಕಷ್ಟವಲ್ಲ, ಸಹಜ.

ಸಂತೃಪ್ತಿಯ ಗುಣಕ್ಕೆ ಈ ಮನೋಹರ ದೃಷ್ಟಾಂತ. ಒಮ್ಮೆ ಶಿವ–ಪಾರ್ವತಿ ಆಕಾಶದಲ್ಲಿ ಸಂಚಾರ ಮಾಡುತ್ತ, ಸಮುದ್ರತೀರದಲ್ಲಿ ಏಡಿಯೊಂದನ್ನು ನೋಡಿದರಂತೆ. ಪಾರ್ವತಿ, 'ಪ್ರಭು! ಕೆಲವು ಪ್ರಾಣಿಗಳಲ್ಲಿ ಬಲ, ಕೆಲವುದರಲ್ಲಿ ಸೌಂದರ್ಯ, ಮತ್ತೆ ಕೆಲವುದರಲ್ಲಿ ಚಾತುರ್ಯವಿರುತ್ತವೆ. ಈ ಬಡಪಾಯಿ ಏಡಿಯಲ್ಲಿ ಏನೂ ಇಲ್ಲವಲ್ಲ'. ಶಿವನು ಹೇಳಿದನಂತೆ, 'ಈ ಏಡಿಯಲ್ಲಿ ಏನಿದೆ ತೋರಿಸುತ್ತೇನೆ ಬಾ'. ಏಡಿಯ ಮುಂದೆ ಪ್ರತ್ಯಕ್ಷನಾಗಿ ಹೇಳಿದನಂತೆ: "ಮಗು! ನಿನಗೆ ಬಲ, ಸೌಂದರ್ಯ ಚಾತುರ್ಯ... ಯಾವುದು ಬೇಕೋ ಕೇಳು, ಕೊಡುತ್ತೇನೆ" ಎಂದು. ಏಡಿಯು ಶಿವನನ್ನು ದಿಟ್ಟಿಸಿ ಹೇಳಿತಂತೆ 'ಪ್ರಭು, ನನ್ನಲ್ಲಿ ಬಲ, ಸೌಂದರ್ಯ, ಚಾತುರ್ಯಗಳಿಲ್ಲ ಎಂದು ಯಾರು ಹೇಳಿದರು? ನನ್ನ ಬಲ ರೂಪ ಜಾತುರ್ಯಗಳನ್ನು ಮೆಚ್ಚಿಯೇ ನನ್ನ ಹೆಂಡತಿ ನನ್ನನ್ನು ಮದುವೆಯಾದದ್ದು. ನಾನು ಸಂತೃಪ್ತನಾಗಿಸದ್ದೇನೆ. ಏನೂ ಬೇಡ'. ಶಿವನು 'ನೋಡಿದೆಯಾ ಪಾರ್ವತಿ... ಈ ಪ್ರಾಣಿಯಲ್ಲಿರುವ ಗುಣ ಸಂತೃಪ್ತಿ'. ದೇವರೇ ಬಂದು ಏನು ಬೇಕು ಎಂದರೂ ನಾನು ತೃಪ್ತನಿದ್ದೇನೆ ಎನ್ನುವಷ್ಟು ಸಂತೃಪ್ತಿ ಇರಬೇಕು.

'ಸಂಸಾರದಲ್ಲಿ ಹೇಗೆ ನಿರ್ಲಿಪ್ತಿಯಿಂದಿರಲು ಸಾಧ್ಯ?' ಎಂಬ ಪ್ರಶ್ನೆಗೆ ಉತ್ತರ– 'ನಾವು ತೋಟಕ್ಕೆ ಹೋಗುತ್ತೇವೆ. ಅಲ್ಲಿ ಅಡ್ಡಾಡಬೇಕು, ಮರ–ಗಿಡ–ಹೂವು–ಬಳ್ಳಿ–

ದುಂಬಿಗಳನ್ನು ನೋಡಬೇಕು, ಆನಂದಿಸಬೇಕು... ನಿಸರ್ಗ ಎಷ್ಟು ಚೆಂದ, ಅದ್ಭುತ! ಆದರೆ, 'ಈ ಹೂವು ನನಗೇ ಬೇಕು' ಎಂದು ಕಿತ್ತು, ಎತ್ತಿಟ್ಟುಕೊಳ್ಳಬಾರದು. ಕಿತ್ತರೆ ಗಿಡಕ್ಕೆ ನೋವು, ಗಿಡದಿಂದ ದೂರಾದ ಹೂವು ಬಾಡುತ್ತದೆ, ನಮ್ಮ ಖುಷಿಯೂ ಬಾಡುತ್ತದೆ. ಜಗತ್ತಿನಲ್ಲಿ ಎಲ್ಲವನ್ನೂ ನೋಡಬೇಕು, ಮೆಚ್ಚಬೇಕು, ಆನಂದಿಸಬೇಕು... ಆದರೆ 'ಬೇಕು' ಎಂದು ಬಾಚಿಕೊಳ್ಳಬಾರದು. ಆಗ ಸಂಸಾರ ಎಷ್ಟು ಚೆಂದ!

ಒಬ್ಬ ವ್ಯಕ್ತಿ ಕ್ರೀಡೆ ನೋಡೋದಕ್ಕೆಂದು ಸ್ಟೇಡಿಯಂಗೆ ಹೋಗಿ ಅಲ್ಲೊಂದು ಜಾಗದಲ್ಲಿ ಕುಳಿತನಂತೆ. ಆನಂದವಾಗಿ ಕ್ರೀಡೆಯನ್ನು ನೋಡುತ್ತ ಇದ್ದ. ನಿಸರ್ಗದ ಕರೆಗೆ ಓಗೊಟ್ಟು ಸ್ವಲ್ಪ ಹೊತ್ತು ಹೊರಗೆ ಹೋಗಿ ಬಂದ. ಆಗ ಹಿಂದಿರುಗಿದಾಗ ಆ ಜಾಗದಲ್ಲಿ ಮತ್ಯಾರೋ ಕುಳಿತಿದ್ದರು. 'ತನ್ನ ಜಾಗ' ಅಂತ ಜಗಳವಾಡಹತ್ತಿದ. ಆ ಜಾಗ ಇಬ್ಬರದೂ ಅಲ್ಲ. ಕ್ರೀಡೆಯನ್ನೇ ಮರೆತರು. ಅಕ್ಕಪಕ್ಕದವರಿಗೆ ತೊಂದರೆ ಎನ್ನುವುದನ್ನೂ ಮರೆತರು. ನನ್ನದು ನನ್ನದು ಎಂದು ಜಗಳವಾಡಹತ್ತಿದರು. ಅಲ್ಲಿದ್ದ ಜನರೂ ಎರಡು ಪಾರ್ಟಿ ಆದರು. ಕೆಲವರು ಇವನ ಬೆಂಬಲಕ್ಕೆ, ಕೆಲವರು ಅವನ ಬೆಂಬಲಕ್ಕೆ ನಿಂತರು. ಎಲ್ಲೋ ಮತ್ತೊಂದು ಕಡೆ ಕುಳಿತು ನೋಡಿದರಾಗುತ್ತಿತ್ತು. ಎಲ್ಲರಿಗೂ ಸಂತೋಷ. ನಾವೂ ಈ ಲೋಕಕ್ಕೆ ನಾವು ಬಂದಿರೋದು ಶಕ್ತಿಯ 'ಆಟ' ನೋಡೋದಕ್ಕೆ, ಸಂತೋಷಪಡುವುದಕ್ಕೆ. ಆದರೆ ತಾತ್ಕಾಲಿಕವಾದ ಒಂದನ್ನು ಹಿಡಿದಿಟ್ಟುಕೊಂಡು 'ನನ್ನದು ನಿನ್ನದು' ಅಂತ ಜಗಳವಾಡುವುದರಲ್ಲಿ ಮೈಮರೆಯುತ್ತೇವೆ.

ಸ್ಥೈರ್ಯ ಸಿದ್ಧಿಸುವುದು ನಿತ್ಯವೂ ಶಾಶ್ವತವೂ ಆದ ನೆಲೆಯಲ್ಲಿ ಮಾತ್ರ ಎನ್ನುವುದಕ್ಕೆ ಶ್ರೀಗಳು ಕೊಟ್ಟ ಉದಾಹರಣೆ; ಗಟ್ಟಿನೆಲದ ಮೇಲೆ ನಿಂತರೆ ನಾವೂ ಸ್ಥಿರ. ಅಲುಗಾಡುವ ಮೇಜಿನ ಮೇಲೆ ನಿಂತರೆ? ನಾವೂ ಅಲುಗಾಡುವುದು ಅನಿವಾರ್ಯ! ಯಾವುದು ಶಾಶ್ವತವೋ ಆ ನೆಲೆಯಲ್ಲಿ ಮನಸ್ಸನ್ನಿಟ್ಟರೆ ಸ್ಥೈರ್ಯ, ಶಾಂತಿ! ಅನಿತ್ಯ–ಅಶಾಶ್ವತವಾದ ವಸ್ತುಗಳಲ್ಲಿ ಮನಸ್ಸನ್ನು ಇಟ್ಟರೆ ಮನಸ್ಸೇ ಅಸ್ಥಿರ, ಅಶಾಂತ!

ಸತ್ಯ–ವಿಕಾಸ–ಶಾಂತಿ ಈ ಮೂರನ್ನೂ ಪ್ರತ್ಯೇಕಿಸಲಾಗದು. ಸತ್ಯವನ್ನು ಗ್ರಹಿಸುವ ತನಕ ಮನಸ್ಸು ವಿಕಾಸವಾಗಲಾರದು. ಮನಸ್ಸು ವಿಕಾಸವಾಗುವ ತನಕ ಶಾಂತಿಯಿಲ್ಲ. ಗಣಿತದಲ್ಲಿ ಪರಿಮಿತ ಸಂಖ್ಯೆಗಳಿಗೆ ಮಾತ್ರವೇ ಕೂಡುವ ಕಳೆಯುವ ಗುಣಿಸುವ ಲೆಕ್ಕಾಚಾರಗಳು. ಅಪರಿಮಿತ ಸಂಖ್ಯೆಗೆ ಯಾವ ಲೆಕ್ಕಾಚಾರಗಳೂ ಇಲ್ಲ. ಅನಂತತೆಯನ್ನು (Infinity) ಭಾವಿಸಿದಾಗ ಮನಸ್ಸಿಗೆ ವಿಕಾಸ. ಅಲ್ಲಿ ಯಾವ ಲೆಕ್ಕಾಚಾರವೂ ಉಳಿಯದು. ಸತ್ಯ ಎಂದೂ ಪರಿಮಿತವಲ್ಲ, ಸತ್ಯವು ಅಪರಿಮಿತ, ವಿಶ್ವಾತೀತ, ವಿಶ್ವವನ್ನೆಲ್ಲ ವ್ಯಾಪಿಸಿದೆ, ವಿಶ್ವಕ್ಕೂ ಅತೀತವಾಗಿದೆ. ಈ ಅನಂತತೆಯನ್ನು ಗ್ರಹಿಸಿದಾಗ ಮನಸ್ಸು ವಿಕಾಸವಾಗುತ್ತದೆ, ಶಾಂತಿ ತಾನಾಗಿ ಬರುತ್ತದೆ. ಏನನ್ನು ಗಳಿಸಲಿ, ಉಳಿಸಲಿ ಎಂಬ ಹುಚ್ಚೋಟದಲ್ಲಿ ದಣಿದಣಿಯುವ ನಮ್ಮ ಮತಿ–ಮನಗಳನ್ನು ಶ್ರೀ ಸಿದ್ಧೇಶ್ವರರ ಅನುಭವಾಮೃತದ ಇಂಥ ಸತ್ಯಪೂತ ವಾಗ್ಬಿಂದುಗಳು ಆಗಾಗ ತಡೆದು ನಿಲ್ಲಿಸಿ ಶಾಂತರಸದಲ್ಲಿ ತಣಿಸಲಿ.

□

# ಅಲ್ಲಮನ ಮಾರ್ದವರೂಪ ಈ ಸಿದ್ಧೇಶ್ವರ ಶ್ರೀಗಳು

**ಡಾ. ವೀಣಾ ಬನ್ನಂಜೆ**

**ತುಂ**ಬ ವರ್ಷಗಳ ಹಿಂದಿನ ಮಾತು. 2000 ಇಸವಿಯ ಆಸುಪಾಸು. ಸತ್ಯಕಾಮರು ದೇಹತ್ಯಾಗ ಮಾಡಿ ನಾನು ಜಮಖಂಡಿ ನೆಲದಲ್ಲಿ ಹೆಜ್ಜೆ ಇಡಲು ಆರಂಭಿಸಿದ ಕಾಲ.

ಆಗ ಅಶೋಕ ತುಂಗಳ ಎಂಬ ಹಿತೈಷಿಗಳು ಒಬ್ಬ ಮಹನೀಯರನ್ನು ಪರಿಚಯಿಸುತ್ತೇನೆ ಎಂದು ಬಿಜಾಪುರಕ್ಕೆ ಕರೆದೊಯ್ದರು. ಅವರು ಯಾರು, ಏನು ಒಂದೂ ಗೊತ್ತಿಲ್ಲದ ಕಾಲ ನನಗೆ. ಅವರೇ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು.

ಆ ಮಹನೀಯರು ಶುಭ್ರಶ್ವೇತವಸ್ತ್ರಧಾರಿ. ಬಹಳ ಪ್ರೀತಿಯಿಂದ ಮಾತಾಡಿಸಿದರು. ಅಶೋಕಣ್ಣ ಪರಿಚಯಿಸಿ "ಇವರು ಸುಮ್ಮನೆ ಅನ್ನುವ ಆಶ್ರಮದಲ್ಲಿ ಇರುತ್ತಾರೆ" ಅಂದರು. ಅವರು, "ಏನು ಮಾಡ್ತೀರಿ?" ಕೇಳಿದರು. "ಏನೂ ಮಾಡುವುದಿಲ್ಲ ಸ್ವಾಮೀಜಿ" ಎಂದೆ. ಅವರು "ಓಹೋ ಸುಮ್ಮನೆ ಒಳಗೆ, ಸುಮ್ಮನೆ ಇರ್ತೀರೇನು?" ಅಂತ ನಕ್ಕರು. ನಾನು "ಇಲ್ಲ ಸ್ವಾಮೀಜಿ ಸುಮ್ಮನೆ ಒಳಗಿನ ಗದ್ದಲ ನೋಡ್ತೀನಿ" ಅಂದೆ. 'ಓಹೋ' ಅಂದವರು ಹುಬ್ಬೇರಿಸಿ ಮೆಚ್ಚುಗೆಯ ನೋಟ ಬೀರಿದರು. "ಅಲ್ಲಿ ತೋಟ ನೋಡ್ಕೋತೀರಾ?" ಪುನಃ ಅವರ ಪ್ರಶ್ನೆ." ಇಲ್ಲ ಸ್ವಾಮೀಜಿ ತೋಟ ನಮ್ಮನ್ನು ನೋಡಿಕೊಳ್ಳುತ್ತದೆ" ಎಂಬ ನನ್ನ ಉತ್ತರಕ್ಕೆ ಮತ್ತೊಮ್ಮೆ ಮೆಚ್ಚುಗೆಯ ನೋಟದ ಮುಗುಳ್ನಗು. "ಟೀಚಿಂಗ್ ಮಾಡ್ತಿದ್ರಂತೆ ಯಾಕೆ ಬಿಟ್ಟಿರಿ?" ಪೂಜ್ಯರ ಪ್ರಶ್ನೆ. "ನಾನು ಟೀಚಿಂಗ್ ಮಾಡ್ತಿಲ್ಲ ಚೀಟಿಂಗ್ ಮಾಡ್ತಿದ್ದೇನೆ ಅಂತ ಗೊತ್ತಾಯ್ತು, ಬಿಟ್ಟೆ" ಅಂದೆ. "ಓಹೋ" ಅಂದರು. ಹೀಗೆಲ್ಲ ನನ್ನ ಒರಟೊರಟಾದ ಎಡವಟ್ಟು ಉತ್ತರ. ಸ್ವಾಮೀಜಿಯದು ಸಮಾಧಾನದ ಸ್ವೀಕಾರ, ನಗುಮುಖ.

ಅವರನ್ನು ಬೀಳ್ಕೊಡುವ ಹೊತ್ತಿಗೆ "ಒಮ್ಮೆ ತೋಟಕ್ಕೆ ಬನ್ನಿ ಸ್ವಾಮೀಜಿ" ಎಂದು ಆಮಂತ್ರಿಸಿದೆ. "ಓಹ್ ಅವಶ್ಯ ಬರೋಣು" ಅಂದರು.

ಅದಾಗಿ 2002 ಎಂದು ನೆನಪು. ಸತ್ಯಕಾಮರ ಆರಾಧನಾ ಕಾರ್ಯಕ್ರಮಕ್ಕೆ ಬನ್ನಿ ಎಂದು ಕರೆಯಲು ಹೋಗಿದ್ದೆ. ಪೂಜ್ಯರು ಅದೆಲ್ಲೋ ಉತ್ತರಕರ್ನಾಟಕದಲ್ಲಿ ನಿತ್ಯ ಪ್ರವಚನದಲ್ಲಿ ಇದ್ದರು. ಅವರು ಬರುವುದಿಲ್ಲ ಎನ್ನಬಹುದಿತ್ತು. ಆದರೆ ನಮ್ಮ ತೋಟಕ್ಕೆ ಬಂದೇಬಿಟ್ಟರು. ಅವರಿಗೆ 'ತಂತ್ರ ಮತ್ತು ಶರಣರು' ಎಂಬ ವಿಷಯ ಕೊಟ್ಟು ಈ ಕುರಿತು ಮಾತಾಡಿ ಎಂದಿದ್ದೆ. ಅವರು ಹಾಗೇ ಆಗಲಿ ಎಂದರು.

ಅವರು ಸಮಯದ ವಿಷಯದಲ್ಲಿ ಬಹು ನಿರ್ದಿಷ್ಟರು ಎಂದು ಆಗ ನನಗೆ ಗೊತ್ತಾಗಿತ್ತು. ನಿಖರವಾಗಿ ಸಮಯ 10.30ಕ್ಕೆ ಕಾರ್ಯಕ್ರಮ ಆರಂಭ. ತಮ್ಮ ಮಾತು 12 ರಿಂದ ಒಂದು ಗಂಟೆಯವರೆಗೆ ಅಂದಿದ್ದೆ. ಅವರು 10.29ಕ್ಕೆ ಬಂದಾಯಿತು. ನಾವೂ ಕೂಡ 10.30ಕ್ಕೆ ಕಾರ್ಯಕ್ರಮ ಆರಂಭಿಸಿದ್ದೆವು. ಅವರು ಬರುತ್ತಾರೆ ಎಂದು ಬಹಳ ಜನ ನೆರೆದಿತ್ತು.

ಪ್ರತಿ ವರ್ಷ ಸತ್ಯಕಾಮರ ಸಮಾಧಿಗೆ ಪುಷ್ಪಾರ್ಪಣೆಯ ಜೊತೆಗೆ ಕಾರ್ಯಕ್ರಮ ಆರಂಭಿಸುವ ಪದ್ಧತಿ ನಮ್ಮದು. ಅವರು ಆ ಸಮಾಧಿಯವರೆಗೂ ಬಂದರು. ಪುಷ್ಪಾರ್ಚನೆ ಮಾಡಲಿಲ್ಲ, ಹಾಗೆಂದು ಒಂದು ವಿರೋಧದ ಅಹಂಕಾರಿ ಧಾಟಿಯಲ್ಲ. ಕೈಮುಗಿದು ಎಲ್ಲರೊಂದಿಗೆ ಆ ಸಮಾಧಿಯ ಮುಂದೆ ಇದ್ದು ಮರಳಿದರು.

ಮತ್ತೆ ವೇದಿಕೆಯ ಮೇಲೆ ಕೂಡ ಸತ್ಯಕಾಮರ ಭಾವಚಿತ್ರಕ್ಕೆ ದೀಪ ಹಚ್ಚಿ ಉದ್ಘಾಟನೆ ಮಾಡುವ ನಮ್ಮ ನಿತ್ಯದ ಕ್ರಮ. ಅವರು ಎಲ್ಲ ಅತಿಥಿಗಳ ಜೊತೆ ದೀಪ ಹಚ್ಚಲು ನಿಂತಂತೆ ಇರುತ್ತಿದ್ದರು. ಮುಗಿದ ಕೈಯಲ್ಲಿ ಉಳಿದವರಿಗೆ ದೀಪ ಹಚ್ಚಲು ಸೂಚಿಸುತ್ತಿದ್ದರು. ತಾನು ಎಂದೂ ದೀಪ ಹಚ್ಚುವುದು, ಆರತಿ ಬೆಳಗುವುದು ಮಾಡಲಿಲ್ಲ. ಸಣ್ಣ ಪುಟ್ಟ ಆಚರಣೆಗಳ ಆಚೆಗೆ ನಿಂತ ಅಲ್ಲಮರೂಪ.

ಅವರ ಮಾತಿಗೆ ಮೊದಲು ಬೇರೆ ಬೇರೆ ಅತಿಥಿಗಳ ಮಾತು ಇತ್ತು. ಪೂಜ್ಯರದು ಕೊನೆಯ ಮಾತು. ಮೊದಲಿನವರು ಮಾತಾಡುತ್ತಾ ಸ್ವಲ್ಪ ಹೊತ್ತು ಮೀರಿದರು. ಪೂಜ್ಯರ ಸಮಯ ಬಂದಾಗ 12 ಗಂಟೆ 10 ನಿಮಿಷ ಆಗಿತ್ತು. ಸ್ವಾಮೀಜಿ 'ಶರಣರು ಮತ್ತು ತಂತ್ರ' ಮಾತು ಆರಂಭಿಸಿ ಸರಿಯಾಗಿ ಒಂದು ಗಂಟೆಗೆ ಮುಗಿಸಿ ಕುಳಿತರು. ನಾನು 12ರಿಂದ 1 ಗಂಟೆಯವರೆಗೆ ಎಂದಿದ್ದೆ. ಅವರ ಸಮಯ ಮಧ್ಯಾಹ್ನ ಒಂದು ಗಂಟೆಗೆ ಮುಗಿದಿತ್ತು. ನಾವು ಹತ್ತು ನಿಮಿಷ ಕಳೆದುಕೊಂಡೆವು ಎಂದು ತಿಳಿಯಿತು. ಕಾಲ ತಪ್ಪಿದ್ದಕ್ಕೆ ಕಾಲನು ಕೊಟ್ಟ ಎಚ್ಚರದಂತೆ ಆ ಅವರ ನಡೆ. ಆ ಬಸವಣ್ಣನಿಗೆ ಬಾಗಿಲಲಿ ಕಾಯ್ದು ಅವನು ಬಾರದೆ ಮಗನನ್ನು ಕಳುಹಿಸಿದಾಗ ನಡೆದೇಬಿಟ್ಟ ಕಾಲದೂತ ಅಲ್ಲಮನಂತೆ. ಮಾತಿಲ್ಲದೇ ಮೌನವಾಗಿ ಕಾಲ ಸೂಚಿಸಿ ನಡೆದುಬಿಟ್ಟರು ಅಪ್ಪಾವ್ರು.

'ಶರಣರು ಮತ್ತು ತಂತ್ರ ವಿವರಿಸಿದ' ಪರಿಯಾದರೂ ಅದೆಷ್ಟು ಸರಳ! ಮಗುವಿಗೂ ತಿಳಿಯಬೇಕು ಅಂಥ ಹೂವಿನಂಥ ಎಸಳು ಬಿಡಿಸಿಟ್ಟು ಪಕಳೆ ತೋರಿಸುವ ಕ್ರಮ. "ಒಬ್ಬ ರಾಜ ಇದ್ದ. ಭಾರೀ ಚಲೋ ಹಣ್ಣಿನ ಗಿಡ ಬೆಳೆಸಿದ್ದ. ಭಾಳ ಮಂದಿ ಬಂದ್ರು. ಅಂವ ಬಂದವರಿಗೆ ಹಣ್ಣನ್ನು ಹೋಳು ಮಾಡಿ ಕೊಟ್ಟ. ಎಲ್ಲರೂ ತಿಂದರು. ರುಚಿ ಅನುಭವಿಸಿದರು, ಹೋದರು. ಒಬ್ಬಂವ ಬಂದ. ರಾಜ ಅವನಿಗೂ ಹಣ್ಣು ಕೊಡಾಕ ಹೋದ. ಬಂದಂವ ಅಂದ 'ದೊರೆ ನನಗ ಹಣ್ಣು ಬ್ಯಾಡ, ಅದರ ಬೀಜ ಕೊಡು'. ದೊರೆ ಅಂವಗ ಬೀಜ ಕೊಟ್ಟ. ಅಂವ ತನ್ನ ತ್ವಾಟಕ್ಕ ಹೋದ, ಬೀಜ ಬಿತ್ತಿದ, ಬೀಜ

ಗಿಡ ಆತು, ಮರ ಆತು, ಕಾಯಿ ಬಿಡ್ತು, ಹಣ್ಣಾದುವು. ಒಮ್ಮೆ ರಾಜ ವಿಹಾರ ಬಂದ. ಈ ತೋಟ ನೋಡಿದ. ಅದರೊಳಗೆ ಹೊಕ್ಕ. ಅಲ್ಲಿ ಅಂವ ಇದ್ದ. ಆ ಅಂವ ದೊರೆಗೆ ಹಣ್ಣು ಕೊಟ್ಟ. ಇದು ತಂತ್ರ, ಅಂವ ಶರಣ" ಅಂದುಬಿಟ್ಟರು ಸ್ವಾಮೀಜಿ.

ಎಂಥಾ ಅಪೂರ್ವ ನಿದರ್ಶನ. ತಂತ್ರ ಅಂದರೆ, ಟೆಕ್ನಿಕ್, ತಂತ್ರ ಅಂದರೆ ಮಾಟಮಂತ್ರ ಮೊದಲಾದ ವಿದ್ಯೆ, ತಂತ್ರ ಅಂದರೆ ಪರಮಾರ್ಥದಲ್ಲಿ ವಿಸ್ತಾರ ಎಂಬ ಎಲ್ಲ ಅರ್ಥವನ್ನೂ ತೆರೆದಿಟ್ಟುಬಿಟ್ಟರು ಸ್ವಾಮೀಜಿ. ಶರಣನ ಹಸಿವು, ಸಮರ್ಪಣೆಯೂ ಪಡಿಮೂಡಿತ್ತು ಅದರೊಳಗೇ. ಮುಕ್ತಾಯಕ್ಕನಿಗೆ ಸಾವಿನ ಗೂಢವನ್ನು ಸರಳವಾಗಿ ಬಿಡಿಸಿಟ್ಟ ಅಲ್ಲಮನ ರೀತಿ.

ಇದಾಗಿ ಕೆರೆ ಕಟ್ಟುವ ಕೆಲಸದಲ್ಲಿ ಮುಳುಗಿದ್ದೆ. ಹೀಗಾಗಿ ಅವರ ಬಳಿ ಹೆಚ್ಚು ಹೋಗಿರಲಿಲ್ಲ. ಅಲ್ಲಿ ಇಲ್ಲಿ ಅಪರೂಪಕ್ಕೆ ಅವರು ಸಮೀಪದಲ್ಲಿ ಬಂದಿದ್ದಾರೆ ಎಂದು ತಿಳಿದಾಗ ಓಡುತ್ತಿದ್ದೆ. ಸುಮ್ಮನೆ ಒಂದು ಕ್ಷಣ ಕಂಡು ಬರುವುದು. ಮಾತಿಲ್ಲ, ಪ್ರಶ್ನೆ ಇಲ್ಲ. ಒಂದು ಮೌನ ನೆರಳಲ್ಲಿ ತಂಪಾಗಿ ಇದ್ದು ಬರುತ್ತಿದ್ದೆ. ಆಗಷ್ಟು ಅವರ ಪ್ರೀತಿ ಚೆಲ್ಲುವ ಕುಡಿನೋಟ, ಮೆಚ್ಚುಗೆ ಸೂಚಿಸುವ ಮುಗುಳ್ನಗು ಇವನ್ನುಂಡು ಬರುತ್ತಿದ್ದೆ. ಬಹಳ ಎಂದರೆ 'ಏನು ಮಾಡಾಕ ಹತ್ತೀರಿ?' ಎಂಬ ಮುಗುಳ್ನಗುವಿನ ಪ್ರಶ್ನೆ ಇರುತ್ತಿತ್ತು. ಕೆರೆಯ ಕೆಲಸದ ಕಷ್ಟ ಹೇಳಿಕೊಂಡರೆ 'ಮಾಡ್ರಿ ಆಗ್ತದ, ಚಲೋ ಕೆಲಸ'. ಎಲ್ಲೂ ಆಶೀರ್ವಾದ ಇದೆ, ದೇವರು ಮಾಡಿಸ್ತಾನೆ ಇಂಥ ಮಾತಿಲ್ಲ. ನೇರ ಸರಳ ಬಲ. 'ಹಸಿವಾದರೆ ಉದಕವನೆರೆವವ ನಾನು, ನೀ ದೇವನಲ್ಲ ನಾ ದೇವ' ಎಂದ ಅಲ್ಲಮನ ಸೌಮ್ಯ ರೂಪ ಈ ಅಪ್ಪ.

2005ಕ್ಕೆ ಕೆರೆ ಉದ್ಘಾಟನೆ. ಅದು ಅಪ್ಪಾವರ ಹಸ್ತದಿಂದಲೇ ಆಗಬೇಕು ಎಂದು ನನ್ನ ಹಸಿವು. ಅವರು ಎಂದಿನಂತೆ ತುಂಬ ಹಿಗ್ಗಿನಿಂದ ಒಪ್ಪಿದರು. ಕಲ್ಲಹಳ್ಳಿಗೆ ಕರೆದಾಗ ಅವರು ಯಾವಾಗಲೂ ಇಲ್ಲ ಎಂದದ್ದೇ ಇಲ್ಲ. ಅವರಿಗೆ ಅದೆಂಥದೋ ವಿಶೇಷ ಪ್ರೀತಿ. ಪ್ರತಿಯೊಬ್ಬರಿಗೂ ಅವರು ನಮ್ಮನ್ನು ಪ್ರೀತಿಸುತ್ತಾರೆ ಅನಿಸುತ್ತದಂತೆ ದೊಡ್ಡವರ ಬಗ್ಗೆ. ಹ್ಯಾಗೋ ಗೊತ್ತಿಲ್ಲ. ಅವರ ಪ್ರೀತಿಯ ಧಾರೆಯನ್ನು ನಾನಂತೂ ಅಸಾಧಾರಣ ಅನುಭವಿಸಿದ್ದೇನೆ. ಅದು ನನ್ನ ಭಾಗ್ಯ.

ಅವರು ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಮೂಲಕ ಕೆರೆ ಉದ್ಘಾಟಿಸಿದರು. ಆ ದಿನ ಪೂಜ್ಯ ಸುತ್ತೂರು ಶ್ರೀಗಳು ಮತ್ತು ನನ್ನ ಹೆತ್ತಪ್ಪ ಬನ್ನಂಜೆ ಗೋವಿಂದಾಚಾರ್ಯರು ಕೂಡ ಇದ್ದರು. ಅಂದು ಪ್ರಸ್ತಾವನೆಯಲ್ಲಿ ಸಿದ್ಧರಾಮ ಕೆರೆ ಮಾಡಿ ಅದರ ಅಹಂಕಾರದಲ್ಲಿ ಇರುವಾಗ ಅಲ್ಲಮ ಬಂದು ಅವನನ್ನು "ಸಾಕು ಕಲ್ಲು ಕಟಿಯೋದು. ಬಾ ಕಲ್ಯಾಣಕ್ಕೆ" ಅಂತ ಅಹಂಕಾರ ಕೆಣಕಿ ಎಚ್ಚರಿಸಿದ ಕತೆಯನ್ನು ಹೇಳಿ, 'ನಾನು ತುಂಬ ಭಕ್ತಿ ಗೌರವದಿಂದ ಕಾಣುವ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಅಪ್ಪಗಳು ನನ್ನನ್ನು ಈ ಕಲ್ಲುಕಟೆಯುವ

ಕೆಲಸ ಮುಗಿಸಿ ಆ ಕಲ್ಯಾಣದ ಕಡೆ ನಡೆಯುವಂತೆ ಆಶೀರ್ವದಿಸಬೇಕು. ಈ ಸಮಾಜ ಸೇವೆ ಎಂಬ ಕಾಲಯಾಪನೆ ಸಾಕಾಗಿದೆ. ನನ್ನನ್ನು ಈ ಸಮಯಸಾಧನೆಯ ಕೆಲಸದಿಂದ ಬಿಡುಗಡೆಗೊಳಿಸಿ' ಎಂದು ವೇದಿಕೆಯಲ್ಲಿ ಅಳುತ್ತಾ ಪ್ರಾರ್ಥಿಸಿದ್ದೆ. ಪೂಜ್ಯರು ಅಂದು ಬಹಳ ಹೊತ್ತು ನಮ್ಮ ಎಲ್ಲ ಕೆಲಸವನ್ನೂ ಕೊಂಡಾಡಿದರು. "ಅವರು ಎಲ್ಲ ಮಾಡಿ ಏನೂ ಮಾಡದ್ಹಂಗ ಸುಮ್ಮನೆ ಕುಂತಾರ. ಅದಕ ಅವರು ಖುಷಿ ಅದಾರು. ಅದಕ ಅವರು 'ಸುಮ್ಮನೆ' ಅಂತ ಆಶ್ರಮಕ್ಕ ಹೆಸರಿಟ್ಟಾರು. ಅದು ಹಾಂಗ ಎಲ್ಲರೂ ಇಡೋ ಹೆಸರಲ್ಲ, ನೀವು ಇಟ್ಟು ನೋಡ್ರಿ. ಅದರ ಪರಿಣಾಮ ಅನುಭವಿಸಿ ನೋಡ್ರಿ, ನಿಮಗ ಆಗ ತಿಳೀತದ. ಇದರ ಒಳಗ ಸತ್ಯಕಾಮ ಅದಾರ. ಕಾಮ ಅದ ಆದರ ಅದು ಸತ್ಯದ ಕಾಮ. ಹಿಂಗ ಇರಲಾಕ ಬಂದ್ರ ಮಾತ್ರ ಸತ್ಯಕಾಮ ಅನಬೇಕು. ಇಲ್ಲಾಂದ್ರೆ ಅದು ಅಸತ್ಯದ ಕಾಮ. ಇಲ್ಲಿ ಗಿಡ ನೋಡ್ರಿ ನೆಲ ನೋಡ್ರಿ ಇದರೊಳಗ ಸತ್ಯದ ಕಾಮ ಅದ, ಅದಕ್ಕ ಇದು ಹಿಂಗದ......" ಹೀಗೆ ತುಂಬ ಕೊಂಡಾಡುತ್ತಿದ್ದರು.

ಅವರು ಹೊರಡುವಾಗಲೂ ನಾನು ಅವರ ಪಾದಕ್ಕೆ ಬಹಳ ಹೊತ್ತು ನಮಿಸಿ ಕಣ್ಣೀರ ಅಭಿಷೇಕ ಮಾಡಿದ್ದೆ. 'ಸಾಕು ನನ್ನನ್ನು ಈ ಕರ್ಮದ ಕಟ್ಟುಗಳಿಂದ ಬಿಡಿಸಿ' ಎನ್ನುವುದು ನನ್ನ ಒಳಗಿನ ಗಟ್ಟಿ ಪ್ರಾರ್ಥನೆ. ನಾನು ಬಹಳ ಹೊತ್ತು ನಮಿಸಿ ಏಳುವ ವರೆಗೂ ಅವರದು ಘನ ಮೌನ. ಕಣ್ಮುಚ್ಚಿ ಸುಮ್ಮನೆ ಇರುತ್ತಿದ್ದರು. ನಾನು ಮೇಲೆದ್ದು ಅವರ ಕಡೆ ಆರ್ತಳಾಗಿ ನೋಡುತ್ತಿದ್ದೆ. ಅವರು ಅಷ್ಟೇ ಕರುಣಾಮಯಿಯಂತೆ ಮುಗುಳ್ನಕ್ಕು ಕೈಮುಗಿಯುತ್ತಿದ್ದರು. ಅಷ್ಟರಲ್ಲಿ ಅದೇನನ್ನು ದಾಟಿಸಬೇಕೋ ಅದು ದಾಟಿಸಿದ ಅನುಭವ ನನ್ನ ಎದೆಯಲ್ಲಿ ಮೂಡುತ್ತಿತ್ತು. ಏನೂ ತಿಳಿಯದೇ ಸಿದ್ಧರಾಮ ಅಲ್ಲಮನನ್ನು ಅನುಸರಿಸಿ ಬಿಟ್ಟನಲ್ಲ, ಹಾಗೆ.

ಇತ್ತ 2006ರ ಅರ್ಧಭಾಗದಲ್ಲಿ ತೀವ್ರವಾಗಿ ಕಲ್ಲಹಳ್ಳಿ ಬಿಟ್ಟು ನಡೆ ಎಂಬ ಸೂಚನೆ, ಆಗೊಮ್ಮೆ ಈಗೊಮ್ಮೆ ಹೊಡೆದು ಹೇಳುತ್ತಿತ್ತು. ಅದು ಅರ್ಥ ಆಗದೆ ಮತ್ತೆ ಒಂದಷ್ಟು ಸಮಯ ಕೆಲಸ ಮಾಡುತ್ತಿದ್ದೆ. 2007ಕ್ಕೆ ಅದು ತೀವ್ರ ಆಯಿತು. ಅಲ್ಲಿ ಏನು ಒಂದು ಕೆಲಸ ಆರಂಭ ಆಗಿತ್ತು, ಅದೆಲ್ಲವನ್ನೂ ಹಾಗೇ ಬಿಟ್ಟು ಹೊರಟುಬಿಟ್ಟೆ.

ಆಗಲೂ ಅಪ್ಪಾವ್ರು ಎಲ್ಲಿಯೇ ಆಸುಪಾಸಿನಲ್ಲಿ ಇದ್ದರೆ ಕಾಣಲು ಹೋಗುತ್ತಿದ್ದೆ. ಒಮ್ಮೆ ಸುತ್ತೂರು ಮಠದಲ್ಲಿ ಪೂಜ್ಯರ ವಾಸ್ತವ್ಯ. ಸುತ್ತೂರು ಶ್ರೀಗಳು ಆಮಂತ್ರಣ ಇತ್ತರು. ಹಿಗ್ಗಿನಿಂದ ಹೋಗಿ ಅವರ ಸಾನ್ನಿಧ್ಯಭಾಗ್ಯ ಪಡೆದೆ. ಅವರ ವಾಯು ವಿಹಾರವೇ ಒಂದು ವಿಶೇಷ. ಅವರು ಗುಡ್ಡ ಏರಿ ನಡೆಯತೊಡಗಿದರೆ ಹಿಂಬಾಲಿಸುವುದು ಕಷ್ಟ. ಹಾಗೆ ಅವರ ನಡೆ. ಮತ್ತೆ ಅವರು ಆ ಸೂರ್ಯೋದಯ ಮತ್ತು ಸೂರ್ಯಾಸ್ತ ಸಮಯದಲ್ಲಿ ಆ ಗುಡ್ಡದ ಮೇಲೆ ಕುಳಿತಾಗ ಅವರೊಂದಿಗೆ ಸತ್ಸಂಗ. ಅದಂತೂ ಬಹಳ ಅಪರೂಪ. ಅವರು ಮಾತಾಡುತ್ತಾರೆ ಎಂದು ನಾವು ಹೋಗುವುದು. ಆದರೆ ಅವರು ಅಲ್ಲಿರುವ ಪ್ರತಿಯೊಬ್ಬರ ಪರಿಚಯ ಕೇಳಿ, ಅವರ ವಿಶೇಷ ಅನುಭವ,

ವೃತ್ತಿಯ ಅಪರೂಪ ಮಾಹಿತಿ, ಬಂದವರ ಜ್ಞಾನ, ತಿಳಿವಳಿಕೆ ಇದನ್ನೇ ಮಾತಾಡಿಸುವುದು ಹೊರತು ತಾವು ಮಾತೇ ಆಡುತ್ತಿರಲಿಲ್ಲ.

ಸುತ್ತೂರಿನ ವಾಕಿಂಗಿನಲ್ಲಿ ಹೀಗೇ ಆಯಿತು. ನಾನು ಕೂಡ ಬಹಳ ಜನರ ಜೊತೆ ಅವರ ಸತ್ಸಂಗಕ್ಕೆ ಹಸಿದು ಗುಡ್ಡ ಏರಿ ಹೋಗಿದ್ದೆ. ಅಪ್ಪಾವ್ರು ನನ್ನನ್ನು ಎಲ್ಲರಿಗೂ ಪರಿಚಯಿಸಿ 'ಇವರು ಭಾಳ ಅನುಭವಿ ಅದಾರ, ಅವರ ಮಾತು ಕೇಳ್ರಿ' ಅಂದವರೇ ಮಾತಾಡುವಂತೆ ನನ್ನ ಕಡೆ ನೋಡಿದರು. ನಾನು 'ಇಲ್ರೀ ಅಪ್ಪ ನಾ ನಿಮ್ಮನ್ನು ಕೇಳಾಕ ಬಂದೇನಿ. ನಾ ಮಾತಾಡಾಂಗಿಲ್ಲ' ಅಂದೆ. ಅವರು ಮಾತಾಡ್ರಿ ಅನ್ನುವುದನ್ನು ಬಿಡಲಿಲ್ಲ. ನಾನು ನನ್ನ ಹಠ ಬಿಡಲಿಲ್ಲ. ಅಲ್ಲಿರುವ ಇತರ ಭಕ್ತರೆಲ್ಲ 'ಹಂಗ ಅಪ್ಪಾವ್ರ ಆದೇಶ ಮೀರಬಾರದ್ರೀ, ಮಾತಾಡ್ರಿ' ಅಂತ ಅಪ್ಪಾವ್ರ ಸಮ್ಮುಖದಲ್ಲೇ ಒತ್ತಾಯ ಮಾಡುತ್ತಿದ್ದರು. ನಾನು ಅಷ್ಟೇ ಸಲುಗೆಯಿಂದ 'ಇಲ್ಲ ಅಪ್ಪಾವ್ರಿಗೆ ನಾ ಯಾಕ್ ಮಾತಾಡಾಂಗಿಲ್ಲ ತಿಳೀತದ. ಹೌದಿಲ್ರೀ ಅಪ್ಪ?' ಅಂತ ಅವರನ್ನೇ ಕೇಳುತ್ತಿದ್ದೆ. ಅವರು ಮುಗುಳ್ನಗುತ್ತಿದ್ದರು. ನನಗಂತೂ ಅವರ ಆ ನಗುವಿನ ತುಂಬ ಒಂದು ಮೆಚ್ಚುಗೆಯ ಖುಷಿ ಕಾಣುತ್ತಿತ್ತು. ನನ್ನ ಸಾತ್ವಿಕ ಹಠವನ್ನು ಅವರು ಇಷ್ಟಪಟ್ಟದ್ದನ್ನು ನಾನು ಆಗೆಲ್ಲಾ ಅನುಭವಿಸುತ್ತಿದ್ದೆ.

ಇನ್ನೊಮ್ಮೆ ಪೂಜ್ಯರು ಸುತ್ತೂರಿನಲ್ಲಿ ಇದ್ದಾರೆ ಎಂದು ತಿಳಿದು ಹುಡುಕಿ ಹೋಗಿದ್ದೆ. ಹಾಗೆ ಸುಮ್ಮನೆ ನಮಿಸಿ ಬರಬೇಕು ಎಂದು. ಮೊದಲ ಬಾರಿ ನಾನೊಬ್ಬಳೇ ಹೋಗಿದ್ದೆ, ಪ್ರತೀ ಬಾರಿ ಒಬ್ಬರಲ್ಲ ಒಬ್ಬರನ್ನು ಕರೆದುಕೊಂಡು ಹೋಗುತ್ತಿದ್ದೆ. ಈ ಬಾರಿ ನಾನು ಮಾತ್ರ. ಗುರುಗಳು ಹುಲ್ಲಿನ ತೋಟದಲ್ಲಿ ಒಬ್ಬರೇ ಕುಳಿತಿದ್ದರು. ನಮಿಸಿದ ನಂತರ ಯಥಾಪ್ರಶ್ನೆ. "ಏನು ಮಾಡಾಕ ಹತ್ತೀರಿ?" ನಾನು ಅದೇ ಆಗ ನಮ್ಮ ಅಪ್ಪನ ಆತ್ಮಚರಿತ್ರೆಯನ್ನು ರೆಕಾರ್ಡ್ ಮಾಡುತ್ತಿದ್ದೆ. ಅಪ್ಪ ದಿನಕ್ಕೆ ಎರಡು ಗಂಟೆ ನನಗೆ ಸಮಯ ಕೊಟ್ಟಿದ್ದರು. ಅವೆಲ್ಲವನ್ನೂ ಧ್ವನಿಮುದ್ರಣದಲ್ಲಿ ದಾಖಲಿಸಿ ಮುಂದೊಂದು ದಿನ ಪುಸ್ತಕ ಬರೆಯುವ ಉದ್ದೇಶವಿದೆ ಎಂದು ಹೇಳಿದೆ. ಪೂಜ್ಯರು ತುಂಬ ಆಸ್ಥೆಯಿಂದ "ಭಾಳ ಚಲೋ ಕೆಲಸ ಮಾಡಾಕ ಹತ್ತೀರಿ. ದೊಡ್ಡವ ಎಷ್ಟು ಕಷ್ಟ ಪಟ್ಟಾನ, ಹ್ಯಾಂಗ ದೊಡ್ಡವ ಆಗ್ಯಾನ, ಅದರ ಹಿಂದ ಏನು ಪರಿಶ್ರಮ ಐತಿ ಇವೆಲ್ಲ ತಿಳೀಬೇಕು. ಮಂದಿಗೆ ದೊಡ್ಡವ ಕಾಣ್ತಾನ, ಆದರ ಅವನ ಈ ತ್ರಾಸ್ ತಿಳಿಯಾಂಗಿಲ್ಲ. ನೀವು ಆಚಾರ್ಯರ ಹಿಂದ ಏನಿತ್ತು ತಿಳಿಸಬೇಕು" ಅಂದರು. ನನಗೆ ಆ ಕ್ಷಣ ಅನ್ನಿಸಿತು, ಕೇಳಿಯೇಬಿಟ್ಟೆ. "ಅಪ್ಪ ಮತ್ತ ನೀವ್ಯಾಕ ನಿಮ್ಮ ಆತ್ಮಚರಿತ್ರೆ ಬರೀಬಾರದು? ನೀವು ಇವತ್ತು ನಮಗೆ ಕಾಣಿಸೋ ಈ ಎತ್ತರದ ಹಿಂದೆ ಅದೇನದ ಅಂತ ನೀವೂ ಬರೀರಲ್ಲ?" ಅಂದೆ. ಅವರದು ಥಟ್ಟಂತ ಬಾಣದ ಉತ್ತರ, 'ಘಟನಾನೇ (ಘಟ ನಾನೇ) ಇಲ್ಲ ಏನು ಚರಿತ್ರಾ ಬರೆಯೋದು?" ನಾನು ಮುಂದೆ ಮಾತೇ ಆಡಲಿಲ್ಲ. ಅದೆಂಥ ಅದ್ಭುತ ಉತ್ತರ ಘಟ ಇದ್ದರೆ ತಾನೇ ಘಟನೆ? ಛೆ ಇಲ್ಲಿ ಒಂದು ಘಟವೇ ಇಲ್ಲದ ಸ್ಥಿತಿ ಇದೆ ಅನ್ನುವುದನ್ನು ಅಪ್ಪ ಅಂದು ತಿಳಿಸಿಬಿಟ್ಟರು. ನನಗೆ ಆ ಕ್ಷಣಕ್ಕೆ ಮೈಯೆಲ್ಲ ರೋಮಾಂಚನ, ಕಣ್ಣೀರ ಧಾರೆ. ಅವರಿಗೆ ನಾನು ಅಳುವುದು

ಯಾಕೆ ಅರ್ಥ ಆಗಿತ್ತು. ಅವರೂ ಮೌನವಾಗಿ ಅದೇ ಹಸನ್ಮುಖದ ಸಂತಸದಲ್ಲಿ ಪ್ರೀತಿ ತುಂಬಿ ನೋಡುತ್ತಿದ್ದರು. ಬಸವಣ್ಣನನ್ನು ಒಪ್ಪದೆ ಬಸವಣ್ಣನನ್ನು ಅಗಾಧ ಪ್ರೀತಿಸಿದ ಅಲ್ಲಮನ ಭಾವ.

ನಮ್ಮ ಕೆರೆಯ ದಶಮಾನೋತ್ಸವ. ಮತ್ತೆ ಪೂಜ್ಯರನ್ನೇ ಕರೆದೆ. ಬಂದಿದ್ದರು. ಪೂಜ್ಯರು ಎಂದೇ ಆದರೂ ಪ್ರಕೃತಿ, ಗಿಡ, ಮರ ಈ ಕುರಿತು ಮಾತಾಡುವುದನ್ನು ಯಾರಾದರೂ ಕೇಳಬೇಕು. ಅದು ಒಂದು ವಿಶೇಷ ಲೋಕ. ಅವರು ಗಿಡದ ಚಿಗುರಾಗಿ ಬಿಡುತ್ತಾರೆ. ಹೂವಿನ ಪರಿಮಳವೇ ಅವರು. ಅವರೇ ಹಣ್ಣಿನ ಮಾಧುರ್ಯ. ಪ್ರಕೃತಿಯ ನೋವೆಲ್ಲಾ ಅವರ ಜೀವದ ನೋವು. ನೆಲ, ನೀರು, ಗಿಡ, ಮರಕ್ಕೆ ಮಾಡುವ ನೋವೆಲ್ಲಾ ಅವರ ಮೇಲೆ ಮಾಡುವ ಹಿಂಸೆ. ಇಂಥ ತಾದಾತ್ಮ್ಯ ಅವರ ಮಾತು. ಅಂದು ಕೂಡ ಅವರು ಹಾಗೆ ಪ್ರಕೃತಿಯೇ ಆಗಿ ನುಡಿದರು. ಅವರ ಪ್ರವಚನ ಮುಗಿದು ಅವರು ಹೊರಟರು. ಅಂದು ನಾಟಕ ನಿರ್ದೇಶಕ 'ಸಮುದಾಯದ' ಪ್ರಸನ್ನ ಇನ್ನೊಬ್ಬ ಅತಿಥಿ. ಸಿದ್ಧೇಶ್ವರ ಸ್ವಾಮಿಗಳು ವೇದಿಕೆಯಿಂದ ನಿರ್ಗಮಿಸಿದ ಬಳಿಕ ನನ್ನ ಬಳಿ ಪ್ರಸನ್ನ, "ಆ ಸಿದ್ಧೇಶ್ವರ ಸ್ವಾಮಿಗಳ ಜೊತೆ ಕೆಲವು ದಿನಗಳ ಕಾಲ ಇರಲು ಬಿಡುತ್ತಾರಾ?" ಎಂದು ಕೇಳಿದ್ದರು. ಈ ಕುರಿತು ನಾನು ಹೆಚ್ಚು ಹೇಳುವುದಿಲ್ಲ. ಎಂಥ ವಿರೋಧಿಗೂ ಸಿದ್ಧೇಶ್ವರ ಶ್ರೀಗಳು ಹೇಗೆ ಪರಿಣಾಮ ಬೀರುತ್ತಿದ್ದರು ಎಂದು ತಿಳಿದರೆ ಸಾಕು.

ಬಹಳ ದಿನಗಳ ಈ ಭಾವ ನನಗೆ ಅಪ್ಪಾವ್ರು ನನ್ನ ಅದೃಶ್ಯ ಗುರು ಎಂಬ ಭಾವನೆ ಕೊಟ್ಟಿತ್ತು. ಇದನ್ನು ನಾನು ಹಲವು ಉಪನ್ಯಾಸಗಳಲ್ಲಿ ಹೇಳಿಕೊಂಡಿದ್ದೆ ಕೂಡ. ಅದು ಹಾಗೆ ನೋಡಿದರೆ ನಿತ್ಯ ನೆನೆವ ನೆನಪಲ್ಲ. ಹಾಗೆಂದು ಅವರು ಎಲ್ಲೋ ದೂರದಿಂದ ಹರಸುತ್ತಾರೆ ಎಂಬ ಒಂದು ಭಕ್ತಿ ಇತ್ತು. ಒಂದು ದಿನ ಬೆಳಗ್ಗಿನ ಜಾವ, ಅದು ನನ್ನ ಹುಟ್ಟಿದ ದಿನ, ನಾನು "ಇಂದು ನನ್ನ ಹುಟ್ಟಿದ ದಿನ ನಿಮ್ಮ ಆಶೀರ್ವಾದ ಇರಲಿ" ಎಂದು ಅವರ ಪದತಲಕ್ಕೆ ನಮಿಸಿದ ಕನಸು ಕಂಡಿದ್ದೆ. "ಅವರು ನೀವು ನಡೆಯೋ ದಾರಿ ಚಲೋ ಅದಾ, ನಾನು ನಿಮ್ಮ ಜೋಡಿ ಅದೀನಿ" ಅಂತ ಆಶೀರ್ವದಿಸುತ್ತಿದ್ದರು. ಆ ದಿನ ನನಗೇ ಪರಮಾಶ್ಚರ್ಯ. ಯಾಕೆಂದರೆ ನಾನಾಗಿ ಅವರನ್ನು ಹಾಗೆ ಖಂಡಿತಕ್ಕೂ ಯೋಚಿಸಿರಲಿಲ್ಲ. ನನಗೆ ಅದರ ಆನಂದ ಅನುಭವಕ್ಕೆ ಬರುವಷ್ಟು ಅದು ಗಾಢ ಪರಿಣಾಮ ಬೀರಿತು. ನಾನು ಅದನ್ನು ತಡೆಯಲಾಗದೇ ಒಮ್ಮೆ ಅಪ್ಪಾವ್ರ ಬಳಿ ಹೋಗಿ ನಮಿಸಿ ನನಗೆ ಹೀಗೆ ಆಯಿತು ಎಂದು ಹೇಳಿದ್ದೆ ಕೂಡ. ಅವರು ಸುಮ್ಮನೆ ನಕ್ಕಿದ್ದರು, ಒಳಗಷ್ಟು ಪ್ರೀತಿ ಚೆಲ್ಲಿ ಹರಸಿದ್ದರು.

ಇದೇ ಎರಡು ವರ್ಷಗಳ ಹಿಂದೆ ಒಮ್ಮೆ ಕಲ್ಲಹಳ್ಳಿಗೆ ನಾನು ಮಿತ್ರರೊಡಗೂಡಿ ಬಂದಾಗ ಪೂರ್ಣ ಸೂರ್ಯಗ್ರಹಣ. ನಮ್ಮ ತೋಟಕ್ಕೆ ಬಂದ ಇಪ್ಪತ್ತು ಜನರನ್ನು ಕರೆದುಕೊಂಡು ಹೋಗಿದ್ದೆ. ಎಲ್ಲರೂ ಉಪವಾಸ ಇದ್ದೆವು. ಅಪ್ಪಾವ್ರ ಬಳಿ ಹೋಗಿ

ನಮಿಸಿ ಪದತಲದಲ್ಲಿ ಕುಳಿತು "ಅಪ್ಪ ಗ್ರಹಣಕ್ಕೆ ಊಟ ಮಾಡಬೇಡ ಅಂತಾರ, ಯಾಕಿರಬೇಕು" ಕೇಳಿದೆ. ಅವರದು ಎಂದಿನಂತೆ ನಮ್ಮಿಂದಲೇ ಉತ್ತರ ಹೊರಡಿಸುವ ನಿತ್ಯಕ್ರಮ. "ಹೌದು ನೀವೆಲ್ಲ ಬಂದೀರಲ್ಲ, ಉಂಡೀರೇನು?" ಕೇಳಿದರು. ನನ್ನೊಂದಿಗೆ ಬಂದವರೆಲ್ಲ "ಇಲ್ಲ" ಅಂದರು. "ಎದಕೆ ಉಣ್ಣಿಲ್ಲ?" ಒಬ್ಬೊಬ್ಬರನ್ನೇ ಕೇಳಿದರು. "ದೇವಸ್ಥಾನನೇ ಬಾಗಿಲು ಹಾಕ್ತದ, ದೇವರಿಗೇ ನೈವೇದ್ಯ ಇಲ್ಲ, ನಾವೇನು ಉಣ್ಣೋದು?" ಒಬ್ಬರ ಉತ್ತರ. "ಎಲ್ರೂ ಮಾಡಬೇಡ ಅಂತಾರ, ಅದಕ ಊಟ ಮಾಡಿಲ್ಲ" ಇನ್ನೊಬ್ಬರ ಮಾತು. "ನಮಗ ಬೆಳಕು ಕೊಡೋ ಆ ದೇವರಿಗೇ ಬೆಳಕು ಕೊಡಲಾರದ್ಹಾಂಗ ಆಗ್ಯದ. ಅವನಿಗೆ ಏನೋ ಆಗಿರುವಾಗ ನಾವು ಆರಾಮ ಕೂತು ಊಟ ಮಾಡೋದು ಹ್ಯಾಂಗ?" ಒಬ್ಬರು ಹೆಣ್ಣುಮಗಳ ಪ್ರಶ್ನೆ. ಸ್ವಾಮೀಜಿ "ಇವರ ಮಾತು ಚಲೋ ಅದ ನೋಡ್ರಿ. ನಿಮ್ಮ ಮನಿಗೆ ಊಟ ತರೋ ಅಪ್ಪ, ಹೋದವ ಬರೋಹೊತ್ತಿಗೆ ಬರಲಿಲ್ಲ, ಅವನು ಕಾಣಿಸವಲ್ಲ, ಅಂಥ ಹೊತ್ನಾಗ ಅಂವ ಬರೋತನ ನೀವು ಊಟಕ್ಕ ಕಾಯ್ತೀರಿ, ನಿಮ್ಮ ಪಾಡಿಗೆ ಊಟ ಮಾಡಾಂಗಿಲ್ಲ ಹೌದಿಲ್ಲೋ. ಹಂಗಂದ್ರ ಚಲೋ. ಈ ತಾಯಿಗೆ ಹಂಗನಿಸ್ಯದ ನೋಡ್ರಿ, ನಮಗ ಬೆಳಕು ಕೊಡಾಂವನಿಗೆ ಏನೋ ಆಗ್ಯದ, ಅಂವ ಆರಾಮ ಆಗ್ಲಿ, ಆಮ್ಯಾಕೆ ಊಟ ಮಾಡೋಣು. ಯಾರ ಜೋಡಿಗಾದ್ರೂ ಹಿಂಗಿದ್ರ ಭಾಳ ಚಲೋ. ಇಲ್ಲಿಯ ಗಿಡ, ಮರ, ಸೂರ್ಯ, ಚಂದ್ರ ಎಲ್ಲ ನಮ್ಮ ಕುಟುಂಬ ಅನ್ನೋದದಲ್ಲ ಅದು ದೊಡ್ಡದು" ಅಂದುಬಿಟ್ಟರು. ಸರಳವಾಗಿ ಘನವನ್ನು ತಿಳಿಸುವ ಕ್ರಮ. ನಮಗೆ ಗೊತ್ತೇ ಇಲ್ಲದೆ ನಮ್ಮನ್ನು ಅಖಂಡಭಾವದಲ್ಲಿ ಮುಳುಗಿಸಿಬಿಡುವ ಬಲ. ಇದು ಮನದ ಮುಂದಣ ಆಶೆಯೇ ಮಾಯೆ ಕಾಣಾ ಎಂದ ಅಲ್ಲಮನ ರೀತಿಯದು.

ಸುತ್ತೂರಿನಲ್ಲಿ ಒಮ್ಮೆ ನನ್ನ ಭಾಷಣ. ಅನಂತರದಲ್ಲಿ ಪೂಜ್ಯರ ಪ್ರವಚನ. ನಾನು ಪ್ರೇಕ್ಷಕರ ಮುಂದಿನ ಸಾಲಿನಲ್ಲಿ ಇದ್ದೇನೆ. ಅಪ್ಪ ಮಾತನಾಡುವ ಮುಂದೆ ಒಂದು ಟೇಬಲ್. ಅದರ ಮೇಲೊಂದು ಗುಲಾಬಿ ಹೂವು. ಅಪ್ಪಗಳು ಆರಂಭಿಸಿದರು, "ಇದು ಗುಲಾಬಿ ಹೂವು. ಇದರ ಬಣ್ಣ ಕೆಂಪದ. ಗುಲಾಬಿ ಒಳಗ ಭಾಳ ಬಣ್ಣ ಅಂವಾ. ಗಿಡಕ್ಕ ಮುಳ್ಳದಾವು. ಅದಕ್ಕ ಇಂಥಾ ಮಣ್ಣು ಇದ್ದರ ಹೂವು ಬೆಳೀತಾಂವ. ಅದಕ ಇಂಥ ಗೊಬ್ಬರ ಬೇಕು, ಅದರ ಟೊಂಗಿ ಇಷ್ಟು ಕತ್ತರಿಸ್ಬೇಕು. ಅದನ್ನ ಇಷ್ಟು ಆಳದ ಕುಣಿಯಾಗ ನೆಡಬೇಕು, ಇಷ್ಟು ಬಿಸಿಲು ಬೇಕು. ಇಷ್ಟ್ ನೀರು ಉಣಿಸಬೇಕು. ಎಲ್ಲ ಒಬ್ಬವ ತಿಳಿದಾನ್, ಅಂವಾ ಗುಲಾಬಿ ಹೂವು ನೋಡಿಲ್ಲ, ಗಿಡ ಮುಟ್ಟಿಲ್ಲ, ಹೂವು ಮೂಸಿಲ್ಲ. ಆದರ ಅಂವಗ ಗುಲಾಬಿ ಬಗ್ಗೆ ಎಲ್ಲಾ ತಿಳಿದದ. ಅಂವ ಜ್ಞಾನಿ.

ಇನ್ನೊಬ್ಬ ಅದಾನು. ಅಂವಾ ತ್ವಾಟದಾಗ ಗಿಡ ಹಚ್ಯಾನು. ನೀರು ಉಣಿಸ್ಯಾನ್, ಮೊಗ್ಗು ನೋಡ್ಯಾನ್, ಮುಳ್ಳು ಚುಚ್ಚಿಸ್ಕೊಂಡಾನ್, ಅಂವಗ ಹೂವಿನ ಬಣ್ಣ ಗೊತ್ತು, ವಾಸನಾ ಮೂಸ್ಯಾನು. ಮಣ್ಣು ನೀರು ತಿಳೀತಾಂವ, ಅಂವಾ ಗುಲಾಬಿ ಬಗ್ಗೆ ಓದಿಲ್ಲ ಅನುಭವಿಸ್ಯಾನ್. ಅಂವಾ ಅನುಭವಿ.

ಇನ್ನೊಬ್ಬ ಎಂದೂ ಗುಲಾಬಿ ಹೂವಾ ನೋಡಿಲ್ಲ, ಕೇಳಿಲ್ಲ, ಓದಿಲ್ಲ. ಅವನಿಗೆ ಒಮ್ಮೆ ಇದ್ದಕ್ಕಿದ್ದ ಹಾಂಗ ಯಾವುದೋ ಸೆಳೀತದ, ಅದಾ ಒಳಗ ಕುಂತು ಹೇಳ್ತದ, ನೀ ಇನ್ನತನ ಇಲ್ಲೇ ಎದಕ ಕುಂತಿ? ನಡಿ ಅಲ್ಲೊಂದು ಹೂವದ ನೋಡು, ಎಲ್ಲದ ಹುಡುಕು.... ಹೀಂಗ ಸೆಳೀತದ.

ಅಂವಾ ನಿಲ್ಲವಲ್ಲ, ಕುಂಡ್ರುವಲ್ಲ, ಎಲ್ಲಿಗೆ ಗೊತ್ತಿಲ್ಲ. ಹೋಗೇ ಹೋಗ್ತಾನ, ನಡೆದೇ ನಡೀತಾನ.... ಒಳಗೊಂದು ಹೇಳ್ತದ, ಅದಾ ಕರ್ಕೊಂಡು ಹೋಗ್ತದ. ಇಂವಾ ಹೋಗೇ ಹೋಗ್ತಾನ.

ಎಲ್ಲೋ ಅಮೆರಿಕಾದಾಗ ಇದ್ದಾಂವ ಕರೆದಂಗ ಬಂದ. ದೇಶ ಬಿಟ್ಟ ,ಊರು ಬಿಟ್ಟ, ಯಾವುದೋ ತ್ವಾಟಕ್ಕ ಬಂದ, ಅದೇ ಆ ಕಣ್ಣೊಳಗ ಕಂಡ ಹೂವಿತ್ತಲ್ಲ ಅದು ಕಾಣಿಸ್ತು. ವಾಸನಾ ತಿಳೀತು. ಅವನಿಗೆ ಹೊರಗ ನೋಡೋದು ಸಾಲಲಿಲ್ಲ. ಅದರ ಒಳಗೆ ಸೇರಿದ. ತುಂಬಿಯಾದ, ತುಂಬಿದ. ಅಲ್ಲೇ ಇಲ್ಲವಾದ. ಅಂವಾ ಅನುಭಾವಿ.

‘ಆ ಜ್ಞಾನಿ ಆಗ್ತೀರೋ, ಅನುಭವಿ ಆಗ್ತೀರೋ, ಅನುಭಾವಿ ಆಗ್ತೀರೋ? ವಿಚಾರ ಮಾಡ್ರಿ’ ಅಂದರು ಪೂಜ್ಯರು. ಜೀವನದಲ್ಲೇ ಮರೆಯಲಾಗದ ಬೋಧನೆ ಅದು ನನಗೆ. ಅದು ಜ್ಞಾನಮಾರ್ಗ ಕರ್ಮಮಾರ್ಗ ಮತ್ತು ಭಕ್ತಿಮಾರ್ಗವನ್ನು ಸರಳವಾಗಿ ವಿವರಿಸಿದ ಪರಿ ಮಾತ್ರವಲ್ಲ, ಒಳಗೆ ಬಡಿದೆಬ್ಬಿಸಿ ಹೂವಿನೊಳಗೆ ಮುಳುಗು ಎಂದು ನನಗೇ ಮಾಡಿದ ಆದೇಶದ ಹಾಗೆ ಈಗಲೂ ಗುನುಗುನಿಸುತ್ತದೆ. ನಾನೆಂಬ ಎಂಜಲನ್ನಳಿದ ಅಭಿನ್ನ ಕಾಣಾ ಗುಹೇಶ್ವರನ ಮಾತಿನ ಘನಭಾವದ ಎಂಥ ಸರಳ ನಿರೂಪಣೆ.

ತುಂಬ ಹೇಳಲಿಕ್ಕಿದೆ. ಅವೆಲ್ಲದರ ಆಚೆಗೆ ಅಪ್ಪ ಇದ್ದಾರೆ. ಅದೊಂದು ದಿನ ಕರ್ನಾಟಕ ಮಹಾರಾಷ್ಟ್ರ ಗಡಿಯಲ್ಲೊಂದು ಪರಿಶುಭ್ರ ಹಳ್ಳಿ. ಒಮ್ಮೆ ಅದನ್ನು ನೋಡಲೆಂದೇ ಹೋಗಿ ಬರಬೇಕು, ಅಷ್ಟು ಶುಭ್ರ. ಅಲ್ಲಿಂದ ಒಮ್ಮೆ ನನಗೆ ಕರೆ. "ಸಿದ್ಧೇಶ್ವರ ಅಪ್ಪಾವ್ರು ಆ ಹಳ್ಳಿಗೆ ಇಂಥ ದಿನ ಬರ್ತಾರ. ನೀವು ಬರಬೇಕು ಅಂತ ಹೇಳ್ಯಾರ". ನನಗೆ ಬೇರೆ ಯಾವ ವಿವರಣೆ ಯಾಕೆ ಬೇಕು? ಅಪ್ಪ ಕರದಾರ, ಹೋಗಬೇಕು. ಹಸು(ಸಿ)ವಿನ ಬೆನ್ನುಹತ್ತಿದ ಕರು ನಾನು.

ಅಂದು ಬೆಳಗ್ಗೆ ಒಂಬತ್ತರ ಒಳಗೆ ಹಳ್ಳಿ ತಲುಪಬೇಕಾಗಿತ್ತು. ಕಲ್ಲಹಳ್ಳಿಯಿಂದ ಬೆಳಗ್ಗೆ ಐದಕ್ಕೆಲ್ಲ ಮಿತ್ರರ ಜೊತೆ ಕಾರಿನಲ್ಲಿ ಹೊರಟಿದ್ದೆ. ದಾರಿ ತುಂಬ ಮಲಬಾಧೆಯ ದೃಶ್ಯ. ಪ್ರಾಕೃತಿಕ ಸೊಬಗು ಸೂರ್ಯೋದಯ ಎಲ್ಲವನ್ನೂ ಮುಚ್ಚಿಹಾಕಿತ್ತು. ಮನಸು ತುಂಬ ನೊಂದಿತ್ತು. ಅಲ್ಲಿ ಹೋದರೆ ಪವಿತ್ರ ಶುಭ್ರ ಹಳ್ಳಿ ಸ್ವಾಗತಿಸಿತು. ಒಂದೊಂದು ಕೂಡ ನಿರ್ಮಲ. ನರಕದಿಂದ ಸ್ವರ್ಗಕ್ಕೆ ಬಂದ ಅನುಭವ. ನನಗೆ ಗೊತ್ತೇ ಇರಲಿಲ್ಲ ಪೂಜ್ಯರ ಜೊತೆ ನನ್ನನ್ನು ಆಯೋಜಕರು ವೇದಿಕೆಗೆ ಕರೆಯುತ್ತಾರೆ ಎಂದು. ನಾನು ಬೇಡ ಎಂದರೆ ಪೂಜ್ಯರ ಕಣ್ಣಿನಿಂದಲೇ ಆದೇಶ. ಅವರ ಪಕ್ಕ ಕುಳಿತೇನು ಹೇಗೆ?

ನೆಲದಲ್ಲಿ ಕುಳಿತೆ. ಪೂಜ್ಯರು ಮೊದಲು ನಾನು ಮಾತಾಡುವಂತೆ ಆದೇಶಿಸಿದರು.

ನಾನು ಆಗಲೇ ಅರ್ಧ ಕಣ್ಣೀರಾಗಿದ್ದೆ. ಈ ಸ್ವಚ್ಛತೆ ನನ್ನ ಒಳಗನ್ನು ತೊಳೆದು ನೀರು ಮಾಡಿತ್ತು. ದಾರಿಯುದ್ದಕ್ಕೂ ನೋಡಿದ ಹೃದಯ ಹಿಂಡಿದ ದುಃಖ ಇತ್ತು. ನಾನು ಹೆಚ್ಚು ಮಾತಾಡಲೇ ಇಲ್ಲ. "ಪೂಜ್ಯರ ಸಾಮೀಪ್ಯ ಭಾಗ್ಯ ದೊರಕುತ್ತದೆ ಎಂದು ಬಂದವಳು. ನನಗೆ ಬೇರೆ ಯಾವ ಮಾತೂ ಇಷ್ಟ ಇಲ್ಲ. ಅವರ ಪಕ್ಕ ಕುಳಿತಿದ್ದೇನೆ, ಸಾಕು. ಆದರೂ ಈ ಸ್ವಚ್ಛತೆಗೆ ನಮನ. ಇಡೀ ದೇಶ ಹೀಗಾಗಲಿ. ಇದನ್ನು ಒಬ್ಬ ಮೋದಿ ಮಾಡಲಾರ. ಎಲ್ಲರ ಒಳಗೂ ಇದು ಹುಟ್ಟಲಿ. ತಾನು ಮಾಡಿದ ಹೊಲಸು ಕಾಣದಂತೆ ನಾಯಿ ಬೆಕ್ಕು ಕೂಡ ಮಣ್ಣು ಎಳೆಯುತ್ತವೆ. ಮನುಷ್ಯನಿಗೆ ಯಾಕೆ ಇದು ತಿಳಿಯದು? ಭಗವಂತ, ಎಲ್ಲರ ಒಳಗೂ ಕುಳಿತು ಇದನ್ನು ತಿಳಿಸು. ನಮ್ಮ ಒಳ ಹೊರಗಿನ ಎಲ್ಲ ಹೊಲಸನ್ನೂ ತೊಳೆ" ಎಂದು ಕೈಮುಗಿದು ಪ್ರಾರ್ಥಿಸಿದವಳೇ ಧಾರಾಕಾರ ಅಳುತ್ತಾ ಮಾತುಕಟ್ಟಿ ಕುಳಿತುಬಿಟ್ಟೆ. ಅಳು ಹಾಗೇ ಇತ್ತು.

ಅಪ್ಪಗಳು ಮಾತು ಆರಂಭಿಸಿದರು. ಆ ಹಳ್ಳಿಯ ಸ್ವಚ್ಛತೆಯನ್ನು ಕೊಂಡಾಡಿದ ಬಳಿಕ, "ಇಲ್ಲಿ ಕುಂತಾರಲ್ಲ, ಇವರು ಅನುಭಾವಿಗಳು, ಬ್ರಹ್ಮವಾದಿನಿಯರು, ಅವರ ಕಣ್ಣಾಗ ನೀರು ಅಂದರ ಅದಕ ಭಾಳ ಅರ್ಥ ಅದಾವು......" ಅವರ ಮಾತು ಮುಂದುವರಿದಿತ್ತು. ಅಪ್ಪ ಹೇಳಿದ ಮಾತು ಈ ಜೀವನಕ್ಕೆ ಸಿಕ್ಕ ಅತ್ಯಮೂಲ್ಯ ಪ್ರಶಸ್ತಿ. ಇನ್ನು ಯಾರು ಏನು ಕೊಟ್ಟರೂ ಅಷ್ಟೇ ಎಂದು ಒಳಗೊಂದು ಬಲವಾಗಿ ಹೇಳುತ್ತಿತ್ತು. ಅವರಿಗೆ ಹಾಗೆ ಕಾಣಿಸಿತಲ್ಲ ಜನ್ಮ ಸಾರ್ಥಕ ಎನಿಸಿತು. ಇನ್ನೂ ಬಹಳ ನಡೆಯಲಿಕ್ಕಿದೆ; ಆ ಮಾತುಗಳು ಆಲಂಬನವಾಗಿರಲಿ, ಅವರು ನಡೆಸಲಿ ಎಂದು ಪ್ರಾರ್ಥಿಸಿಕೊಂಡೆ. ಅಲ್ಲಮ ಮಂಜು ಮುಸುಕಿದ ಹಣ್ಣು ತಿಂದರೆ ನಿಮ್ಮಾಣೆ ಕಾಣಾ ಗುಹೇಶ್ವರ ಎಂದದ್ದು ನೆನಪಾಯಿತು.

ಇಂಥ ನನ್ನ ಪರಮಪ್ರೀತಿಯ ಅಪ್ಪ ಬಿದ್ದು ಮೂಳೆ ಮುರಿದುಕೊಂಡದ್ದು ಗೊತ್ತಾಗಿ ಅವರು ಕನೇರಿಯಲ್ಲಿ ಇದ್ದಾಗ ಓಡಿಹೋಗಿದ್ದೆ. 'ಹ್ಯಾಂಗದೀರಿ ಅಪ್ಪ' ಅಂದರೆ 'ಆರಾಮದೀನಿ' ಅಂತ ಆ ನೋವಿನಲ್ಲೇ ನಕ್ಕು, 'ನೋವದಾ ಏನ್ರೀ ಅಪ್ಪ?' ಅಂದಾಗ "ಹೂಂ ಒಂದೀಟು ನೋಯಿಸ್ತಾವು. ನಡಿಯೋ ಮುಂದೆ... ಕೈ ಎತ್ತೋ ಮುಂದೆ" ಅಂತ ಹಸನ್ಮುಖರಾಗಿಯೇ ಹೇಳಿದರು. ಅವರು ನೋವಿದೆ ಅನ್ನಬೇಕಾದರೆ ಅದು ಯಾವ ಪ್ರಮಾಣ ಇರಬಹುದು ಊಹಿಸುವಂತೆ ಇತ್ತು. 'ನೀವು ಹ್ಯಾಂಗದೀರಿ?' ಅಂತ ನನ್ನನ್ನು ಕೇಳಿದರು. ಅವರನ್ನು ನೋಡಿ 'ಆರಾಮದೀನಿ ಅಪ್ಪ, ನಿಮ್ಮ ಆಶೀರ್ವಾದ' ಅಂದೆ. ಅಪ್ಪಾವ್ರು', ನೀವು ಆನಂದದೊಳಗ ಇರೋವ್ರು. ಆನಂದ ನಿಮ್ಮ ಜೀವಭಾವ. ಆನಂದವಾಗೇ ಇರ್ತೀರಿ' ಅಂದುಬಿಟ್ಟರು. ಅಪ್ಪನ ಕಾಣ್ಕೆ, ಅವರ ಆಶೀರ್ವಾದ, ಅವರಿಗೆ ತಿಳಿಯದ್ದು ಏನಿದೆ? ಹಿತವಾಗಿ ಬೆಚ್ಚಗೆ ಆ ಮಾತನ್ನೇ ಹೊದ್ದು ಬಂದೆ.

ಹೀಗೆಲ್ಲ ಬೆಳೆಸಿದ ಅಪ್ಪ ಮೊನ್ನೆ ಅನ್ನಾಹಾರ ಬಿಟ್ಟದ್ದು ಗೊತ್ತೇ ಆಗಲಿಲ್ಲ. 29ನೇ ತಾರೀಖು ಚಿಕ್ಕಮಗಳೂರಿಗೆ ಕೆಲಸ ನಿಮಿತ್ತ ಹೊರಡುವಾಗ ಮಿತ್ರ ಕರೆಮಾಡಿ ಕೇಳಿದ, 'ಸಿದ್ಧೇಶ್ವರ ಶ್ರೀಗಳಿಗೆ ಆರಾಮ ಇಲ್ಲವಂತೆ. ವೀಲ್ ಛೇರಿನಲ್ಲಿ ಬಂದ ವಿಡಿಯೋ ನೋಡಿದೆ'. ಆಗಲೂ ಈ ಹಿನ್ನೆಲೆ ಅವನಿಗೆ ಗೊತ್ತಿಲ್ಲ. ನಾನು ಕೂಡ ಅವರಿಗೆ ವಯೋಸಹಜ ಏನಾದರೂ ದೈಹಿಕ ನಿತ್ರಾಣ ಇರಬಹುದು ಅಂದುಕೊಂಡೆ. ಮನಸಿನಲ್ಲೇ 'ದೇವರೇ, ಅವರು ಎಂದೂ ಹಾಸಿಗೆ ಹಿಡಿದು ನರಳುವುದು ಬೇಡ' ಎಂದು ಬೇಡಿಕೊಂಡೆ. ಚಿಕ್ಕಮಗಳೂರು ಪ್ರಯಾಣ ಮುಗಿಸಿ ಬರುವಾಗ ಆಗಲೇ ಮೂವತ್ತೊಂದನೇ ತಾರೀಖು. ನಾನು ಸುದ್ದಿ ಪತ್ರಿಕೆ ಓದದೇ ಮೂರು ವರ್ಷ. ಟಿವಿ ಸಂಪರ್ಕ ಕತ್ತರಿಸಿ ಆರು ವರ್ಷ. ಮೊಬೈಲಿನಲ್ಲಿ ಸುದ್ದಿ ನೋಡುವ ಅಭ್ಯಾಸ ಇಲ್ಲ. ಈ ಎಲ್ಲ ಇಲ್ಲಗಳ ನಡುವೆ ಒಂದನೇ ತಾರೀಖು ಮನೆಯಲ್ಲಿ ಅತಿಥಿಗಳು ಇದ್ದರು.

ಎರಡನೇ ತಾರೀಖು ಬೆಳಗ್ಗೆ ಹನ್ನೆರಡು ಗಂಟೆಗೆ ಇದ್ದಕ್ಕಿದ್ದಂತೆ ತೀವ್ರವಾಗಿ ಸಿದ್ಧೇಶ್ವರ ಅಪ್ಪಗಳ ಬಳಿ ಹೋಗಬೇಕು ಎಂಬ ಭಾವ. ಆಗಲೂ ನನಗೆ ಅವರು ತೀವ್ರ ಹುಷಾರಿಲ್ಲದ ಸ್ಥಿತಿಯಲ್ಲಿ ಇದ್ದಾರೆ ಏನೂ ಗೊತ್ತಿಲ್ಲ. ಹಲವರು ನನ್ನ ಹತ್ತಿರದ ಆಪ್ತರು ಟಿವಿ ನೋಡಿ ತಿಳಿದಿದ್ದರೂ ಯಾರೂ ಹೇಳಲಿಲ್ಲ. ಎಲ್ಲರಿಗೂ ಗೊತ್ತಿರುವ ವಿಷಯ ನನಗೂ ತಿಳಿದಿದೆ ಎಂಬ ಭಾವ ಇರಬೇಕು.

ಅಂಥ ಹೊತ್ತಿನಲ್ಲಿ ಬಹಳ ತೀವ್ರ ಸೆಳೆತ. ಯಾವ ಹೊರಗಿನ ತಿಳುವಳಿಕೆ ಅಲ್ಲ ಯಾರ ಕರೆಯೂ ಅಲ್ಲ. ಅವರು ಎದುರಿಗೆ ಕಾಣಿಸಿ ತಲೆ ನೇವರಿಸಿದ್ದು, ನಡೀರಿ ಈ ನಡೆ ಚಲೋ ಅದಾ, ನಡಸ್ರಿ ನಾ ನಿಮ್ಮ ಜೋಡಿ ಅದೀನಿ ಎಂಬ ಆಶೀರ್ವಾದದ ಪುನರ್ದರ್ಶನ. ಕನಸಲ್ಲ, ಭ್ರಮೆಯಲ್ಲ. ಎಚ್ಚರದ ಅನುಭವ. ಅಷ್ಟೇ ಗೊತ್ತು ಮುಂದೆ....

ನಾನು ಹುಬ್ಬಳ್ಳಿಗೆ ಮಧ್ಯಾಹ್ನದ ಸ್ಲೀಪರ್ ಬಸ್ ಬುಕ್ ಮಾಡಿ ರಾತ್ರಿ ಹನ್ನೊಂದಕ್ಕೆ ತಲುಪಿ ಅಲ್ಲಿಂದ ಮಿತ್ರರ ಕಾರಿನಲ್ಲಿ ಬಿಜಾಪುರ ತಲುಪುವ ಧಾವಂತ. ದಾರಿಯಲ್ಲಿ ಸುದ್ದಿ ಬಂತು. ಬಸ್ ಇಳಿದ ಮೇಲೆ ಮಿತ್ರ ವೀಲುನಾಮೆ ಓದಿ ಹೇಳಿದ. ಬದುಕಿನ ಕುರಿತು, ಅಧ್ಯಾತ್ಮದ ಬಗ್ಗೆ ಎಷ್ಟು ಸುಂದರ ವಿವರಣೆ. ಅಗ್ನಿಸ್ಪರ್ಶ ಮಾಡಿ ಎಂದು ಬರೆದ ಭಾಗ, ಸ್ಮಾರಕ ಬೇಡ ಎಂಬ ಆದೇಶ ಅಪೂರ್ವವಿತ್ತು. ಅವರ ಆ ದೇಹದರ್ಶನ ಮಾತ್ರ ನನಗೆ ಸಿಕ್ಕ ಪಾಲು, ನಮಿಸಿದೆ.

ಹಲವರಿಗೆ ಅವರು ಉಪವಾಸ ಮಾಡಿದ್ದು, ಮರಣಾನಂತರ ಅಗ್ನಿಸ್ಪರ್ಶ ಹೇಳಿದ್ದು ಜೈನಧರ್ಮದ ನಿಲುವೆಂಬ ಭಾವ. ಕೆಲವರಿಗೆ ಅವರದು ವೇದೋಕ್ತದ ಕಡೆ ಆಸಕ್ತಿ ಎಂಬ ತಿಳಿವಳಿಕೆ. ಪ್ರಕೃತಿ ತತ್ತ್ವವನ್ನು ತಿಳಿದವನಿಗೆ, ಅಲ್ಲಮನ ಮಾತಿನ ಬಯಲನ್ನು ಸಿದ್ಧೇಶ್ವರ ಶ್ರೀಗಳು ಉಲ್ಲೇಖಿಸಿದ್ದನ್ನು ಓದಿದವರಿಗೆ ಬೇರೆ ಹೊಳಹು ಕಂಡೀತು. ಈ ಪಂಚಭೂತಗಳಲ್ಲಿ ಈ ದೇಹ ಎಂಬ ಪಂಚಭೂತ ಲೀನ ಆಗಬೇಕು. ಒಂದಿಷ್ಟೂ

ಉಳಿಸದೇ ಈ ದೇಹವನ್ನು ಬಯಲಲ್ಲಿ ಐಕ್ಯಗೊಳಿಸಲು ಅಗ್ನಿಗಲ್ಲದೆ ಇನ್ಯಾರಿಗೆ ಸಾಧ್ಯ? ಪಂಚಭೂತಗಳಲ್ಲಿ ನೀರು, ಭೂಮಿಗೆ ತಿರ್ಯಕ್ ನಡೆ. ಊರ್ಧ್ವಮುಖಿ ನಡೆ ಅಗ್ನಿಗೆ ಮಾತ್ರ. ಅಲ್ಲಮ ಹೇಳಿದ ಬಯಲಿನಲ್ಲಿ ಅಪ್ಪ,

ಕೆಂಡದ ಗಿರಿಯ ಮೇಲೊಂದು ಅರಗಿನ ಕಂಬ
ಕಂಬದ ಮೇಲೊಂದು ಹಂಸ
ಕಂಬ ಬೆಂದಿತ್ತು ಹಂಸ ಹಾರಿತ್ತು ನೋಡಾ

ಇದಿಷ್ಟನ್ನೂ ಎಚ್ಚರದಿಂದ ನೋಡಿದ್ದಾರೆ. ಹಾಗಲ್ಲದೇ ಇನ್ನು ಹೇಗೆ ಹೊರಟಾರು? ಕಂಬ ಬೆಂದದ್ದು ನೋಡಿದ ಮೇಲೆ ಹಂಸ ಹಾರಲು ತಾನೇ ಸಿದ್ಧವಾಗಲು ಮಾಡಿದ ಉಪವಾಸ. ಕುರುಹು ಉಳಿಯದಂತೆ ಬಯಲಾಗಲು ಅಗ್ನಿ. ಬೂದಿಯೂ ಸಿಗದಂತೆ ನದಿಗೆ ಹಾಕಲು ಆದೇಶ. ಸಮಾಧಿ ಸೇರುವ ಮಹಾತ್ಮರೆಲ್ಲ ಭಕ್ತರು ಕರೆದಾಗ ಬರುತ್ತಾರೆ, ನಮ್ಮ ಕಷ್ಟಗಳನ್ನು ಪರಿಹರಿಸುತ್ತಾರೆ ಎಂಬೆಲ್ಲಾ ನಂಬಿಕೆ ಇದೆ. ಸತ್ತ ಮೇಲೆ ಕಾಯುತ್ತೇನೆ ಅನ್ನುವ ನಂಬಿಕೆ ಉಳಿಸಿ ಹೋಗುವ ಭರವಸೆ ಕೂಡ ಕೊಡಲಿಕ್ಕೆ ಇಲ್ಲ ಈ ಅಪ್ಪಾವ್ರಿಗೆ.

ಒಮ್ಮೆ ಅಪ್ಪಾವ್ರ ಜೊತೆ ಹೀಗೆ ಕುಳಿತಿದ್ದೆ. ಅಲ್ಲಿ ಬಂದ ಒಬ್ಬರು ಕೇಳಿದರು, "ಅಪ್ಪಾವ್ರೇ, ಬಹಳ ವರ್ಷಗಳಿಂದ ಪ್ರವಚನ ಹೇಳ್ತೀರಿ. ನಿಮ್ಮ ಪ್ರವಚನ ಕೇಳಿ ಯಾರಾದರೂ ಬದಲಾಗ್ಯಾರು, ಬೆಳೆದಾರು ಅನಿಸ್ಯದ ಏನು?"

ಅಪ್ಪ ಮತ್ತದೇ ಮುಗುಳ್ನಗುವಿಂದ, "ನಾ ಬದಲಾಗಾಕ ಹತ್ಯೇನಿ" ಅಂದುಬಿಟ್ಟರು. ಅಧ್ಯಾತ್ಮದಲ್ಲಿ ಆತ್ಮೋದ್ಧಾರ ಮಾತ್ರ, ಪರೋದ್ಧಾರ, ಸಮಾಜೋದ್ಧಾರದ ಯಾವ ಲೇಪವೂ ಇಲ್ಲದ ಪ್ರಖರ ಅಲ್ಲಮ ತತ್ವ.

"ಆಶಾಕ ನಾವು ಭಾಳ ಬೇಗ ಸಿಕ್ತೀವಿ, ಆದರ ಆಶಾ ಮುಂದ ನಮ್ಮನ್ನ ಆಳ್ತದಾ" ಅನ್ನುವ ಮಾತನ್ನು ಹೇಳಿ ಅಪ್ಪ ಒಂದು ಕಥೆ ಹೇಳಿದ್ದರು. "ಒಬ್ಬಂವ ನದಿ ದಡದಾಗ ಕುಂತಿದ್ದ. ಅಂವನ ಜೋಡಿಗೊಬ್ಬ ಇದ್ದ. ಇಂವ ನದಿ ಕಡೆ ನೋಡಿದ. ನೀರಿನಾಗ ಕಂಬಳಿ ತೇಲ್ಕೋತ ಹೊಂಟಿತ್ತು. ಅಂವಗ ಅನಿಸ್ತು, ಓಹ್ ಕಂಬಳಿ ಇದ್ರ ಚಳಿಗೆ ಹೊದ್ದುಕೊಂಡು ಬೆಚ್ಚಗೆ ಇರಬೋದು. ಅಂವಾ ಕಂಬ್ಳಿ ಆಶಾಕ ನೀರಿಗೆ ಹಾರಿದ. ಹೋಗಿ ಹಿಡಿದ. ಒಂದೀಟು ಹೊತ್ತಿನಾಗ ಕೈಮ್ಯಾಗ ಮಾಡಿ 'ರಕ್ಷಿಸಿರಿ' ಅಂತ ಕೂಗಾಕ ಚಾಲೂ ಮಾಡಿದ. ಅಂವಾ ಕಂಬ್ಳಿ ಅಂತ ಆಶಾಕ ಬಿದ್ದುಹೋಗಿದ್ದ. ಅದು ಕಂಬಳಿ ಇದ್ದಿದ್ದಿಲ್ಲ, ಕರಡಿ ಇತ್ತು. ಕರಡಿ ಕೈಯಾಗ ಪಾರಾಗೋದು ಹ್ಯಾಂಗಂತ ಒದ್ದಾಡ್ಲಾಕ ಹತ್ತಿದ್ದ. ನಮ್ಮ ಎಲ್ಲ ಆಶಾನೂ ಹಿಂಗ ಇರ್ತಾವು, ಬೆಚ್ಚಗೆ ಅಂತ ಹೋಗ್ತೀವು, ಆಮ್ಯಾಕೆ ಅದರ ಕೈಯಾಗ ಸಿಕ್ಕು ಸಾಯ್ತೀವು. ಆಶಾಕ ಬೀಳೋ ಮುಂದ ವಿಚಾರ ಮಾಡ್ರಿ" ಅಂದಿದ್ದರು. ಅವರು ಬಿಟ್ಟ ತ್ಯಾಗದ ಪಟ್ಟಿ ನೋಡಿದರೆ ನಾವು ಎಷ್ಟೆಲ್ಲ ಬಿಡಲಿಕ್ಕಿದೆ. ಮನೆ ಬಿಟ್ಟೆ, ಊರು ಬಿಟ್ಟೆ ಎನ್ನುವುದೆಲ್ಲ ಎಷ್ಟು ಸಣ್ಣ ಮಾತು. ನಿಜವಾಗಿಯೂ

ಬಿಡಬೇಕಾದದ್ದು ಬೇರೊಂದು ಇದೆ ಎಂಬುದನ್ನೆಲ್ಲ ನನಗೆ ಸೂಚಿಸಿ ಹೋದರು ಅಪ್ಪ.

ಒಮ್ಮೆ ಅವರ ಪದತಲದಲ್ಲಿ ಕುಳಿತಿದ್ದ ಹೊತ್ತು. ಹುಯಿಲಾಳ ಆಶ್ರಮದ ಉಪ್ಪರಿಗೆಯಲ್ಲಿ ಇದ್ದೇವೆ. ಅಪ್ಪಾವ್ರು ಬಹಳ ಅದ್ಭುತವಾಗಿ ಪ್ರಕೃತಿ ಮತ್ತು ವಿಜ್ಞಾನದ ಕುರಿತು ಮಾತಾಡುತ್ತಿದ್ದರು. ಈಗಲೂ ಅದನ್ನು ನೆನೆದು ಆನಂದಿಸಬಲ್ಲೆ. ಹೇಳಲು ಬಾರದಂಥ ಒಂದು ವಿಶೇಷ ವಿವರಣೆ.

ಇದ್ದಕ್ಕಿದ್ದಂತೆ ಕೆಳಗೊಂದು ದನಿ. 'ಎಲ್ಲದಾನು ಆ ಸಿದ್ಧ್ಯಾ?' ಪೂಜ್ಯರಿಗೆ ಅವರ ದನಿ ಗುರುತಿದ್ದಂತೆ ಕುಳಿತವರು ಎದ್ದರು, ನಾವೂ ಎದ್ದೆವು. ಕೆಳಗಿಂದ ಮತ್ತದೇ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುತ್ತಿದ್ದ ಆ ಧ್ವನಿಯು ಮೇಲೆ ಕಾಣಿಸಿಕೊಂಡರು. ವಯಸ್ಸಾದ ಕಾವಿಧಾರಿ ಸ್ವಾಮೀಜಿ ಅವರ ಜೊತೆ ಒಬ್ಬರು ಶಿಷ್ಯರು. ಆ ಸ್ವಾಮೀಜಿಯವರಿಗೆ ಕೈಮುಗಿದು ತನ್ನ ಕುರ್ಚಿ ತೋರಿಸಿ ಕುಳಿತುಕೊಳ್ಳಲು ಹೇಳಿದರು. ಅವರದು ಜೋರು ಧ್ವನಿಯ ಪುನಃ ಪ್ರಶ್ನೆ 'ಎಲ್ಲದಾನ್ ಸಿದ್ಧ್ಯಾ' ಜೊತೆ ಇದ್ದ ಶಿಷ್ಯರು 'ಇವರೇ, ನೀವು ಇವರನ್ನೇ ಕೇಳಿದ್ದು' ಅಂತ ಅಪ್ಪಾವ್ರನ್ನು ತೋರಿಸಿದರು. ಆ ಹಿರಿಯರು "ಇಂವಾ ಅಲ್ಲ ನನಗ ಸಿದ್ಧ್ಯಾನ ನೋಡಬೇಕು" ಎಂದು ಪುನಃ ಕೂಗಾಡಿ ಹೊರಡಲನುವಾದರು. ಆ ಶಿಷ್ಯ 'ನಿಮ್ಮನ್ನು ನೋಡಬೇಕಂತ ಭಾಳ ಹೇಳಿದ್ರು. ಈಗ ನಿಮ್ಮ ಖೂನು ಸಿಗವಲ್ತು, ಮರೆವಿನ ರೋಗ. ಅದಕ ಹಿಂಗಾಡ್ತಾರು' ಅಂದವರು ನಮಿಸಿ ಹೋದರು. ಅವರ "ಆ ಸಿದ್ಧ್ಯಾ ಎಲ್ಲಿ" ಕೂಗಿನ ದನಿ ಪೂರ್ಣ ಮರೆಯಾಗುವವರೆಗೆ ಸುಮ್ಮನೆ ಕೂತ ಅಪ್ಪ ನಿಧಾನವಾಗಿ "ಒಂದು ಕಾಲಕ್ಕೆ ಬಹಳ ದೊಡ್ಡ ಜ್ಞಾನಿ, ಈಗ ತನ್ನ ಗುರುತು ತನಗೇ ಇಲ್ಲದ ಮರೆವು" ಎಂದು ಸುಮ್ಮನಾದರು.

> ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
> ಬಯಲು ಬಯಲಾಯಿತಯ್ಯ

ಎಂದ ಅಲ್ಲಮನ ಸ್ಪಷ್ಟ ನಿಲುವು. ಗುಹೇಶ್ವರ ತಾ ಬಯಲು ಎಂಬ ನಿಖರತೆ ಈ ಅಪ್ಪನದೂ.

ಒಂದು ಪಂಥದ ಒಳಗಿದ್ದು, ಪಂಥದ ಎಲ್ಲರನ್ನೂ ತನ್ನವರೆಂದು ನಡೆಸಿ, ಪಂಥದ ಆಚೆಗೂ ಹಲವರನ್ನು ಬೆಳೆಸಿ, ಉಪನಿಷತ್ತು ವೇದ ಭಗವದ್ಗೀತೆಗಳನ್ನೂ ವಚನದ ಒಳಗೇ ಪಡಿಮೂಡಿಸಿ, ತಮ್ಮವನೇ ಎಂಬ ಭಾವ ಪ್ರತಿಯೊಬ್ಬರ ಒಳಗೂ ಹುಟ್ಟಿಸಿ, ತಾನು ಯಾರಿಗೂ ಸಲ್ಲದವನೆಂದು ಕೊನೆಯಲ್ಲಿ ಘೋಷಿಸಿ, ಪಂಥದ ಒಳಗಿನ ಧಿಕ್ಕಾರಕ್ಕೂ ಸಿದ್ಧವಾದಂತೆ ಬಯಲಾಗಿಯೇ ಉಳಿದ ಕೊನೆಯ ನಿರ್ಧಾರ. ಮತ್ತೊಮ್ಮೆ "ನಿನಗಾದರೋ ಶರಣರೆಂಬ ಬಂಧನ ನನಗದೂ ಇಲ್ಲ" ಎಂದ ಅಲ್ಲಮನದೇ ನಡೆ. ಆದರೆ ಒಂದೇ ವ್ಯತ್ಯಾಸ ಅಲ್ಲಮ ಸಮಾಜದ ಒಳಗೆ ಇರದೆ ಸಂಪೂರ್ಣ ದೂರವಿದ್ದು ನಡೆದ. ಪೂಜ್ಯರು ಇಲ್ಲಿಯೇ ಇದ್ದು, ಎಲ್ಲದರೊಳಗೂ ಪೂರ್ಣ ತೊಡಗಿ, ಇಲ್ಲಿ ಇಲ್ಲ

ಎಂದು ತೋರಿದವರು. ಇದು ಬಲು ಅಪರೂಪ.

ಇಷ್ಟೆಲ್ಲ ಆದಾಗಲೂ ಸತ್ಯವೂ ಇಲ್ಲ ಅಸತ್ಯವೂ ಇಲ್ಲ
ಸಹಜವೂ ಇಲ್ಲ ಅಸಹಜವೂ ಇಲ್ಲ ನಾನೂ ಇಲ್ಲ

ಇವೆಲ್ಲವನ್ನೂ ಒಪ್ಪೋಣ. ಆದರೆ ನಿಮ್ಮಂತೆ ನಮ್ಮ ಕಣ್ಮುಂದೆ ಸಾಕ್ಷಾತ್ ನಡೆದು ತೋರಿಸಿ, ನಡೆದಾಡುವ ದೇವರ ಅನುಭವ ಕೊಟ್ಟ ನೀವು ಇರುವಾಗ ನೀನೂ ಇಲ್ಲ ಎನ್ನುವುದನ್ನು ಹೇಗೆ ಒಪ್ಪುವುದು ಹೇಳಿ, ಅಪ್ಪ? ಅಲ್ಲಮನ ನೀನೂ ಇಲ್ಲ ಮಾತಿಗೆ ಅವನಷ್ಟು ಕಠೋರವಾಗಿ ನುಡಿಯದೆ, ನಡೆಯದೆ ಅತ್ಯಂತ ಸೌಮ್ಯವಾಗಿ ಹೊಸ ವ್ಯಾಖ್ಯಾನ ಬರೆದಿರಿ. ನೀವಲ್ಲದೇ ಇನ್ಯಾರು ತಿಳಿಸಬೇಕು ಅದರ ನಿಜಾರ್ಥವನ್ನು?

ಅಪ್ಪ ನಿಷ್ಠುರವಾಗಿ ನಮಗೆ ಸಲ್ಲದವನೆಂದು ದೂರವೇ ಉಳಿದ ಅಲ್ಲಮನನ್ನು ಪ್ರೀತಿಸದೇ ಇರಬಹುದೇನೋ. ಪ್ರೀತಿಯ ಧಾರೆ ಎರೆದು, ನಮ್ಮವರೇ ಎಂಬ ಪರಮ ಬೆಚ್ಚಗಿನ ಭಾವ ಹುಟ್ಟಿಸಿ, ಒಮ್ಮೆಲೇ ಹೀಗೆ ನಮ್ಮಿಂದ ಕೊಡವಿಕೊಂಡ ಈ ಕಠೋರ ಸತ್ಯವನ್ನು ಹೇಗೆ ಸ್ವೀಕರಿಸುವುದು, ಹೇಳಿ?

ಬೇಸರಾಗಿದೆ ಮಾತು ಭಾರವಾಗಿದೆ ಮೌನ
ನೋವು ಕರಗಿದೆ ಕಣ್ಣಲಿ
ಅಡಿಗೆ ಚುಚ್ಚಿದ ಮುಳ್ಳು
ಒಳಗಡೆಯೆ ಮುರಿವಂತೆ
ಭಾವ ಕುಟುಕಿದೆ ಮನದಲಿ

□

## ಸಿದ್ಧೇಶ್ವರ ಉವಾಚ

ವ್ಯಾಪಾರಿಯು ಕಾಳು–ಕಡಿ ತೂಗುತ್ತಾನೆ. ಈ 'ಗಿರಾಕಿ ನಮ್ಮವ' ಎಂದು ಭಾವಿಸಿದರೆ ತೂಕ ಸರಿಯಾಗಿ ಇರುತ್ತದೆ. ಹಾಗಲ್ಲದೆ 'ಈತ ಬರೀ ಗಿರಾಕಿ ನಮ್ಮವನಲ್ಲ' ಎಂದು ಭಾವಿಸಿದರೆ ತೂಕ ತಪ್ಪುತ್ತದೆ. ಕೈ ಅದ್ಭುತ ಚಳಕ ಚಮತ್ಕಾರ ಮಾಡುತ್ತದೆ! ಅದು ತೂಗುವವನ ತಪ್ಪಲ್ಲ. ನಮ್ಮ ಭಾವ ಬದಲಾದರೆ ತಕ್ಕಡಿಯೇ ಹಾಗೆ ಮಾಡುತ್ತದೆ. ನಿರ್ಜೀವವಾದ ತಕ್ಕಡಿಯೇ ಇಷ್ಟು ಭೇದ–ಭಾವ ಮಾಡುವಾಗ ಮನುಷ್ಯ ಎಷ್ಟು ಮಾಡಲಿಕ್ಕಿಲ್ಲ. ಈ ಬೇಧ ಭಾವ ಸಂಪೂರ್ಣ ಅಳಿದಾಗ ನಮ್ಮ ಕರ್ಮಗಳೆಲ್ಲ ಯೋಗಕರ್ಮಗಳಾಗುತ್ತವೆ. ಅದೇ ಪೂರ್ಣಯೋಗ!

# ಮತ್ತೊಬ್ಬ ಬಯಲಯೋಗಿ

**ಸುಬ್ಬರಾವ್**

**ಬ**ಯಲ ಅಂಗಳದಲ್ಲಿ ಏನೇ ಕುಣಿದಾಟ ನಡೆಯುತ್ತಿರಲಿ, ಎಳ್ಳಷ್ಟೂ ವಿಚಲಿತರಾಗದೆ, ಒಳಗಿನ ಬಯಲಲ್ಲೇ ಸ್ಥಿರವಾಗಿ ನಿಂತ ಬಯಲಯೋಗಿ, ಮತ್ತೊಬ್ಬ ಅಲ್ಲಮರೆಂದರೆ ಶ್ರೀ ಸಿದ್ಧೇಶ್ವರ ಸ್ವಾಮಿಗಳು.

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಗಿತ್ತಯ್ಯ
ಬಯಲ ಜೀವನ ಬಯಲ ಭಾವನೆ
ಬಯಲು ಬಯಲಾಗಿ ಬಯಲಾಗಿತ್ತಯ್ಯ

ಅಲ್ಲಮ ಹೀಗೇಕೆ ಬಯಲು ಬಯಲಾಗಿ ಮಾತನಾಡುತ್ತಾನೆ ಎಂದು ನಾವು ಹುಬ್ಬೇರಿಸಬಹುದು. ಈ ರೀತಿ ಬದುಕಲು ಸಾಧ್ಯವೇ ಎನಿಸಿದಾಗ ನಮ್ಮ ಮುಂದೆ ಸುಳಿಯುವ ಬಯಲಮೂರ್ತಿ, ಇದೀಗ ಬಯಲಾದ, ಸಜೀವವಾಗಿಯೂ ನಮ್ಮೆಲ್ಲರ ಒಡನಾಟದಲ್ಲಿ ಸದಾ ಬಯಲಸ್ಥಿತಿಯಲ್ಲೇ ಇದ್ದ ಶ್ರೀ ಸಿದ್ಧೇಶ್ವರ ಅಪ್ಪಗಳು.

ಗುಡಾಣದಂತಹ ಮುಂಡಾಸು, ಭರ್ಜರಿ ಮೀಸೆ, ಟ್ರೇಡ್‌ಮಾರ್ಕ್ ಬಿಳಿಯ ಉಡುಪು, ಕಾವಿ ಬಟ್ಟೆ, ದಾಡಿ, ಬೋಳು ತಲೆ, ಸಿಕ್ಸ್‌ಪ್ಯಾಕ್ ಅಂಗಸೌಷ್ಠವ – ಇವೆಲ್ಲವೂ ತಾವು ಹತ್ತು ತಲೆಗಳ ನಡುವೆ ಎದ್ದು ಕಾಣಬೇಕು ಎಂದಲ್ಲವೆ? ಹೀಗೆ, ಹತ್ತಾರು ಜನರು ತನ್ನ ಮೇಲುಗಾರಿಕೆಯನ್ನು ಕೊಂಡಾಡಬೇಕೆಂಬ ಹಂಬಲವೇಕೆ? ಇವಾವೂ ಇಲ್ಲದೆ ತನ್ನಷ್ಟಕ್ಕೆ ತಾನೆ ತೃಪ್ತನಾಗಿರಲು ಅಸಾಧ್ಯವೇ? ಈ ಬಾಹ್ಯ ಜೋಡಣೆಗಳನ್ನೆಲ್ಲಾ ಕಳಚಿಹಾಕಿದರೆ ಉಳಿಯುವ ತಾನು ಯಾರು ಎಂದು ಕೇಳಿದರೆ ಅಪ್ಪಗಳು ನಕ್ಕು ಬೊಂತಾದೇವಿಯತ್ತ ಕೈಮಾಡುತ್ತಾರೆ. ಕಾಶ್ಮೀರದ ರಾಜಮನೆತನದ ಈ ತರುಣಿ ರಾಜಪೋಷಾಕು ಕಳಚಿ ಸಾಮಾನ್ಯ ಕೌದಿಯನ್ನು ಹೊದೆದುಕೊಂಡು ದೇಶದುದ್ದಕೂ ಅಲೆದಾಡಿದಳು. ಗ್ರಾಮೀಣ ತಾಯಂದಿರು ಹಳೆಯ ಬಟ್ಟೆಗಳ ಚಿಕ್ಕ ಚಿಕ್ಕ ತುಂಡುಗಳನ್ನು ಜೋಡಿಸಿ ಹೊಲಿದು ದಪ್ಪಗಿನ ಬೆಚ್ಚಗಿನ ಹೊದಿಕೆಯನ್ನು ಮಾಡುತ್ತಾರೆ, ಹಲವಾರು ತುಂಡುಬಟ್ಟೆಗಳ ತೇಪೆಯೇ ಕೌದಿ. "ನಮ್ಮ ಬದುಕು, ವಿದ್ಯೆ ಎಲ್ಲವೂ ಒಂದು ರೀತಿ ಮಿಶ್ರಣ, ತೇಪೆ" ಎನ್ನುತ್ತಾರೆ ಅಪ್ಪಗಳು. ಅಲ್ಲಿಷ್ಟು ಇಲ್ಲಿಷ್ಟು ನೋಡಿ, ಓದಿ, ಕೇಳಿ ನಾವು

ತುಂಡು ತುಂಡು ಜ್ಞಾನ ಸಂಪಾದಿಸುತ್ತೇವೆ; ನಾವು ತಿಳಿದವರು, ಪಂಡಿತರು, ಜ್ಞಾನಿಗಳು ಎಂದು ಬೀಗುತ್ತೇವೆ. ಪದವಿಗಳ ಸರಮಾಲೆ, ಉಡುಗೆ–ತೊಡುಗೆ, ಸಾರೋಟು–ಕಾರು, ಹಲವು ಅಂತಸ್ತಿನ ಮನೆ, ಕುರ್ಚಿ, ಸೋಫಾ, ಗೋಡೆಯಗಲದ ಟಿ.ವಿ., ಏಸಿ ಇವಲ್ಲವುಗಳಿಂದ ಮಸ್ತಾಗಿ ದಪ್ಪನೆಯ ಕೌದಿಯನ್ನು ಹೊಸೆದು, ಮೈಮೇಲೆ ಹೊದ್ದುಕೊಳ್ಳುವುದಷ್ಟೇ ಅಲ್ಲ, ಈ ಕೌದಿಯೇ ನಾನು ಎಂದು ಉಬ್ಬುತ್ತೇವಲ್ಲಾ! “ಅದನ್ನು ಹೊತ್ತುಕೊಂಡು ಪಂಡಿತರು ಹೇಗಾಗುತ್ತಾರೆ ಎಂಬುದೇ ಬೊಂತಾದೇವಿಯ ಸಂದೇಶವಾಗಿರಬಹು ದಲ್ಲವೇ?” ಎಂದು ಅಪ್ಪಗಳು ಸೋಜಿಗ ಪಡುತ್ತಾರೆ.

ಶ್ರೀ ಸಿದ್ಧೇಶ್ವರ ಅಪ್ಪಗಳು ಕೌದಿಮುಕ್ತ ಬದುಕು ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ. ಜೇಬಿಲ್ಲದ ಸಾಧಾರಣ ಅಂಗಿ, ಸುತ್ತಿಕೊಳ್ಳಲು ಆರು ಮೊಳ ಪಂಚೆ, ಒರೆಸಿಕೊಳ್ಳಲು ಒಂದು ಟವಲ್ ಹೀಗೆ ಕೌದಿಯನ್ನು ಉಪಯೋಗಿಸುವುದು ಅನಿವಾರ್ಯವಾದರೂ ಹೊದೆದ ಕೌದಿಗೆ ಅಂಟಿಕೊಳ್ಳದೆ ಅಪ್ಪಗಳು ನಿಸ್ಸಂಗವಾಗಿದ್ದರು. ಹಾರ, ತುರಾಯಿ, ಪದವಿ, ಮನ್ನಣೆಗಳು ಕೌದಿಯನ್ನು ಬಲೂನಿನಂತೆ ಉಬ್ಬಿಸೀತು ಎಂದು ಅವುಗಳನ್ನು ಬದಿಗೆ ಸರಿಸಿ, ತಾನು ಮತ್ತು ತನ್ನೊಳಗಿನ ಬಯಲ ನಡುವೆ ಗೋಡೆ ಏಳದಂತೆ ಎಚ್ಚರದಿಂದ ಇದ್ದರು. ಈ ಎಚ್ಚರವೇ ಅವಧಾನ ಅಥವಾ ಮೈಂಡ್‌ಫುಲ್‌ನೆಸ್. ನಡೆದರೆ ಗಮನ ಹೆಜ್ಜೆಯ ಮೇಲೆ, ತಲೆ ಖಾಲಿ – ಇದು ಅವಧಾನ. ಹಾಗೆಯೇ ಯಾವುದೇ ಕೆಲಸದಲ್ಲಿ ತೊಡಗಿದ್ದರೂ ಅದರ ಮೇಲೆಯೇ ಧ್ಯಾನ, ಇನ್ನೊಂದರ ಮೇಲಲ್ಲ, ಈ ಬಗೆಯ ಧ್ಯಾನದಲ್ಲಿ ಮನಸ್ಸು ಮುಂದೆ ಹಾರದೆ, ಹಿಂದೆ ಸರಿಯದೆ ಇದ್ದಲ್ಲೇ ಇರುವುದೇ ಒಂದು ಬಗೆಯ ಬಯಲಸ್ಥಿತಿ. ಖಾಲಿ ಮನಸ್ಸು ‘ಡೆವಿಲ್ಸ್ ವರ್ಕ್‌ಶಾಪ್’ ಆಗದು, ಮನಸ್ಸಲ್ಲಿ ಬೇಡದ ಕಸ ತುಂಬಿದಾಗಿನ ಆಟವೇ ಡೆವಿಲಿನ ಕುಣಿದಾಟ ಬಯಲ ಅಂಗಳದಲ್ಲಿ. ಏನೇ ಕುಣಿದಾಟ ನಡೆಯುತ್ತಿರಲಿ, ಎಳ್ಳಷ್ಟೂ ವಿಚಲಿತರಾಗದೆ, ಒಳಗಿನ ಬಯಲಲ್ಲೇ ಸ್ಥಿರವಾಗಿ ನಿಂತ ಬಯಲಯೋಗಿ, ಮತ್ತೊಬ್ಬ ಅಲ್ಲಮರೆಂದರೆ ನಮ್ಮ ಅಪ್ಪಗಳು.

ಜೇಬಿಲ್ಲದ ಈ ಜಂಗಮ ದಾರಿದ್ರ್ಯವನ್ನು ಸ್ವಾಗತಿಸಿದರು ಎಂದೇನಲ್ಲ. ಅವರಷ್ಟು ಶ್ರೀಮಂತರು ಇನ್ಯಾರೂ ಇಲ್ಲ. ತಮ್ಮ ‘ಸಂಪತ್ತು’, ಅದಾವುದು ಎಂದು ಅಪ್ಪಗಳು ಹೀಗೆ ಬಣ್ಣಿಸುತ್ತಾರೆ: “ಈ ಭೂಮಂಡಲಕ್ಕೆ ‘ವಸುಧಾ’ ಅಂದರೆ ಸಂಪತ್ತನ್ನು ಧರಿಸಿದವಳು ಎಂದು ಹೆಸರು. ಈ ಭೂಮಂಡಲದಲ್ಲಿ ನಾವು ನೋಡಿದ್ದು ರೂಪಸಿರಿ, ಕೇಳಿದ್ದು ಶಬ್ದಸಿರಿ, ರುಚಿಸಿದ್ದು ರಸಸಿರಿ, ಮೂಸಿದ್ದು ಸುಗಂಧಸಿರಿ, ಮುಟ್ಟಿದ್ದು ಸ್ಪರ್ಶಸಿರಿ. ಈ ಸೃಷ್ಟಿಯಲ್ಲಿ ಅವೆಷ್ಟು ಬಗೆಯ ರಸ, ರುಚಿ, ಸುಗಂಧ! ಆಯುಷ್ಯದ ಉದ್ದಕ್ಕೂ ಅನುಭವಿಸಿದರೂ ಮುಗಿಯದು. ನಿಜವಾಗಿಯೂ ಈ ಭೂಮಂಡಲ ಸಿರಿಯ ಸಾಗರ. ... ಸಾವಿರ ವರ್ಷ ನೋಡಿದರೂ ಸಾಕೆನಿಸದ, ಸವೆಯದ ಸೊಬಗುಸಿರಿ ಈ ಜಗದಲ್ಲಿದೆ. “ಕೌದಿ ಹೆಚ್ಚು ಮಾಡಿಕೊಳ್ಳುತ್ತ ಹೋಗುವುದಲ್ಲ ಶ್ರೀಮಂತಿಕೆ. ಇರುವುದನ್ನು

ತುಂಬುಹೃದಯದಿಂದ ಅನುಭವಿಸಿ ಮೆಚ್ಚುವುದು. ಈ ತುಂಬುಹೃದಯಕ್ಕೆ ಬಡತನವಿಲ್ಲಾ. ಅಪ್ಪಗಳ ಶ್ರೀಮಂತ ಹೃದಯ ಜಗದಗಲ, ಮುಗಿಲಗಲ; ಮೊದಲು ಇಲ್ಲದ, ಕೊನೆ ಇಲ್ಲದ ನಿಸ್ಸೀಮ ಅರಿವಿನ ಆನಂದ. “ನಿಜವಾದ ಸಂಪತ್ತು ಬೆಳ್ಳಿ ಬಂಗಾರವಲ್ಲ, ನಿಸರ್ಗದೇವತೆ ಕರುಣಿಸಿರುವ ಈ ತನು–ಮನ, ಬುದ್ಧಿ–ಭಾವ, ರವಿ–ಶಶಿ, ಈ ಇಳೆ ಬೆಳೆ, ಗಾಳಿ, ನೀರು, ಬೆಳಕು, ಸಮಸ್ತ ಸೃಷ್ಟಿ ನಿಜಸಿರಿ” ಎಂದು ನಮ್ಮನ್ನು ಬಡಿದೆಬ್ಬಿಸುತ್ತಾರೆ.

ಇತ್ತೀಚೆಗಿನ ಲೈಫ್‌ಸ್ಟೈಲ್ ನಮ್ಮನ್ನು ಏಸಿ ಕೋಣೆಯ ಸೌಲಭ್ಯದಲ್ಲಿ ಕಟ್ಟಿಹಾಕುತ್ತದೆ. ಮೂಡುವ ರವಿ, ತೇಲುವ ಮೋಡ, ಸುರಿಯುವ ಮಳೆ, ಹರಿಯುವ ನದಿ, ಭೋರ್ಗರೆಯುವ ಸಮುದ್ರವನ್ನು ನಾವು ನೋಡುವುದು ಡಿಸ್ಕವರಿ ಛಾನೆಲ್‌ನಲ್ಲಿ ಅಲ್ಲವೆ? ‘ಕೌದಿಯನ್ನು ಎಸೆದು ಹೊರಗೆ ಬಾ’ ಎಂದು ಅಪ್ಪಗಳು ಕರೆಕೊಡುತ್ತಾರೆ. ಅವರ ಕರೆಗೆ ಓಗೊಟ್ಟು ಸಹಸ್ರ ಸಹಸ್ರ ಜನರು ಮನೆಯಿಂದ ಹೊರಬಿದ್ದು ಬೆಳಗಿನ ನಸುಕಿನಲ್ಲಿ ಅವರ ಮಾತುಗಳನ್ನು ಆಲಿಸಲು ಬಂದು, ಜೊತೆಜೊತೆಗೆ ಅನಾಯಾಸವಾಗಿ ಭೂಮಿ–ಆಕಾಶಗಳಿಗೆ ನಡುವೆ ನಲಿಯುತ್ತಾರೆ, ತುಸು ಸಮಯವಾದರೂ ನಿಸರ್ಗದ ಮಡಿಲಲ್ಲಿ ದಿವ್ಯಾನುಭವವನ್ನು ಪಡೆಯುತ್ತಾರೆ. ಅದಕ್ಕೆಂದೇ ಅಪ್ಪಗಳ ಪ್ರವಚನ ಯಾವಾಗಲೂ ಮುಂಜಾನೆ ಸಮಯದಲ್ಲಿ, ಹೊರ ಮೈದಾನದಲ್ಲಿ, ಆಗಸದಡಿಯಲ್ಲಿ. ಹೀಗೆ ಬದುಕುವ ಬಗೆಯನ್ನು ಪರೋಕ್ಷವಾಗಿ ತೋರಿಸಿಕೊಟ್ಟರು ಈ ಬಿಡಾಡಿ.

ಹಿಂದೊಮ್ಮೆ ಅಪ್ಪಗಳು ಒಂದು ಸಂಜೆ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕುಟೀರದ ಆವರಣದಲ್ಲಿ ಆಗಸವನ್ನೇ ನಿಟ್ಟಿಸುತ್ತ, ಆ ಸೂರ್ಯಾಸ್ತಮಾನದ ಮಬ್ಬಿನಲ್ಲಿ ನಿಶ್ಚಲವಾಗಿ ಗಗನಕ್ಕೆ ಚಾಚಿ ನಿಂತ ಮರಗಳನ್ನೇ ನೋಡುತ್ತ ಕುಳಿತರು. ಎಂದಿನಂತೆ ಸಾಯಂಕಾಲದ ಪೂಜೆಯಾದ ಮೇಲೆ ಕಣ್ಮುಚ್ಚಿ ಕುಳಿತರು. ಮಾರನೆಯ ದಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವಾಗ, ಹಿಂದಿನ ಸಂಜೆಯ ಅನುಭವವನ್ನು ಕುರಿತು ಅವರು ಹೇಳಿದುದನ್ನು ಶ್ರೀ ಪ್ರಭುಪ್ರಸಾದರು ಇತ್ತೀಚೆಗೆ ನನ್ನೊಡನೆ ಹಂಚಿಕೊಂಡರು.

ಆಗಸವನ್ನು ನೋಡುತ್ತಿರುವಾಗ ಕಣ್ಣು ಮುಚ್ಚಬೇಕು ಅನಿಸಲಿಲ್ಲ.
ಧ್ಯಾನಕ್ಕೆ ಕುಳಿತಾದ ಮೇಲೆ ಕಣ್ಣು ತೆರೆಯಬೇಕು ಅನಿಸಲಿಲ್ಲ.

ಹೀಗೆ ಅಪ್ಪಗಳ ಕಣ್ಣು ತೆರೆದಿದ್ದರೂ ಧ್ಯಾನ, ಕಣ್ಮುಚ್ಚಿದ್ದರೂ ಧ್ಯಾನ.

ಶ್ರೀ ಸಿದ್ಧೇಶ್ವರ ಅಪ್ಪಗಳ ಮಾತು ಮರೆಯಲಾಗದ ಉಕ್ತಿಗಳು. ಅವರ ಒಂದೊಂದು ಸರಳ ನುಡಿಯ ಹಿಂದೆ ಅಪಾರ ಜ್ಞಾನದ ತಪಶ್ಶಕ್ತಿ. ಜಟಿಲವೆನಿಸುವ ತತ್ವಗಳು ಅಪ್ಪಗಳ ಅನುಭಾವದ ಜಾಲರಿಯಲ್ಲಿ (ಫಿಲ್ಟರ್) ಸೋಸಿ ಇಳಿದು ಹರಿದು ಬಂದು ನಮ್ಮ ಕೈಗೆಟಕುವ ಸರಳಸತ್ಯವಾಗುತ್ತದೆ. ಅಪ್ಪಗಳು ತಮ್ಮ ಮುಂಜಾನೆಯ ಪ್ರವಚನದಲ್ಲಿ ಬದುಕುವ ಬಗೆಯನ್ನು ಹೇಳುತ್ತಾರೆ. ಈ ದಿವ್ಯ ಬದುಕೇ ಶರಣರು, ಉಪನಿಷತ್ತಿನ ಋಷಿಗಳು ಬಾಳಿದ ಬದುಕು. ಪೂರ್ವದ ಕವಿ ರಬೀಂದ್ರರೇ ಇರಲಿ, ಪಶ್ಚಿಮದ

ವರ್ಡ್ಸ್‌ವರ್ತ್ ಇರಲಿ, ಗ್ರೀಸಿನ ಸಾಕುರಾತನೇ ಇರಲಿ, ನಮ್ಮ ಪತಂಜಲನೇ ಇರಲಿ, ಕಾಲ–ಸೀಮೆಯಿಂದ ಅಭಾದಿತ ಬದುಕು, ನಾವೆಲ್ಲರೂ ಬಾಳಬೇಕಾದ ಬಂಗಾರದಂತಹ ಬದುಕು ಎನ್ನುತ್ತಾರೆ. ಅಪ್ಪಗಳು ತೋರಿಸಿಕೊಡುವ ಜೀವನಮಾರ್ಗದಲ್ಲಿ ಸೌಂದರ್ಯವಿದೆ, ಸೌಹಾರ್ದವಿದೆ, ನೆಮ್ಮದಿ ಇದೆ, ತೃಪ್ತಿ–ಸಮಾಧಾನವಿದೆ, ಶಾಂತತೆ ಇದೆ. ಅಪ್ಪಗಳು ಹೇಳುತ್ತಾರೆ: "ಈ ಹಿಂದೆ ಋಷಿಗಳು, ಸಾಧುಸಂತರು, ಶರಣರು ಜ್ಞಾನದೀಪ ಹಚ್ಚಿ ಹೀಂಗೆ ತೇಲಿಬಿಟ್ಟರು. ಅವು ನಮ್ಮ ಸುತ್ತಮುತ್ತ ಇಂದೂ ಹರಿದಾಡುತ್ತಿವೆ. ಅವರ ಮಾತೇ ಜ್ಯೋತಿರ್ಲಿಂಗ."

ಅಪ್ಪಗಳ ಅಗಾಧ ತತ್ವಜ್ಞಾನದ ಆಳ ಕಂಡುಬರುವುದು ಅವರು ನಮಗೆ ನೀಡಿದ ಅಲ್ಲಮಪ್ರಭುವಿನ ವಚನಗಳನ್ನು ವಿವರಿಸುವ ವಚನ–ನಿರ್ವಚನ ಗ್ರಂಥದಲ್ಲಿ. ಅಲ್ಲಮನ ಅಲೌಕಿಕ ಬೆಡಗಿನ ಪದಗಳ ಆಳವನ್ನು ಕಂಡುಹಿಡಿಯಲಾರದೆ ಶಬ್ದಕೋಶ ಸೋಲುವಾಗ, ಅಪ್ಪಗಳ ಭಾಷ್ಯ ಅಲ್ಲಮನ ಅಂತರಂಗಕ್ಕೆ ಹಿಡಿದ ಕನ್ನಡಿಯಾಗಿದೆ. ಈ ಭಾಷ್ಯದ ಆವಿರ್ಭಾವವೇ ಒಂದು ಸೋಜಿಗ. ಸಾಮಾನ್ಯವಾಗಿ ಭಾಷ್ಯಕಾರರು ಏಕಾಂತದಲ್ಲಿ ಕುಳಿತು ಚಿಂತಿಸಿ ಗೀತೋಪನಿಷತ್ತುಗಳನ್ನು ವಿವರಿಸುವ ಭಾಷ್ಯಗಳನ್ನು ರಚಿಸುತ್ತಾರೆ. ಅಪ್ಪಗಳು ಬೇರೆಯದೇ ದಾರಿಯನ್ನು ಹಿಡಿದರು. ನಾಲ್ಕಾರು ಸಹಚಿಂತಕರೊಡನೆ ಕುಳಿತು ಒಂದು ರೀತಿಯ ಸಾಮೂಹಿಕ ಚಿಂತನೆಗೆ, ಅಲ್ಲಮನ ಜ್ಞಾನಯಜ್ಞಕ್ಕೆ ಅಧ್ವರ್ಯುಗಳಾದರು. ಈ ಕನ್ನಡ ಕೃತಿ ಬೆಳಕು ಕಂಡು ಎರಡು ದಶಕಗಳ ನಂತರ ಇದರ ಇಂಗ್ಲಿಷ್ ಆವೃತ್ತಿಯೂ ಹೀಗೆಯೇ ಅಪ್ಪಗಳ ನಿರ್ದೇಶನದಲ್ಲಿ ಆವಿರ್ಭವಿಸಿದೆ. ಈ ಸಂದರ್ಭದಲ್ಲಿ ನಾವು ನಾಲ್ಕಾರು ಜನರಿಗೆ ಅಪ್ಪಗಳೊಡನೆ ಕುಳಿತು ಕಲಿಯುವ ಸದವಕಾಶ ದೊರೆಯಿತು. ಕನ್ನಡ, ಸಂಸ್ಕೃತವಷ್ಟೇ ಅಲ್ಲ, ಇಂಗ್ಲಿಷನ್ನೂ ಕರಗತ ಮಾಡಿಕೊಂಡಿರುವ ಅಪ್ಪಗಳು, ಬೇಕಿದ್ದರೆ ತಾವೇ ಸ್ವತಃ ಈ ಮೇರುಕೃತಿಯನ್ನು ಇಂಗ್ಲಿಷಿನಲ್ಲಿ ರಚಿಸಬಹುದಿತ್ತು. ಈ ಸಾಮೂಹಿಕ ಚಿಂತನದ ಅಗತ್ಯವಾದರೂ ಏನಿತ್ತು, ಅಪ್ಪಗಳಿಗೆ? ಇದರ ಅಗತ್ಯ ನಮಗಿತ್ತೆಂದು ನಾವು ಕಂಡುಕೊಳ್ಳಬೇಕೆಂದೇ ಅವರು ನಮ್ಮನ್ನು ಜೊತೆಗೆ ಕೂಡಿಸಿಕೊಂಡರು. ಅಲ್ಲದೆ 'ನಾ ರಚಿಸಿದೆ' ಎಂದು 'ನಾ' ಮುಂದೆ ಬರುವುದು ಅಪ್ಪಗಳಿಗೆ ಬೇಕಿರಲಿಲ್ಲ. ಹೀಗೆ ಉಳಿದವರನ್ನು ಮುಂದೆ ತಂದು 'ನಾ' ಹಿಂದಕ್ಕೆ ತಳ್ಳುವ ಕಲೆಯನ್ನೂ ತೋರಿಸಿಕೊಟ್ಟರು.

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಇಂಗ್ಲಿಷಿನಲ್ಲಿ ರಚಿಸಿರುವ ಮೇರುಕೃತಿಗಳು ಮೂರು– ಪತಂಜಲಿಯ ಯೋಗಸೂತ್ರ, ನಾರದ ಭಕ್ತಿಸೂತ್ರ ಹಾಗೂ ಶಿವಸೂತ್ರ. ಅವರ ಪ್ರವಚನಗಳ ಸಂಕಲನವಾಗಿ ಇದುವರೆಗೆ 101 ಹೊತ್ತಿಗೆಗಳು ಹೊರಬಂದಿವೆ. ಇನ್ನೂ ನೂರು ಪುಸ್ತಕಗಳಲ್ಲಿ ಬರುವಂತಹ ಮಾತುಗಳು ಧ್ವನಿಸುರುಳಿಗಳಲ್ಲಿ ಅಡಗಿವೆ. ಇಂಗ್ಲಿಷಿನಲ್ಲಿ 18 ಪುಸ್ತಕಗಳು, ಮರಾಠಿಯಲ್ಲಿ 12 ಹಾಗೂ ಹಿಂದಿಯಲ್ಲಿ 3 ಪುಸ್ತಕಗಳು ಹೊರಬಿದ್ದಿವೆ.

ಅಪ್ಪಗಳನ್ನು ನೋಡಿ ಕೇಳಿಯೂ ನಾವು ಅರಿವು–ಮರೆವಿನ ಕಣ್ಣಾಮುಚ್ಚಾಲೆ ಆಟದಿಂದ ಹೊರಬಾರದೆ ಇದ್ದೇವೆ. ಈ ಆಟದಿಂದ ಹೊರಬೀಳುವ ಮಾಟವನ್ನೂ ಅಪ್ಪಗಳು ನಮಗೆ ಹೇಳಿಕೊಟ್ಟಿದ್ದಾರೆ. ಮರವೆಯಿಂದ ಹೊರಬರಲು ಅಪ್ಪಗಳು ಮೂರು ಪ್ರಕಾರದ ಸತ್ಸಂಗವನ್ನು ಹೇಳಿದ್ದಾರೆ. ಮೊದಲೆಯದು ಸಂತರ, ಶರಣರ ನೇರ ಸಂಗ, ಅವರ ನುಡಿಗಳ ಶ್ರವಣ ಅಥವಾ ವಾಚನ ಹಾಗೂ ಮನನ. ಎರಡನೆಯದು ನಿಸರ್ಗ ಸಂಗ. "ಭಗವಂತನು ಬಹಿರಂಗದಲ್ಲಿ ಸಕಲ ಸೃಷ್ಟಿಯಾಗಿ ತೋರಿದನು. ಅವನೇ ನಮ್ಮ ಅಂತರಂಗದಲ್ಲಿ ಹೃದಯಮಾಧುರ್ಯವಾಗಿ ನೆಲಸಿದನು. ಅತ್ತ ಲಕ್ಷ್ಯವಿಲ್ಲದ್ದರಿಂದ ಭಗವತ್ಪ್ರೇಮದ ಭಾನ ಬರುತ್ತಿಲ್ಲ.... ನಿಸರ್ಗದ ಪವಿತ್ರ ಪರಿಸರದಲ್ಲಿ ದೈವೀಭಾವವು ತಾನಾಗಿಯೇ ಮೊಳಗುತ್ತದೆ.... ಆಗಾಗ ನಾವು ನಿಸರ್ಗಸಂಗದಲ್ಲಿ ಇರುವುದು ಸತ್ಯದರ್ಶನಕ್ಕೆ ಸಹಕಾರಿ." ಅಪ್ಪಗಳ ದೃಷ್ಟಿಯಲ್ಲಿ ಇಳೆ, ಮಳೆ, ಗಾಳಿ, ಬೆಳಕು ಎಲ್ಲವೂ ಭಗವದ್ರೂಪ.

ಮೂರನೆಯದಾಗಿ ನೆನಹಿನ ಸಂಗ. "ಜ್ಞಾನಿಗಳ ನುಡಿಗಳನ್ನು ನೆನೆಯುವುದು, ಅವರ ಅನುಭವದ ಗ್ರಂಥಗಳ ಅಧ್ಯಯನ ಮಾಡುವುದು, ಧ್ಯಾನಸ್ಥನಾಗಿ ಗುರು–ದೇವರ ಮೂರ್ತಿಯನ್ನು ಸ್ಮರಿಸುವುದು." ಹೀಗೆ ಸದಾ ಅಪ್ಪಗಳ ನೆನಹಿನ ಸಂಗದಲ್ಲಿರುವವರು ಪುಣ್ಯಜೀವಿಗಳು. ಈ ನೆನಹೇ ನಮ್ಮನ್ನು ಶಿವನ ಬಳಿಗೆ ಕೊಂಡೊಯ್ಯುತ್ತದೆ.

□

## ಸಿದ್ಧೇಶ್ವರ ಉವಾಚ

ಒಂದು ಮಗು ಅಳುತ್ತಿತ್ತು. ತಾಯಿ ಕೇಳಿದಳು "ಏಕೆ ಅಳುತ್ತಿ?" ಮಗು ಹೇಳಿತು – "ಈ ನಾಯಿ ಮರಿ ಹಾಲು ಕುಡಿಯುತ್ತಿಲ್ಲ" ತಾಯಿ ಹೇಳಿದಳು– "ನಾಯಿಗೆ ಹಾಲು ಕುಡಿಸುವವರು ಬೇರೆ ಇದ್ದಾರೆ. ನೀನು ಸುಮ್ಮನೆ ಮಲಗಿರು!!!"

ಮಗು ನಾಯಿಗಾಗಿ ಅಳುವುದು ಎಷ್ಟು ಉಚಿತವೋ? ನಾವು ಈ ಪ್ರಪಂಚಕ್ಕಾಗಿ ಅಳುವುದು ಅಷ್ಟೇ ಉಚಿತವಾಗಿದೆ! ಜಗತ್ತಿನ ಆಗು ಹೋಗುಗಳ ಬಗ್ಗೆ ಸುಮ್ಮನೆ ತಲೆ ಕೆಡಿಸಿಕೊಳ್ಳದೆ, ಅತಿಯಾದ ಪ್ರತಿಫಲಾಪೇಕ್ಷೆ ಇಟ್ಟುಕೊಳ್ಳದೆ ಪ್ರಾಮಾಣಿಕವಾಗಿ ದುಡಿದು ನೆಮ್ಮದಿಯಿಂದ ಇರುವುದೇ ಸಮಾಧಾನ! ಅದು ಪೂರ್ಣಯೋಗ!!

# ವಿಜಯಪುರ ಜ್ಞಾನಯೋಗಾಶ್ರಮದ ಆಧ್ಯಾತ್ಮಿಕ ಜ್ಞಾನಜ್ಯೋತಿ ಶಿವನಲ್ಲಿ ಲೀನ

**ಎಚ್.ಎಸ್. ಸಿದ್ಧಗಂಗಪ್ಪ**

ಬದುಕಿದರೆ ಹೀಗೆ ಸರಳವಾಗಿ ಬದುಕಬೇಕೆಂದು ಜಗತ್ತಿಗೆ ತೋರಿಸಿಕೊಟ್ಟು ದಂತಕಥೆಯಾದವರು ಬಿಜಾಪುರ ಜ್ಞಾನಯೋಗಾಶ್ರಮದ ಪರಂಜ್ಯೋತಿ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳೆಂದು ಹೇಳುವಾಗ ಧನ್ಯತೆ ಉಂಟಾಗುತ್ತದೆ. ಈ ಶತಮಾನ ಕಂಡ ಪ್ರಖರ ಆಧ್ಯಾತ್ಮಿಕ ಚಿಂತಕ, ಸರಳತೆಯಲ್ಲಿ ಮಹತ್ತನ್ನು ತೋರಿಸಿಕೊಟ್ಟ ಮಹಾಸಂತ, ವಿಶ್ವದಾದ್ಯಂತ ಜ್ಞಾನಜ್ಯೋತಿಯನ್ನು ಬೆಳಗಿದ ತತ್ತ್ವಜ್ಞಾನಿ, ಜನಮಾನಸದಲ್ಲಿ ನಡೆದಾಡುವ ದೇವರು ಎಂಬ ಭಕ್ತಿ ಗೌರವಗಳನ್ನು ಪಡೆದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ನಡೆದಾಡುವ ವಿಶ್ವಕೋಶವಾಗಿದ್ದರು. ಬಸವಾದಿ ಶರಣರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅಂತರಂಗ–ಬಹಿರಂಗಗಳೆರಡರಲ್ಲೂ ಶುಭ್ರತೆಯನ್ನು ಕಾಪಾಡಿಕೊಂಡು ಬಂದಿದ್ದ ಕರ್ಮಯೋಗಿ.

ಶಾಂತಿ, ಸಹನೆ, ಸದಾ ಮುಖದಲ್ಲಿ ಪ್ರಸನ್ನತೆ, ಮಂದಹಾಸ, ಅವರ ಒಂದೊಂದು ಮಾತುಗಳು ಲಿಂಗಕ್ಕೆ ಅರ್ಪಿಸಿದ ಕಂಪು ಸೂಸುವ ಪುಷ್ಪಗಳು. ನಡೆ–ನುಡಿಯಲ್ಲೊಂದಾಗಿದ್ದ ಆದರ್ಶ ವ್ಯಕ್ತಿತ್ವ, ಜನಸಾಮಾನ್ಯರಲ್ಲಿ ಜನಸಾಮಾನ್ಯರಾಗಿ ಬದುಕಿದ್ದ ಸರಳಜೀವಿ, ಸಿದ್ಧ ಲೋಕದ ಧ್ರುವನಕ್ಷತ್ರ, ಬಹುಭಾಷಾ ಪ್ರತಿಭಾಸಂಪನ್ನರಾಗಿದ್ದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಇಚ್ಛಾಮರಣಿಯಾಗಿದ್ದು ಜನವರಿ 2, 2023 ರಂದು, ಶಿವನಲ್ಲಿ ಲೀನವಾದರು. ಆದರೆ ಅವರು ಬೆಳಗಿಸಿಟ್ಟು ಹೋದ ಅನುಭಾವಜ್ಯೋತಿ ಪ್ರಖರವಾಗಿ, ನಿರಂತರವಾಗಿ ಭಕ್ತರ, ಅಭಿಮಾನಿಗಳ ಹೃದಯಮಾನಸದಲ್ಲಿ ಬೆಳಗುತ್ತಲೇ ಇರುತ್ತದೆ. ಅವರ ಬದುಕು ತೆರೆದಿಟ್ಟ ಪುಸ್ತಕದಂತಿತ್ತು. 82 ವರ್ಷಗಳ ಸಾರ್ಥಕ ಜೀವನ ನಡೆಸಿದ ಕರ್ಮಯೋಗಿ, ವೈರಾಗ್ಯಮೂರ್ತಿ. ಜನರ ಮನಸ್ಸಿನಲ್ಲಿ ಕವಿದಿದ್ದ ಅಂಧಕಾರವನ್ನು ಕಳೆದು ಸುಜ್ಞಾನದ ದೀವಿಗೆಯನ್ನು ಹಚ್ಚಿ ಅವರು ಸನ್ನಡತೆಯ ದಾರಿಯಲ್ಲಿ ಮುನ್ನಡೆಯುವಂತೆ ಮಾಡಿದ ಅನುಭಾವಿ, ಜ್ಞಾನರತ್ನ. ಕಾವಿಧಾರಿ ಯಾಗದಿದ್ದರೂ, ಸನ್ಯಾಸತ್ವಕ್ಕೆ ಆದರಣೀಯವಾದ ಘನತೆ, ಗೌರವವನ್ನು ತಂದುಕೊಟ್ಟವರು. ಅರಿಷಡ್ವರ್ಗಗಳನ್ನು ಗೆದ್ದ ಮಹಾಶರಣ. ಬಸವಣ್ಣನವರು ಹೇಳಿದಂತೆ ಮಾತಿಗೆ ಮಹತ್ತನ್ನು, ಮಂತ್ರಶಕ್ತಿಯನ್ನು ತಂದುಕೊಟ್ಟವರು. ಸರ್ವಧರ್ಮಸಮನ್ವಯದ ಸಾಕಾರಮೂರ್ತಿ

ಯಾಗಿದ್ದರು. ಜಂಗಮತ್ವಕ್ಕೆ ಅನ್ವರ್ಥವಾಗಿದ್ದರು. ವಿದೇಶಗಳಲ್ಲಿ ಸಂಚರಿಸಿ ಪ್ರವಚನ ನೀಡಿ ಅರಿವಿನ ಜ್ಯೋತಿಯನ್ನು ಬೆಳಗಿಸಿದ ಮಹಾಜ್ಞಾನಿಗಳು. ಪರಿಸರ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ನಿರೂಪಿಸಿದ ಪ್ರಕೃತಿ ಆರಾಧಕ. 'ಶರಣರನ್ನು ಮರಣದಲ್ಲಿ ನೋಡು' ಎಂಬ ಮಾತಿಗೆ ಸಾಕ್ಷಿಯಾದವರು.

**ಜನನ :** 1940ರ ಸೆಪ್ಟೆಂಬರ್ 5 ರಂದು, ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನ ಬಿಜ್ಜರಗಿಯಲ್ಲಿ ಶರಣ ದಂಪತಿಗಳಾದ ಓಗಪ್ಪಗೌಡ ಬಿರಾದಾರ, ತಾಯಿ ಸಂಗವ್ವನವರ ಪುಣ್ಯಗರ್ಭದಲ್ಲಿ ಜನಿಸಿದರು. ಅಂದು ಗಣೇಶಚತುರ್ಥಿ. ಗಣೇಶನ ಆಶೀರ್ವಾದದಿಂದ ಜನಿಸಿದ ಈ ಮಗು ಮುಂದೆ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡುತ್ತಾನೆ ಎಂದು ಆಗ ಯಾರೂ ಊಹಿಸಿರಲಿಲ್ಲ! ತಂದೆ ಖ್ಯಾತ ಚಿತ್ರಕಲಾವಿದರಾಗಿದ್ದರು. ಸುಸಂಸ್ಕೃತ ಕೃಷಿ ಕುಟುಂಬ. ಮನೆಗೆ ಹಿರಿಯ ಮಗ. ತಂದೆತಾಯಿಗಳು ಪ್ರೀತಿಯಿಂದ ಇಟ್ಟ ಹೆಸರು ಸಿದ್ಧಗೊಂಡಪ್ಪ. ಮುಂದೆ ಬೆಳೆದಂತೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ 'ಸಿದ್ಧ'ರಾಗಿದ್ದು ವಿನಾಯಕನ ಅನುಗ್ರಹ. ಶ್ರೀ ಸಿದ್ಧೇಶ್ವರ ಸ್ವಾಮಿಗಳ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ. ಅವರನ್ನು ಕುರಿತು ಬರೆಯುವುದೆಂದರೆ ಗಿಂಡಿಯಲ್ಲಿ ಗೊಮ್ಮಟನಿಗೆ ಅಭಿಷೇಕ ಮಾಡಿದಂತೆ, ಕರಿಯನ್ನು ಕನ್ನಡಿಯಲ್ಲಿ ಅಡಗಿಸಿದಂತೆ.

**ಶಿಕ್ಷಣ :** ಹುಟ್ಟಿದೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ. ಬಾಲ್ಯದಿಂದಲೇ ಚುರುಕು ಬುದ್ಧಿ. ಹೇಳಿದ್ದನ್ನು ಕೂಡಲೇ ಗ್ರಹಿಸುವ ಶಕ್ತಿ. 'ಬೆಳೆವ ಸಿರಿ ಮೊಳಕೆಯಲ್ಲಿ' ಎಂಬಂತೆ ಸಿದ್ಧಗೊಂಡಪ್ಪ ಮುಲ್ಕಿ ಪರೀಕ್ಷೆ ಬರೆಯಲು (7ನೇ ತರಗತಿ) 1955–56 ರಲ್ಲಿ ವಿಜಯಪುರದ ಸಿದ್ಧೇಶ್ವರ ಪದವಿಪೂರ್ವ ಕಾಲೇಜಿಗೆ ಬಂದಾಗ ಕಾಲೇಜಿನ ಸಮೀಪದಲ್ಲೇ ಇದ್ದ ಶಿವಾನುಭವ ಮಂಟಪದಲ್ಲಿ ವೇದಾಂತಕೇಸರಿ ಪೂಜ್ಯ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಹೇಳುತ್ತಿದ್ದ ಆಧ್ಯಾತ್ಮಿಕ ಪ್ರವಚನ ಅವರ ಮೇಲೆ ಗಾಢವಾದ ಪ್ರಭಾವ ಬೀರಿತು. ಪರೀಕ್ಷೆಗಳು ಮುಗಿದು ಸಹಪಾಠಿಗಳು ಊರಿಗೆ ಹಿಂದಿರುಗಿದರೆ, ಸಿದ್ಧಗೊಂಡಪ್ಪ ಊರಿಗೆ ಮರಳದೆ ಗುರುವಿನ ಆಶ್ರಯಕ್ಕೆ ಬಯಸಿ, ಹಂಬಲಿಸಿ, ವಿಜಯಪುರದಲ್ಲಿಯೇ ಉಳಿದುಕೊಂಡರು. ಪ್ರತಿದಿನ ಬೆಳಗ್ಗೆ ಪೂಜ್ಯರ ಪ್ರವಚನ ಕೇಳಿ ರಾತ್ರಿ ಶ್ರೀಗಳು ತಂಗುತ್ತಿದ್ದ ಕೊಠಡಿಯ ಮುಂಭಾಗದಲ್ಲಿಯೇ ಮಲಗುತ್ತಿದ್ದ ಸಿದ್ಧಗೊಂಡಪ್ಪನವರನ್ನು ಗಮನಿಸಿದ ಪೂಜ್ಯ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಚಕಿತರಾಗಿ ಆತನ ಬಗ್ಗೆ ವಿಚಾರಿಸಿ, ಊರಿಗೆ ಕಳುಹಿಸುವಂತೆ ತಮ್ಮ ಶಿಷ್ಯರಿಗೆ ಆದೇಶ ನೀಡುತ್ತಾರೆ. ಊರಿಗೆ ತೆರಳಿದ ಸಿದ್ಧಗೊಂಡಪ್ಪನವರು ಪೂಜ್ಯರ ಪ್ರವಚನ ಕೇಳಲು ಮತ್ತೆ ಹಿಂತಿರುಗಿ ಬಂದು ಪ್ರವಚನ ಕೇಳಿ ಅವರ ಕೊಠಡಿಯ ಮುಂದೆ ಮಲಗುತ್ತಿದ್ದರಂತೆ. ಶ್ರೀಗಳು ಓಗಪ್ಪ ಬಿರಾದಾರ ಅವರನ್ನು ಕರೆಸಿಕೊಂಡು ಈ ಮಗು ಒಂದಿಷ್ಟು ದಿನ ಇಲ್ಲಿಯೇ ಇರಲಿ, ಬುದ್ಧಿವಾದ ಹೇಳಿ ಕಳುಹಿಸುತ್ತೇನೆಂದು ಹೇಳಿದರಂತೆ.

**ಸಿದ್ಧೇಶ್ವರರಾದುದು :** 1957 ರಲ್ಲಿ ಪೂಜ್ಯ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಚಡಚಣದಲ್ಲಿ ಪ್ರವಚನ ಪ್ರಾರಂಭಿಸಿದಾಗ ಅಲ್ಲಿಗೆ ಬಾಲಕ ಸಿದ್ಧಗೊಂಡಪ್ಪನವರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿಯೇ ಪ್ರೌಢಶಾಲೆಗೆ ಸೇರಿಸಿ ಮುಂದಿನ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟರು. ಅಲ್ಲಿ ನಡೆದ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಸಿದ್ಧಗೊಂಡಪ್ಪನನ್ನು ಅಧಿಕೃತ ಶಿಷ್ಯನನ್ನಾಗಿ ಸ್ವೀಕರಿಸಿ 'ಸಿದ್ಧೇಶ್ವರ' ಎಂದು ನಾಮಕರಣ ಮಾಡಿದರು. ನಂತರ ಅವರು ವಿಜಯಪುರದ ವಿಜಯ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದ ಸಿದ್ಧೇಶ್ವರರು ನಂತರ ಕೊಲ್ಲಾಪುರದ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

**ಅಧ್ಯಯನಶೀಲರು :** ಬಿಡುವಿನ ವೇಳೆಯನ್ನು ಅಧ್ಯಯನಕ್ಕಾಗಿಯೇ ಮೀಸಲಿಟ್ಟಿದ್ದರು. ಓದಿನ ಮೇಲೆ ಅಪಾರವಾದ ಪ್ರೀತಿಯನ್ನು ಇಟ್ಟುಕೊಂಡಿದ್ದರಿಂದಲೇ ಅವರು ಜ್ಞಾನದ ಭಂಡಾರವೇ ಆಗಿದ್ದರು. ಓದು ಅವರಿಗೆ ಬರೀ ಹವ್ಯಾಸವಾಗಿರಲಿಲ್ಲ. ಒಂದು ರೀತಿಯಲ್ಲಿ ಹುಚ್ಚಾಗಿತ್ತು. ದಿನಗಳು, ವರ್ಷಗಳು ಉರುಳಿದಂತೆ ಆ ಹುಚ್ಚು ಕಡಿಮೆಯಾಗುವುದರ ಬದಲು ಹೆಚ್ಚಾಗುತ್ತಿತ್ತು. ಶ್ರೀ ಸಿದ್ಧೇಶ್ವರ ಸ್ವಾಮಿಗಳು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಅಲ್ಲಮಪ್ರಭು, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಏಸುಕ್ರಿಸ್ತ, ಪೈಗಂಬರ್, ಮಹಾವೀರ, ಲೆನಿನ್, ಕಾರ್ಲ್‌ಮಾರ್ಕ್ಸ್, ನೆಲ್ಸನ್ ಮಂಡೇಲಾ ಸೇರಿದಂತೆ ವಿಶ್ವದ ಎಲ್ಲ ದಾರ್ಶನಿಕರನ್ನು ಆಳವಾಗಿ ಅಧ್ಯಯನ ಮಾಡಿ ಅರಗಸಿಕೊಂಡಿದ್ದ ಶ್ರೀಗಳು, ಅವರೆಲ್ಲರ ಚಿಂತನೆಗಳನ್ನು ತಮ್ಮ ಪ್ರವಚನದ ಮೂಲಕ ಜನರಿಗೆ ಮುಟ್ಟಿಸುತ್ತಿದ್ದರು.

ಅವರು ಓದುವುದರ ಜೊತೆಗೆ, ಓದಿದ್ದನ್ನು ಅರಗಿಸಿಕೊಂಡು ತಮ್ಮ ಜ್ಞಾನದ ಪುಟಗಳಲ್ಲಿ ದಾಖಲು ಮಾಡುತ್ತಿದ್ದರು. ತಮ್ಮ 19ನೇ ವಯಸ್ಸಿನಲ್ಲಿ ಗುರುಗಳಾದ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮರಾಠಿಯಲ್ಲಿ ಮಾಡಿದ ಪ್ರವಚನಗಳನ್ನು ಕನ್ನಡದಲ್ಲಿ ಟಿಪ್ಪಣಿ ಮಾಡಿ ಸಂಗ್ರಹಿಸಿ 'ಸಿದ್ಧಾಂತ ಶಿಖಾಮಣಿ' ಎಂಬ ಪುಸ್ತಕ ಬರೆದು, ತಮ್ಮ ಗುರುಗಳ ಹೆಸರಿನಲ್ಲಿ ಪ್ರಕಟಿಸಿದರು. ಉನ್ನತ ಶ್ರೇಣಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ವಿಜಯಪುರಕ್ಕೆ ಹಿಂದಿರುಗಿದ ನಂತರ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ತಮ್ಮ ಅಚ್ಚುಮೆಚ್ಚಿನ ಶಿಷ್ಯರಾದ ಶ್ರೀ ಸಿದ್ಧೇಶ್ವರರಿಗೆ ಭಗವದ್ಗೀತೆ, ಉಪನಿಷತ್ತುಗಳ ಬಗ್ಗೆ ವ್ಯಾಖ್ಯಾನ ನೀಡಿ ಅವರ ಅರಿವಿನ ದಿಗಂತವನ್ನು ವಿಸ್ತರಿಸಿದರು. ಮುಂದೆ ಶ್ರೀ ಸಿದ್ಧೇಶ್ವರರು ಉಪನಿಷತ್ತುಗಳು, ಭಗವದ್ಗೀತೆ, ಯೋಗಸೂತ್ರ, ವಚನಸಾಹಿತ್ಯ, ಮುಂತಾದ ವಿಷಯಗಳ ಬಗ್ಗೆ ತಾವು ಗುರುಮುಖೇನ ಕಲಿತ ಜ್ಞಾನವನ್ನು ಬಳಸಿಕೊಂಡು ವೇದಾಂತ ತತ್ತ್ವಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ಹೇಳುವುದು ಅವರ ಪ್ರವಚನದ ವೈಶಿಷ್ಟ್ಯವಾಗಿತ್ತು.

**ವಿಶ್ವಮಾನ್ಯನಾಗು ಎಂದು ಹರಸಿದ ಗುರು :** ವೇದಾಂತಕೇಸರಿ ಪರಮಪೂಜ್ಯ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳು ತಮ್ಮ ಅಂತಿಮ ದಿನಗಳಲ್ಲಿ ಶ್ರೀ ಸಿದ್ಧೇಶ್ವರ

ಸ್ವಾಮಿಗಳವರನ್ನು ಹತ್ತಿರಕ್ಕೆ ಕರೆದು "ನಾನು ಕಲಿತದ್ದು ಕಡಿಮೆ. ನನಗೆ ಇಂಗ್ಲಿಷ್ ಭಾಷೆ ಗೊತ್ತಿಲ್ಲ. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಮಾತ್ರ ನಾನು ಪ್ರವಚನ ಮಾಡಿದ್ದೇನೆ. ನೀವು ಸಾಗರದಾಚೆ ಹೋಗಬೇಕು. ನಿಮ್ಮ ಆಧ್ಯಾತ್ಮಿಕ ಪ್ರವಚನದಿಂದ ಜನರು ಪುನೀತರಾಗಬೇಕು. ವಿಶ್ವಮಾನ್ಯನಾಗಿ ಬೆಳೆಯಬೇಕು" ಎಂದು ಹರಸಿದ್ದರು. ಗುರುಗಳ ಆದೇಶವನ್ನು ಆಶೀರ್ವಾದವೆಂದು ಶಿರಸಾವಹಿಸಿ ಪಾಲಿಸಿಕೊಂಡು ಬಂದಿದ್ದರು. ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ, ಮರಾಠಿ ಭಾಷೆಗಳಲ್ಲಿ ಪ್ರಾವಿಣ್ಯತೆಯನ್ನು ಹೊಂದಿದ್ದರು. ಆ ಭಾಷೆಗಳಲ್ಲಿ ಅವರು ನಿರರ್ಗಳವಾಗಿ ಪ್ರವಚನ ನೀಡುತ್ತಿದ್ದ ಪ್ರತಿಭಾಸಂಪನ್ನರಾಗಿದ್ದರು. ಸುತ್ತೂರು ಜಗದ್ಗುರು ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ವಿದೇಶಗಳಲ್ಲಿ ಅಪಾರ ಸಂಖ್ಯೆಯ ಶಿಷ್ಯರಿದ್ದಾರೆ, ಅಭಿಮಾನಿಗಳಿದ್ದಾರೆ. ಅಲ್ಲಿಯ ಅನೇಕ ಸಂಘಸಂಸ್ಥೆಗಳೊಂದಿಗೆ ಪೂಜ್ಯರ ಸಂಪರ್ಕವಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ವಿದೇಶ ಪ್ರಯಾಣಕ್ಕೆ ಎಲ್ಲಾ ರೀತಿಯ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಪ್ರವಚನಕ್ಕೆ ವ್ಯವಸ್ಥೆ ಮಾಡಿಕೊಟ್ಟರು. ಹೀಗಾಗಿ ಅಮೆರಿಕ, ಕೆನಡ, ಆಸ್ಟ್ರೇಲಿಯ, ಸಿಂಗಾಪುರ, ಮಲೇಷಿಯಾ ದೇಶಗಳಿಗೆ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಹೋಗಿ ಭವ್ಯ ಭಾರತದ ಸರ್ವಧರ್ಮಸಹಿಷ್ಣುತೆ, ದಿವ್ಯ ಸಂಸ್ಕೃತಿ ಪರಂಪರೆ, ಈ ಪವಿತ್ರಭೂಮಿಯಲ್ಲಿ ಜನ್ಮ ತಾಳಿದ ಸಂತರು, ಶರಣರು, ಯೋಗಿಗಳು, ತಪಸ್ವಿಗಳು, ನೀಡಿದ ಸಂದೇಶಗಳನ್ನು ಜಗತ್ತಿನೆಲ್ಲೆಡೆ ಪಸರಿಸುವಂತೆ ಮಾಡಿದ, ನಮ್ಮ ರಾಷ್ಟ್ರ ಕಂಡ ಎರಡನೆಯ ಸ್ವಾಮಿ ವಿವೇಕಾನಂದರು.

**ಪೂಜ್ಯರ ದಿನಚರಿ :** ಸರಳತೆಯನ್ನೇ ಜೀವನದಲ್ಲಿ ಮೈಗೂಡಿಸಿಕೊಂಡಿದ್ದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ನಿತ್ಯ ಮುಂಜಾನೆ ನಾಲ್ಕು ಗಂಟೆಗೆ ಎದ್ದು ಅಧ್ಯಯನ, ಧ್ಯಾನ, ಬರವಣಿಗೆಯಲ್ಲಿ ತೊಡಗುತ್ತಿದ್ದರು. ಬಳಿಕ ಸ್ನಾನ, ಪೂಜೆ ಮುಗಿಸಿ ಬೆಳಗ್ಗೆ 6ಕ್ಕೆ ಸರಿಯಾಗಿ ಪ್ರವಚನ ಆರಂಭಿಸುತ್ತಿದ್ದರು. ಪ್ರವಚನದ ಆರಂಭದಲ್ಲಿ ಶಿಷ್ಯರು ಪ್ರಾರ್ಥನೆ ಮಾಡಿದ ಬಳಿಕ ಸರಿಯಾಗಿ 45 ನಿಮಿಷ ಪ್ರವಚನ ನೀಡುತ್ತಿದ್ದರು. ಒಂದು ನಿಮಿಷವೂ ಕೂಡ ವ್ಯತ್ಯಾಸವಾಗುತ್ತಿರಲಿಲ್ಲ. ಇವರ ಸಮಯಪ್ರಜ್ಞೆಯನ್ನು ಕಂಡು ಗಡಿಯರವೂ ನಾಚಿಕೊಳ್ಳುತ್ತಿತ್ತು. ಅಷ್ಟರಮಟ್ಟಿಗೆ ಅವರು ಸಮಯ ಪರಿಪಾಲನೆ ಮಾಡುತ್ತಿದ್ದರು. ಇವತ್ತು ರಾಜಕಾರಣಿಗಳು, ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸುವವರು ಪೂಜ್ಯರ ಸಮಯಪ್ರಜ್ಞೆಯನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಕಾಲದ ಸದುಪಯೋಗವಾಗುತ್ತದೆ.

ಪ್ರವಚನ ಕೇಳಲು ಕುಳಿತ ಅಪಾರ ಜನಸ್ತೋಮವನ್ನು ಅಯಸ್ಕಾಂತದಂತೆ ಆಕರ್ಷಿಸುವ ಅವರ ನಯವಾದ, ಸರಳವಾದ ಭಾಷೆ ಎಂಥವರನ್ನೂ ಮೋಡಿ ಮಾಡುತ್ತಿತ್ತು. ಕಾವ್ಯಮಯವಾದ ಸುಂದರ ಮಾತುಗಳನ್ನು ಕೇಳಲು ಜನರು ಮುಗಿಬೀಳುತ್ತಿದ್ದರು. ಅವರು ನಡೆನುಡಿಯಲ್ಲಿ ಯಾವುದೇ ವ್ಯತ್ಯಾಸವಾಗದಂತೆ ನೋಡಿಕೊಳ್ಳುತ್ತಿದ್ದರು.

ಪ್ರವಚನ ಮುಗಿದ ಮೇಲೆ ಐದಾರು ಕಿ.ಮೀ. ವಾಯುವಿಹಾರಕ್ಕೆ ಹೋಗುತ್ತಿದ್ದರು. ನಂತರ ಒಂದೆಡೆ ಕುಳಿತು ಇತರರೊಂದಿಗೆ ಚರ್ಚೆಯಲ್ಲಿ ತೊಡಗುತ್ತಿದ್ದರು. ಆಧ್ಯಾತ್ಮ, ಪ್ರಕೃತಿ, ವಿಜ್ಞಾನ, ಕೃಷಿ, ಶಿಕ್ಷಣ ಮೊದಲಾದ ವಿಷಯಗಳಿಗೆ ಸೇರಿದಂತೆ ದೈನಂದಿನ ಜೀವನದ ಬಗ್ಗೆ ಜನರಿಂದಲೇ ಕೇಳಿ ತಮ್ಮ ಜ್ಞಾನದ ಭಂಡಾರವನ್ನು ವಿಸ್ತರಿಸಿಕೊಳ್ಳುತ್ತಿದ್ದರು.

**ಪ್ರಕೃತಿ ಆರಾಧಕರು :** ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಪ್ರಕೃತಿಯ ಬಗ್ಗೆ ಅಪಾರವಾದ ಪ್ರೀತಿ, ಕಳಕಳಿ, ಕಾಳಜಿಯನ್ನು ಹೊಂದಿದ್ದರು. ಹೀಗಾಗಿಯೇ ಅವರು ಜ್ಞಾನಯೋಗಾಶ್ರಮದ 17 ಎಕರೆ ಜಮೀನಿನಲ್ಲಿ ನೂರಾರು ಪ್ರಭೇದದ ಗಿಡಮರಗಳನ್ನು ಬೆಳೆಸಿ ನಂದನವನವನ್ನಾಗಿ ಮಾಡಿದ್ದರು. ಅವುಗಳಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಅಲ್ಲಿ ಸದಾ ಪಕ್ಷಿಗಳ ನಿನಾದ ಅನುರಣಿಸುತ್ತಿತ್ತು. ಆಶ್ರಮದ ಆವರಣದಲ್ಲಿ ಬೃಹದಾಕಾರವಾಗಿ ಬೆಳೆದು ನಿಂತ ಆಲದ ಇಳಿಬಿದ್ದ ರೆಂಬೆಗಳನ್ನು ಕತ್ತರಿಸಲು ಮುಂದಾದಾಗ ಪೂಜ್ಯರು ತಡೆದು, ಇಳಿಬಿದ್ದ ಕೊಂಬೆಗಳಿಗೆ ಕಂಬಗಳನ್ನು ನಿಲ್ಲಿಸಿ, ಆಶ್ರಯ ಒದಗಿಸಿರುವುದನ್ನು ಇಂದಿಗೂ ಕಾಣಬಹುದು. ಪ್ರಕೃತಿಯ ಬಗ್ಗೆ ಅವರು ಅಷ್ಟೊಂದು ಒಲವು ಇಟ್ಟುಕೊಂಡಿದ್ದರು. ಗಿಡಗಳಲ್ಲಿ ಅರಳಿ ನಿಂತ ಹೂಗಳನ್ನು ಕೀಳಲು ಬಿಡುತ್ತಿರಲಿಲ್ಲ. ಹೂಗಳು ಗಿಡದಲ್ಲಿದ್ದರೆ ಚೆನ್ನ ಎಂದು ಹೇಳುತ್ತಿದ್ದರು. ಪೂಜೆಗೆ ಬಹಳಷ್ಟು ಹೂಗಳನ್ನು ಬಳಸದೆ ಒಂದೇ ಹೂವನ್ನು ಬಳಸುತ್ತಿದ್ದರು.

**ಸಂಗೀತಪ್ರಿಯರು :** ಸಂಗೀತ ಕೇಳುವುದು ಅವರ ಪ್ರೀತಿಯ ಹವ್ಯಾಸಗಳಲ್ಲಿ ಒಂದಾಗಿತ್ತು. ಸಂಜೆ ಕೆಲವು ಹೊತ್ತು ಸಂಗೀತ ಆಲಿಸುತ್ತಿದ್ದರು. ಶಹನಾಯ್, ಜಲತರಂಗ, ಕೊಳಲುವಾದನ ಅವರಿಗೆ ಇಷ್ಟವಾಗಿತ್ತು. ಭಕ್ತಿಗೀತೆಗಳು, ಭಜನೆಗಳು, ಶರಣರ ವಚನಗಳು, ಶ್ಲೋಕಗಳನ್ನು ಆಲಿಸುತ್ತಿದ್ದರು.

**ವಿಶ್ರಾಂತಿ :** ಪ್ರತಿದಿನ ಬಿಡುವಿದ್ದಾಗ ಮಧ್ಯಾಹ್ನ ಅಲ್ಪವಿಶ್ರಾಂತಿ ಪಡೆಯುತ್ತಿದ್ದರು. ರಾತ್ರಿ 10 ಗಂಟೆಯೊಳಗೆ ಮಲಗುತ್ತಿದ್ದರು. ತಾವು ಮಲಗುವ ಕೊಠಡಿಯೊಳಗೆ ಗಾಳಿ, ಬೆಳಕು ಇರುವಂತೆ ನೋಡಿಕೊಳ್ಳುತ್ತಿದ್ದರು. ಅವರೆಂದೂ ಏರಕಂಡೀಷನರ್, ಫ್ಯಾನ್ ಇವುಗಳನ್ನು ಬಳಸುತ್ತಿರಲಿಲ್ಲ.

**ಶ್ವೇತವಸ್ತ್ರಧಾರಿ :** ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸದಾಕಾಲ ಶ್ವೇತವಸ್ತ್ರ ಧಾರಿಯಾಗಿದ್ದರು. ಜೇಬು ಇಲ್ಲದ ಸಾದಾ ನಿಲುವಂಗಿ. ಅವರ ಹತ್ತಿರ ಇರುತ್ತಿದ್ದುದು ಎರಡೇ ಜೋಡಿವಸ್ತ್ರಗಳು. ಸ್ವಲ್ಪ ಹರಿದಿದ್ದರೂ ತೊಡುತ್ತಿದ್ದರು. ತಾವೇ ಹೊಲಿಗೆ ಹಾಕಿಕೊಳ್ಳುತ್ತಿದ್ದರು. ಒಂದು ದಿನ ಹೀಗೆ ಹರಿದ ಅಂಗಿಯನ್ನು ನೋಡಿದ ಭಕ್ತರೊಬ್ಬರು ಹೊಸ ವಸ್ತ್ರ ತಂದುಕೊಡುವುದಾಗಿ ಹೇಳಿದಾಗ 'ಬೇಡ, ಅಂಗಿ ಒಂದು ಕಡೆ ಹರಿದರೇನಂತೆ? ಉಳಿದೆಡೆ ಚೆನ್ನಾಗಿದೆ. ಹರಿದ ಕಡೆ ಏಕೆ ನೋಡುತ್ತೀರಿ? ಉಳಿದೆಡೆ ಚೆನ್ನಾಗಿದೆ, ಅಲ್ಲಿ ನೋಡಿ' ಎಂದು ಹೇಳುವುದರ ಮೂಲಕ ಅವರು ನೋಡುವ ದೃಷ್ಟಿಕೋನವನ್ನು ಬದಲಾಗುವಂತೆ ಮಾಡುತ್ತಿದ್ದರು.

**ಮಿತ ಆಹಾರ :** ಶ್ರೀಗಳು ಮಿತಾಹಾರಿಯಾಗಿದ್ದರು. ಉಪ್ಪು ಕಾರವಿಲ್ಲದ ಸಪ್ಪೆ ಆಹಾರ ಸೇವಿಸುತ್ತಿದ್ದರು. ಒಂದು ರೊಟ್ಟಿ ಸ್ವಲ್ಪ ತೊವ್ವೆ, ಸ್ವಲ್ಪ ಸಿಹಿ, ಇದಿಷ್ಟು ಅವರ ದಿನನಿತ್ಯದ ಆಹಾರವಾಗಿತ್ತು.

**ಕಾರನ್ನು ನಯವಾಗಿಯೇ ತಿರಸ್ಕರಿಸಿದರು:** ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಸರಳ ಜೀವನಕ್ಕೆ ಹತ್ತಾರು ನಿದರ್ಶನಗಳನ್ನು ಕೊಡಬಹುದು. ಅವುಗಳಲ್ಲಿ ಇದೂ ಒಂದು. ಆರೇಳು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಶ್ರೀಗಳವರ ಪ್ರವಚನ ನಡೆದಿತ್ತು. ಪೂಜ್ಯರ ಆಧ್ಯಾತ್ಮಿಕ ಚಿಂತನೆಗಳಿಗೆ ಮಾರುಹೋಗಿದ್ದ ಭಕ್ತರೊಬ್ಬರು ಪ್ರವಚನದ ಮಂಗಲದಿನದಂದು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಹೊಸ ಕಾರು ಖರೀದಿಸಿ ತಂದರು. ಅದನ್ನು ಶ್ರೀಗಳಿಗೆ ತೋರಿಸಿ 'ಬುದ್ಧಿ, ಈ ಕಾರು ನಿಮಗಾಗಿ ತಂದಿದ್ದೇನೆ. ದಯವಿಟ್ಟು ಕಾರಿನ ಕೀ ಸ್ವೀಕರಿಸಿ' ಎಂದು ವಿನಮ್ರವಾಗಿ ವಿನಂತಿಸಿದರು.

ಅದಕ್ಕೆ ಮುಗುಳ್ನಕ್ಕ ಸ್ವಾಮೀಜಿಯವರು 'ಸಂತೋಷ, ಒಂದು ಸುತ್ತು ಹಾಕಿಸಿ' ಎಂದು ಕಾರಿನ ಕೀಯನ್ನು ಭಕ್ತರಿಗೆ ನೀಡಿದರು. ಕಾರಿನಲ್ಲಿ ಸುತ್ತಿ ಬಂದು 'ತುಂಬಾ ಚೆನ್ನಾಗಿದೆ, ಅದ್ಭುತ' ಎಂದು ಮೆಚ್ಚಿಗೆ ಸೂಚಿಸಿದರು. ಅವರ ಮಾತನ್ನು ಕೇಳಿದ ಭಕ್ತರಿಗೆ ತಮ್ಮ ಜೀವನ ಧನ್ಯವಾಯಿತು ಎಂದು ಖುಷಿಯಲ್ಲಿರುವಾಗ, ಅವರನ್ನು ಆಶೀರ್ವದಿಸಿ ನಿಮ್ಮಂತಹ ಭಕ್ತರು ನಮಗೆ ದೊರಕಿರುವುದು ನಮ್ಮ ಸೌಭಾಗ್ಯ. ಕಾರಿನ ಅನುಭವ ಮರೆಯಲಾಗದು. ನಾನು ಒಂದೇ ಕಾರಿನಲ್ಲಿ ಓಡಾಡಿದರೆ ನಿರಾಸಕ್ತಿ ಉಂಟಾಗುತ್ತದೆ" ಎಂದು ಹೇಳಿ ಕಾರನ್ನು ನಯವಾಗಿ ತಿರಸ್ಕರಿಸಿ ಅದೇ ಮಂದಹಾಸದಿಂದ ತೆರಳಿದ್ದರು ಎಂದು ಅವರ ಸಮೀಪವರ್ತಿಗಳು ಹೇಳುತ್ತಾರೆ.

ಇದಲ್ಲದೆ ಪೂಜ್ಯರಿಗೆ ಮನೆಯೂ ಸೇರಿದಂತೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಗಳನ್ನು ಕೊಡಲು ಮುಂದಾದರೂ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಏನನ್ನೂ ಪಡೆದುಕೊಳ್ಳದೆ ಸಾಮಾನ್ಯರಂತೆ ಜೀವನ ನಡೆಸುತ್ತಿದ್ದ ಮಹಾನ್ ಸಂತರು. ಪೂಜ್ಯರು ಯಾವತ್ತೂ ಸಂಪತ್ತು ತಮ್ಮ ಹತ್ತಿರ ಸುಳಿಯದಂತೆ ನೋಡಿಕೊಂಡರು. ಹಣದ ಹಿಂದೆ ಸಾಗಲಿಲ್ಲ. ಯಡಿಯೂರಪ್ಪನವರ ಸರ್ಕಾರ ಆಶ್ರಮಕ್ಕೆ 25 ಲಕ್ಷ ರೂ.ಗಳನ್ನು ಕೊಡಲು ಮುಂದಾದಾಗ "ಇಲ್ಲಿ ಶಾಲೆ, ಆಸ್ಪತ್ರೆ ಇಲ್ಲ, ನಮಗೇಕೆ ಹಣ? ಇಲ್ಲೇನಿದ್ದರೂ ಜ್ಞಾನಪ್ರಸಾರ. ಹಾಗಾಗಿ ಹಣದ ಅವಶ್ಯಕತೆಯಿಲ್ಲ" ಎಂದು ನಿರಾಕರಿಸಿದ್ದರು. ಸಂತರು ಹೇಗಿರಬೇಕು ಎಂಬುದಕ್ಕೆ ಸಾಕ್ಷಿಯಾಗಿದ್ದರು. ವಿಶಾಲವಾದ ಭಾವವುಳ್ಳವರೇ ಸಂತರು, ಶರಣರು. ಅವರಿಗೂ ನಮಗೂ ವಿಶೇಷ ವ್ಯತ್ಯಾಸವಿಲ್ಲ. ಅವರು ಒಳಗೆ ಸಿರಿವಂತರು, ಹೊರಗೆ ಬಡವರು. ನಾವು ಹೊರಗೆ ಸಿರಿವಂತರು, ಒಳಗೆ ಬಡವರು. ಹೊರಗೆ ಸಿರಿವಂತರಾಗುವ ಬದಲು ಒಳಗೆ ಸಿರಿವಂತರಾದರೆ ಆರೋಗ್ಯವಂತ ಸಮಾಜ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ.

**ಸ್ವಚ್ಛತೆಗೆ ಆದ್ಯತೆ :** ತಾವಿರುವ ಸ್ಥಳ ಸದಾ ಸ್ವಚ್ಛವಾಗಿರಬೇಕೆಂಬ ಕಳಕಳಿ, ಆಶಯ ಅವರದಾಗಿತ್ತು. ಹಾಗಾಗಿ ಅವರು ಸ್ವಚ್ಛತೆಗೆ ಮಹತ್ವವನ್ನು ಕೊಡುತ್ತಿದ್ದರು. ಗ್ರಾಮಗಳ ಭಕ್ತರು ಶ್ರೀಗಳನ್ನು ಕರೆಸಿ ಪ್ರವಚನ ಮಾಡಿಸಬೇಕು ಎಂಬ ಆಸೆಯಿಂದ ಅವರನ್ನು ಆಹ್ವಾನಿಸಲು ಹೋದಾಗ, ಕರೆಯಲು ಹೋದ ಗ್ರಾಮದ ಪ್ರಮುಖರಿಗೆ ಮೊದಲು ಹೇಳುತ್ತಿದ್ದ ಮಾತು: "ನೀವೆಲ್ಲರೂ ಸ್ವಚ್ಛತೆಯಿಂದ ಇದ್ದು, ಊರನ್ನು ಸ್ವಚ್ಛವಾಗಿ ಇಟ್ಟುಕೊಂಡಲ್ಲಿ ನಾನು ಪ್ರವಚನ ಮಾಡಲು ಬರುತ್ತೇನೆ". ಪೂಜ್ಯರ ಆದೇಶವನ್ನು ಶಿರಸಾವಹಿಸಿ ಪಾಲಿಸಿದ ನಂತರವೇ ಅವರು ಪ್ರವಚನಕ್ಕೆ ದಯಮಾಡಿಸುತ್ತಿದ್ದರು. ಆ ಮೂಲಕ ಸ್ವಚ್ಛತೆಯ ಮಹತ್ವವನ್ನು ಭಕ್ತರಿಗೆ ಮನವರಿಕೆ ಮಾಡಿಕೊಡುತ್ತಿದ್ದರು.

**ಪ್ರಶಸ್ತಿಗಳಿಂದ ದೂರವಿದ್ದ ಶ್ರೀಗಳು :** ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಮೊದಲಿನಿಂದಲೂ ಪ್ರಶಸ್ತಿ, ಪುರಸ್ಕಾರಗಳಿಂದ ದೂರವಿದ್ದವರು. ಸಭೆ ಸಮಾರಂಭಗಳಲ್ಲಿ ಹಾರ, ಫಲತಾಂಬೂಲ, ಕಾಣಿಕೆಯನ್ನೂ ಬಯಸುತ್ತಿರಲಿಲ್ಲ, ಹಾಕಿಸಿಕೊಳ್ಳುತ್ತಿರ ಲಿಲ್ಲ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಶ್ರೀಗಳವರು ಸಲ್ಲಿಸಿದ ಅಮೂಲ್ಯ ಸೇವೆಯನ್ನು ಗಮನಿಸಿದ ಭಾರತ ಸರ್ಕಾರ 2019 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಘೋಷಿಸಿದ್ದರೂ ಅದನ್ನು ನಿರಾಕರಿಸಿದ್ದರು. ಅವರು ಈ ಸಂದರ್ಭದಲ್ಲಿ ಹೇಳಿಕೆ ನೀಡಿ "ಭಾರತ ಸರ್ಕಾರ ನೀಡುವ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗಳ ಮೇಲೆ ನನಗೆ ಅಪಾರ ಗೌರವವಿದೆ. ಪದ್ಮಶ್ರೀ ಘೋಷಿಸಿದ್ದಕ್ಕೆ ಧನ್ಯವಾದಗಳು. ಆದರೆ ನಾನೊಬ್ಬ ಸನ್ಯಾಸಿ. ಆಧ್ಯಾತ್ಮಿಕ ಬೋಧನೆಯ ಮೂಲಕ ಜನರ ಜೀವನ ಉದಾತ್ತಗೊಳಿಸುವ ಉದ್ದೇಶ ನನ್ನದು. ಹಾಗಾಗಿ ಪ್ರಶಸ್ತಿಗಳ ಅವಶ್ಯಕತೆ ನನಗಿಲ್ಲ. ಎಲ್ಲ ಗೌರವಾದರಗಳೊಂದಿಗೆ ಈ ಪ್ರಶಸ್ತಿಯನ್ನು ಹಿಂದಿರುಗಿಸಿದ್ದೇನೆ, ಅನ್ಯಥಾ ಭಾವಿಸದಿರಿ" ಎಂದು ಹೇಳಿದ್ದರು. ಅಲ್ಲದೆ ಕರ್ನಾಟಕ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ಘೋಷಿಸಿತ್ತು. ಆಗಲೂ ಪ್ರಶಸ್ತಿಯನ್ನು ನಯವಾಗಿ ನಿರಾಕರಿಸಿದ್ದರು. ಸರಳತೆಗೆ ಒಂದು ವ್ಯಾಖ್ಯಾನವಾಗಿದ್ದ ಶ್ರೀಗಳು ಎಂದಿಗೂ ಡಂಭಾಚಾರ, ಪಾದಪೂಜೆಗಳನ್ನು ಬಯಸುತ್ತಿರಲಿಲ್ಲ. ನಿಜವಾದ ಅರ್ಥದಲ್ಲಿ ಅವರೊಬ್ಬ ಮಹಾನ್ ಸಂತರಾಗಿದ್ದರು.

**ಶ್ರೀಗಳವರ ಗ್ರಂಥಗಳು :** ಪೂಜ್ಯ ಶ್ರೀ ಸಿದ್ಧೇಶ್ವರ ಶ್ರೀಗಳು ನೀಡಿದ ಪ್ರವಚನ ಸಾರವೇ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ. ಅವರ ಅನುಭಾವದ ನುಡಿಯಿಂದ ಬಂದ ಪ್ರವಚನಸಾರ ಗ್ರಂಥರೂಪ ಪಡೆದು ನೂರಕ್ಕೂ ಹೆಚ್ಚು ಗ್ರಂಥಗಳ ರೂಪದಲ್ಲಿ ಲೋಕಾರ್ಪಣೆಯಾಗಿವೆ. ವೇದ, ಉಪನಿಷತ್, ವಚನಗಳು, ಬುದ್ಧನ ವಿಚಾರಗಳು ಹೀಗೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುವ, ಪಾಶ್ಚಾತ್ಯ ತತ್ತ್ವಶಾಸ್ತ್ರದ ಬೋಧನೆಗಳುಳ್ಳ ಅವರ ಪ್ರವಚನಗಳು ದೊಡ್ಡ ಸಂಖ್ಯೆಯಲ್ಲಿ ಲಭ್ಯವಿವೆ. ಇಂಗ್ಲಿಷ್, ಮರಾಠಿ ಭಾಷೆಗಳಲ್ಲಿಯೂ ಅವರ ಪ್ರವಚನಸಾರ ಸಂಗ್ರಹ ಅನುವಾದವಾಗಿ ಅನೇಕ ಮುದ್ರಣಗಳನ್ನು ಕಂಡಿವೆ. ಅವರು ರಚಿಸಿದ ಶ್ರೀ ಸಿದ್ಧರಾಮೇಶ್ವರ ವಚನ–ಪ್ರವಚನ,

ರಿಫ್ಲೆಕ್ಷನ್ ಆನ್ ದಿ ಡಿವೈನ್, ಶಿವಸೂತ್ರಾಸ್, ಶಾಂತಿಪಥ (ಅಷ್ಟಾಂಗಯೋಗ, ರಾಜಯೋಗ), ಸಮಾಜಸಂಪದ ಹಾಗೂ ಇತರ ಪ್ರಬಂಧಗಳು, ಪತಂಜಲಿ ಯೋಗಸೂತ್ರ, ಗಾಡ್, ವರ್ಲ್ಡ್ ಆ್ಯಂಡ್ ಸೋಲ್, ಭಗವಚ್ಚಿಂತನ, (ಕನ್ನಡ ಮತ್ತು ಮರಾಠಿ), ಮುಂಡಕೋಪನಿಷತ್ತು ಹಾಗೂ ಶ್ರೀ ಮಲ್ಲಿಕಾರ್ಜುನ ವಚನಾಮೃತ, ಈಶಾವಾಸ್ಯೋಪನಿಷತ್ತು ಹಾಗೂ ಶ್ರೀ ಮಲ್ಲಿಕಾರ್ಜುನ ವಚನಾಮೃತ, ಅಲ್ಲಮ ಪ್ರಭುದೇವರ ವಚನ–ನಿರ್ವಚನ, ನಾನಾರು!, ಆನಂದ ಅನ್ವೇಷಣೆ, ಆನಂದಯೋಗ, ಈಶಪ್ರಸಾದ, ಈಶಯೋಗ, ಪೂರ್ಣಯೋಗ, ಪಾರಮಾರ್ಥ ಗೀತಾ, ಕಠೋಪನಿಚತ್ತ, ಕೈವಲ್ಯಪದ್ಧತಿ, ಕೈವಲ್ಯಕುಸುಮ, ಕರ್ಮಯೋಗ – ಕಲ್ಯಾಣ ರಾಜ್ಯ, ಕಥಾಮೃತ ಬದುಕು, ಬದುಕಿನ ದೀವಿಗೆ, ಭಕ್ತಿಪಥ, ಭಕ್ತಿಯ ಬೆಳೆ, ಭಕ್ತಿಯೋಗ, ಸತ್ಸಂಗಸೌರಭ, ಧರ್ಮಾಮೃತ ಹೀಗೆ 100ಕ್ಕೂ ಹೆಚ್ಚು ಪ್ರವಚನಾಧಾರಿತ ಮೌಲಿಕ ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಬಹುಪಾಲು ಗ್ರಂಥಗಳು ಪುನರ್ ಮುದ್ರಣಗೊಂಡಿವೆ.

**ಸರ್ವಸಂಗ ಪರಿತ್ಯಾಗಿ :** ತ್ರಿವಿಧ ದಾಸೋಹಿ, ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಂತೆ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸರ್ವಸಂಗ ಪರಿತ್ಯಾಗಿಗಳಾಗಿ ಸನ್ಯಾಸಕ್ಕೆ ಒಂದು ಘನತೆ, ಗೌರವನ್ನು ತಂದುಕೊಟ್ಟರು, ಸಂನ್ಯಾಸಿ ಎಂದರೆ ಹೇಗಿರಬೇಕು ಎಂಬುದಕ್ಕೆ ನಿದರ್ಶನವಾಗಿದ್ದರು. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರೆ, ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಜ್ಞಾನಕ್ಕೆ ಹೆಚ್ಚು ಒತ್ತು ಕೊಟ್ಟರು. ಈ ಇಬ್ಬರು ಮಹಾಪುರುಷರು ಸಮಾಜಮುಖಿ ಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿದ್ದರು. ಇಬ್ಬರೂ ಜ್ಞಾನಜ್ಯೋತಿಯನ್ನು ಬೆಳಗಿ ಸನ್ಮಾರ್ಗವನ್ನು ತೋರಿದ ಸಿದ್ಧಪುರುಷರು.

ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಪೂರ್ವಾಶ್ರಮದ ಜೊತೆ ಯಾವ ಸಂಬಂಧ, ಬಾಂಧವ್ಯವನ್ನೂ ಹೊಂದಿರಲಿಲ್ಲ. ತಂದೆ, ತಾಯಿ ವಿಧಿವಶರಾದಾಗಲೂ ಅವರು ಬಿಜ್ಜರಿಗೆಗೆ ಹೋಗಲಿಲ್ಲ. 'ಸಂನ್ಯಾಸತ್ವ'ದ ತತ್ತ್ವ ಮೀರಲಿಲ್ಲ. ಪೂರ್ವಾಶ್ರಮದ ದಿನಗಳನ್ನು ಶ್ರೀಗಳು ಚರ್ಚಿಸುತ್ತಲೇ ಇರಲಿಲ್ಲ. ಹಳೆಯ ಸ್ನೇಹಿತರ ಒಡನಾಟವನ್ನು ಸಹ ಸ್ಮರಿಸದೆ ಪೂರ್ವಾಶ್ರಮದ ನೆನಪನ್ನೇ ಮಾಡಿಕೊಳ್ಳುತ್ತಿರಲಿಲ್ಲ. ಅಷ್ಟೊಂದು ಶ್ರದ್ಧೆ, ನಿಷ್ಠೆಯಿಂದ ಸಂನ್ಯಾಸತ್ವವನ್ನು ಪಾಲನೆ ಮಾಡಿ ಸಂನ್ಯಾಸಿಗಳಿಗೆ ಆದರ್ಶವಾಗಿದ್ದರು.

**ಗ್ರಂಥಭಂಡಾರ :** ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರಿಗೆ ಪುಸ್ತಕಗಳ ಮೇಲೆ ಅಪಾರವಾದ ಪ್ರೀತಿ. ಅವರು ಮಠ ಕಟ್ಟಲಿಲ್ಲ, ಗುಡಿ ಕಟ್ಟಲಿಲ್ಲ. ಆದರೆ ಒಂದು ಸುಂದರವಾದ, ಭವ್ಯವಾದ ಗ್ರಂಥಾಲಯ ಕಟ್ಟಿ ಜ್ಞಾನಪ್ರಸಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಗ್ರಂಥಾಲಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ ಭಾಷೆಯ ಸುಮಾರು ಹದಿನೈದು ಸಾವಿರ ಗ್ರಂಥಗಳಿವೆ. ಇವು ಜಗತ್ತಿನ ಶ್ರೇಷ್ಠ ಚಿಂತಕರು, ತತ್ತ್ವಜ್ಞಾನಿಗಳು, ವಿಜ್ಞಾನಿಗಳು, ಸಮಾಜವಿಜ್ಞಾನಿಗಳು, ರಾಜಕೀಯ ವಿಶ್ಲೇಷಕರು, ನೊಬೆಲ್ ಪ್ರಶಸ್ತಿ ಪುರಸ್ಕೃತರು

ಬರೆದ ಅತ್ಯಂತ ಮಹತ್ವದ ಗ್ರಂಥಗಳಾಗಿವೆ. ಜಗತ್ತಿನಾದ್ಯಂತ ಗಣ್ಯರು, ತಾವು ಬರೆದ ಗ್ರಂಥಗಳನ್ನು ಸಿದ್ಧೇಶ್ವರ ಶ್ರೀಗಳಿಗೆ ಗೌರವಪೂರ್ವಕವಾಗಿ ಕಳುಹಿಸಿ ಕೊಡುತ್ತಾರೆ. ಇವುಗಳ ಜೊತೆಗೆ ಪೂಜ್ಯರು ಕೂಡ ತಮಗೆ ಇಷ್ಟವಾದ ಕೃತಿಗಳನ್ನು ತರಿಸಿಕೊಳ್ಳುತ್ತಿದ್ದರು. ಸ್ವಾಮೀಜಿಯವರ ಪುಸ್ತಕಪ್ರೀತಿಯನ್ನು ಕುರಿತು ತಮ್ಮ ನುಡಿನಮನದಲ್ಲಿ ಹಿರಿಯ ವಿದ್ವಾಂಸರಾದ ಡಾ. ಸಂಗಮೇಶ ಸವದತ್ತಿಮಠ ಅವರು ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡಿದ್ದಾರೆ: "ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಆದರ್ಶ ಜೀವನ ಮತ್ತು ಸಂದೇಶಗಳು ಅಮರವಾಗಿವೆ. ಸಾಮಾನ್ಯರಲ್ಲಿ ಸಾಮಾನ್ಯವಾದ ಒಬ್ಬ ಮಾನವ ಹೇಗೆ ಮಹಾತ್ಮ ಆಗಬಹುದೆಂಬುದಕ್ಕೆ ಅವರೇ ಈ ಶತಮಾನದಲ್ಲಿ ಸಾಕ್ಷಿಯಾಗಿದ್ದರು. ತನ್ನ ತಾ ತಿಳಿಯಲು ಏನು ಬೇಕೋ ಅಷ್ಟು ಮಾತ್ರ ಅವರು ಉಪದೇಶಿಸುತ್ತಿದ್ದರು. ನಿಜಕ್ಕೂ ಅವರು ಜ್ಞಾನಿಗಳೇ ಆಗಿದ್ದರು. ವಚನಸಾಹಿತ್ಯದ ನನ್ನ ಕೃತಿಗಳನ್ನು ಅವರು ಮೆಚ್ಚಿಕೊಂಡಿದ್ದು ನನ್ನ ಪುಣ್ಯ. ತಮ್ಮ ಆಶ್ರಮದಲ್ಲಿ ನನ್ನ ವಿಷಯ ವಚನ ಸಂಪುಟಗಳನ್ನು ಇಟ್ಟುಕೊಂಡಿದ್ದರು. ಆ ಸಂಪುಟಗಳ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಬರೆಸಿ ಕಳುಹಿಸಿದ್ದರು. ಭೇಟಿಯಾದಾಗಲೆಲ್ಲ ನೆನಪು ಮಾಡಿಕೊಳ್ಳುತ್ತಿದ್ದರು. ಈಗೆ ಕೆಲ ತಿಂಗಳ ಹಿಂದೆಯೇ ಇಂಗ್ಲಿಷ್ ಭಾಷೆಯಲ್ಲಿ ಅದೇ ತಾನೆ ಪ್ರಕಟವಾಗಿದ್ದ ನನ್ನ 'ವಚನ ಪದಕೋಶ' ಕೃತಿಯನ್ನು ಸ್ವತಃ ಒಬ್ಬ ಶಿಷ್ಯರನ್ನು ನನ್ನ ಮನೆಗೆ ಕಳುಹಿಸಿ ತರಿಸಿಕೊಂಡಿದ್ದರು. ತಾವು ಮೈಸೂರಿನಲ್ಲಿದ್ದು ವಿಜಾಪುರಕ್ಕೆ ಹೋಗುವ ಅವಸರದಲ್ಲಿ ಇದ್ದರೂ ತಮ್ಮ ಶಿಷ್ಯರಿಗೆ 'ಹಾಗೆಯೇ ತರಬೇಡ, ದುಡ್ಡು ಕೊಟ್ಟು ಖರೀದಿಸಿ ತೆಗೆದುಕೊಂಡು ಬಾ. ಹುಬ್ಬಳ್ಳಿಯಿಂದ ಮುಂದೆ ದಾಟಿ ಹೋಗುವಾಗ ದಾರಿಯಲ್ಲಿ ಕಾರು ನಿಲ್ಲಿಸುತ್ತೇವೆ. ಮರೆಯದೆ ತಂದುಕೊಡು' ಎಂದು ಆದೇಶಿಸಿದ್ದರಂತೆ. ನಾನು ಗೌರವ ಪ್ರತಿಯಾಗಿಯೇ ನೀಡಿ ಕೃತಾರ್ಥನಾಗಿದ್ದೆ" ಎಂದು ನೆನಪು ಮಾಡಿಕೊಂಡಿದ್ದಾರೆ. ಡಾ. ಸಂಗಮೇಶ ಸವದತ್ತಿಯವರ ಮಾತುಗಳು ಪೂಜ್ಯ ಶ್ರೀಗಳಿಗೆ ಪುಸ್ತಕದ ಮೇಲಿದ್ದ ಪ್ರೀತಿಗೆ ಭಾಷ್ಯ ಬರೆದಂತಿದೆ.

**ಅಂತಿಮ ಅಭಿವಾದನ ಪತ್ರ :** ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ತಾವು ಅಗಲಿದ ನಂತರ ನಮ್ಮ ಅಂತಿಮ ಸಂಸ್ಕಾರ ಹೇಗೆ ನಡೆಯಬೇಕು ಎಂಬುದನ್ನು 2014 ರಲ್ಲೇ ಬರೆದಿಟ್ಟಿದ್ದರು. ಅಲ್ಲದೆ ಅದೇ ಪತ್ರದಲ್ಲಿ ತಮ್ಮ ಭಕ್ತಸಮುದಾಯಕ್ಕೆ ಅಂತಿಮ ಸಂದೇಶವನ್ನು ತಿಳಿಸಿದ್ದರು. ಅದರ ಅನುಸಾರ, ಸ್ವತಃ ವೀರಶೈವ ಸಮುದಾಯದವರಾದರೂ ತಮ್ಮ ದೇಹವನ್ನು ಭೂಮಿಯಲ್ಲಿ ಸಮಾಧಿ ಮಾಡುವ ಬದಲು ದಹಿಸಬೇಕು. ಶ್ರಾದ್ಧಿಕ ವಿಧಿವಿಧಾನಗಳನ್ನು ಪಾಲಿಸುವುದು ಬೇಡ. ದೇಹವನ್ನು ದಹಿಸಿದ ಬಳಿಕ ಚಿತಾಭಸ್ಮದ ಮೇಲೆ ಯಾವುದೇ ರೀತಿ ಸಮಾಧಿ ಅಥವಾ ಸ್ಮಾರಕ ನಿರ್ಮಿಸಬಾರದು" ಎಂದು ಅವರು ಪತ್ರದಲ್ಲಿ ಬರೆದಿದ್ದರು. ಅಲ್ಲದೆ ಆ ಪತ್ರದಲ್ಲಿ ಹೀಗೆ ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದರು.

"ಬದುಕು ಅನುಭವಗಳ ಪ್ರವಾಹ. ಅದರ ಸಿರಿವಂತಿಕೆಯು ವಿಶ್ವಚಿಂತನೆ ಹಾಗೂ ಸತ್ಯಶೋಧನೆಗಳಿಂದ, ಅದರ ಸೌಂದರ್ಯವು ರಾಗ–ದ್ವೇಷರಹಿತವಾದ ಹಾಗೂ ಅಸೀಮಿತವಾದ ಸದ್ಭಾವದಿಂದ ಅದನ್ನು ಸುಭಗ ಹಾಗೂ ಸಮೃದ್ಧಗೊಳಿಸುವುದೇ ಸಾಧನೆ. ಅಂತಹ ಜೀವನದ ಉಪಯುಕ್ತವಾದ ಅನುಭವಗಳನ್ನು ಆಸಕ್ತರೊಂದಿಗೆ ಹಂಚಿಕೊಳ್ಳುವುದೇ ಧರ್ಮ. ಅದು ಸ್ವ–ಪರ ನೆಮ್ಮದಿಗೆ ಕಾರಣ. ನನ್ನದು ಆವೇಗವಿಲ್ಲದ ಸಾವಧಾನದ ಸಾಮಾನ್ಯ ಬದುಕು. ಅದನ್ನು ರೂಪಿಸಿದವರು ಗುರುದೇವರು. ಅದನ್ನು ಹದುಳಿಸಿದವರು ನಾಡಿನ ಪೂಜ್ಯರು, ಹಿತೈಷಿಗಳು, ಸಹ–ಹೃದಯವಂತರು, ಸಾಧಕರು ಹಾಗೂ ಶ್ರೀಸಾಮಾನ್ಯರು. ನಿಸರ್ಗವು ಮೈಮನಸ್ಸುಗಳಿಗೆ ತಂಪನ್ನಿತ್ತಿದೆ. ತಾತ್ವಿಕ ಚಿಂತನೆಗಳು ತಿಳಿಬೇಗ ಹರಡಿವೆ. ಜಾಗತಿಕ ತತ್ತ್ವಜ್ಞಾನಿಗಳ ಮತ್ತು ವಿಜ್ಞಾನಿಗಳ ಶೋಧನೆಗಳು ದೃಷ್ಟಿಯ ಪರಿಸೀಮೆಯನ್ನು ದೂರ ದೂರ ಸರಿಸಿವೆ. ಆದ್ದರಿಂದಲೇ ನಾನು ಎಲ್ಲರಿಗೂ, ಎಲ್ಲದಕ್ಕೂ ಉಪಕೃತ. ಬದುಕು ಮುಗಿಯುತ್ತಿದೆ; ದೀಪ ಆರಿದಂತೆ, ತೆರೆ ಅಡಗಿದಂತೆ, ಮೇಘ ಕರಗಿದಂತೆ. ಉಳಿಯುವುದು ಬರೀ ಬಯಲ, ಮಹಾಮೌನ, ಶೂನ್ಯಸತ್ಯ! ಹಲವು ದಶಕಗಳ ಕಾಲ ಈ ಅದ್ಭುತ ಜಗತ್ತಿನಲ್ಲಿ ಬಾಳಿದ್ದೇನೆ; ನೋಡಿ ತಿಳಿದು ಅನುಭವಿಸಿದ್ದೇನೆ. ನನ್ನ ಬದುಕು ಕೊನೆಗೊಳ್ಳುವ ಮುಂಚೆ ಅದನ್ನು ಕೃತಜ್ಞತೆಯಿಂದ ಸ್ಮರಿಸಬೇಕು. ಅದಕ್ಕಾಗಿ ಈ ಅಂತಿಮ ಅಭಿವಾದನ ಪತ್ರ:"

ಅಂತಿಮ ನೆನಹು
ಸತ್ಯವೂ ಇಲ್ಲ, ಅಸತ್ಯವೂ ಇಲ್ಲ
ಸಹಜವೂ ಇಲ್ಲ, ಅಸಹಜವೂ ಇಲ್ಲ,
ನಾನೂ ಇಲ್ಲ, ನೀನೂ ಇಲ್ಲ;
ಇಲ್ಲಿ ಇಲ್ಲ ಎಂಬುದು ತಾನಿಲ್ಲ
ಗುಹೇಶ್ವರನೆಂಬುದು ತಾ ಬಯಲು
ಅಂತ್ಯ ಪ್ರಣಮಾಂಜಲಿ !

□

# ಶತಮಾನದ ಸಂತ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು

ಸಿ.ಪಿ. ರಾಮಶೇಷ

**ಪೂ**ಜ್ಯರನ್ನು ನಡೆದಾಡುವ ದೇವರು, ಶತಮಾನದ ಸಂತ, ನಡೆದಾಡುವ ವಿಶ್ವಕೋಶ, ವೈರಾಗ್ಯಮೂರ್ತಿ, ನುಡಿದಂತೆ ನಡೆದವರು, ನಿಸರ್ಗದ ಆರಾಧಕರು, ನಿರಾಭಾರಿ ಚರಮೂರ್ತಿಗಳು ಎನ್ನುತ್ತಾರೆ. ಇಂತಹ ಪರಮೋಚ್ಚ ಶಬ್ದಗಳು ಅವರಿಗೆ ಸರಿಯಾಗಿ ಒಪ್ಪುವುದು. ಇಂತಹ ಅಪರೂಪದ ಸಂತಶ್ರೇಷ್ಠರ ಕಾಲಮಾನದಲ್ಲಿ ನಾವಿದ್ದು, ಅವರ ದರ್ಶನ ಪಡೆದು ಅವರ ಅಮೃತವಾಣಿಯನ್ನು ಕೇಳಿದ್ದೇವೆ ಎನ್ನುವುದೇ ಒಂದು ಹೆಮ್ಮೆಯ ಸಂಗತಿ. ಅದರಿಂದ ಧನ್ಯತಾಭಾವ ಹೊಂದಿದವರು ಲಕ್ಷಾಂತರ ಭಕ್ತರು.

ಶ್ರೀಗಳ ಉಚ್ಚಮಟ್ಟದ ವೈರಾಗ್ಯ ಹಾಗೂ ಜ್ಞಾನದ ಸೆಲೆ ವಿಶೇಷವಾದುದು. ಇವೆರಡನ್ನೂ ಕಂಡು ಅನುಭವಿಸಿದವರು ಆಶ್ಚರ್ಯದಿಂದ ಮೂಕವಿಸ್ಮಿತರಾಗಿರುವರು. ಶ್ರೀಗಳು 1999ರಲ್ಲಿ ಕೆಲವು ತಿಂಗಳು ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ತಂಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಆಗಾಗ್ಗೆ ಬಂದು ಅವರೊಡನೆ ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಹೀಗೆ ಸುದೀರ್ಘವಾಗಿ ಚರ್ಚಿಸಿ ಲಕೋಟೆಯೊಂದನ್ನು ನೀಡಿ ಹಿಂದಿರುಗಿದರು, ಮುಂಜಾನೆ ಭೇಟಿಯಾದಾಗ ಶ್ರೀಗಳು ಹೇಳಿದರು, “ನಿಮ್ಮ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ನಿನ್ನೆ ಸಂಜೆ ಭೇಟಿಯಾಗಿದ್ದರು. ಹೊರಡುವಾಗ ಈ ಲಕೋಟೆಯನ್ನು ನೀಡಿದರು. ಲೇಖನವಿರಬಹುದೆಂದು ಭಾವಿಸಿ ಸ್ವೀಕರಿಸಿದೆ. ಆದರೆ ಅದರಲ್ಲಿ 200 ರೂ. ಇಟ್ಟಿದ್ದರು. ನೀವು ಇದನ್ನು ಹಿಂದಿರುಗಿಸಿ, ಅವಶ್ಯಕತೆ ಇಲ್ಲವೆಂದು ಹಾಗೂ ಅನ್ಯಥಾ ಭಾವಿಸಬಾರದೆಂದು ಹೇಳಿ” ಎಂದರು. ಶ್ರೀಗಳು ಹಣ ಸ್ವೀಕರಿಸಿದವರಲ್ಲ; ಅದರ ಅವಶ್ಯಕತೆ ಇಲ್ಲ ಎಂಬ ದೃಢ ನಿಶ್ಚಯದಿಂದ ಬದುಕಿ ತೋರಿಸಿದ ಅಪರೂಪದ ಸಂತರು. ವಿಶ್ವವಿದ್ಯಾನಿಲಯದ ವತಿಯಿಂದ ‘ಯೋಗೋಪನಿಷತ್’ ಕುರಿತಾಗಿ ಸಪ್ತಾಹ ನಡೆಯಿತು, ಶ್ರೀಗಳು ಏಳು ದಿನಗಳು ಸಂಜೆ ಉಪನ್ಯಾಸ ನೀಡಿದರು. ಕಡೆಯ ದಿನ ಸನ್ಮಾನಿಸಿದಾಗ ಶ್ರೀಗಳಿಗೆ ಸಂಭಾವನೆ ನೀಡಿದಾಗಲೂ ಅವಶ್ಯಕತೆ ಇಲ್ಲವೆಂದು ವೇದಿಕೆಯಲ್ಲೇ ಹೇಳಿ ಹಣವನ್ನು ಹಿಂತೆಗೆದುಕೊಳ್ಳುವಂತೆ ಸೂಚಿಸಿದರು.

ಶ್ರೀಗಳಿಗೆ ಚಾಮುಂಡಿ ಬೆಟ್ಟ ಹಾಗೂ ಸುತ್ತೂರು ಶ್ರೀಕ್ಷೇತ್ರದ ಪರಿಸರ ಅಚ್ಚು-ಮೆಚ್ಚು. ಸುತ್ತೂರಿನಲ್ಲಿ ಮುಂಜಾನೆ ಕಾಲುನಡಿಗೆಯಲ್ಲಿ ಬಹಳ ಹೊತ್ತು ಸುತ್ತಾಡುವ

ಅಭ್ಯಾಸ. ಹೀಗೆ ಸುತ್ತಾಡುವಾಗ ಒಮ್ಮೆ ಅವರು ಧರಿಸಿದ್ದ ಬೂಟು ಸ್ವಲ್ಪ ಹರಿದಿದ್ದು, ಆಗಾಗ್ಗೆ ಭದ್ರವಾಗಿ ಕೂರಿಸಲು ಪ್ರಯತ್ನಿಸುತ್ತಿದ್ದರು. ಮಾರನೆಯ ದಿನ ಭಕ್ತರೊಬ್ಬರು 'ಹೊಸ ಬೂಟುಗಳನ್ನು ತಂದಿರುವೆ' ಎಂದರು. 'ಎಲ್ಲಿ ನೋಡೋಣ. ತೆಗೆಯಿರಿ' ಎಂದು ಅದರ ರಚನೆ, ವಿನ್ಯಾಸ, ಬಳಸಿದ ವಸ್ತುಗಳನ್ನು ಗಮನಿಸಿ ಹೇಳಿದರು: 'ಇದನ್ನೇಕೆ ತಂದಿರುವಿರಿ?' ಎಂದು ಕೇಳಿದರು. 'ತಾವು ಧರಿಸಿರುವ ಬೂಟುಗಳು ಹರಿದಿವೆ, ಆದ್ದರಿಂದ ಹೊಸದನ್ನು ತಂದಿದ್ದೇನೆ' ಎಂದರು. 'ನಾನು ತರಲು ಹೇಳಿರಲಿಲ್ಲ. ಈಗ ಒಂದು ಕೆಲಸ ಮಾಡುವಿರಂತೆ. ನಿಮ್ಮ ವಿಶ್ವವಿದ್ಯಾನಿಲಯದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿರುತ್ತಾರೆ, ಆಟ–ಓಟದಲ್ಲಿ ಭಾಗವಹಿಸುವವರಿಗೆ ಇದರ ಅಗತ್ಯವಿದೆ. ನೀವು ಈ ಬೂಟುಗಳನ್ನು ಅವರಿಗೆ ನೀಡಿ. ನೋಡಿ, ನಾನು ಧರಿಸಿರುವ ಬೂಟುಗಳು ಇನ್ನೂ ಒಂದು ವರುಷ ಬಾಳಿಕೆ ಬರುವುದು. ಈಗ ಬಿಸಾಡುವ ಅಗತ್ಯವಿಲ್ಲ' ಎಂಬುದಾಗಿ ಅವರಿಗೆ ಮನದಟ್ಟು ಮಾಡಿ ಕಳುಹಿಸಿದರು.

ಶ್ರೀಗಳು ನಿರಂತರ ಓದುವ ಹವ್ಯಾಸ ಬೆಳೆಸಿಕೊಂಡಿದ್ದವರು. ಗ್ರಂಥ, ಪತ್ರಿಕೆಗಳೆಂದರೆ ಅವರಿಗೆ ಬಲು ಪ್ರೀತಿ. Reading is an adventure that never ends ಎನ್ನುವಂತೆ ನಿತ್ಯದ ಓದುವಿಕೆಯಲ್ಲಿ ಗಮನಿಸಬಹುದಾದ ಸಂಗತಿ. ಅದರಲ್ಲೂ ವಿಜ್ಞಾನ ಹಾಗೂ ತಂತ್ರಜ್ಞಾನ ವಿಷಯ ಕ್ಷೇತ್ರಗಳಲ್ಲಿ ಅವರಿಗೆ ವಿಶೇಷ ಆಸಕ್ತಿ. ಭೂಗೋಳಶಾಸ್ತ್ರ ಹಾಗೂ ಮನೋವಿಜ್ಞಾನ ಕುರಿತು ಆಸಕ್ತಿಯಿಂದ ಬಹಳಷ್ಟು ಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಆಯಾ ವಿಷಯಗಳ ಕ್ಷೇತ್ರದಲ್ಲಿ ತೊಡಗಿದ್ದ ವಿಜ್ಞಾನಿಗಳು, ಸಂಶೋಧಕರು ಹಾಗೂ ಪ್ರಾಧ್ಯಾಪಕರೊಡನೆ ಸುದೀರ್ಘವಾಗಿ ಚರ್ಚಿಸುತ್ತಾ ಸಂತಸ ಪಡುತ್ತಿದ್ದ ಕ್ಷಣಗಳು ಬಹಳಷ್ಟು.

ಭಕ್ತರು ತರುತ್ತಿದ್ದ ಗ್ರಂಥ, ಪತ್ರಿಕೆಗಳನ್ನು ಓದಿ ಅನಂತರ ಎಚ್ಚರಿಕೆಯಿಂದ ಎಲ್ಲಾ ಗ್ರಂಥ, ಪತ್ರಿಕೆಗಳನ್ನು 3–4 ದಿನಗಳಲ್ಲಿ ಹಿಂದಿರುಗಿಸುತ್ತಿದ್ದರು. ಕೆಲವನ್ನು ಆಳವಾಗಿ ಮತ್ತೆ ಕೆಲವನ್ನು ಅಲ್ಲಲ್ಲಿ ಓದಿ ಹಿಂದಿರುಗಿಸುತ್ತಿದ್ದರು. ಗ್ರಂಥಗಳನ್ನು ಹೆಚ್ಚು ಸಮಯ ತಮ್ಮಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ಹಿಂದಿರುಗಿಸುವಾಗ ಹೇಳುತ್ತಿದ್ದುದುಂಟು: "ಎಲ್ಲ ಗ್ರಂಥಗಳು ಹಿಂದಿರುಗಿ ಬಂದಿವೆಯೆ ನೋಡಿಕೊಳ್ಳಿ". ಗ್ರಂಥಾಲಯದ ಯಾವ ಪುಸ್ತಕವೂ ಹಿಂದಿರುಗಿಸದೆ ತಮ್ಮಲ್ಲಿ ಉಳಿಯಬಾರದೆಂದು ವಿಶೇಷ ಗಮನ ಹರಿಸುತ್ತಿದ್ದರು.

ಧಾರವಾಡದಲ್ಲಿ ತಂಗಿದ್ದಾಗ ಭಕ್ತರೊಬ್ಬರು ಗ್ರಂಥಗಳನ್ನು ತಂದುಕೊಟ್ಟರು. ಶ್ರೀಗಳು ಮೂರು ದಿನಗಳ ಬಳಿಕ ಹಿಂದಿರುಗಿಸಿದರು. ಆಗ ಭಕ್ತರು ಹೇಳಿದ್ದು, "ತಮಗೆಂದು ತಂದ ಗ್ರಂಥಗಳಿವು, ಸ್ವೀಕರಿಸಿ". ಶ್ರೀಗಳು ಹೇಳಿದರು: "ನಮಗೆ ಇವೆಲ್ಲವನ್ನೂ ಇಟ್ಟುಕೊಳ್ಳಲು ಸ್ಥಳವಿಲ್ಲ. ನಾವು ಒಂದೂರಿಂದ ಇನ್ನೊಂದೂರಿಗೆ ಪ್ರಯಾಣಿಸುವವರು. ಇವೆಲ್ಲಾ ಹೊರೆಯಾಗುವುದು. ನೋಡಿ, ನಮ್ಮದು ಇಷ್ಟೇ ಲಗೇಜು" ಎನ್ನುತ್ತಾ ಸಣ್ಣ ಕೈಚೀಲವೊಂದನ್ನು ತೋರಿಸಿ, "ಹೊರಡುವಾಗ ಐದು ನಿಮಿಷದಲ್ಲಿ ತಯಾರಾಗುತ್ತೇವೆ"

ಎಂದರು. ಅಪರಿಗ್ರಹಕ್ಕೆ ಇದೊಂದು ಸೂಕ್ತವಾದ ಉದಾಹರಣೆ ಯಾಗಿದೆ.

ಸನ್ಯಾಸಿ ಮಿತ್ರರೊಬ್ಬರು, ಶ್ರೀಗಳನ್ನು ಭೇಟಿಯಾದಾಗ ಬಹಳ ಸಂತೋಷ ವ್ಯಕ್ತಪಡಿಸುತ್ತಾ ಮಾತನಾಡತೊಡಗಿದರು; ಇಂದು ಶಂಕರ ಜಯಂತಿ ಆದಿಶಂಕರರ ಜೀವಿತಾವಧಿ ಕೇವಲ ಮೂವತ್ತೆರಡು ವರ್ಷಗಳಾದರೂ ಅವರ ಸಾಧನೆ ಅಪಾರ, ಇಂದು ವಿಶೇಷ ದಿನ, ನಾವು ಹೇಗೆ ಆಚರಿಸಬಹುದೆಂದು ಕೇಳಿದರು. ಶ್ರೀಗಳು ಶಂಕರರ ತತ್ತ್ವಗಳನ್ನು ನೆನಪಿಸುತ್ತಾ, 'ಕರತಲ ಭಿಕ್ಷೆ, ತರುತಲ ವಾಸ' ಒಂದು ದಿನದ ಮಟ್ಟಿಗೆ ಆಚರಿಸೋಣವೆ ಎಂದು ಚರ್ಚಿಸುತ್ತಾ ಇಬ್ಬರೂ ಕೇವಲ ಅಂಗೈಯಷ್ಟೆ ಆಹಾರ ಸೇವಿಸಿ ಮರದ ಕೆಳಗೆ ಕುಳಿತರು. ಸನ್ಯಾಸಿಗಳು "ಎಲ್ಲಾ ಸರಿ, ಆದರೆ ನನ್ನ ದೊಡ್ಡ ಶರೀರಕ್ಕೆ ಆಹಾರ ಸಾಲದೆ ಹೋಯಿತು" ಎನ್ನುತ್ತಾ ನಕ್ಕರು.

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಯಾವ ಊರಿನಲ್ಲಿ ತಂಗಿದ್ದರೂ ಮುಂಜಾನೆ ನಡಿಗೆ ಮುಗಿಸಿ 6.30 ರಿಂದ 7.30ರವರೆಗೆ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ತೊಡಗುತ್ತಿದ್ದರು. ಒಂದು ಸಮಸ್ಯೆ ಅಥವಾ ವಿಷಯ ಕುರಿತು ಚರ್ಚೆ ನಡೆಸುವರು. ಎಲ್ಲರೂ ಭಾಗವಹಿಸಿ ಮುಕ್ತವಾಗಿ ಅನಿಸಿಕೆಗಳನ್ನು ಹಂಚಿಕೊಳ್ಳಲು ಹೇಳುವರು. ಚರ್ಚೆಯಲ್ಲಿ ಭಾಗವಹಿಸುವಾಗ ಅಗತ್ಯವಾಗಿ ಪಾಲಿಸಬೇಕಾದ ನಿಯಮಗಳನ್ನು ಹೇಳಿ ಅಗಾಗ್ಗೆ ತಪ್ಪುಗಳನ್ನು ಸೌಮ್ಯ ನುಡಿಗಳಿಂದ ತಿದ್ದುತ್ತಿದ್ದರು. ಅವರು ಹೇಳುತ್ತಿದ್ದ ನಿಯಮಗಳೆಂದರೆ: ಎಲ್ಲರೂ ಭಾಗವಹಿಸಲು ಅನುಕೂಲವಾಗುವಂತೆ ಸರಳ ವಿಷಯದ ಆಯ್ಕೆ, 2. ಅನಿಸಿಕೆಗಳನ್ನು ಹೇಳುವವರು ಸಂಕ್ಷಿಪ್ತವಾಗಿ ಹೇಳಿ, ಇತರರಿಗೂ ಅವಕಾಶ ಮಾಡಿಕೊಡಬೇಕು, 3. ವಿಷಯಾಂತರವಾಗದಂತೆ ಎಚ್ಚರ ವಹಿಸಬೇಕು, 4. ಒಬ್ಬರು ಮಾತನಾಡುವಾಗ ಮಧ್ಯೆ ಮತ್ತೊಬ್ಬರು ಮಾತನಾಡಬಾರದು, 5. ಖಂಡನೆ–ಮಂಡನೆಗೆ ಅವಕಾಶವಿಲ್ಲ, 6. ವಿನೋದಕ್ಕೆ ಅವಕಾಶ ಉಂಟು, 7. ತೆರೆದ ಮನಸ್ಸಿನಿಂದ ಅನಿಸಿಕೆಗಳನ್ನು ಹೇಳಬೇಕು. 8. ಪರ–ವಿರೋಧ ಚರ್ಚೆಗೆ ಅವಕಾಶ ಉಂಟು, 9. ಸರಳ, ಸ್ಪಷ್ಟ ಭಾಷೆ ಬಳಸಿ, ಕನ್ನಡ ಶಬ್ದಗಳನ್ನೇ ಬಳಸಬೇಕು. "ಇತರ ಭಾಷೆಯ ಶಬ್ದಗಳನ್ನು ಬಳಸಬೇಡಿ. ಕನ್ನಡ ಶಬ್ದಗಳಿಗಾಗಿ ಹುಡುಕಾಡಿ, ಸೂಕ್ತವಾದ ಪದಗಳನ್ನು ಬಳಸಿ, ಕನ್ನಡ ಶ್ರೀಮಂತ ಭಾಷೆ" ಎನ್ನುತ್ತಿದ್ದರು.

ಭಾರತೀಯ ತತ್ತ್ವಶಾಸ್ತ್ರ, ಅದರಲ್ಲೂ ಷಡ್‌ದರ್ಶನವನ್ನು ಶ್ರೀಗಳಿಂದ ಕೇಳಿದವರು ಪುಣ್ಯವಂತರು. ಅವರ ಮಾತುಗಳು, ವಿವರಣೆ ಸರಳ, ಸ್ಪಷ್ಟ, ನಿಖರ ಹಾಗೂ ಮನಮುಟ್ಟುವಂಥ ಸುಂದರವಾದ ವಿವರಣೆ. ಪೂರ್ವಮೀಮಾಂಸಾ, ಸಾಂಖ್ಯದರ್ಶನ ಹಾಗೂ ಯೋಗಸೂತ್ರಗಳನ್ನು ಅದ್ಭುತವಾಗಿ ವಿವರಿಸಿ ಹೇಳಿರುವರು. ಯುವ ಸನ್ಯಾಸಿಗಳಿಗೆ ಪಾಠ ಮಾಡಿರುವರು. ದರ್ಶನಗಳನ್ನು ವರ್ಷಪೂರ್ತಿ ವಿವರಿಸಬಲ್ಲರು. ಅದನ್ನೇ ಒಂದು ಗಂಟೆಯಲ್ಲಿ ಹೇಳಬಲ್ಲರು. ಅಥವಾ, ಹತ್ತು ನಿಮಿಷದಲ್ಲೂ ಹೇಳಬಲ್ಲರು. ಅದರ ತಿರುಳನ್ನು ಅಥವಾ ಸಾರಾಂಶವನ್ನು ಒಂದು ಕ್ಷಣದಲ್ಲಿ ಹೇಳಬಲ್ಲ ಅಪರೂಪದ

ಸಾಮರ್ಥ್ಯ ಅವರದು. ಅದಕ್ಕೇನೂ ಸಿದ್ಧತೆಯ ಆವಶ್ಯಕತೆ ಅವರಿಗೆ ಬೇಕಿಲ್ಲ. ಇದೇ ಅವರ ವಿಶೇಷತೆ; ಅವರೊಂದು ಜ್ಞಾನದ ಸೆಲೆ.

ಚೆನ್ನಾಗಿ ಮಾತನಾಡಬೇಕು. ಕೇಳಿದವರಿಗೆ ಪ್ರೋತ್ಸಾಹ ಉಂಟಾಗಬೇಕು, ಅವರು ಸಂತೋಷಭರಿತರಾಗಬೇಕು – ಹಾಗೆ ಮಾತನಾಡುವ ಕಲೆ ವೃದ್ಧಿಸಿಕೊಳ್ಳಬೇಕು. ನಮ್ಮ ಮಾತು ಇತರರಿಗೆ ದುಃಖವನ್ನುಂಟುಮಾಡಬಾರದು. ಹೀಯಾಳಿಸುವ ಮಾತುಗಳನ್ನು ಆಡಬಾರದು, ಮಾತೆಂಬುದು ಜ್ಯೋತಿರ್ಲಿಂಗ. ಮಾತನಾಡಲು ಒಂದು ರೀತಿ ನೀತಿ ಇದೆ. ನೀವದನ್ನು ಯಾವಾಗ ಕಲಿಯುವುದು? ಎಂಬುದಾಗಿ ಆಗಾಗ್ಗೆ ಎಚ್ಚರಿಸಿರುವುದುಂಟು.

ಪೂಜ್ಯ ಶ್ರೀಗಳು ಅದ್ಭುತವಾದ ಜ್ಞಾನದ ಸೆಲೆ, ಜ್ಞಾನದ ಕಾರಂಜಿ. ಅವರಿಂದ ಹೊಸ ಹೊಸ ಜ್ಞಾನ ಹರಿದು ಬರುತ್ತಿತ್ತು. ಹಲವಾರು ದೃಷ್ಟಿಕೋನಗಳಿಂದ ಏಕಕಾಲದಲ್ಲಿ ಚಿಂತಿಸಿ, ಗಹನವಾದ ವಿಚಾರಗಳನ್ನು ಹೇಳುತ್ತಿದ್ದರು. ವಿದ್ವಾಂಸರು ಕವಿಗಳು ಕೋಗಿಲೆ, ಹಂಸ, ನವಿಲನ್ನು ಕುರಿತು ವಿವರಿಸುವರು, ಕಾಗೆಯ ಬಗ್ಗೆ ಉಪೇಕ್ಷೆ ತೋರುವರು. ಅದರಂತೆ ಖನಿಜಸಂಪತ್ತನ್ನು ವಿವರಿಸುವಾಗ ವಜ್ರ ವೈಡೂರ್ಯ, ಚಿನ್ನ–ಬೆಳ್ಳಿ ಕುರಿತು ಹೇಳುವರು. ಸಾಧಾರಣ ಕಲ್ಲು. ಬಂಡೆಗಳ ಬಗ್ಗೆ ಉದಾಸೀನ, ಹೀಗೆ ಉದಾಸೀನಕ್ಕೆ ಒಳಗಾದ ವಸ್ತುಗಳನ್ನು, ಪ್ರಾಣಿಗಳನ್ನು ಪಕ್ಷಿಗಳನ್ನು ಕುರಿತು ಶ್ರೀಗಳು ಅವುಗಳಿಂದಲೂ ಮಾನವ ಕಲಿಯಬೇಕಾದದ್ದೇನು, ಅವುಗಳ ಮಹತ್ವವೇನು ಎಂಬುದನ್ನು ಸ್ವಾರಸ್ಯವಾಗಿ ಹೇಳುತ್ತಿದ್ದರು.

ಬಣ್ಣಗಳನ್ನು ಕುರಿತಾಗಿ ಹೇಳುವಾಗ ಹಳದಿ–ಮಂಗಳಕರ, ನೀಲಿ–ಪ್ರಶಾಂತತೆ ಹಸಿರು–ಸಮೃದ್ಧಿ, ಬಿಳಿ–ಶುಭ್ರತೆ, ಕರಿ–ಶೋಕಸೂಚಕ ಎಂಬುದಾಗಿ ಹೇಳಿದಾಗ ಶ್ರೀಗಳು ಪ್ರಾರಂಭಿಸುವುದು ಹೀಗೆ: ಕಪ್ಪು ಬಣ್ಣ ಸೌಂದರ್ಯಕ್ಕೆ ಮೆರುಗನ್ನು ನೀಡುತ್ತದೆ, ನಮ್ಮ ಹುಬ್ಬು ಮತ್ತು ತಲೆಕೂದಲು ಕಪ್ಪಾಗಿರುವುದರಿಂದ ಜನರು ನೀವು ಸುಂದರವಾಗಿರುವಿರಿ ಎನ್ನುವರು. ಇನ್ಯಾವ ಬಣ್ಣ ಇದ್ದರೂ ನಮ್ಮನ್ನು ಸುಂದರವಾಗಿರುವಿರಿ ಎನ್ನಲಾಗದು. ತಮ್ಮ ಸೌಂದರ್ಯಕ್ಕೆ ಮೆರುಗನ್ನು ನೀಡುತ್ತದೆ.

ಜೋಕಾಲಿ ಕುರಿತಾಗಿ "ಅದು ಒಮ್ಮೆ ಮೇಲೇರುವುದು. ಅನಂತರ ತಾನಾಗೇ ಕೆಳಗಿಳಿದು ಬರುವುದು. ನಾವೂ ಸಹ ಬದುಕಿನಲ್ಲಿ ಮೇಲೇರಿ, ಕೆಳಗಿಳಿದುಬರುತ್ತೇವೆ. ನೋಡುವವರು ತಾವು ಕೂತಿದ್ದು ಸಾಕು, ಇಳಿಯಿರಿ ನಾವು ಕೂರುತ್ತೇವೆ ಎಂದು ನಮ್ಮನ್ನು ಕೆಳಗಿಳಿಸುವರು. ಮನೆಯಲ್ಲೂ ಅವರು ಹೀಗೆಯೇ ಇಳಿಸಿ ಕೂರಿಸುವರು. ಕಛೇರಿಯಲ್ಲೂ ನಿವೃತ್ತಿಗೊಳಿಸಿ ಕೂರಿಸುವರು. ಇದು ಇಳಿಯುವ ಕುರ್ಚಿ ಎಂಬುದಾಗಿ ಮೊದಲೇ ಅರಿತು ಕೂತರೆ ತಾಪವಾಗುವುದಿಲ್ಲ" ಎಂಬುದಾಗಿ ಆಗಾಗ್ಗೆ ಶ್ರೀಗಳು ಹೇಳುತ್ತಿದ್ದುದುಂಟು.

ಬೇರುಗಳನ್ನು ಕುರಿತು ಸ್ವಾರಸ್ಯಕರವಾಗಿ ಹೇಳಿರುವರು. ಬೇರು ಮರಕ್ಕೆ ಪೋಷಕಾಂಶಗಳನ್ನು ಒದಗಿಸಿ ಸಂರಕ್ಷಿಸುವುದು, ಮೇಲಿನ ಹೂ, ಹಣ್ಣುಗಳು ದೇವರಿಗೆ ಅರ್ಪಿತ, ಆದರೆ ಬೇರಿಗೆ ಅಂದ–ಚೆಂದವಿಲ್ಲ, ಗಂಧವಿಲ್ಲ, ರೂಪಿಲ್ಲ. ಆದರೂ ಅದಕ್ಕೆ ನಾನತ್ವವಿಲ್ಲ. ಅಗೋಚರವಾಗಿದ್ದುಕೊಂಡೇ ಇಡೀ ಮರವನ್ನು ಭದ್ರವಾಗಿ ಎತ್ತಿ ನಿಲ್ಲಿಸಿರುತ್ತದೆ. ಅದರಂತೆ ದೇವರೂ ಅಗೋಚರನಾಗಿ ಜಗತ್ತನ್ನು ಸಂರಕ್ಷಿಸುವನು, ಎತ್ತಿ ಹಿಡಿದಿರುವನು. ಮನೆಯೊಡತಿಯೂ ಬಿಡುವಿಲ್ಲದೆ ಶ್ರಮಿಸಿ ಇಡೀ ಕುಟುಂಬವನ್ನು ರಕ್ಷಿಸಿ ಭದ್ರವಾಗಿ ಎತ್ತಿ ಹಿಡಿದಿರುತ್ತಾಳೆ. ಇವರೆಲ್ಲರೂ ಮೆಚ್ಚಲೇಬೇಕಾದ ಜವಾಬ್ದಾರಿಯುತ ಕರ್ತವ್ಯದಲ್ಲಿ ತೊಡಗಿರುವರು.

ಇಡೀ ಜಗತ್ತು ಇಂದು ನಕಲಿನ ಆಯಾಮವಾಗಿದೆ. ಮಕ್ಕಳಿಗೆ ಪೋಷಕರು ಹೇಳುವರು: ಆತನಂತೆ ನೀನು ಬುದ್ಧಿವಂತನಾಗಬೇಕೆಂದು. ವಿದ್ವಾಂಸರಿಗೆ ಹೇಳುವರು ನೀವು ಶಂಕರಾಚಾರ್ಯರಂತೆ ಪ್ರವಚನ ಮಾಡಬೇಕೆಂದು, ಹಾಗೆಯೇ ಹೇಳುವರು ನೀವು ವಿಶ್ವೇಶ್ವರಯ್ಯನವರಂತೆ ನಡೆಯಬೇಕು, ತೆಂಡೂಲ್ಕರನಂತೆ ಆಟಗಾರನಾಗಬೇಕೆಂದು ಹೇಳುವರು. ಇವೆಲ್ಲಾ ನಕಲಿನ ಪ್ರಯತ್ನ. ಚೆನ್ನಾಗಿ ನಕಲು ಮಾಡುವ ಕೌಶಲವಿದ್ದಲ್ಲಿ ಸಮಾಜ ಗೌರವಿಸುವುದು ಮತ್ತು ಪ್ರಶಸ್ತಿ ನೀಡುವುದು. ಇದೆಲ್ಲಾ ನಕಲಿನ ಆಯಾಮವಾಗಿದೆ.

ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ದೈವೀಗುಣಗಳ ಸಾಕಾರಮೂರ್ತಿಗಳು. ಪತಂಜಲಿ ಮಹರ್ಷಿ ಯೋಗಸೂತ್ರದಲ್ಲಿ ಹೇಳಿರುವ ಯೋಗಿಯ ಹತ್ತೂ ಲಕ್ಷಣಗಳು ಶ್ರೀಗಳಿಗೆ ಸ್ವಾಭಾವಿಕವಾಗಿ ಮೈಗೂಡಿತ್ತು ಎಂಬುದು ವಿಶೇಷ ಸಂಗತಿ, ಅವೆಂದರೆ ಅಹಿಂಸೆ, ಸತ್ಯಪಾಲನೆ, ಅಸ್ತೇಯ, ಅಪರಿಗ್ರಹ, ಇಂದ್ರಿಯನಿಗ್ರಹ, ಸ್ವಚ್ಛತೆ, ಸಂತೋಷ, ಸ್ವಾಧ್ಯಾಯ, ತಪಸ್ಸು, ಈಶ್ವರಪ್ರಣಿಧಾನ.

ಶ್ರೀಗಳನ್ನು ಮಡಿ, ಮೈಲಿಗೆ ಕುರಿತಾಗಿ ಕೇಳಿದಾಗ ಗಮನಾರ್ಹವಾದ ಅಂಶವನ್ನು ಹೇಳಿದರು: ದೇವರಿಗೆ ಮೀಸಲಾದ ವಸ್ತುಗಳನ್ನು ಅಲ್ಲೇ ಬಳಸುವುದು, ಮಡಿ ಎಂದರೆ ಅಹಿಂಸೆಯ ಪಾಲನೆ ಬಹು ಮುಖ್ಯ. ರೇಷ್ಮೆ ಬಟ್ಟೆ ಮಾಡಬೇಕಾದರೆ ಹಲವಾರು ಹುಳುಗಳು ಸಾಯುತ್ತವೆ. ಜೇನುತುಪ್ಪಕ್ಕಾಗಿ ಹಲವಾರು ಜೇನುಹುಳು ಸಾಯುತ್ತವೆ. ಹಸು ತನ್ನ ಕರು ದಷ್ಟಪುಷ್ಟವಾಗಲೆಂದು ಹಾಲು ಉತ್ಪತ್ತಿ ಮಾಡುವುದನ್ನು. ಮನುಷ್ಯ ತನಗಾಗಿ ಕಸಿದುಕೊಳ್ಳುವನು. ಬುದ್ಧಿವಂತನಾದ ಮನುಷ್ಯ ಬುದ್ಧಿಹೀನ ಪ್ರಾಣಿಗಳನ್ನು ರಕ್ಷಿಸಬೇಕೇ ವಿನಾ ಭಕ್ಷಿಸಬಾರದು. ಇದು ಮಡಿವಂತಿಕೆಯ ಅನುಷ್ಠಾನ. ಶ್ರೀಗಳು ಹೀಗೆಯೇ ಬದುಕಿದರು. ಅವರ ಶಿಷ್ಯರು ಹೇಳುವಂತೆ ಶ್ರೀಗಳು ಏನು ಹೇಳುತ್ತಿದ್ದರೋ ಅದರ ನೂರರಷ್ಟು ಹಾಗೆಯೇ ಇದ್ದು ಅನುಷ್ಠಾನಗೊಳಿಸಿರುವುದು ಅವರ ವಿಶೇಷತೆ. ಶಿಸ್ತು ಹಾಗೂ ನಿಯಮಪಾಲನೆಯಲ್ಲಿ ಅವರದೊಂದು ತಪಸ್ಸು, ಯಾವುದೇ ಕಠಿಣ ಪರಿಸ್ಥಿತಿಯಲ್ಲೂ ವಿಮುಖವಾಗದೆ ಅವನ್ನು ಪಾಲಿಸುವುದು ವಿಶೇಷ.

ಒಮ್ಮೆ ಸಮಾಧಿ ಎಂಬುದಕ್ಕೆ ವಿವರಣೆ ಬಯಸಿದಾಗ ಶ್ರೀಗಳು ಹೇಳಿದ್ದು ಹೀಗೆ – ಸುತ್ತಲೂ ನೋಡಿದಾಗ ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ಕಾಣುವುದು ಸಾಧ್ಯವಾದರೆ ಅದೇ ಸಮಾಧಿ ಅವಸ್ಥೆ. ಹಾಗೆಯೇ ಎಲ್ಲ ವಸ್ತುಗಳನ್ನೂ ನೋಡಿದಾಗ ಎಲ್ಲವೂ ಒಂದೇ ದೃಷ್ಟಿಯಲ್ಲಿ ಕಂಡುಬಂದಲ್ಲಿ ನಾವು ಸಮಾಧಿಸ್ಥಿತಿಯಲ್ಲಿದ್ದೇವೆ ಎಂದರ್ಥ. ಹೋಲಿಕೆ ಬಂದರೆ ಅದು ಬುದ್ಧಿ. ಬುದ್ಧಿ ಒಂದೇ ಸಮನಾಗಿದ್ದು, ಹೊಯ್ದಾಡದಿದ್ದಲ್ಲಿ ಸಮಾಧಿಸ್ಥಿತಿ ಎನ್ನುವರು.

ಸುತ್ತೂರು ಜಗದ್ಗುರುಗಳು ಆಗಾಗ್ಗೆ ತಮ್ಮ ಸಿಬ್ಬಂದಿಯನ್ನು ಬೇರೆಡೆ ನಡೆಯುವ ಕಾರ್ಯಕ್ರಮಗಳ ಆಯೋಜನೆ ಮತ್ತು ವ್ಯವಸ್ಥೆಗಳನ್ನು ನೋಡಿಕೊಂಡು ಬರುವಂತೆ ಕಳುಹಿಸುವುದುಂಟು. ಒಮ್ಮೆ ಪೂಜ್ಯ ಸಿದ್ಧೇಶ್ವರ ಶ್ರೀಗಳನ್ನು ಭೇಟಿಯಾದ ಸಿಬ್ಬಂದಿ ವರ್ಗದವರು, ವ್ಯವಸ್ಥೆ ನೋಡಿ ಬರಲು ಕಳುಹಿಸಿರುವರೆಂದು ಹೇಳಿದಾಗ, ಅವರು ಹೇಳಿದರು, “ಜಗದ್ಗುರುಗಳು ಎಲ್ಲವನ್ನೂ ಬಲ್ಲವರಿದ್ದಾರೆ. ಕಾರ್ಯಕ್ರಮಗಳನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಆಯೋಜಿಸುವರು. ಯಾವುದೇ ಕುಂದು–ಕೊರತೆ ಉಂಟಾಗದಂತೆ ಎಚ್ಚರ ವಹಿಸುವರು. ಹಾಗೆ ಅವರ ಸಿಬ್ಬಂದಿಗೆ ತರಬೇತಿ ನೀಡಿರುವರು. ಎಲ್ಲವನ್ನೂ ಬಲ್ಲವರಿದ್ದೂ ‘ನೋಡಿ ಬನ್ನಿ’ ಎಂಬುದಾಗಿ ಕಳುಹಿಸಿರುವರಲ್ಲ, ಅದು ಜಗದ್ಗುರುಗಳ ಹೃದಯವೈಶಾಲ್ಯತೆಯನ್ನು ತೋರುತ್ತದೆ” ಎಂದಿದ್ದರು. ಸುತ್ತೂರು ಶ್ರೀಗಳು ಪೂಜ್ಯ ಸಿದ್ಧೇಶ್ವರ ಸ್ವಾಮಿಗಳನ್ನು ಮೈಸೂರಿಗೆ ಆಹ್ವಾನಿಸಿ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರಿಂದ ಇಲ್ಲಿನ ಜನತೆಗೆ ಒಂದು ಸುಯೋಗ ಒದಗಿಬಂತು. ಜಗದ್ಗುರುಗಳಿಗೆ ಅಪಾರ ಸಂಖ್ಯೆಯ ಭಕ್ತರು ಕೃತಜ್ಞತೆಯನ್ನು ಅರ್ಪಿಸಿರುವರು.

ಯೋಗಿಯ ಲಕ್ಷಣವನ್ನು ಕುರಿತು ಶ್ರೀ ನಿಜಗುಣ ಶಿವಯೋಗಿಗಳು ಒಂದು ಸುಂದರವಾದ ಮಾತನ್ನು ಹೇಳಿರುವರು.

ಕರುಣರಸದ ಕೋಡಿವರಿವ ಕಟಾಕ್ಷದ
ಪರತತ್ತ್ವವರುವುದಾಲಾಪದ
ವರಪುಣ್ಯಮಯ ಶರೀರದ ನಿರಾಭಾರಿ
ಸದ್ಗುರುವಿರಲೆನ್ನ ಮಾನಸದಲ್ಲಿ

ಅಂತಹ ಅಪರೂಪದ ಸಂತರಾದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ನಮ್ಮೆಲ್ಲರ ಮನದಾಳದಲ್ಲಿ ಸದಾಕಾಲ ವ್ಯಾಪಿಸಿರಲೆಂದು ಪ್ರಾರ್ಥಿಸುತ್ತಾ ಈ ಅವಕಾಶ ನೀಡಿದ್ದಕ್ಕಾಗಿ ಪರಮಪೂಜ್ಯ ಜಗದ್ಗುರು ಶ್ರೀ ಸುತ್ತೂರು ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿರುವೆನು.

□

# ಸಂತನೆಂದರೆ ಯಾರು?

ಕೆ.ಸಿ. ಶಿವಪ್ಪ

ಸಂತನೆಂದರೆ ಯಾರು? ದಿವ್ಯತೆಯ ಅರಿತವನು;
ಸರಳತೆಯ ಸೂತ್ರದಲಿ ಸುಖವ ಕಂಡವನು.
ಮಮತೆ ಬಂಧನ ಕಳಚಿ ಬಲು ದೂರ ನಿಂತವನು;
ಎಲ್ಲರಲಿ ಅವನೊಬ್ಬ – ಮುದ್ದುರಾಮ.

ಸಿದ್ಧನೆಂದರೆ ಯಾರು? ಮನವ ನೋಯಿಸದಾತ;
ನೂರು ನೋವನು ಸಹಿಸಿ ನಗುತಲಿರುವಾತ.
ಒಂದಾದ ನಡೆನುಡಿಗೆ ದಿಕ್ಕುದೆಸೆ ತೋರ್ವಾತ;
ಪರಮಗುರು ಆ ಸಾಧು – ಮುದ್ದುರಾಮ.

ಬೇಕುಬೇಡಗಳಿಲ್ಲ ಕೋಪತಾಪಗಳಿಲ್ಲ;
ಹುಸಿಮಾತು ಬಿರುನುಡಿಗಳೊಂದಿಲ್ಲ ಮನದಿ.
ತನ್ನದೆನುವುದನೆಲ್ಲ ಮರೆತು ನಿಂತವ ಆತ;
ಸಂತನೆಂದರೆ ಯೋಗಿ – ಮುದ್ದುರಾಮ.

ನಾ ಕಿರಿದು ನೀ ಹಿರಿದು ಎಂದವನೆ ನಿಜಯೋಗಿ;
ಜಾತಿ ಮತ ಪಥದಿಂದ ದೂರ ಅವನಾತ್ಮ.
ಸೇವಕನ ಭಾವದಲಿ ನಿಂತರದು ದಿಗ್ವಿಜಯ;
ಶರಣ ಶಿವಕಿಂಕರನೊ! – ಮುದ್ದುರಾಮ.

ಅನುಭವದ ನೆಲೆಯಿಂದ ನಿಜವರಿತ ಸಿದ್ಧನಿಗೆ
ಉಪ್ಪರಿಗೆ ಹಂಗೇನು, ಬರಿ ಗುಡಿಸಿಲೇನು?
ಕಲ್ಲು ಮಾಣಿಕವೆಲ್ಲ ನೋಟದಲಿ ಒಂದೆ ಬಗೆ;
ಅವನಾತ್ಮ ನಿರ್ಮಲವೊ! – ಮುದ್ದುರಾಮ.

ಬಿತ್ತಿ ಭಕ್ತಿಯ ಬೀಜ, ಶ್ರದ್ಧೆ ನೇಗಿಲ ಬಳಸಿ
ಉಳುಮೆ ನೀ ಮಾಡುತಿರು ದುಡಿಮೆ ಎತ್ತಿಂದ.
ತೋರು ಸರಿ ಆಸಕ್ತಿ ಮುಕ್ತಿಫಲ ಬೆಳಸಿನಲಿ;
ಯೋಗಿಪುಂಗವನಾಗು – ಮುದ್ದುರಾಮ.

□

# ಸಿದ್ಧೇಶ್ವರ ಶ್ರೀ ಸದಾಶಯ

**ಪ್ರೊ. ಮೊರಬದ ಮಲ್ಲಿಕಾರ್ಜುನ**

ಗದ್ದುಗೆಗೊಳಿಸದಿರಿ ದೇಹವನ್ನು,
ಅದು ಬೆಂಕಿಯಲ್ಲಿ ಬೆಂದು
ಬೂದಿ ಗೊಬ್ಬರವಾಗಲಿ;
ಮಾತು ಕೃತಿ
ಪುಟಕ್ಕಿಟ್ಟ ಚೊಕ್ಕ ಚಿನ್ನವಾಗಲಿ.

ಸುಟ್ಟು ಬೂದಿಯಾಗಿ,
ಹೊಸ ಚಿಗುರುಗಳಿಗೆ ಆದಿಯಾಗಿ,
ನದಿ ಸಾಗರಗಳ
ದಡದ ಹುಲ್ಲುಗರಿಕೆಗೆ
ದಟ್ಟ ಕಾನನದ ಸಸ್ಯಸಂಕುಲಕೆ
ಹೊಲ ಗದ್ದೆ ತೋಟಗಳ
ಫಸಲುಗಳ ಬೇರುಗಳಿಗೆ ಗೊಬ್ಬರವಾಗಿ,
ಕಾಂಡ ರೆಂಬೆ ಕೊಂಬೆ
ಎಲೆ ಮೊಗ್ಗು ಹೂವು
ಕಾಳು ಕಾಯಿ ಹಣ್ಣುಗಳ
ಸಾರವತ್ತಾದ ಫಲಗಳು
ಬೇಲಿ ಬಂಧನಗಳ ಹಂಗಿಲ್ಲದೆ
ಪಶು ಪಕ್ಷಿ ಕೀಟ ಮಾನವ
ಸಕಲ ಜೀವರಿಗೂ
ಸುಲಭಲಭ್ಯವಾಗಲಿ;
ಜೀವಪ್ರದಾಯಕವಾಗಲಿ.

ಬದುಕು
ಎಲ್ಲರಿಗೂ ಎಲ್ಲದಕ್ಕೂ
ಉಪಕೃತ.

ಜೀವ
ದೀಪ ತೆರೆ ಮೇಘಗಳಂತೆ
ಆರಿ ಹೋಗುವ ಮುನ್ನ
ಅಡಗಿ ಇಲ್ಲವಾಗುವ ಮುನ್ನ
ಕರಗಿ ಒಂದಾಗುವ ಮುನ್ನ
ಪ್ರಕೃತಿ ಪೋಷಿತವಾಗಿದೆ.

ಭಾವ
ಗುರುದೇವರಿಂದ ಶ್ರೀಮಂತವಾಗಿದೆ;
ನಾಡ ಹಿರಿಯರಿಂದ ಹದುಳಗೊಂಡಿದೆ.

ಪಡೆದುದನ್ನು
ಒಡೆಯನಿಗೊಪ್ಪಿಸುವುದು
ನಿಸರ್ಗವಿವೇಕ;
ಅದುವೆ ಕೃತಜ್ಞತೆ,
ಅಂತಿಮ ಅಭಿವಾದನ.

ದಯವಿಟ್ಟು
ದೇಹ ಜೀವ ಭಾವವನ್ನು
ಗದ್ದುಗೆಗೊಳಿಸದಿರಿ;
ಜಂಗಮವಾಗಿ
ಜನಮನಗಳ ಮುಟ್ಟುವಂತೆ
ಬಯಲಿನಲಿ ಹರಿಯಬಿಡಿ.

ಮಾತು
ವಿಚಾರಗಳ ಧಾತು
ಕೃತಿರೂಪದಲ್ಲಿ
ನಿರಂತರ ಹರಿಯುತಿರಲಿ...

□

# ಆಧುನಿಕ ಅಲ್ಲಮ

**ಎಸ್.ಎನ್. ಸಿಂಪಿಗೇರ**

ಗುರುವೆ, ನಿಮ್ಮಾಶೆಗಳ ಪರಿಯನೆಂತು
ಬಣ್ಣಿಸಲಿ? ಎನ್ನ ಮಂದಮತಿಯಿಂದ,
ನಿಮ್ಮ ನಶ್ವರ ದೇಹ ಪಂಚ ಮಹಾಭೂತಗಳಲಿ,
ಲೀನವಾಗಿದೆ ಕೊನೆಯ ಆಶೆಯಂತೆ.

ಆಧುನಿಕ ಅಲ್ಲಮಪ್ರಭುವಾಗಿ ಜೀವಿಸಿ,
ದೇಶಗಳ ಸಂಚರಿಸಿ ಬೋಧಿಸಿದಿರಿ ಜ್ಞಾನ.
ದೀನದಲಿತರ ಬಂಧು, ಜ್ಞಾನ ನೀಡುವ ಸಿಂಧು,
ಜೋಡಿಸಿದೆ ನೆಲ–ಮುಗಿಲುಗಳ ಕೂಡಿಸಿ

ನಿಮ್ಮ ರೂಪ ನಮ್ಮ ಕಣ್ಣಲಿ, ವಚನಸುಧೆ ಕಿವಿಯಲಿ,
ಮೂರ್ತಿರೂಪ ಮನದಲಿದೆ, ಮರೆಯಾಗದಂತೆ,
ಮನ ಮಗುವಿನಂತೆ, ಅಳುತಿದೆ ತಿಳಿಯದಂತೆ,
ಮಾತು ಬಾರದ ನುಡಿ, ತುಟಿಗಳ ಮೇಲಿವೆ.

ಭೂಮಾತೆಗೆ ನೋವಾಗದಂತೆ ನಡೆದವರು ನೀವು,
ಹುಳಕೆ ನೋವಾಗುವದೆಂದು, ಜೇನ ತಿನ್ನದ ಮನವು.
ಮನುಕುಲ, ಜಲ ಒಂದೇ, ವಾಯು ಉಸಿರಿಗೆ ಒಂದೇ,
ಹೂವು ಮುಡಿಗೇರಲಿಲ್ಲ, ಪ್ರವಚನ ಎಂದೂ ಬಾಡುವುದಿಲ್ಲ.

ನರರ ನೋಟಕೆ ನೀವು, ಮಾನವರೂಪ ತಾಳಿದವರು,
ಬಯಲಿನಲಿ ಬಯಲಾದವರು, ನೀರು ಹಾಲಿನಲಿ ಬೆರೆತಂತೆ,
ನಿರಾಭಾರಿ ನಿರಂಜನಮೂರ್ತಿ ಭುವಿಗೆ ಆವಿರ್ಭವಿಸಿ,
ಬೆಳಕಿನಲಿ ಬೆಳಕಾಗಿ, ಪರಂಜ್ಯೋತಿಯಲಿ ಲೀನವಾದಿರಿ.

# ಸಂತಶಿರೋಮಣಿ

ಡಾ ಚಂದ್ರಶೇಖರಮೂರ್ತಿ (ಚೆನ್ನವೀರ)

ಸಂತನೆಂದರೆ ಇವನೇ ಮಹಾಸಂತ
ಜ್ಞಾನಯೋಗಾಶ್ರಮದ ಗುರು ಸಿದ್ಧಸಂತ
ಸರಳ ಜೀವನ ನಡೆಸಿ ಜ್ಞಾನವ ಬಿತ್ತಿದಂತ
ನಾನೇನೂ ಅಲ್ಲವೆಂದು ಮೌನದಿ ಇದ್ದಂತ

ಮಹಾಜ್ಞಾನಿಯಾದರೂ ಗರ್ವ ಪಡದವ
ಜ್ಞಾನಾರ್ಜನೆಯನು ಸತತವು ಮಾಡಿದವ
ಜ್ಞಾನಪ್ರಸಾರವ ಮೌನದಿ ಮಾಡಿದವ
ಜ್ಞಾನವೇ ಮಿಗಿಲೆಂದು ಲೋಕಕ್ಕೇ ಸಾರಿದವ

ಏನ ಕೊಟ್ಟರು ತನಗೆ ಬೇಡವೆಂದವನಿವ
ಹೊಗಳಿಕೆಗಳಿಂದ ಬಹು ದೂರ ಉಳಿದವ
ಲೋಕದೊಳಗೇ ಇದ್ದು ಲೋಕಕ್ಕೆ ಅಂಟದವ
ಇವನೇ ನಮ್ಮ ಗುರುಸಿದ್ಧೇಶನಿವ

ಭಕ್ತರನುದ್ಧರಿಸಲೀ ಬುವಿಯಲ್ಲಿ ಜನಿಸಿದವ
ಸಂತಶಿರೋಮಣಿ ಗುರು ಸಿದ್ಧೇಶನಿವ
ಜ್ಞಾನದಾನವನು ಅನುಕ್ಷಣ ನೀಡಿದವ
ಜ್ಞಾನದಾನಕೆ ಸದಾ ಟೊಂಕಕಟ್ಟಿ ನಿಂದವ

ಭೋಗ ಬಯಸಲಿಲ್ಲ ಕಾಯಕ ಬಿಡಲಿಲ್ಲ
ಶ್ವೇತವಸ್ತ್ರ ಬಿಡಲಿಲ್ಲ ಕಾವಿ ಧರಿಸಲಿಲ್ಲ
ಮಿತಭಾಷಿ ಮಿತಾಹಾರಿ ಅಮಿತಜ್ಞಾನಿ
ನಮ್ಮ ಗುರುಸಿದ್ಧ ಜ್ಞಾನಿ

ಕಾಂಚಾಣ ಬೇಡದವ ಕಾಮನೆಯ ಬಿಟ್ಟವ
ಬೇಡ ಬೇಡಾ ಎಂದು ಏನನ್ನೂ ಬೇಡದವ
ನೀಡು ನೀಡು ಎಂದು ಜ್ಞಾನವನು ನೀಡಿದವ
ನಮ್ಮೀ ಗುರುಸಿದ್ಧ ನಿಜ ಸಂತನಿವ

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಪ್ರಮುಖ್ ಸ್ವಾಮಿ ಮಹಾರಾಜ್‌ರ ವಿನಮ್ರ ಸೇವೆ ಸ್ಮರಣೀಯವಾದುದು

ಪ್ರಮುಖ್ ಸ್ವಾಮಿ ಮಹಾರಾಜ್‌ರವರ ವಿನಮ್ರ ಸೇವೆ ಸ್ಮರಣೀಯವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 29ರಂದು ಅಹಮದಾಬಾದ್‌ನ ಸ್ವಾಮಿ ನಾರಾಯಣ್ ಸಂಸ್ಥೆಯ ಪ್ರಮುಖ್ ಸ್ವಾಮಿ ಮಹಾರಾಜರ ಶತಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸ್ವಾಮಿ ನಾರಾಯಣರು ಮತ್ತು ಪ್ರಮುಖ್ ಸ್ವಾಮಿಗಳವರ ಸಂದೇಶಗಳು ಮನೆಮಾತಾಗಿವೆ. ಅವರ ಜೀವನ ಸಂದೇಶಗಳನ್ನು ವಿವಿಧ ಕಲಾಕೃತಿಗಳ ಮೂಲಕ ಈ ವರ್ಣಮಯ ನಗರದಲ್ಲಿ ಕಟ್ಟಿಕೊಡಲಾಗಿದೆ. ಸ್ವಾಮಿ ನಾರಾಯಣರು ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದರು. ಅದೇ ರೀತಿಯ ಕಾರ್ಯಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರಲಾಗಿದೆ. ಪ್ರಮುಖ್ ಸ್ವಾಮೀಜಿಯವರು ಪ್ರಪಂಚದಾದ್ಯಂತ ಸಾವಿರದ ನೂರಕ್ಕೂ ಹೆಚ್ಚು ಸುಂದರವಾದ ವಾಸ್ತುಶಿಲ್ಪವನ್ನು ಹೊಂದಿರುವ ದೇವಾಲಯಗಳನ್ನು ನಿರ್ಮಿಸಿರುವುದು ಅವರ ಕತೃತ್ವಶಕ್ತಿಗೆ ಸಾಕ್ಷಿ. ಅವೆಲ್ಲವೂ ಭಾರತೀಯ ಕಲೆ, ಸಂಸ್ಕೃತಿ ಮತ್ತು ಧರ್ಮದ ಮೌಲ್ಯಗಳನ್ನು ಸಂಕೇತಿಸುತ್ತವೆ. ಪ್ರಮುಖ್ ಸ್ವಾಮೀಜಿಯವರು ವಿನಮ್ರವಾದ ನಿಸ್ವಾರ್ಥ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದ್ದಾರೆ ಎಂದು ಹೇಳಿದರು.

ಸ್ವಾಮಿ ನಾರಾಯಣ್ ಸಂಸ್ಥಾದ ಶ್ರೀ ಮಹಾಂತ್ ಸ್ವಾಮಿ ಮಹಾರಾಜ್‌ರವರು, ಕುಟುಂಬಗಳಲ್ಲಿನ ಐಕ್ಯತೆಯನ್ನು ಕಾಪಾಡುವ ಸಲುವಾಗಿ ಪ್ರಮುಖ್ ಸ್ವಾಮೀಜಿಯವರು ಘರ್ ಸಭೆಯನ್ನು ಆರಂಭಿಸಿದರು. ಇದರಿಂದ ಲಕ್ಷಾಂತರ ಕುಟುಂಬಗಳು ಪ್ರಯೋಜನ ಪಡೆದು ಶಾಂತಿಯುತವಾದ ಜೀವನ ನಡೆಸುತ್ತಿದ್ದಾರೆ. ಸಂವಹನದ ಕೊರತೆ ಹಾಗೂ ತಪ್ಪು ತಿಳುವಳಿಕೆಗಳು ಕುಟುಂಬದಲ್ಲಿ ಅಪಶ್ರುತಿಗೆ ಕಾರಣವಾಗುತ್ತವೆ. ಇವುಗಳನ್ನು ತೊಡೆದು ಹಾಕಿ ಘರ್ ಸಭೆಯ ಮೂಲಕ ಕುಟುಂಬದಲ್ಲಿ ಪ್ರೀತಿ ಮತ್ತು ಶಾಂತಿ ವಾತಾವರಣ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಬಿಎಪಿಎಸ್‌ನ ಶ್ರೀ ನಾರಾಯಣ ಮುನಿದಾಸ್ ಸ್ವಾಮಿಗಳು, ಶ್ರೀ ಸ್ವಯಂಪ್ರಕಾಶ್‌ದಾಸ್ ಸ್ವಾಮಿಗಳು, ರಾಜ್‌ಕೋಟ್ ರಾಮಕೃಷ್ಣ ಆಶ್ರಮದ ಸ್ವಾಮಿ ನಿಖಿಲೇಶ್ವರಾನಂದಜೀ ಮಹಾರಾಜ್, ಗೃಹ ಸಚಿವರಾದ ಶ್ರೀ ಹರ್ಷ ಸಂಘ್ವಿ, ಸಂಸದರಾದ ಶ್ರೀ ಶಕ್ತಿಸಿನ್ಹ

ಗೊಹಿಲ್, ಶಾಸಕರಾದ ಶ್ರೀ ಅಮಿತ್ ಚವ್ಡ, ಕಲಾವಿದರಾದ ಶ್ರೀ ದೀಲಿಪ್ ಜೋಷಿ, ನರ್ಸೀ ಮೊಂಜೆ ಎಜುಕೇಷನ್ ಟ್ರಸ್ಟ್‌ನ ಶ್ರೀ ಜಯರಾಜ್ ಥ್ಯಾಕರ್‌ರವರುಗಳು ಮಾತನಾಡಿದರು.

**ಮಕ್ಕಳಿಗೆ ಪೋಷಕರು ಮತ್ತು ಶಿಕ್ಷಕರೇ ನೈತಿಕತೆ ಕಲಿಸಲು ಸಾಧ್ಯ**

ಮಕ್ಕಳಿಗೆ ಮನೆಯಲ್ಲಿ ಪೋಷಕರು ಮತ್ತು ಶಾಲೆಯಲ್ಲಿ ಶಿಕ್ಷಕರೇ ನೈತಿಕತೆಯನ್ನು ಕಲಿಸುವ ಮಹತ್ತರ ಕಾರ್ಯವನ್ನು ಮಾಡಬೇಕಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಜನವರಿ 9ರಂದು ಬೆಂಗಳೂರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಶಾಲಾ ಕಾಲೇಜುಗಳಲ್ಲಿ ಮೌಲ್ಯ ಶಿಕ್ಷಣ ಅಳವಡಿಕೆ ಕುರಿತು ಆಯೋಜಿಸಿದ್ದ ದುಂಡುಮೇಜಿನ ಸಮಾಲೋಚನಾ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ನೈತಿಕತೆ ಎಂಬುದು ಕಲಿಸುವುದರಿಂದ ಬರುವಂಥದ್ದಲ್ಲ. ಅದು ವ್ಯಕ್ತಿಯ ಆಚರಣೆಯಿಂದ ಬರುತ್ತದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದಿದೆ. ಇದರಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ವಿಸ್ತರಿಸುವ ಮತ್ತು ವಿದ್ಯಾರ್ಥಿಗಳಿಗೆ ಅಯ್ಕೆ ಮಾಡಿಕೊಳ್ಳುವ ಅವಕಾಶವಿದೆ. ಇದನ್ನು ಅನುಷ್ಠಾನಕ್ಕೆ ತರುವಲ್ಲಿ ಸೂಕ್ಷ್ಮಾತಿಸೂಕ್ಷ್ಮವಾಗಿ ಚರ್ಚೆ ನಡೆಯುತ್ತಿದೆ. ಮಕ್ಕಳಿಗೆ ನೈತಿಕತೆ ಹೇಳಿಕೊಡುವುದರಿಂದ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ನೈತಿಕತೆಯನ್ನು ಹೇಗೆ ಅಳವಡಿಸಿಕೊಳ್ಳಲು ಸಾಧ್ಯ ಎಂಬುದರ ಬಗ್ಗೆ ಚರ್ಚೆ ಆಗಬೇಕಿದೆ. ನೀತಿ ಬೋಧಕರು ನೈತಿಕತೆಯನ್ನು ಅಳವಡಿಸಿಕೊಳ್ಳಬೇಕಿದೆ. ಇಂದು ಮಕ್ಕಳಿಗೆ ಮೊಬೈಲ್ ಸರ್ವಸ್ವವೂ ಆಗಿದೆ. ಅದರಿಂದ ಅವರನ್ನು ಹೊರತರಬೇಕಿದೆ ಎಂದು ಹೇಳಿದರು.

ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಕೊಡುವ ನಿಟ್ಟಿನಲ್ಲಿ ನೈತಿಕ ಶಿಕ್ಷಣ ಬೋಧನೆ ಅಳವಡಿಸಿಕೊಳ್ಳಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಇದನ್ನು ಜಾರಿ ಮಾಡಲಾಗುವುದು ಎಂದರು. ರಾಷ್ಟ್ರೀಯ ಶಿಕ್ಷಣ ನೀತಿ ರಚನಾ ಸಮಿತಿಯ ಅಧ್ಯಕ್ಷರಾದ ಡಾ. ಕಸ್ತೂರಿ ರಂಗನ್‌ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಸಿರಿಗೆರೆ ಮತ್ತು ಆದಿಚುಂಚನಗಿರಿ ಜಗದ್ಗುರುಗಳು, ಪೇಜಾವರ ಮತ್ತು ಅದಮಾರು ಮಠಗಳ ಶ್ರೀಪಾದಂಗಳು, ಸೋಂದಾ ಸ್ವರ್ಣವಲ್ಲಿ ಶ್ರೀಗಳು, ಶ್ರೀ ರವಿಶಂಕರ್ ಗುರೂಜಿ, ರಾಮಚಂದ್ರಾಪುರ, ನಾಗನೂರು, ಭಾಲ್ಕಿ ಮಠಗಳ ಶ್ರೀಗಳು, ಶ್ರೀ ಸ್ವಾಮಿ ಮುಕ್ತಿದಾನಂದಜೀ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಮೌಲಾನಾ ಅಬ್ದುಲ್ ರಶೀದ್, ಶ್ರೀ ಅಬ್ದುಲ್ ರಹೀಂ ಮತ್ತು ರೆವೆರೆಂಡ್ ಡಾ. ಪೀಟರ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮೊದಲಾದವರುಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಡಾ. ಗುರುರಾಜ ಕರ್ಜಗಿಯವರು ಕಾರ್ಯಕ್ರಮ ನಿರೂಪಿಸಿದರು.

**ಶ್ರೀಶೈಲ ದೇಶದ ಪವಿತ್ರ ಸ್ಥಳಗಳಲ್ಲೊಂದು**

ಶ್ರೀಶೈಲ ದೇಶದ ಪವಿತ್ರ ಪ್ರಸಿದ್ಧ ಯಾತ್ರಾ ಸ್ಥಳಗಳಲ್ಲೊಂದು ಎಂದು ಪರಮಪೂಜ್ಯ ಜಗದ್ಗುರುಗಳವರು ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಜಗದ್ಗುರು ಡಾ. ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ದ್ವಾದಶ ಪೀಠಾರೋಹಣ ವರ್ಧಂತಿ ಹಾಗೂ ಜನ್ಮ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ರಾಷ್ಟ್ರೀಯ ವೇದಾಂತ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಪರ್ವತ ಗಿರಿ ಶಿಖರಗಳ ನಡುವೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ನೆಲೆಸಿರುವ ಧಾರ್ಮಿಕ ಕ್ಷೇತ್ರವಿದು. ಅನೇಕ ಮಹಾತ್ಮರು ಇಲ್ಲಿ ಅನುಷ್ಠಾನ ಕೈಗೊಂಡು ಜೀವನವನ್ನು ಪಾವನಗೊಳಿಸಿಕೊಂಡಿದ್ದಾರೆ. ಸೊನ್ನಲಿಗೆ ಸಿದ್ಧರಾಮೇಶ್ವರರು, ಅಲ್ಲಮಪ್ರಭುಗಳು, ಅಕ್ಕಮಹಾದೇವಿಯವರಂತಹವರ ಕಾರಣಗಳಿಂದಲೂ ಈ ಕ್ಷೇತ್ರ ಮಹತ್ವವನ್ನು ಪಡೆದುಕೊಂಡಿದೆ. ಗ್ರೀಸ್ ದೇಶಕ್ಕಿಂತಲೂ ಮೊದಲೇ ನಮ್ಮ ದೇಶದ ಋಷಿಮುನಿಗಳು ತತ್ತ್ವಜ್ಞಾನವನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿದ್ದಾರೆ. ಮನುಷ್ಯ ಸ್ಥಿರವಾದ ಮುಕ್ತಿಯನ್ನು ಪಡೆಯುವೆಡೆಗೆ ಅಭಿಮುಖನಾಗಬೇಕು. ಶ್ರೀಪೀಠದ ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರು ಅನೇಕ ಸಾಮಾಜಿಕ ಕಾರ್ಯಗಳನ್ನು ಕೈಗೊಂಡರು. ಜೊತೆಗೆ ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮಿಗಳಂತಹ ಶ್ರೀಗಳನ್ನು ಸಮಾಜಕ್ಕೆ ನೀಡಿದ್ದು ಅಪೂರ್ವವಾದ ಕೊಡುಗೆ. ಶ್ರೀಗಳು ಮಾತೃಸ್ವರೂಪದಲ್ಲಿ ಸಮಾಜವನ್ನು ಮುನ್ನಡೆಸುತ್ತಿದ್ದಾರೆ. ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಶ್ರೀಗಳು ಅನೇಕ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡಿದ್ದನ್ನು ಸ್ಮರಿಸಬೇಕು ಎಂದು ಹೇಳಿದರು.

ಶ್ರೀ ಶ್ರೀಶೈಲ ಪೀಠದ ಜಗದ್ಗುರು ಡಾ. ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಕಾಶಿ ಪೀಠದ ನೂತನ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ವಿಆರ್‌ಎಲ್ ಸಂಸ್ಥೆಗಳ ಮುಖ್ಯಸ್ಥರಾದ ಡಾ. ವಿಜಯ ಸಂಕೇಶ್ವರರವರು ಶ್ರೀಶೈಲ ಪೀಠದಿಂದ ನಿರ್ಮಿಸಲಾಗುತ್ತಿರುವ ಯಾತ್ರಿ ನಿವಾಸಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ವಿವಿಧ ಮಠಗಳ ಶ್ರೀಗಳು, ಶ್ರೀಮತಿ ಲಲಿತಾ ವಿಜಯ ಸಂಕೇಶ್ವರ, ಉದ್ಯಮಿಗಳಾದ ಶ್ರೀ ಜಗದೀಶ ಗುಡಗುಂಟಿ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

**ಚಿಂತನೆಗಳ ಸೆಲೆಯಾಗಿದ್ದ ಸಿದ್ಧೇಶ್ವರ ಸ್ವಾಮಿಗಳು**

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಚಿಂತನೆಗಳ ಸೆಲೆಯಾಗಿದ್ದರು ಎಂದು ನಿಜಗುಣ ಸತ್ಸಂಗ ಬಳಗದ ಸದಸ್ಯರಾದ ಶ್ರೀ ಸಿ.ಪಿ. ರಾಮಶೇಷರವರು ಜನವರಿ 15ರಂದು ಮೈಸೂರು ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು, ಹೆಚ್.ವಿ. ರಾಜೀವ್ ಸ್ನೇಹ ಬಳಗ ಹಾಗು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ನಿರಾಭಾರಿ ಚರಮೂರ್ತಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು.

ಮರವೊಂದು ಶಕ್ತಿಯಾಗಿ ಬೆಳೆಯಲು ಬೇರು ಅಗೋಚರವಾಗಿರುವಂತೆ, ಮನುಷ್ಯನ ಬದುಕಿಗೆ ಶಕ್ತಿಯಾಗಿ ಪರಮಾತ್ಮ ಅಗೋಚರವಾಗಿರುತ್ತಾನೆ ಎಂಬ ಸೂಕ್ಷ್ಮ ಚಿಂತನೆಯನ್ನು ಶ್ರೀ ಸಿದ್ಧೇಶ್ವರ ಸ್ವಾಮಿಗಳು ಪ್ರಚುರಪಡಿಸಿದ್ದರು. ನಾವು ಮೇಲ್ನೋಟಕ್ಕೆ ಕಾಣುವ ಬೆಡಗು ಬಿನ್ನಾಣಗಳತ್ತ ಬೇಗ ಆಕರ್ಷಿತರಾಗುತ್ತೇವೆ. ಆದರೆ ಅಗೋಚರ ಶಕ್ತಿಗಳನ್ನು ಕಾಣದವರಾಗಿದ್ದೇವೆ ಎಂಬುದು ಅವರ ಚಿಂತನೆಯ ಅಂಶವಾಗಿತ್ತು ಎಂದು ತಿಳಿಸಿದರು.

ಘೋಡಗೇರಿಯ ಶ್ರೀ ಮಲ್ಲಯ್ಯ ಸ್ವಾಮಿಗಳು, ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು, ಕವಿಗಳಾದ ಶ್ರೀ ಕೆ.ಸಿ. ಶಿವಪ್ಪನವರು ನುಡಿನಮನ ಸಲ್ಲಿಸಿದರು. ಪ್ರೊ. ಜಿ. ಹೇಮಂತಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಹೆಚ್.ವಿ. ರಾಜೀವ್ ಸ್ವಾಗತಿಸಿದರು. ಶ್ರೀಮತಿ ಶುಭ ರಾಘವೇಂದ್ರ ಪ್ರಾರ್ಥಿಸಿದರು. ಶ್ರೀ ನಂಜುಂಡಸ್ವಾಮಿ ವಂದಿಸಿದರು. ಶ್ರೀ ಗಿರೀಶ್ ಕಾರ್ಯಕ್ರಮ ನಿರೂಪಿಸಿದರು.

□

## ಸಿದ್ಧೇಶ್ವರ ಉವಾಚ

ನಿಸರ್ಗ ದೇವತೆಯು ಕರುಣಿಸಿರುವ ನೆಲ, ಜಲ, ಗಾಳಿ, ಬೆಳಕನ್ನು ಮಲಿನವಾಗದಂತೆ ನೋಡಿಕೊಳ್ಳುವುದು ನಮ್ಮ ಧರ್ಮ. ಅದರಿಂದ ನಮ್ಮ ಬದುಕೂ ನಿರ್ಮಲವಾಗುತ್ತದೆ. ನಿಜ ಸುಖವನ್ನು ನೀಡುತ್ತದೆ. ಇದೂ ಅಹಿಂಸಾ ಧರ್ಮವೇ. ಇಂಥ ಶ್ರೇಷ್ಠವಾದ ಅಹಿಂಸಾ ಧರ್ಮವನ್ನು ಪ್ರಪಂಚದ ಎಲ್ಲ ಮಹಾತ್ಮರು ಒಪ್ಪಿಕೊಂಡಿದ್ದಾರೆ, ಅಪ್ಪಿಕೊಂಡಿದ್ದಾರೆ. ಪ್ರೀತಿಯ ಪ್ರತಿರೂಪವೇ ಧರ್ಮ. ಈ ಪ್ರೀತಿಯು ಹೃದಯ ಮಾಧುರ್ಯ. ಮಧುರವಾದ ಹೃದಯವೇ ಎಲ್ಲರನ್ನು ಒಂದುಗೂಡಿಸುತ್ತದೆ.

ಮನೆಯನ್ನು ಕಲ್ಲು ಮಣ್ಣಿನಿಂದ ಕಟ್ಟುತ್ತಾರೆ. ಆದರೆ ಮನೆತನವನ್ನು ಕಟ್ಟುವುದಕ್ಕೆ ಮಧುರವಾದ ಹೃದಯ ಬೇಕಾಗುತ್ತದೆ. ಮನೆಯನ್ನು ಒಂದೆರಡು ತಿಂಗಳಿನಲ್ಲಿ ಕಟ್ಟಿಬಿಡಬಹುದು. ಆದರೆ ಮನೆತನವನ್ನು ಹೆಜ್ಜೆ ಹೆಜ್ಜೆಗೂ ಆಯುಷ್ಯದ ಉದ್ದಕ್ಕೂ ಕಟ್ಟುತ್ತಲೇ ಇರಬೇಕಾಗುತ್ತದೆ. ಒಂದೇ ಒಂದು ದಿನ ಮೈಮರೆತು ಕಠೋರವಾಗಿ ನಡೆದುಕೊಂಡರೆ ಮನೆಗಳು, ಮನಸ್ಸುಗಳು ಒಡೆದು ಹೋಗುತ್ತವೆ. ಆದುದರಿಂದ ಪ್ರೀತಿಯ ಹೃದಯ, ಪ್ರಸನ್ನ ಮನಸ್ಸು ಇಲ್ಲದಿದ್ದರೆ ಅದೆಂದಿಗೂ ಮನೆ ಎನಿಸಲಾರದು. ಒಂದು ಮನೆಯನ್ನು ಕಟ್ಟುವುದಕ್ಕೆ ಹೃದಯ ಇಷ್ಟು ಮಧುರವಾಗಿರಬೇಕಾಗುತ್ತದೆ. ಇನ್ನು ಒಂದು ದೇಶವನ್ನು ಕಟ್ಟುವುದಕ್ಕೆ ಎಂಥ ವಿಶಾಲವಾದ, ಮಧುರವಾದ ಹೃದಯವು ಬೇಕಾಗಬಹುದು!

# ಪ್ರಸಾದ



## ಕೃತಿ-ಸ್ವೀಕೃತಿ

**ಚಿಂನೆರೆ**
**ಪ್ರೊ. ಕೆ. ಓಂಕಾರಪ್ಪ: ಬಾಳಹಾದಿ, ಇಟ್ಟಹೆಜ್ಜೆ**
ಡಾ. ಬೆಳವಾಡಿ ಮಂಜುನಾಥ
ಪ್ರ.: ಶ್ರೀ ಶಿವಕುಮಾರ ಪ್ರಕಾಶನ
ಶಿವಮೊಗ್ಗ
ಪು. 320/- ಬೆಲೆ: 250/-

**ಝಿಪ್ಪಿಗ್ರಫಿ**
ಶ್ರುತಿ ಜೈನ್
ಪ್ರ.: ಸ್ನೇಹ ಬುಕ್ ಹೌಸ್
ಶ್ರೀನಗರ, ಬೆಂಗಳೂರು
ಪು. 80/- ಬೆಲೆ: 100/-

**ಅಮುಗೆ ರಾಯಮ್ಮ**
ಡಾ. ಬಸವರಾಜ ಸಬರದ
ಪ್ರ.: ಪ್ರಸಾರಾಂಗ ಲಿಂಗಾಯತ
ವಿಶ್ವವಿದ್ಯಾಲಯ ಅನುಭವ ಮಂಟಪ
ಬಸವಕಲ್ಯಾಣ, ಬೀದರ ಜಿಲ್ಲೆ
ಪು. 84/- ಬೆಲೆ: 40/-

**ತ್ರಿಪದಿಗಳ ತೀರ್ಥ**
ರುದ್ರ ತನಯ
ಲ.ರು. ಗೊಳಸಂಗಿ (ಮಹಾಕವಿ)
ಪ್ರ.: ಬಸವಗುರು ಪ್ರಕಾಶನ
ಬಸವನ ಬಾಗೇವಾಡಿ
ಪು. 246/- ಬೆಲೆ: 150/-

**ಸಮಗ್ರಯೋಗ ಚಿಕಿತ್ಸೆ**
ಎನ್.ಎಂ. ಧರ್ಮಪ್ರಕಾಶ್
ಪಾಂಡುರಂಗಶಾಸ್ತ್ರಿ
ಪ್ರ.: ಸ್ವಾಮಿ ವಿವೇಕಾನಂದ ಯೋಗ
ಪ್ರಕಾಶನ, ಬೆಂಗಳೂರು, ಬೆಲೆ: 100/-

**ವಚನಜ್ಯೋತಿ–ಕೆಂಡದ ಹಾದಿಯ ಬೆಳಗು**
**ಆಧುನಿಕ ವಚನಗಳ ಸಂಕಲನ**
ವೀರೇಶ ಬಕುರಿ ಸೋಂಪೂರ
ಪ್ರ.: ಗಾನವಿ ಪ್ರಕಾಶನ, ಸೋಂಪೂರ
ಪು. 116/- ಬೆಲೆ: 120/-

**ಮಲೆನಾಡು ಪರಿಸರದ ಗಾದೆಗಳು**
ಡಾ. ಎಂ.ಪಿ. ಮಂಜಪ್ಪಶೆಟ್ಟಿ
ಪ್ರ.: ಮಸಗಲಿ ಪ್ರಕಾಶನ
ಟಿ.ಕೆ. ಲೇಔಟ್, ಮೈಸೂರು
ಪು. 184/- ಬೆಲೆ: 200/-

**ಸಿಂಗಾರಿ (ಕಾದಂಬರಿ)**
ಡಾ. ಸಿದ್ಧಗಂಗಯ್ಯ ಹೊಲತಾಳು
ಪ್ರ.: ಸ್ಟೂಡೆಂಟ್ ಬುಕ್ ಕಂಪನಿ
ಕೆ.ಆರ್. ಬಡಾವಣೆ, ತುಮಕೂರು
ಪು. 304/- ಬೆಲೆ: 300/-

**ವಿಶ್ವಕವಿ ರವೀಂದ್ರನಾಥ ಒಂದು : ರಂಗದರ್ಶನ**
ಡಾ. ಗೀತಾ ಸೀತಾರಾಮ್
ಪ್ರ.: ಸ್ವಾತಿ ಪ್ರಕಾಶನ
ಬೋಗಾದಿ 2ನೇ ಹಂತ, ಮೈಸೂರು
ಪು. 152/- ಬೆಲೆ: 200/-

**ಸಿದ್ಧರಾಮ ಶಿವಯೋಗಿಗಳ**
**ವಚನಾನುಭಾವ (ಭಾಗ–2)**
ಬಸವರಾಜಸ್ವಾಮಿ
ಪ್ರ.: ಶ್ರೀ ಬಸವ ಸೇವಾ ಪ್ರತಿಷ್ಠಾನ
ರಾಯಚೂರು
ಪು. 972/- ಬೆಲೆ: 800/-

**ಕನ್ನಡಪ್ರಭು**
ಪೂಜ್ಯ ಶ್ರೀ ಮನಿಪ್ರ ಅಲ್ಲಮಪ್ರಭು ಸ್ವಾಮಿಗಳ
ಗೌರವಾಭಿನಂದನ ಸಂಪುಟ
ಪ್ರೊ. ಚಂದ್ರಶೇಖರ ವಸ್ತ್ರದ
ಪ್ರ.: ಕನ್ನಡ ಜಾಗೃತಿ ಪುಸ್ತಕ ಮಾಲೆ
ಶ್ರೀ ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ
ಸಿದ್ಧಸಂಸ್ಥಾನ ಮಠ, ಚಿಂಚಣಿ
ಪು. 436/- ಬೆಲೆ: 600/-

# ಲೇಖಕರ ವಿಳಾಸ

**ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆ**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಧರ್ಮಸ್ಥಳ
ಬೆಳ್ತಂಗಡಿ ತಾಲ್ಲೂಕು
ದಕ್ಷಿಣ ಕನ್ನಡ ಜಿಲ್ಲೆ 574216

**ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು**
ಶ್ರೀ ಹಿರೇಮಠ, ಚಿಕ್ಕಪೇಟೆ
ತುಮಕೂರು 572101
ಮೊ.: 9480418241

**ಡಾ. ಶ್ರೀ ರುದ್ರಮುನಿ ದೇವರು**
ಶ್ರೀ ಅನ್ನದಾನೇಶ್ವರ ಪುರವರ ಹಿರೇಮಠ
ಆಲಮಟ್ಟಿ
ನಿಡಗುಂದಿ ತಾಲ್ಲೂಕು
ವಿಜಯಪುರ ಜಿಲ್ಲೆ
ಮೊ: 9341131811

**ಶ್ರೀ ಕೆ.ಸಿ. ಶಿವಪ್ಪ**
ನಂ.1706, 2ನೇ ಮೇನ್
ಎಫ್ ಬ್ಲಾಕ್, ದಟ್ಟಗಳ್ಳಿ 3ನೇ ಹಂತ
ಕನಕದಾಸನಗರ
ಮೈಸೂರು 570022
ಮೊ: 9972126999

**ಪ್ರೊ. ಮಲೆಯೂರು ಗುರುಸ್ವಾಮಿ**
ನಂ. 635, ಆಶ್ರಮ ರಸ್ತೆ
ಹಿನಕಲ್, ಮೈಸೂರು 570030
ಮೊ. 9886688255

**ಶ್ರೀ ಶಂಕರ್ ದೇವನೂರು**
ನಿವೃತ್ತ ನಿರ್ದೇಶಕರು
ಕರ್ನಾಟಕ ವಿದ್ಯುಚ್ಛಕ್ತಿ ನಿಗಮ
ನಂ. 28, ಹೆಚ್ಐಜಿ
ರಾಮಕೃಷ್ಣ ನಗರ 'ಜೆ' ಬ್ಲಾಕ್
ಮೈಸೂರು 570022
ಮೊ.: 9449599104

**ಪ್ರೊ. ಸಿದ್ದು ಯಾಪಲಪರವಿ**
ನಂ. 123, "ಶರಣಾರ್ಥಿ"
ವಿಶ್ವೇಶ್ವರಯ್ಯನಗರ, ಕಳಸಾಪುರ ರಸ್ತೆ
ಗದಗ 582103
ಮೊ: 9448358040

**ಡಾ. ಎಂ.ಎನ್. ನಂದೀಶ್ ಹಂಚೆ**
ನಂ. 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಶ್ರೀಮತಿ ಎನ್. ನಾಗಶ್ರೀ ತ್ಯಾಗರಾಜ್**
"ಧನ್ಯತಾ", 3ನೇ ತಿರುವು
ಹನುಮಂತನಗರ, ರಾಮನಹಳ್ಳಿ
ಚಿಕ್ಕಮಗಳೂರು 577101
ಮೊ: 9480236909

**ಶ್ರೀ ಸಂಗಮೇಶ ಎನ್. ಜವಾದಿ**
ನಂ. 3/135, ರಾಜ್ ಖಾನಾವಳಿ
ಆರ್ಯ ಸಮಾಜದ ಹತ್ತಿರ
ಚಿಟಗುಪ್ಪಾ ತಾಲ್ಲೂಕು
ಬೀದರ್ ಜಿಲ್ಲೆ 585412
ಮೊ: 9663809340

**ಶ್ರೀ ಪ್ರಕಾಶ ಗಿರಿಮಲ್ಲನವರ**
ಐ.ಟಿ.ಐ. ಕಾಲೇಜು, ಶಿವಬಸವನಗರ
ಬೆಳಗಾವಿ–590010
ಮೊ: 9902130041

**ಶ್ರೀ ಟಿ. ದೇವಿದಾಸ್**
ಪೂರ್ಣಪ್ರಜ್ಞ ವಿದ್ಯಾಕೇಂದ್ರ
ಸಂಗಮೇಶ್ವರ ಪೇಟೆ ಅಂಚೆ
ಚಿಕ್ಕಮಗಳೂರು ತಾ. ಮತ್ತು ಜಿ.

**ಶ್ರೀ ನಗರ್ಲೆ ಶಿವಕುಮಾರ**
ಬಿನ್ ಲೇಟ್ ಪಟೇಲ್ ರಾಜಶೇಖರ
ನಗರ್ಲೆ ಅಂಚೆ
ನಂಜನಗೂಡು ತಾ.
ಮೊ: 9845609652

**ಡಾ. ಬಿ.ವಿ. ಆರತೀ**
ವಿಭು ಅಕ್ಯಾಡೆಮಿ
ನಂ. 846, 4ನೇ ಮುಖ್ಯ ರಸ್ತೆ
4ನೇ ಕ್ರಾಸ್, ವಿಜಯನಗರ
ಬೆಂಗಳೂರು 560040

**ಡಾ. ವೀಣಾ ಬನ್ನಂಜೆ**
ನಂ.204, ವಸಂತ ಆಕೃತಿ ಅಪಾರ್ಟ್‌ಮೆಂಟ್
7ನೇ ಮುಖ್ಯರಸ್ತೆ, 3ನೇ 'ಎ' ಕ್ರಾಸ್
ಮಾರುತಿ ಲೇಔಟ್, ವಸಂತಪುರ
ಬೆಂಗಳೂರು 560061

**Sri Subba Rao**
A 1904, Rustomjee Azziano
Rustomjee Urbania township
Majiwada, Thane,
Mumbai - 400601
M : 9930005788

**ಶ್ರೀ ಎಚ್.ಎಸ್. ಸಿದ್ಧಗಂಗಪ್ಪ**
ಟಿಜಿ. 1617, ಮಾತೃಶ್ರೀ
ಸರ್ ಎಂ.ವಿ. ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯರಸ್ತೆ
ಬೆಂಗಳೂರು 560091
ಮೊ: 98455 65871

**ಶ್ರೀ ಸಿ.ಪಿ. ರಾಮಶೇಷ**
ನಂ. 1212, ಅಶೋಕ ವೃತ್ತ
ಚಾಮರಾಜಪುರಂ
ಮೈಸೂರು 570005
ಮೊ: 9731343004

**ಪ್ರೊ. ಮೊರಬದ ಮಲ್ಲಿಕಾರ್ಜುನ**
ನಂ. 3/1288, 12ನೇ ಮೇನ್
ವಿಜಯನಗರ 4ನೇ ಹಂತ
ಮೈಸೂರು 570017
ಮೊ: 9986137389

**ಶ್ರೀ ಎಸ್.ಎನ್. ಸಿಂಪಿಗೇರ**
ನಂ. 33, ಕೆಲಗೇರಿ ರಸ್ತೆ
ಕುಸುಮನಗರ
ಧಾರವಾಡ
ಮೊ: 9108674734

**ಡಾ. ಚಂದ್ರಶೇಖರಮೂರ್ತಿ**
ನಂ.404, 3ನೇ ಮುಖ್ಯ ರಸ್ತೆ
4ನೇ ಹಂತ
ತೊಣಚಿಕೊಪ್ಪಲು ಬಡಾವಣೆ
ಮೈಸೂರು 570009
ಮೊ: 9482546259



ಶ್ರೀಶೈಲದಲ್ಲಿ ಜಗದ್ಗುರುಡಾ. ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ದ್ವಾದಶ ಪೀಠಾರೋಹಣ ವರ್ಧಂತಿ ಹಾಗೂ ಜನ್ಮ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ರಾಷ್ಟ್ರೀಯ ವೇದಾಂತ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳು, ಶ್ರೀಶೈಲ ಮತ್ತು ಕಾಶಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಹುಕ್ಕೇರಿ, ಹರಪನಹಳ್ಳಿ, ಮುಚಳಂಬಾ, ಪಿ.ಜಿ. ಹುಣಶ್ಯಾಳ, ಸೂಗೂರು ಮಠಗಳ ಶ್ರೀಗಳು, ಶ್ರೀಮತಿ ಲಲಿತಾ ಸಂಕೇಶ್ವರ, ಡಾ. ವಿಜಯ ಸಂಕೇಶ್ವರ, ಶ್ರೀ ಜಗದೀಶ್ ಗುಡಗುಂಟಿಯವರುಗಳಿದ್ದಾರೆ (11 ಜನವರಿ 2023)




ಮೈಸೂರು ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು, ಹೆಚ್.ವಿ. ರಾಜೀವ್ ಸ್ನೇಹ ಬಳಗ ಹಾಗು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ನಿರಾಭಾರಿ ಚರಮೂರ್ತಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನುಡಿನಮನ ಸಲ್ಲಿಸಲಾಯಿತು. ಶ್ರೀ ಗಿರೀಶ್, ಪ್ರೊ.ಜಿ. ಹೇಮಂತಕುಮಾರ್, ಶ್ರೀ ಬಸವಲಿಂಗ ಸ್ವಾಮಿಗಳು, ಶ್ರೀ ಮಲ್ಲಯ್ಯ ಸ್ವಾಮಿಗಳು, ಶ್ರೀ ಕೆ.ಸಿ.ಶಿವಪ್ಪ ಮತ್ತು ಶ್ರೀ ಸಿ.ಪಿ. ರಾಮಶೇಷ್‌ರವರುಗಳಿದ್ದಾರೆ (15 ಜನವರಿ 2023)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಕಲಬುರಗಿಯ ಶ್ರೀ ಗುರುದೇವ ಸೇವಾ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ 'ವಿರಾಟಪುರ ವಿರಾಗಿ' ಚಲನಚಿತ್ರದ ಧ್ವನಿಸುರಳಿ ಬಿಡುಗಡೆ ಹಾಗೂ ವಿರಾಗಿ ಶ್ರೀ ಕುಮಾರೇಶ್ವರ ರಥಯಾತ್ರೆಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಕುಂದೂರು ಮಠ, ನಾಗನೂರು ರುದ್ರಾಕ್ಷಿ ಮಠದ ಶ್ರೀಗಳು, ನಿಂಬಾಳದ ಮೌನತಪಸ್ವಿ ಶ್ರೀ ಜಡೆಯ ಶಾಂತಲಿಂಗ ಮಹಾಸ್ವಾಮಿಗಳು, ಹೊಸಮಠದ ಶ್ರೀಗಳು ಮೊದಲಾದವರಿದ್ದಾರೆ (20 ಡಿಸೆಂಬರ್ 2022)



ಮೈಸೂರು ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿಡಾ. ಗುರುರಾಜಕರ್ಜಗಿಯವರಿಗೆ ಮುದ್ದುರಾಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ಚೇತನ್‌ರಾಮ್, ಶ್ರೀ ಕೆ.ಸಿ. ಶಿವಪ್ಪ, ಶ್ರೀ ರವಿಕುಮಾರ್, ಶ್ರೀಮತಿ ಪರಿಮಳ ಕರ್ಜಗಿ, ಶ್ರೀ ವಿ. ಶಿವಕುಮಾರ್. ಶ್ರೀ ಹಿರೇಮಗಳೂರು ಕಣ್ಣನ್ ಹಾಗೂ ಪ್ರೊ. ಎನ್.ಎಂ. ತಳವಾರ್‌ರವರುಗಳಿದ್ದಾರೆ (18 ಡಿಸೆಂಬರ್ 2022)



ಅಹಮದಾಬಾದ್‌ನ ಬೊಚನವಾಸಿ ಅಕ್ಷರ್ ಪುರೋಷತ್ತಮ್ ಸ್ವಾಮಿ ನಾರಾಯಣ್ ಸಂಸ್ಥಾದ ಶ್ರೀ ಮಹಾಂತ್ ಸ್ವಾಮಿ ಮಹಾರಾಜ್ ಹಾಗೂ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಪ್ರಮುಖ್ ಸ್ವಾಮಿ ಮಹಾರಾಜ್‌ರ ಶತಮಾನೋತ್ಸವದ 15ನೇ ದಿನದ ಕಾರ್ಯಕ್ರಮ ನೆರವೇರಿತು (29 ಡಿಸೆಂಬರ್ 2022)



ಇತ್ತಿಚೇಗೆ ದೈವಾಧೀನರಾದ ಶತಾಯುಷಿ ಶ್ರೀಮತಿ ಹೀರಾ ಬೆನ್‌ರವರ ಅಂತ್ಯಸಂಸ್ಕಾರದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಭಾಗವಹಿಸಿ ಅಂತಿಮ ಗೌರವ ಸಲ್ಲಿಸಿದರು. ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು, ಅವರ ಸಹೋದರರು ಹಾಗೂ ಇತರರುಗಳಿದ್ದಾರೆ (30 ಡಿಸೆಂಬರ್ 2022)

Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 1, January 2023

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸರ್ವಧರ್ಮಸಮಭಾವದ ಅಧ್ವರ್ಯುಗಳು, ನುಡಿದಂತೆ ನಡೆದ ವಿಶ್ವಮಾನ್ಯರು. ಗುಮ್ಮಟಗಳ ನಗರಿಯ ಬಹು ದೊಡ್ಡ 'ಜ್ಞಾನಗುಮ್ಮಟ' ಬಯಲಲ್ಲಿ ಲೀನವಾಗಿದೆ. ಅವರ ಮೌನ ಸದೃಶವಾದ ಮಾತು-ಮಾತುಗಳ ನಡುವಣ ಮೌನದ ಮಹಾಬೆಳಕು ಈಗ ಇಲ್ಲವಾಗಿದೆ. ಹೀಗೆ ಬಯಲಲ್ಲಿ ಬಯಲಾಗಿ ಹೋಗಿರುವ ಜ್ಞಾನಸೂರ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸಾರಿದ ಸಾರ್ವಕಾಲಿಕ ಮೌಲ್ಯಗಳನ್ನು ಅನುಸರಿಸುವ ಮೂಲಕ ಅವರಿಗೆ ಶ್ರದ್ಧಾಂಜಲಿಗಳನ್ನು ಅರ್ಪಿಸಬೇಕಿದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸಮಾಜಕ್ಕೆ ಸಲ್ಲಿಸಿದ ಅತ್ಯುತ್ತಮ ಸೇವೆಗಾಗಿ ಸ್ಮರಣೀಯರು. ಅವರು ಇತರರ ಶ್ರೇಯೋಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸಿದ ಸಂತರು. ಅಪಾರ ಪಾಂಡಿತ್ಯದಿಂದಲೇ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ದುಃಖದ ಸಂದರ್ಭದಲ್ಲಿ ಅವರ ಅಸಂಖ್ಯಾತ ಭಕ್ತರೊಂದಿಗಿದೆ ನನ್ನ ಸಂತಾಪಗಳು ಸಹ.

**ಶ್ರೀ ನರೇಂದ್ರ ಮೋದಿಯವರು**
ಪ್ರಧಾನ ಮಂತ್ರಿಗಳು

ಶ್ರೀ ಸಿದ್ಧೇಶ್ವರ ಸ್ವಾಮಿಗಳು ನಾಡು ಕಂಡ ಅಪರೂಪದ ಅನುಭಾವಿ ಸಂತರು. ಸನಾತನ ಶಾಸ್ತ್ರ ಗ್ರಂಥಗಳು ಮತ್ತು ವಚನಸಾಹಿತ್ಯವನ್ನು ಆಧುನಿಕ ಸಮಾಜದ ವಿದ್ಯಾವಂತರಿಗೆ ಮನದಟ್ಟಾಗುವಂತೆ ಸರಳವಾಗಿ ಬೋಧಿಸಿ ಅವರ ಆಂತರ್ಯದ ಪರಿವರ್ತನೆಗೆ ಕಾರಣರಾಗಿದ್ದರು. ಜಗದೆಲ್ಲೆಡೆ ಸಂಚರಿಸಿ ಜ್ಞಾನದ ನುಡಿಗಳನ್ನು ಬೋಧಿಸಿ. ಅಸಂಖ್ಯಾತ ಭಕ್ತರ ಮನಸ್ಸಿನ ತಮವನ್ನು ಕಳೆದರು.

**ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು**
ಶ್ರೀ ಆದಿಚುಂಚನಗಿರಿ ಮಹಾಂಸ್ಥಾನ ಮಠ

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸುಳಿದೆಡೆಯೆಲ್ಲ ಸುಯಿಧಾನ-ಸಮಾಧಾನಗಳು. ನಿಂತ ನಿಲುವು ಸತ್ಯದ ಒಲವು. ಮಾಯ ಮುಟ್ಟದ ಕಾಯ. ಭ್ರಮೆಯಿಲ್ಲದ ಭಾವ. ಲೋಕಾಂತವನ್ನು ಪ್ರೀತಿಸಿ ತಾವು ಏಕಾಂತವಾಗಿ ಉಳಿದವರು. ಚಿಂತೆಗಳ ಮಧ್ಯ ನಿಶ್ಚಿಂತರಾಗಿ ಬದುಕುವ ಜೀವನ್ಮುಕ್ತಾವಸ್ಥರಾಗಿದ್ದರು.

**ಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು**
ಶ್ರೀ ಗವಿಸಿದ್ಧೇಶ್ವರ ಮಠ, ಕೊಪ್ಪಳ

ಪೂಜ್ಯ ಸಿದ್ಧೇಶ್ವರ ಶ್ರೀಗಳು ಸರಳವಾಗಿ ಜೀವಿಸಿ ಅತ್ಯಂತ ಎತ್ತರಕ್ಕೇರಿದ ಧೀಮಂತರು. ಪೂಜ್ಯರ ಅಗಲುವಿಕೆಯಿಂದಾಗಿ ಜ್ಯೇಷ್ಠ ಚಿಂತಕರೊಬ್ಬರನ್ನು, ಶ್ರೇಷ್ಠ ಮಹಾತ್ಮರನ್ನು ಕಳೆದುಕೊಂಡಂತಾಗಿದೆ. ವ್ಯಕ್ತಿ ಶಾಶ್ವತವಲ್ಲ, ಆದರೆ ಚಿಂತನೆಗಳು ಶಾಶ್ವತ ಎಂಬಂತೆ ಪೂಜ್ಯ ಶ್ರೀಗಳ ಚಿಂತನೆಗಳು ಸದಾ ನಮ್ಮೊಂದಿಗೆ ಇರಲೆಂದು ಆಶಿಸುತ್ತೇನೆ.

**ಡಾ. ಡಿ. ವೀರೇಂದ್ರ ಹೆಗ್ಗಡೆಯವರು**
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ